ಅಖಿಲ ಭಾರತ ೭೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಚಾರಿತ್ರಿಕ ದಾಖಲೆಗಳು

ಸಂಪಾದಕ
ತಿ. ತಾ. ಶರ್ಮ

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೮

ಅಖಿಲ ಭಾರತ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಚಾರಿತ್ರಿಕ ದಾಖಲೆಗಳು

ಸಂಪಾದಕ

ತಿ. ತಾ. ಶರ್ಮ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೫೬೦ ೦೧೮

CHARITRIKA DAKHALEGALU - by Editor Ti. Ta. Sharma.
Published by **Kannada Sahitya Parishat,**
Pampamahakavi Road, Chamaraja pet, Bangalore-560 018.
Pages :140 + xii ; Price : **Rs.**

ಮೊದಲನೆಯ ಮುದ್ರಣ : ೧೯೭೧
ಎರಡನೆಯ ಮುದ್ರಣ : ೧೯೯೯

ಬೆಲೆ : ರೂ.

ಮುದ್ರಣ
ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

ಅಧ್ಯಕ್ಷರ ನುಡಿ

ಕನ್ನಡ ನಾಡಿನ ಸಾಹಿತ್ಯಾಸಕ್ತರೆಲ್ಲರೂ ಆದರದಿಂದ ಎದುರುನೋಡುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಇನ್ನಷ್ಟು ಅರ್ಥಪೂರ್ಣವಾಗಿ ಮಾಡಬೇಕೆಂಬುದು ಕನ್ನಡ ಸಾಹಿತ್ಯ ಪರಿಷತ್ತಿನ ಹಂಬಲ. ಈ ದಿಸೆಯಲ್ಲಿ ೧೯೯೯ರ ಫೆಬ್ರವರಿ ೨೬, ೨೭ ಮತ್ತು ೨೮ರಂದು ಕನಕಪುರದಲ್ಲಿ ಜರುಗುವ ಅರವತ್ತೇಳನೆಯ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಅರವತ್ತೇಳು ಪುಸ್ತಕಗಳನ್ನು ಪ್ರಕಟಿಸುವ ಮಹತ್ವದ ನಿರ್ಧಾರವನ್ನು ಪರಿಷತ್ತು ಕೈಗೊಂಡಿತು.

ಈ ಪುಸ್ತಕಗಳ ಆಯ್ಕೆಯ ಬಗ್ಗೆ ಸಮಿತಿಯೊಂದು ಚಿಂತನೆ ನಡೆಸಿದಾಗ, ಕನ್ನಡ ಸಾಹಿತ್ಯದ ಅನೇಕ ಹೆಮ್ಮೆಯ ಕೃತಿಗಳು ಈಗ ವಿದ್ವಾಂಸರ, ವಿದ್ಯಾರ್ಥಿಗಳ ಮತ್ತು ಆಸಕ್ತರ ಕೈಗೆ ಲಭ್ಯವಾಗುತ್ತಿಲ್ಲ ಎಂಬ ಕೊರತೆ ಎದ್ದು ಕಂಡಿತು. ಅವುಗಳನ್ನು ಕನ್ನಡಿಗರ ಕೈಗೆ ಮತ್ತೆ ಕೊಡಬೇಕು ಮತ್ತು ಇನ್ನೂ ಹಲವು ಹೊಸ ಪುಸ್ತಕಗಳನ್ನು ಪ್ರಕಟಿಸಬೇಕು ಎಂದು ನಿರ್ಧರಿಸಲಾಯಿತು. ಹೀಗಾಗಿ ಹಳೆಯ ಮತ್ತು ಹೊಸ ಪ್ರಕಟಣೆಗಳು ಸೇರಿದ ಅರವತ್ತೇಳು ಪುಸ್ತಕಗಳ ಮಾಲಿಕೆಯನ್ನು ಅರವತ್ತೇಳನೆಯ ಸಮ್ಮೇಳನದ ಸವಿನೆನಪಿಗೆ ಪರಿಷತ್ತು ಅರ್ಪಿಸುತ್ತಿದೆ. ಪರಿಷತ್ತಿನ ಬಿ.ಎಂ.ಶ್ರೀ. ಅಚ್ಚುಕೂಟವನ್ನು ಬಲಪಡಿಸಲು ಡಿ.ಟಿ.ಪಿ. ವಿಭಾಗ ಮತ್ತು ಆಫ್‌ಸೆಟ್ ಮುದ್ರಣಯಂತ್ರವನ್ನು ಸ್ಥಾಪಿಸಿದ್ದೇವೆ. ಪರಿಷತ್ತಿನ ಶಾಶ್ವತ ಆಸ್ತಿಯಾಗಿ ಈ ಮುದ್ರಣಾಲಯವು ನಮ್ಮ ಎಲ್ಲಾ ಪ್ರಕಟಣೆಗಳನ್ನೂ ಮುದ್ರಿಸಿ ಹೊರತರಲೆಂಬುದೇ ನಮ್ಮ ಆಶಯ.

ಅರವತ್ತೇಳು ಎಂಬ ಸಂಖ್ಯೆ ಕೇವಲ ಸಾಂಕೇತಿಕ ಎಂದು ಪರಿಷತ್ತು ಭಾವಿಸುತ್ತದೆ. ವರ್ತಮಾನದ ಬೆಳವಣಿಗೆಗಳನ್ನು ಅನುಸರಿಸಿ ಕನ್ನಡ ಸಾಹಿತ್ಯವನ್ನು ಸಮಗ್ರವಾಗಿ ಬೆಳೆಸುವ ಜವಾಬ್ದಾರಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬ ಅರಿವು ಪರಿಷತ್ತಿಗಿದೆ. ಆದ್ದರಿಂದ ಪ್ರಖ್ಯಾತ ಮತ್ತು ಉದಯೋನ್ಮುಖ ಸಾಹಿತಿ - ವಿದ್ವಾಂಸರ ಕೃತಿಗಳನ್ನು ಅದು ನಿರಂತರವಾಗಿ ಪ್ರಕಟಿಸಲಿದೆ. ಕನ್ನಡ - ಕನ್ನಡ - ಇಂಗ್ಲಿಷ್ ನಿಘಂಟು, ಸಂಕ್ಷಿಪ್ತ ನಿಘಂಟುಗಳಂತಹ ಮಹತ್ವದ ಯೋಜನೆಗಳು ಕನ್ನಡದ ಅಗತ್ಯವನ್ನು ಸದಾ ಪೂರೈಸಲಿವೆ. ಪರಿಷತ್ತು ತನ್ನ ಈ ಹೊಣೆಗಾರಿಕೆಯನ್ನು ನಿರ್ವಹಿಸಲು ರಾಜ್ಯಸರ್ಕಾರ ಮತ್ತು ಸಾರ್ವಜನಿಕರ ಉದಾರ ಸಹಕಾರ ಬಹಳ ಅಗತ್ಯ. ಇದು ಅಬಾಧಿತವಾಗಿ ಮುಂದುವರೆಯಲಿ ಎಂದು ಪರಿಷತ್ತು ಆಶಿಸುತ್ತದೆ.

ಅರವತ್ತೇಳು ಪುಸ್ತಕಗಳ ಆಯ್ಕೆಗೆ ಸಹಕರಿಸಿದ ಪ್ರಕಟಣಾ ಸಮಿತಿಗೆ, ಈ ಯೋಜನೆಗೆ ನೆರವು ನೀಡಿದ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಪಿ.ಜಿ.ಆರ್. ಸಿಂಧ್ಯ ಅವರಿಗೆ ಮತ್ತು ಅಚ್ಚು ಕೂಟದ ಸಿಬ್ಬಂದಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಎನ್. ಬಸವಾರಾಧ್ಯ

ಅಧ್ಯಕ್ಷರು

ಸಂಪಾದಕರ ಮಾತು

ಯಾವುದೇ ದೇಶದ ಇತಿಹಾಸವನ್ನು ದೋಷರಹಿತ, ಲೋಪರಹಿತ, ಸಾಕಷ್ಟು ಪರಿಪೂರ್ಣವಾಗಿ ಬರೆಯಬೇಕಾದರೆ ಅಗ್ನಿಪರೀಕ್ಷೆಗೆ ಒಳಪಡಿಸಿದ ಅಥವಾ ಸಮಕಾಲೀನ ಸಾಕ್ಷ್ಯಸಾಧನಗಳು ಅವಶ್ಯಕ. ಕರ್ನಾಟಕ ಇತಿಹಾಸದ ಮುಖ್ಯವಾದ ಮೂರು ಘಟನೆಗಳಿಗೆ ಸಂಬಂಧಪಟ್ಟ ಸಮಕಾಲೀನ ಸಾಹಿತ್ಯ ಇಲ್ಲಿದೆ. ಮೊದಲನೆಯದು 'ರಾಮರಾಯನ ಬಖೈರು'. ಇದನ್ನು ಬರೆದವನು ವಿಜಯನಗರದ ರಾಮರಾಯನ ಸನ್ನಿಧಿಯಲ್ಲೇ ಇದ್ದವನು. ಅವನೇ ಇದನ್ನು ಬರೆದವನು. ಎರಡನೆಯದು "ಹೈದರ ನಾಮೆ". ಇದನ್ನು ರಚಿಸಿದವನು ನಲ್ಲಪ್ಪ. ಇವನು ಹೈದರನ ಕಾಲದವನು ಮಾತ್ರವಲ್ಲ; ಆತನ ಅಂತರಂಗಕ್ಕೆ ಸೇರಿದವ. ಮೂರನೆಯದು ಕೊಡಗಿನ ವೀರರಾಜೇಂದ್ರ ಒಡೆಯರೇ ಬ್ರಿಟಿಷ ಅಧಿಕಾರಿಗೆ ಬರೆದ ಪತ್ರ. ಆದಕಾರಣ ಈ ಸಾಧನಗಳ ಅಧಿಕಾರವಾಣಿ ಕುರಿತು ಯಾರೂ ಪ್ರಶ್ನೆ ಮಾಡುವ ಹಾಗೆಯೇ ಇಲ್ಲ.

'ರಾಮರಾಯನ ಬಖೈರ್'ನ್ನು ನಾನು ೧೯೨೧ ಸುಮಾರಿನಲ್ಲಿ ಮದರಾಸಿನ `Oriental Manuscript Library' ಯಲ್ಲಿ ಕಂಡೆ. ಅದರ ಪ್ರತಿಯೊಂದನ್ನು ಮಾಡಿ ಇಟ್ಟುಕೊಂಡೆ. ಸ್ವರ್ಗವಾಸಿಗಳಾದ ಬೆನಗಲ್ ರಾಮರಾವ್, ಬಿ. ಕೃಷ್ಣಪ್ಪ, ಇವರ ಬಲವಂತದಿಂದ 'ಕರ್ನಾಟಕ ಗ್ರಂಥಮಾಲೆ'ಯಲ್ಲಿ (ಮೈಸೂರು) ಇದು ಸುಮಾರು ೧೯೨೨-೨೩ರಲ್ಲಿ ಪ್ರಕಟವಾಯಿತು. ಅನಂತರ "ವಿಶ್ವಕರ್ನಾಟಕ" ಪತ್ರಿಕೆಯಲ್ಲೂ, "ಸಂಯುಕ್ತ ಕರ್ನಾಟಕ" ಪತ್ರಿಕೆಯಲ್ಲೂ, ಪ್ರಕಟವಾಯಿತು.

ಕೊಂಚ ಕಾಲಾನಂತರ ಅದೇ ಪುಸ್ತಕ ಭಂಡಾರದಲ್ಲಿ ಈ ಬಖೈರಿನ ಇನ್ನೊಂದು ಪ್ರತಿ ಸಿಕ್ಕಿತು. ಅದರಲ್ಲಿ ಅಂಕಿ ಅಂಶಗಳ, ಸಾಮಂತರ ದಂಡ ನಾಯಕರ ಹೆಸರುಗಳಿವೆ. ಡಾ॥ ನೆಲಟೂರು ವೆಂಕಟರಮಣಯ್ಯನವರು ೧೯೩೩ರಲ್ಲಿ ತೆಲುಗಿಗೆ ಭಾಷಾಂತರ ಮಾಡಿ "ಭಾರತಿ" (ಮದರಾಸು) ಮಾಸಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಬಖೈರ್ ಮರಾಠಿಗೂ ಭಾಷಾಂತರವಾಗಿರುವಂತೆ ಕಂಡುಬರುತ್ತದೆ. ಈ ಬಖೈರಿನ ಮೂಲಕ ಮುಖ್ಯವಾಗಿ ಮೂರು ಸತ್ಯಾಂಶಗಳು ತಿಳಿದುಬರುತ್ತವೆ:

(೧) ವಿಜಯನಗರದ ರಾಮರಾಯನಿಗೂ, ಬಹಮನಿ ಸುಲ್ತಾನರಿಗೂ, ಯುದ್ಧ ನಡೆದದ್ದು "ತಾಳಿಕೋಟೆ"ಯಲ್ಲಿ ಅಲ್ಲ. ರಕ್ಕಸಗಿ-ತಂಗಡಿಗಿ ಅಥವಾ "ರಾಕ್ಷಸ ತಂಗಡಿ"ಯಲ್ಲಿ.

(೨) ರಾಮರಾಯನು ರಣರಂಗಕ್ಕೆ ಹೊರಡುವಾಗ ಅವನ ವೃದ್ಧಮಾತೆ ಜೀವಿಸಿದ್ದಳು. ರಾಮರಾಯ ಹೋಗಿ ಆಕೆಗೆ ಮಣಿದಾಗ, ಆಕೆ ಹರಸಿ, ದೇವರನ್ನು ಪ್ರಾರ್ಥಿಸಿ, 'ಜಯಿಸಿ ಬಾರಪ್ಪ' ಎಂಬುದಾಗಿ ಹೇಳಿದಳು.

(೩) ಬಿಜಾಪುರದ ಅದಿಲ್‌ಷಹಾ ರಾಮರಾಯನ ಮಗ. ಕಡೆಯ ನಿಮಿಷದಲ್ಲಿ ರಾಮರಾಯ

"ನೀನು ನನ್ನ ಮಗನಾದುದಕ್ಕೆ ನನಗೊಂದು ಉಪಕಾರವನ್ನು ಮಾಡು. ನನ್ನನ್ನು ವೈರಿಯ ಕೈಗೆ ಕೊಟ್ಟು ತಲೆ ಹೋಯಿಸ ಬೇಡ. ನೀನೇ ನನ್ನನ್ನು ಫಿರಂಗಿಯಿಂದ ಹೊಡೆದು ಕೊಲ್ಲು"

ಅಂದ. ಮಗ ತಂದೆಯ ಅಪೇಕ್ಷೆಯನ್ನು ಪೂರೈಸಿದ.

೧೮೦೦ ಸುಮಾರಿನಲ್ಲಿ ಬ್ರಿಟಿಷ್ ಸರ್ಕಾರದವರು ಡಾ॥ ಫ್ರಾನ್ಸಿಸ್ ಬುಕ್ಯಾನನ್ ಎಂಬಾತನಿಗೆ

"ಈಗ ಮೈಸೂರು ಒಡೆಯರ ಆಳ್ವಿಕೆಗೆ ಒಳಗಾಗಿರುವ ಮೈಸೂರು ಸಂಸ್ಥಾನ, ಟೀಪುಸುಲ್ತಾನನೊಂದಿಗೆ ಯುದ್ಧಮಾಡಿ, ಅವನನ್ನು ಕೊಂದು, ಈಸ್ಟ್ ಇಂಡಿಯಾ ಕಂಪೆನಿಯವರು ಗೆದ್ದ ದೇಶ, ಮಾರ್ಕ್ವಿಸ್ ಕಾರನ್‌ವಾಲೀಸನ ನಾಯಕತ್ವದಲ್ಲಿ ಕಂಪೆನಿ ಪಡೆದ ಮಲಬಾರಿನ ಭಾಗಗಳು, ಇಲ್ಲೆಲ್ಲ ಪ್ರವಾಸ ಮಾಡಿ, ವರದಿ ಮಾಡತಕ್ಕದ್ದು"

ಎಂದು ಆಜ್ಞೆ ಮಾಡಿದರು. ಬುಕ್ಯಾನನ್ ಆಜ್ಞೆಯನ್ನು ಪಾಲಿಸಿದ. ೧೮೦೭ರಲ್ಲಿ ತನ್ನ ವರದಿಯನ್ನು ಪ್ರಕಟಿಸಿದ. ಈ ವರದಿಯಲ್ಲಿ 'ಹೈದರನಾಮೆ' ವಿಚಾರವೇ ಇಲ್ಲ.

ಕರ್ನಲ್ ಮೆಂಕಜಿ ದಕ್ಷಿಣ ಭಾರತದಲ್ಲೆಲ್ಲ ಸಂಚಾರ ಮಾಡಿ
೧,೫೬೮ ಸಾಹಿತ್ಯ ಸಂಬಂಧವಾದ ಹಸ್ತ ಪ್ರತಿಗಳು;
೨,೦೭೦ ಸ್ಥಳೀಯ ಪತ್ರಾವಳಿಗಳು ;
೮,೦೭೬ ಶಿಲಾಶಾಸನ ಪ್ರತಿಗಳು ;
೨,೧೫೦ ಭಾಷಾಂತರಗಳು ;
೨,೭೦೦ ನಕ್ಷೆಗಳು, ರೇಖಾ ಚಿತ್ರಗಳು;
೬,೧೨೮ ನಾಣ್ಯಗಳು ;
೧೪೬ ವಿಗ್ರಹಗಳು;

ಇನ್ನೂ ಬಗೆಬಗೆಯ ಪ್ರಾಚೀನ ಅವಶೇಷಗಳ ಸಂಗ್ರಹ ಮಾಡಿದ. "ಮೆಕಂಜಿ ವಸ್ತು ಸಂಗ್ರಹ" ವೆಂದು ಇದು ಪ್ರಖ್ಯಾತಿಗೊಂಡಿದೆ. ಈ ಸಂಗ್ರಹದಲ್ಲೂ 'ಹೈದರ್ ನಾಮೆ' ಇಲ್ಲ.

ಕರ್ನಲ್ ಮಾರ್ಕ್ಸ್ ವಿಲ್‌ಕ್ಸ್ ಅಧಿಕಾರಯುತವಾಗಿ ಮೈಸೂರು ದೇಶದ ಇತಿಹಾಸವನ್ನು ಮೊಟ್ಟಮೊದಲು ರಚಿಸಿದ. ಈ ಇತಿಹಾಸ ರಚನೆಗಾಗಿ ಮೂಲಸಾಧನಸಾಮಗ್ರಿಯ ಸಂಗ್ರಹಕ್ಕಾರಂಭಿಸಿದ. "ಚಾರಿತ್ರಿಕ ಹಸ್ತಕವೊಂದನ್ನು ಸಿದ್ಧಪಡಿಸಿ ಕೊಡು" ಎಂದು ಪೂರ್ಣಯ್ಯನನ್ನು ಕೇಳಿದ. ಪೂರ್ಣಯ್ಯನ ಅಪೇಕ್ಷೆಯಂತೆ ಬಚ್ಚೆರಾಯ ಆ ಹಸ್ತಕ (Memoir) ವನ್ನು ಸಿದ್ಧಗೊಳಿಸಿದ. ೧೮೧೭ರಲ್ಲಿ ವಿಲ್‌ಕ್ಸ್ ಈ ಹಸ್ತಕದ ಮಾತನ್ನೆತ್ತುತ್ತಾನೆ. ಅದರಲ್ಲೂ "ಹೈದರ್ ನಾಮೆ"ಯ ಹೆಸರೇ ಇಲ್ಲ. ಈ "ಚಾರಿತ್ರಿಕ

ಹಸ್ತಕ" ರಚನೆಗಾಗಿ ಒಳ್ಳೆ ತಿಳಿವಳಿಕೆಯುಳ್ಳವರನ್ನೂ, ಐತಿಹಾಸಿಕ ಗ್ರಂಥಗಳ ಹಸ್ತಪ್ರತಿಗಳನ್ನು ಸಂಗ್ರಹ ಮಾಡಿ ಇಟ್ಟುಕೊಂಡಿದ್ದವರ ಮನೆತನಗಳವರನ್ನೂ, ಕರೆದು, ಒಂದು ಸಭೆ ಸೇರಿಸಲಾಗಿತ್ತು.* ಅಲ್ಲಿ ಮೂಲಗಳನ್ನೆಲ್ಲ ನೋಡಿ, ಒಂದನ್ನೊಂದರೊಂದಿಗೆ ಹೋಲಿಸಿ ನೋಡಿ, ಕಡೆಗೆ ಹಸ್ತಕವನ್ನು ಸಿದ್ಧಗೊಳಿಸಲಾಯಿತು.

ವಿಲ್‌ಕ್ಸ್ ಪರ್ಶಿಯನ್ ಭಾಷೆಯ ಹಸ್ತಪ್ರತಿಯೊಂದರ ಮಾತನ್ನೆತ್ತಿ "ಅದರಲ್ಲಿ ಮೈಸೂರೊಡೆಯರ ಇತಿಹಾಸವಿದೆ. ಈ ಹಸ್ತಪ್ರತಿ ೧೭೯೯ರಲ್ಲಿ ಶ್ರೀರಂಗಪಟ್ಟಣದ ಅರಮನೆಯಲ್ಲಿ ಸಿಕ್ಕಿತು" ಅನ್ನುತ್ತಾನೆ.

ಈ ಹಸ್ತಪ್ರತಿಯಾದರೂ ೧೭೯೮ರಲ್ಲಿ ನಗರದ ಪುಟ್ಟಯ್ಯನ ಸಹಾಯದಿಂದ ಅಸದ್ ಅನ್ವರ್, ಗುಲಾಂ ಹುಸೇನ್, ಎಂಬಿಬ್ಬರು ಭಾಷಾಂತರ ಮಾಡಿದರು. ಹಳೇ ಕಡತಗಳ ಸಹಾಯದಿಂದ ಪಂಡಿತ ಪುಟ್ಟಯ್ಯನ ಈ ಪುಸ್ತಕವನ್ನು ಬರೆದವ. ಕರ್ನಲ್ ವಿಲ್‌ಕ್ಸ್ ಈ ಮೂಲಗಳ ಹೆಸರುಗಳನ್ನು ಕೊಡದೆ ಹೋದದ್ದು ನಮ್ಮ ದೌರ್ಭಾಗ್ಯ. ಕಡೆಗೆ ಅವುಗಳಲ್ಲಿ ಮುಖ್ಯವಾದುವುಗಳನ್ನಾದರೂ ಆರಿಸಿ, ಅವುಗಳ ಹೆಸರುಗಳನ್ನು ಕೊಡಬಹುದಾಗಿತ್ತು. ಆಗ ನಮಗೆ "ಬಚ್ಚೆರಾಯರು ಸಿದ್ಧಗೊಳಿಸಿದ ಹಸ್ತಕ ಕರ್ತೃವಿಗೆ "ಹೈದರ್ ನಾಮೆ" ಎಂಬುದೊಂದಿದೆಯೆಂಬುದು ಗೊತ್ತಿತ್ತೆ, ಇಲ್ಲವೆ" ಅನ್ನುವುದು ಸ್ಪಷ್ಟವಾಗುತ್ತಿತ್ತು. ಅಂತೂ ಒಂದಂಶ ಸಿದ್ಧವಾಯಿತು; ಕರ್ನಲ್ ವಿಲ್‌ಕ್ಸ್‌ಗೂ "ಹೈದರ್ ನಾಮೆ" ಗೊತ್ತಿರಲಿಲ್ಲ.

ಅನಂತರ ಮೈಸೂರು ಇತಿಹಾಸ ಬರೆದವ ಲೂಯಿ ರೈಸ್. ಅದು ಮೊದಲು ಪ್ರಕಟವಾದದ್ದು ೧೮೭೭ರಲ್ಲಿ. ೧೮೯೭ರಲ್ಲಿ ಎರಡನೆಯ ಮುದ್ರಣ. ಎರಡರಲ್ಲೂ ರೈಸರು 'ಹೈದರ ನಾಮೆ' ಮಾತನ್ನೇ ಎತ್ತುವುದಿಲ್ಲ.

ಇತಿಹಾಸ ಲೇಖಕರೆಲ್ಲ ನಲ್ಲಪ್ಪನು ಬರೆದ 'ಹೈದರ ನಾಮೆ' ಯನ್ನು ಕಾಣದೆ ಹೋದುದು ಪರಮಾಶ್ಚರ್‍ಯಕರವಾಗಿದೆ. ಅನಂತರ ಬಂದ ವಿದ್ವಾಂಸರನೇಕರು ಈ ಕೃತಿಯ ಹೆಸರನ್ನು ಹೇಳುತ್ತಾರೆ. ಈ ಕೃತಿಯಲ್ಲಿರುವುದನ್ನೆಲ್ಲ ಸಂಗ್ರಹವಾಗಿ ಮೊದಲು ಇಂಗ್ಲಿಷಿನಲ್ಲಿ ಕೊಟ್ಟವರು ಕೀರ್ತಿಶೇಷ* ಡಾ॥ ಎಂ. ಎಚ್. ಕೃಷ್ಣರವರು. ಈ ಗ್ರಂಥದ ಮೌಲ್ಯ ಕುರಿತು ಅವರು ಹೇಳುವುದು ಇದು :

---

* "The best informed natives of the country who were known to posses family manuscripts or historical pieces were assembled for this purpose, and he memoir is a compilation framed from a comparison of these authorities."

* Annual Report of the Mysore Archaeological Department, 1930. Pages 79 to 106.

"It gives in detail an account of the events in the life of this hero year after year and naturally ends with his death. Though much of Hyder's history has already been known, the chief value of the manuscript consists in giving confirmatory evidence while, here and there, some new materials are also supplied to the historian. The author writes with a healthy independence and judicious frankness which could not be expected from a court chronicler. He admires Haider Ali and the way the usurper saved the independence of Mysore by his diplomacy and generalship and raised the kingdom to the position of the strongest contemporary power in South India, while at the same time he condemns the blemishes in his hero's character and points out his follies. Though he gives the Mysorean's version of many events like Haidar's decisive victory of the battle of Arni he frankly admits also his defeats on many occasions. Thus, he is a true historian and not in any sense an apologist or enlogist. His work is welcome as a corrective to the existing accounts of Haidar's life which are to a considerable extent based on his enemies or of his own Moslem secretaries."

ಕೃತಿಕರ್ತ ನಲ್ಲಪ್ಪನನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವುದು ಅವಶ್ಯಕ. ನಲ್ಲಪ್ಪ ತುಮಕೂರಿನವ. ಆ ಮನೆತನದವರಿನ್ನೂ ಆ ಊರಲ್ಲಿದ್ದಾರೆ. ಇನಾಂದಾರ್ ಶ್ರೀ ಕರಣಿಕ ಲಕ್ಷ್ಮೀನರಸಯ್ಯ ಎಂಬವರಿಂದ ಡಾ॥ ಕೃಷ್ಣರವರು ಈ ಕೃತಿಯ ಹಸ್ತಪ್ರತಿಯನ್ನು ಪಡೆದದ್ದು.

ಕಾಲ ಉರುಳಿದಂತೆಲ್ಲ ಜೀವನ ರಚನಾ ವೈಖರಿಯೇ ಬದಲಾಗುತ್ತ ಹೋಗುತ್ತದೆ. ಜನ ಅವಲಂಬಿಸುವ ವೃತ್ತಿಗಳಲ್ಲೇ ಪರಿವರ್ತನಗಳಾಗುತ್ತವೆ. ವೈದಿಕ ವಂಶದ ನಲ್ಲಪ್ಪ ಹೈದರಾಲಿಯ ಅನುಗ್ರಹಕ್ಕೆ ಪಾತ್ರನಾದ. ಅವನ ಸೈನ್ಯಕ್ಕೆ ದವಸಧಾನ್ಯ, ಸಾಮಾನು ಸರಂಜಾಮು ಒದಗಿಸುವ ವ್ಯಾಪಾರಿಯಾದ. ಪೂರ್ಣಯ್ಯನ ಸಹಾಯದಿಂದ ಹೈದರನ ಆಸ್ಥಾನದ ಸಭಾಸದನೂ ಆದ.

ತುಮಕೂರು-ಚಿತ್ರದುರ್ಗದ ರಸ್ತೆಯಲ್ಲಿ, ತುಮಕೂರಿಂದ ೧೫ ಮೈಲಿಗಳ ದೂರದಲ್ಲಿ, ರಸ್ತೆಯ ಪಕ್ಕದಲ್ಲೇ ಇದೆ ಶೀಬಿ ಎಂಬ ಗ್ರಾಮ. ನರಸಿಂಹ ದೇವಾಲಯದಿಂದ ಈ ಹಳ್ಳಿ ಪ್ರಸಿದ್ಧಿಗೆ ಬಂದಿದೆ. ಅಲ್ಲಿ ಶಿಥಿಲವಾಗಿದ್ದ ಗುಡಿಯೊಂದಿತ್ತು. ನಲ್ಲಪ್ಪ ಆತನ ಸಹೋದರರು ಆ ದೇವಾಲಯವನ್ನು ಹೊಸದಾಗಿ ಕಟ್ಟಿಸಿದರು. ಇದರಲ್ಲಿ ವಾಸ್ತು-ಶಿಲ್ಪದ ಹಲವು ಲಕ್ಷಣಗಳಿವೆ. ಈ ದೇವಾಲಯದ ಗೋಡೆಗಳ ಮೇಲೂ, ದೂಲಗಳ ಮೇಲೂ,

ವರ್ಣರಂಜಿತವಾದ ಚಿತ್ರಗಳಿವೆ. ಹಲವು ಚಿತ್ರಗಳು ಪುರಾಣಗಳಿಗೆ ಸಂಬಂಧಪಟ್ಟವು. ಇನ್ನು ಕೆಲವು ಚಾರಿತ್ರಿಕ ಸನ್ನಿವೇಶ ಚಿತ್ರಗಳಿವೆ; ಸೈನ್ಯವ್ಯೂಹಗಳು, ರಾಜಯೋಗ್ಯವಾದ ಆಟಪಾಟಗಳು, ದರ್ಬಾರ್, ಇತ್ಯಾದಿಗಳು. ಹಲವು ಕಡೆ ಚಿತ್ರಗಳಲ್ಲಿ ನಲ್ಲಪ್ಪ, ಆತನ ಸಹೋದರರ ಸ್ವರೂಪಗಳನ್ನು ಕಾಣಬಹುದು. ಒಂದು ಕಡೆಯಂತೂ ಹೈದರಾಲಿಯು ದರಬಾರಿನಲ್ಲಿ ಕೂತು, ನಲ್ಲಪ್ಪ, ಆತನ ಸಹೋದರರಿಗೆ ಭೇಟಿ ಕೊಟ್ಟು, ಮಾತನಾಡುತ್ತಿದ್ದಾನೆ. ಈ ಚಿತ್ರಕರ್ಮ "ಒಡೆಯರ ಕಾಲ"ದ್ದು. ಹತ್ತೊಂಬತ್ತನೆಯ ಶತಮಾನದ ಕಲಾಸಂಪ್ರದಾಯಕ್ಕೆ ಉದಾಹರಣೆ. ಶ್ರೀರಂಗಪಟ್ಟಣದ ದರಿಯಾದೌಲತ್ ಕುಡ್ಯ ಚಿತ್ರಗಳೂ ಈ ಸಂಪ್ರದಾಯಕ್ಕೇ ಸೇರಿದುವು.

'ಹೈದರ್ ನಾಮೆ' ಮೂಲ ಪೂರ್ಣವಾಗಿ ಇದುವರೆಗೆ ಎಲ್ಲೂ ಪ್ರಕಟವಾಗಿಲ್ಲ. ಮೊದಲನೆಯ ಸಾರೆ ಇದು ಬೆಂಗಳೂರಿನ* "ಮಿಥಿಕ್ ಸೊಸೈಟಿ" ಪತ್ರಿಕೆಯಲ್ಲಿ ನನ್ನ ಸ್ವಂತ ಹಸ್ತಪ್ರತಿಯಿಂದ ಕಂತುಕಂತಾಗಿ (೧೯೬೫-೬೮) ಪ್ರಕಟವಾಯಿತು. ಈಗ "ಕನ್ನಡ ಸಾಹಿತ್ಯ ಪರಿಷತ್ತಿ"ನ ಪ್ರಕಟನೆಯ ರೂಪದಲ್ಲಿ ಪ್ರಕಟವಾಗುತ್ತಿದೆ.

ಕೊಡಗಿನ ವೀರರಾಜೇಂದ್ರ ಒಡೆಯರು ಬ್ರಿಟಿಷ್ ಅಧಿಕಾರಿಗೆ ಬರೆದ ದೀರ್ಘವಾದ ಪತ್ರ (೭೩೩ ಸಾಲುಗಳು).

ಈ ಪತ್ರದ ಸಂಗ್ರಹವನ್ನು ಕೀರ್ತಿಶೇಷ ಡಾ|| ಎಂ. ಎಚ್. ಕೃಷ್ಣರವರು* ಇಂಗ್ಲಿಷಿನಲ್ಲಿ ಟಿಪ್ಪಣಿಗಳೊಂದಿಗೆ ಪ್ರಕಟಿಸಿದರು. ಅನಂತರ ವಿದ್ವಾನ್ ಮುತ್ತಣ್ಣನವರು ತಾವು ರಚಿಸಿದ † ಕೊಡಗಿನ ಇತಿಹಾಸವೆಂಬ ಗ್ರಂಥದಲ್ಲಿ ಈ ಪತ್ರ ಕುರಿತು ಪ್ರಸ್ತಾಪ ಮಾಡಿದ್ದಾರೆ. ಆದರೆ ಇದುವರೆಗೆ ಆ ಪತ್ರ ಪೂರ್ಣವಾಗಿ ಎಲ್ಲೂ ಪ್ರಕಟವಾಗಿಲ್ಲ. ಅದು ಪ್ರಕಟವಾಗುತ್ತಿರುವುದು ಇದೇ ಮೊದಲು. ಇದರ ಪ್ರತಿಯನ್ನು ನನಗೆ ಗಳಿಸಿಕೊಟ್ಟವರು ಕಾಲೇಜಿನ ನನ್ನ ಸಹಪಾಠಿಗಳೂ, ಅನಂತರ ಕೊಡಗಿನಲ್ಲಿ ನಾನಾ ಅಧಿಕಾರ ಸ್ಥಾನಗಳಲ್ಲಿದ್ದು ನಿವೃತ್ತರಾದವರೂ, ಆದ ಕೀರ್ತಿಶೇಷ ಎನ್. ಸಿ. ಸುಬ್ಬಯ್ಯನವರು. ಅನಂತರ ನಾನು "ಕರ್ನಾಟಕ ಸ್ವಾತಂತ್ರ್ಯ ಇತಿಹಾಸ ರಚನಾಸಮಿತಿ"ಯ ಅಧಿಕಾರಿಯಾಗಿ ಮಾಡಿದ ಅನ್ವೇಷಣದ ಫಲವಾಗಿ ಮೂಲ ಪತ್ರವೇ ಸಿಕ್ಕಿತು. ನನ್ನ ವಶದಲ್ಲಿದ್ದ ಪ್ರತಿಯ ಪಾಠವನ್ನು ಮೂಲಪತ್ರದೊಂದಿಗೆ ಹೋಲಿಸಿ, ಸಮಾಧಾನ ಮಾಡಿಕೊಂಡಿದ್ದೇನೆ. ಡಾ|| ಕೃಷ್ಣರವರು ಸಹ ಈ ಮೂಲಪತ್ರದ ಆಧಾರದ ಮೇಲೆಯೇ ತಮ್ಮ ವಿಮರ್ಶೆಯನ್ನು ಬರೆದರೆಂದು ಕಂಡುಬರುತ್ತದೆ.

---

* The quarterly Journal of the Mythic Society. Vols. LVI, LVII and LVIII (1965-67).

* Mysore Archaeological Report, 1941 pp. 114-126

† A Tiny Little State.

ಈ ಮೂರೂ ಕೃತಿಗಳೂ ಕರ್ನಾಟಕ ಇತಿಹಾಸ ರಚನೆಗೆ ಆಧಾರ ಸಾಧನಗಳು. ಒಂದು ವಿಶೇಷವೆಂದರೆ ಈ ಮೂರೂ ಕರ್ನಾಟಕ ಇತಿಹಾಸದ ಮೂರು ದುರಂತೋಪಾಖ್ಯಾನಗಳಿಗೆ ಸಂಬಂಧಪಟ್ಟವು. ರಾಮಾಜಿ ತಿರುಮಲೆ ಹರಕಾರೆ ರಾಮರಾಯನು ರಾಕ್ಷಸ ತಂಗಡಿ ರಣಭೂಮಿಯಲ್ಲಿ ಗುಂಡಿಗೆ ತುತ್ತಾದನೆಂದು ಹೇಳುತ್ತಾನೆ. ಆರಣಿ ಸೈನ್ಯ ಶಿಬಿರದಲ್ಲಿ ಹೈದರಾಲಿಯು ಕಾಲವಶನಾದನೆಂದು ನಲ್ಲಪ್ಪ ಬರೆಯುತ್ತಾನೆ. ಕೊಡಗಿನ ವೀರರಾಜೇಂದ್ರನಾದರೋ ಬ್ರಿಟಿಷರು ತನಗೆ ಮಾಡಿದ ಪರಮ ಅನ್ಯಾಯ ಕುರಿತು ವಿವರಿಸುತ್ತಾನೆ.

ಈ ಮೂರು ಕೃತಿಗಳನ್ನು ಒಂದು ಪುಸ್ತಕರೂಪದಲ್ಲಿ ಪ್ರಕಟಿಸಿ, ನಾಡಿಗೆ ಮಹೋಪಕಾರ ಮಾಡಿದ 'ಕನ್ನಡ ಸಾಹಿತ್ಯ ಪರಿಷತ್ತಿ'ಗೆ ನಾನು ವಿಶೇಷ ಕೃತಜ್ಞನಾಗಿದ್ದೇನೆ. ಇತಿಹಾಸಕಾರರು, ಸಾಹಿತಿಗಳು, ಈ ಸಾಧನೆಗಳಿಂದ ಆದಷ್ಟು ಲಾಭ ಪಡೆದಾರೆಂದು ನಾನು ನಿರೀಕ್ಷಿಸುತ್ತೇನೆ.

ಶಂಕರವನಂ — **ತಿ. ತಾ. ಶರ್ಮ**

ಬೆಂಗಳೂರು — ೨೬-೧೨-೭೧

ಪರಿವಿಡಿ

ರಾಮರಾಯನ ಬಖೈರು

ನಾನು ಕರ್ಣಾಟಕ ದೇಶಾಧಿಪತಿ ರಾಮರಾಜರ ಸನ್ನಿಧಿಯಲ್ಲಿ ಇರುತ್ತಾ ಇದ್ದೆನು. ಒಂದು ದಿನ ಆಲಿ ಆದಿಲ್‌ಷಹನ ಮಹಲದಾರನು ತನ್ನ ದಣಿಯ ಪ್ರಯೋಜನ ನಿಮಿತ್ತವಾಗಿ ಕಾಗದ ಪತ್ರಗಳನ್ನು ತೆಗೆದುಕೊಂಡು ಬಂದು ರಾಜದ್ವಾರದಲ್ಲಿ ನಿಂತು, ತಾನು ಬಂದಿರುವ ವಿಷಯವನ್ನು ಅರಸರಿಗೆ ಹೇಳಿ ಕಳುಹಿಸಿದನು. ಈ ವರ್ತಮಾನವನ್ನು ಕೇಳುತ್ತಲೇ ಅರಸರು ತಮ್ಮ ದಳವಾಯಿಯನ್ನು ಕರೆಸಿ "ಆಲಿ ಆದಿಲ್‌ಷಹನ ಕಡೆಯವನನ್ನು ಆನಂದಮಹಲಿನ ಒಳಗೆ ಆ ಮಹಲುದಾರನ ಯೋಗ್ಯತಾನುಸಾರ ಖರ್ಚಿಗೆ ಕೊಟ್ಟು ಪರಾಮರಿಕೆ ಮಾಡುವುದು" - ಎಂದು ಆಜ್ಞಾಪಿಸಿದರು. ಅದೇ ಪ್ರಕಾರ ದಳವಾಯಿಯ ಅರಮನೆಯ ಹರಿಕಾರನು ಮಹಲುದಾರನನ್ನು ಆನಂದ ಮಹಲಿನಲ್ಲಿ ಇಳಿಸಿ, ಯೋಗ್ಯತಾನುಸಾರ ಅವನ ಖರ್ಚಿಗೆ ಕೊಡಿಸಿ ಈ ಆದ್ಯಂತ ವರ್ತಮಾನವನ್ನು ದಳವಾಯಿಯು ಅರಸರಿಗೆ ಅರಿಕೆ ಮಾಡಿದನು.

ಮಹಲುದಾರನು ಆ ದಿವಸ ಆನಂದಮಹಲಿನಲ್ಲಿ ವಿಶ್ರಮಿಸಿಕೊಂಡು ಮಾರನೆಯ ಪ್ರಾತಃಕಾಲ ಎದ್ದು ಕೈಕಾಲು ಮೋರೆಯನ್ನು ತೊಳೆದುಕೊಂಡು ನಮಾಜು ಮಾಡಿ, ತನ್ನೊಳಗೆ ತಾನೇ "ಅರಸುಗಳಾದರೋ ನನ್ನನ್ನು ತಮ್ಮ ಸಮುಖಕ್ಕೆ ಬರಮಾಡಿಕೊಂಡು ಆ ಕ್ಷಣವೇ ನಮ್ಮ ದಣಿಗಳ ಕಾಗದ ಪತ್ರಗಳನ್ನು ಪರಾಂಬರಿಸದೆ ಉದಾಸೀನಮಾಡಿದವರಾದರು; ನಾನಾದರೋ ದುರ್ಬಲ ಸೇವಕ; ಸರ್ವಪ್ರಕಾರದಲ್ಲೂ ಮಾನವನ್ನುಳಿಸಿಕೊಂಡು ಹೋಗುವುದೇ ಉತ್ತಮ"- ಎಂದು ಆಲೋಚನೆ ಮಾಡಿದನು. ದೊಡ್ಡ ಆನೆಯನ್ನು ಏರಬೇಕಾದವರು ಹಿಂದು ಮುಂದು ನೋಡಿ ಏರಬೇಕಾದೀತು. ಅರಸರ ಬಳಿ ಹೆಚ್ಚು ಜೋರು ಮಾಡಬೇಕಾದರೆ ದೂರದೃಷ್ಟಿ ಇದ್ದು ಮಾಡಬೇಕು. ಎಂದು ತಾನೇ ತಿಳಿದುಕೊಂಡು ಮನಸ್ಸಿಗೆ ಸಮಾಧಾನವನ್ನು ತಂದುಕೊಂಡು "ದೇವರವರಾದರೆ ನಾನು ಬಂದಕ್ಷಣವೇ ಸಮುಖಕ್ಕೆ ಉಚಿತವಾಗಿ ಕರೆಸಿಕೊಂಡು ವಿಚಾರಿಸಿದವರಾಗಲಿಲ್ಲ. ನಾನು ತಂದಿರುವ ಕಾಗದ ಪತ್ರಗಳು ಬಹು ನಾಜೂಕಾದುವು. ಈಗಲಾದರೂ ಕರೆಸಿದರೆ ಹುಜೂರಿಗೆ ಬಂದು ಕಾಗದ ಪತ್ರಗಳನ್ನು ಮುಟ್ಟಿಸಿ, ಸಾಂಗವಾಗಿ ಯಾವದ್ವರ್ತಮಾನವನ್ನು ಬಿನ್ನಹಮಾಡಿಕೊಂಡೇನು" - ಎಂದು ಹೇಳಿ ಕಳುಹಿಸಿದನು.

ರಾಜಾಧಿರಾಜರು ಬಹಳ ಹರ್ಷಿತರಾಗಿ ಅವನಿಗೆ ಸಮುಖಕ್ಕೆ ಬರಲು ಅಪ್ಪಣೆಯನ್ನು ದಯೆಪಾಲಿಸಿದರು. ಮಹಲುದಾರನು ಅರಸರ ಸನ್ನಿಧಿಗೆ ಬಂದು ವಿನಯಪೂರ್ವಕವಾಗಿ ವಂದನೆಯನ್ನು ಮಾಡಿ ತಂದ ಪತ್ರಗಳನ್ನು ಅರಸರಿಗೆ ಮುಟ್ಟಿಸಿ ತಾನೂ ಕೆಲವು ಅಭಿಪ್ರಾಯಗಳನ್ನು ಬಿನ್ನಹ ಮಾಡಿ "ದೇವರಾದರೆ ಮಹಾರಾಜಾಧಿರಾಜರು: ಅಪ್ರತಿಮ ಪರಾಕ್ರಮ ನರಪತಿಗಳು, ದೇವರಂಥಾ ಸಮರ್ಥರು ಪೃಥ್ವಿಯಲ್ಲಿ ಯಾರೂ ಕಾಣುವುದಿಲ್ಲ. 'ನವಕೋಟಿ ನಾರಾಯಣ' ಎಂದೆನಿಸಿಕೊಂಡಿರುವಿರಿ.

ದೇವರಂಥಾ ರಾಜತೇಜೋನಿಧಿಗಳನ್ನು ನಾನೇನು ಸ್ತೋತ್ರಮಾಡಬಲ್ಲೆನು" - ಎಂದು ಅನೇಕ ವಿಧವಾಗಿ ಸ್ತೋತ್ರ ಮಾಡಿದನು. ಮಹಾರಾಜಾಧಿರಾಜರು ಪರಮಹರ್ಷಿತರಾಗಿ ಮಹಲುದಾರನು ತಂದ ಪತ್ರಗಳನ್ನು ಓದುವ ಸ್ಥಾನಪತಿಗಳ ಕೈಗೆ ಕೊಟ್ಟು, ಓದಿಸಿದರು. ಆ ತರುವಾಯ ಅರಸರು ಹೊಸದಾಗಿ ಸಿಂಗರಿಸಿದ್ದ ಆನಂದ ಮಹಲಿಗೆ ಹೋಗಿ, ಸಮಸ್ತ ಸಾಮಾಜಿಕರು, ಎಪ್ಪತ್ತೆರಡು ಬಗೆಯು ನಿಯೋಗದವರು, ಮೊದಲಾದವರು ಓಲೈಸುತ್ತಿರಲು, ಸಿಂಹಾಸನದ ಮೇಲೆ ಕುಳಿತವರಾದರು. ಅದೇ ಸಮಯದಲ್ಲಿ ತೆಲುಗು ದೊಂಬರು ಬಂದರು. ಕೂಡಲೇ ಆಡಲಿಕ್ಕೆ ಅವರಿಗೆ ಹುಕುಂ ಆಯಿತು. ನಾಲ್ಕಾರು ತಾಸು ದೊಂಬರು ಆಡಿದ ತರುವಾಯ ಅವರಿಗೆ ರಾಜರು ಎಲೆ, ಅಡಕೆ, ಉಡುಗೊರೆ, ಮೊದಲಾದ ಮರ್ಯಾದೆಯನ್ನು ಮಾಡಿಸಿದರು. ಮತ್ತೆ ದೊಂಬರು ಮುಜುರೆ ಮಾಡಿ ಮಹಾರಾಜಾಧಿರಾಜರಿಗೆ ಅರ್ಜಿಮಾಡಿ ತಮ್ಮ ಭಕ್ಷಣೆಗೆ ಹತ್ತು ಸೂಕರಗಳನ್ನು ದಯೆಪಾಲಿಸಬೇಕೆಂದು ಕೇಳಿಕೊಂಡರು. ನರಪತಿಗಳು ದಯೆಮಾಡಿ ಮಹಲು ಕಾರಖಾನೆಯಿಂದ ಉತ್ತಮ ಗ್ರಾಮಸೂಕರಗಳನ್ನು ತರಿಸಿ ಹುಜೂರಲ್ಲೇ ದೊಂಬರಿಗೆ ಕೊಡಿಸಿದರು.

ಆಸ್ಥಾನದಲ್ಲಿ ಮಹಲುದಾರನು ಕುಳಿತಿದ್ದನು. ಈ ಸೂಕರಗಳು ಮಹಲುದಾರನ ದೃಷ್ಟಿಗೆ ಬೀಳುತ್ತಲೇ ಅವನು ಕಣ್ಣು ಮೋರೆಗಳನ್ನು ಮುಚ್ಚಿಕೊಂಡು "ನಾನಾದರೆ ಒಳ್ಳೆಯ ಮುಸಲಮಾನನು. ಕೆಟ್ಟ ಮೃಗಗಳು ಕಣ್ಣಿಗೆ ಬೀಳಬಾರದು; ಬಿದ್ದರೂ ಸರಿಯೇ, ನೋಡಬಾರದು. ತಪ್ಪಿ ಒಂದು ವೇಳೆ ಕೆಟ್ಟ ಮೃಗಗಳನ್ನು ನೋಡಿದುದೇ ಆದರೆ ಮುಸಲಮಾನನು ಹಿಂದುಗಳೊಳಗೇ ಸೇರಿದ ಹಾಗೆ" - ಎಂದನು. ಈ ಮಾತಿಗೆ ನರಪತಿಗಳು "ನಿಮ್ಮ ಜಾತಿಯಲ್ಲಿ ಕೋಳಿಯನ್ನು ತಿನ್ನುತ್ತೀರಿ. ಕೋಳಿಯನ್ನು ಭಕ್ಷಣೆ ಮಾಡಿದ ಮೇಲೆ ಮಲಭಕ್ಷಣೆ ಮಾಡಿದ ಹಾಗೆಯೇ ಆಯಿತು" - ಎಂದು ಉತ್ತರವನ್ನು ಕೊಟ್ಟರು. ಆಗ ಮಹಲುದಾರನು "ನೀವು ಕೆಟ್ಟ ಮೃಗಗಳನ್ನು ತಿನ್ನುತ್ತೀರಿ. ನಿಮ್ಮ ಜಾತಿ ಹೀನಜಾತಿ" - ಎನ್ನಲು, ಮಹಾರಾಜರಿಗೆ ಮಹಾಕೋಪವುಂಟಾಯಿತು. ಕೂಡಲೇ ನಗರದೊಳಗಿದ್ದಂಥಾ ಸೂಕರಗಳೆಲ್ಲವನ್ನೂ ಒಟ್ಟುಗೂಡಿಸಿ ಎಲ್ಲವನ್ನೂ ಒಂದು ದೊಡ್ಡ ಮನೆಯೊಳಕ್ಕೆ ಬಿಡಿಸಿ, ಅವುಗಳು ತಿನ್ನುವುದಕ್ಕೆ ಜೋಳವನ್ನು ಹೊಯಿಸಿ, ಆ ಮನೆಗೆ ಬೀಗ ಹಾಕಿಸಿ ಮೊಹರುಮಾಡಿಸಿದರು. ಮಾರನೆಯ ದಿವಸ ಬೀಗ ತೆಗೆಸಿ ನೋಡಲಾಗಿ ಸೂಕರುಗಳು ಜೋಳವನ್ನು ತಿಂದು ಮನೆಯೊಳಗೆಲ್ಲಾ ವಿಷ್ಟಿಸಿದ್ದುವು. ಈ ಮನೆಯೊಳಕ್ಕೆ ನರಪತಿಗಳು ನೂರು ಕೋಳಿಗಳನ್ನು ಬಿಡಿಸಿದರು. ಈ ಕೋಳಿಗಳು ಮಲದೊಳಗಿನ ಜೋಳದ ಕಾಳುಗಳನ್ನು ತಿನ್ನಲಾರಂಭಿಸಿದವು. ಆಗ ಮಹಾರಾಜರು ಮಹಲುದಾರನನ್ನು ಕರೆಕಳುಹಿಸಿ, ತೋರಿಸಿ "ಸೂಕರುಗಳನ್ನು ತಿನ್ನುವವರು ನಾವಾದರೆ ಸೂಕರದ ಮಲದಲ್ಲಿಯ ಕಾಳು ಕಡ್ಡಿಗಳನ್ನು ತಿಂದು ಜೀವಿಸುವ ಕೋಳಿಗಳನ್ನು ತಿನ್ನುವವರು ನೀವು. ಈಗ ಯಾರ ಜಾತಿ ದೊಡ್ಡದು?" ಎಂದರು. ಮಹಲುದಾರನಿಗೆ ಬಹಳ ಅಸಮಾಧಾನವುಂಟಾಯಿತು.

ಕೂಡಲೇ ಅವನು ಅಲ್ಲಿಂದ ಎದ್ದು ಹೋಗಲು ಪ್ರಯತ್ನಮಾಡಿದನು. ಅರಸರು ಅವನನ್ನು ಸಮಾಧಾನಗೊಳಿಸಿ ಅನೇಕ ತಸ್ಲೀಫು ತಾಂಬೂಲಗಳನ್ನು ಕೊಟ್ಟು ಮರ್ಯಾದೆ ಮಾಡಿ ಕುಳ್ಳಿರಿಸಿದರು.

ಅನಂತರ ಮಹಲುದಾರನು ತನ್ನ ದಣಿಯಿದ್ದಲ್ಲಿಗೆ ಹೋಗಿ ಬಹು ಕೋಪದಿಂದ ತನ್ನ ತಲೆಯ ಮೇಲಿನ ಮುಂಡಾಸನ್ನು ತೆಗೆದು ಕೊರಳಿಗೆ ಸುತ್ತಿ ಹೀಗೆ ಅರ್ಜುಮಾಡಿದನು:-

"ಪಾದಷಾ! ಸಲಾಮತ್! ಇಂದಿಗೆ ಪಾದಷಾಹಿಯ ಮುಳುಗಿತು. ಮುಸಲ್ಮಾನರ ದೌಲತ್ತೇನೂ ಉಳಿಯುವುದಿಲ್ಲ. ರಾಮರಾಜನು ಮುಸಲ್ಮಾನರ ಗುಮಾಸ್ತೆಯನ್ನು ಗಣನೆಗೆ ತರುವುದಿಲ್ಲ. ಮುಸಲ್ಮಾನೀ ಮತಕ್ಕೆ ಅವಮಾನವನ್ನು ಮಾಡಿದ್ದಾನೆ. ಪಾದುಷಾ ಸಾಹೇಬರವರು ಆ ನರಪತಿಗೆ ಗಿರ್ದುಮಾಡಿ ಯಾವತ್ತು ಕರ್ಣಾಟಕ ದೇಶದಲ್ಲೆಲ್ಲಾ ಠಾಣ್ಯ ಹಾಕಿ ಅಮಲು ಬಂದೋಬಸ್ತು ಮಾಡಿದರೆ ಮಾನ ಉಳಿದೀತು. ಇಲ್ಲವಾದರೆ ಲೇಶವೂ ಮಾನ ಉಳಿಯುವುದಿಲ್ಲ. ಈಗ ಕೂಡಲೇ ಕರ್ಣಾಟಕಕ್ಕೆ ಬಿಜಮಾಡತಕ್ಕದ್ದು."

ಆಗ ಆದಿಲ್‌ಷಹಾ ಪಾದುಷಹನು ಮಹಲುದಾರನನ್ನು ಕುರಿತು "ನಾನಾದರೋ ನರಪತಿಯವರಿಗೆ ಕುಮಾರನೆನಿಸಿಕೊಂಡಿದ್ದೇನೆ. ಅವರಿಗೆ ಅಹಿತವನ್ನು ಮಾಡಲಾಗದು. ಅರಸುಗಳು ನಮಗೆ ಹಿರಿಯರು. ಅವರ ಮೇಲೆ ಕೈಮಾಡುವುದು ಸರಿಯಲ್ಲ" ಎಂದನು.

ಈ ಉತ್ತರದಿಂದ ಮಹಲುದಾರನಿಗೆ ಕೋಪವು ಹೆಚ್ಚಿತು. ಇನ್ನು ಅಲ್ಲಿರಲು ಅವನಿಗೆ ಇಷ್ಟಬರಲಿಲ್ಲ. ಹೇಳದೆ ಕೇಳದೆ ಆದಿಲಷಹನ ಆಸ್ಥಾನವನ್ನು ಬಿಟ್ಟು ಮಿಕ್ಕ ಮೂರು ಮಂದಿ ಪಾದಷಹರ ಬಳಿಗೆ ಬಂದನು. ಈ ಮೂರು ಮಂದಿಯೂ ಜಹಲ್ನಾಪುರದಲ್ಲಿ ಮೇಜವಾನಿಯ ನಿಮಿತ್ತವಾಗಿ ಕಲೆತಿದ್ದರು. 'ಹಸವಾಯಿ ಜಗಜಂಪ ಸುಗುಣ ಕನ್ನಡಜಾಣ' ಪಾದಷಹನು ರತ್ನಖಚಿತವಾದ ವಸಂತ ಮಹಲಿನಲ್ಲಿ ಸಭೆ ಮಾಡಿಕೊಂಡು ಎಪ್ಪತ್ತೆರಡು ನಿಯೋಗ ಅಠಾರಖಾನೆ ಹನ್ನೆರಡು ಮಹಲು ವಿದ್ವಜ್ಜನ ಸಮೇತವಾಗಿ ಸದರು ಮಾಡಿಕೊಂಡು ಕುಳಿತಿದ್ದನು. ಒಂದು ಕಡೆ ವೇಶ್ಯೆಯರು ನರ್ತನ ಮಾಡುತ್ತಿದ್ದರು. ಗಾಯನದವರು ಗಾಯನ ಮಾಡುತ್ತಿದ್ದರು. ಮೂರು ಮಂದಿ ಪಾದುಷಹರೂ ಹೀಗೆ ಆನಂದಿಸುತ್ತಿರಲಾಗಿ ಆದಿಲಷಹ ಪಾದಷಹನ ಮಹಲದಾರನು ಇವರ ಸಮುಖಕ್ಕೆ ಬಂದು, ಮೂರುಮಂದಿ ಪಾದಷಹರಿಗೆ ನಯವಿನಯದಿಂದ ಸಲ್ಲಾಮುಮಾಡಿ ತನಗೆ ಅನುಭವವಾದ ಪೂರ್ವವೃತ್ತಾಂತವನ್ನೆಲ್ಲ ಸಾಂಗವಾಗಿ ಹೇಳಿದನು. ಕರಗಳನ್ನು ಮುಗಿದು ಹೇಳಿಕೊಂಡ ಮಹಲುದಾರನ ಅರ್ಜಿಯನ್ನು ಮೂರು ಮಂದಿಯೂ ಚಿತ್ತಕ್ಕೆ ತಂದುಕೊಂಡು, "ನೀನಾದರೋ ಆದಿಲ್‌ಷಾಹಿಯ ಮಹಲುದಾರನು; ಈ ವಿಚಾರವನ್ನು ನೀನು ನಿಮ್ಮ ದಣಿಗೆ ಅರ್ಜಿಮಾಡಿಕೊಳ್ಳುವುದನ್ನು ಬಿಟ್ಟು ನಮ್ಮ ಬಳಿಗೆ ಬಂದು ಅರ್ಜಿಮಾಡಿಕೊಳ್ಳುವುದು ಪರಮಾಶ್ಚರ್ಯಕರವಾಗಿ ತೋರುತ್ತದೆ. ನರಪತಿಯ ನಡತೆಯನ್ನು ಅಭಿಪ್ರಾಯವನ್ನೂ ನಿಮ್ಮ ದಣಿಗೆ ಹೇಳಿಕೊಳ್ಳದೆ ನಮ್ಮ ಬಳಿಗೆ ಬಂದಂತೆ ಕಾಣುತ್ತದೆ. ಇದು ಏನು ಸಮಾಚಾರ?" ಎಂದು ಕೇಳಿದರು. "ನಾನಾದರೋ

ಅದಿಲಷಾಹಿಯ ಮಹಲುದಾರನು; ಈ ವಿಚಾರವನ್ನು ದಣಿಗಳಿಗೆ ಅರ್ಜಿಮಾಡಿದೆನು. ಆದರೆ ಅವರು ಇದಕ್ಕೆ ಕಿವಿಗೊಡದೆ 'ನಾನು ರಾಜಭೂವರನ ಮಗನೆನಿಸಿಕೊಂಡಿದ್ದೇನೆ. ಆತನ ಮೇಲೆ ಕೈಮಾಡುವುದಿಲ್ಲ' ಎಂದು ಪರಿಹರಿಸಿಕೊಳ್ಳಲಾಗಿ ನಾನು ನಿಮ್ಮ ಬಳಿಗೆ ಬಂದೆನು."

ಈ ಮಾತನ್ನು ಕೇಳುತ್ತಲೇ ಮೂರು ಮಂದಿ ಪಾದುಷಹರಿಗೂ ಕೋಪಾವೇಶವುಂಟಾಯಿತು. ತಮ್ಮೊಳಗೆ ತಾವು ಕೊಂಚ ಆಲೋಚಿಸಿ ಕರ್ಣಾಟಕ ರಾಜ್ಯದ ಮೇಲೆ ದಂಡೆತ್ತಿಹೋಗಿ ಅಖಿಲ ಕರ್ಣಾಟಕದಲ್ಲೂ ಠಾಣ್ಯ ಹಾಕತಕ್ಕದ್ದೆಂದು ನಿಶ್ಚಯಿಸಿದರು. ಕೂಡಲೇ ಮೂರು ಮಂದಿ ಪಾದುಷಹರೂ ತಮ್ಮ ತಮ್ಮ ಅಷ್ಟಪ್ರಧಾನಿಗಳು, ಸೇನಾನಾಯಕರು, ದಳವಾಯಿ, ಕಂದಾಚಾರಿಗಳು ಮೊದಲಾದವರೆಲ್ಲರನ್ನೂ ಕರೆಸಿ, ಸೈನ್ಯವನ್ನು ಸಿದ್ಧಪಡಿಸತಕ್ಕದೆಂದು ಹುಕುಮನ್ನು ಕೊಟ್ಟರು. ಮೂರು ಮಂದಿಯ ಸೈನ್ಯವೂ ಸಿದ್ಧವಾಯಿತು. ಆ ಬಲಸ್ತೋಮ ಗಜತುರಗ ರಥೋಷ್ಟ್ರಕಾಲುಪ್ಯಾದೆಗೆ ಸಹಸರಂಜಾಮು ಮಾಡಿ ನರಪತಿಯ ಮೇಲೆ ಮೋಹಿಮು ಹೊರಡುವುದಕ್ಕೆ ಮೂರು ಮಂದಿ ಪಾದುಷಹರು ತಮ್ಮ ತಮ್ಮ ಪೇಷುಖಾನೆ ಸಂಗಡ ಝಾಂಡಾವನ್ನು ಹೊರಗೆ ಹಾಕಿಸಿದರು.

ರಾಜಭೂವರರ ಹೆಜೀಬು ತಿಮ್ಮಾಜಿ ಭೀಮಾಜಿಯು ಜಹಲ್ನಾಪುರದಲ್ಲಿ ಮೊಕ್ಕಾಂ ಇದ್ದನು. ಮೂರು ಮಂದಿ ಪಾದುಷಹರ ಸೈನ್ಯವೂ ಕರ್ಣಾಟಕ ರಾಜ್ಯದ ಮೇಲೆ ಮೋಹಿಮು ಹೊರಡಲಿರುವ ಸಮಾಚಾರವನ್ನು ತನ್ನ ದಣಿ ರಾಜಭೂವರನಿಗೆ ಜಹಸೂದನ ಸಂಗಡ ಬರೆಸಿ ಕಳುಹಿಸಿದನು. ಜಹಸೂದನು ಭಯಭಕ್ತಿಯಿಂದ ನರಪತಿಗಳಿಗೆ ನಮಸ್ಕರಿಸಿ ಹೆಜೀಬು ಬರೆದುಕೊಂಡು ಬಿನ್ನವತ್ತಳೆಯನ್ನು ಮುಟ್ಟಿಸಿ ಬಂದು ತಾನೂ ಕೆಲವು ವಿಚಾರಗಳನ್ನು ಅರ್ಜಿಮಾಡಿದನು.

ನರಪತಿಯವರು ವಿಜಯದಶಮೀದಿವಸ ಮನೋಹರ ವನಾಂತರದೊಳಗೆ ಸದರುಮಾಡಿಕೊಂಡು ಸಮಸ್ತ ವಜೀರ, ಅಷ್ಟಪ್ರಧಾನಿಗಳು, ದಳವಾಯಿ, ಕಂದಾಚಾರದವರು ಮೊದಲಾಗಿ ಎಪ್ಪತ್ತೆರಡು ನಿಯೋಗದವರನ್ನೂ, ಸಮಸ್ತ ಸಾಮಂತರನ್ನೂ ಕರೆಸಿ ಅವರೊಂದಿಗೆ - "ನಾಲ್ಕು ಮಂದಿ ಪಾದುಷಹರೂ ಒಟ್ಟಾಗಿ ತಮ್ಮ ತಮ್ಮ ಸೈನ್ಯಗಳನ್ನು ಕೂಡಿಸಿಕೊಂಡು ನಮ್ಮ ಮೇಲೆ ಬರುತ್ತಲಿದ್ದಾರೆ. ನೀವು ನಿಮ್ಮ ನಿಮ್ಮ ಬಲ ತೋರಿಸಿ ಸಮಾಧಾನವಾಗಿಯೂ, ಒಂದೇ ಮನಸ್ಸಿನಿಂದಲೂ, ಶತ್ರುವನ್ನು ಇದುರಿಸಬೇಕು. ಶರತ್ತಿನಿಂದ ಶತ್ರುಗಳ ಮೋರೆಯ ಮೇಲೆ ಹೊಡೆದು ಗಂಡಸುತನವನ್ನು ಉಳಿಸಿಕೊಳ್ಳಬೇಕು." - ಎಂದು ಹೇಳಿ, ಎಲ್ಲರಿಗೂ ಉಚಿತ ವಸ್ತ್ರಾಭರಣಗಳನ್ನು ದಯೆಪಾಲಿಸಿದರು. ಅನೇಕರಿಗೆ ಬಗೆಬಗೆಯಾದ ಆಯುಧಗಳನ್ನು ಕೊಟ್ಟರು. ಅವರವರ ಯೋಗ್ಯತಾನುಸಾರ ಕೆಲವರಿಗೆ ಸಂವತ್ಸರಕ್ಲಿಪ್ತ ಮಾಸಕ್ಲಿಪ್ತ ಗೃಹಕೃತ್ಯಪರಾಮರಿಕೆ ಮಾಡಿಕೊಟ್ಟರು. ಎಲ್ಲರಿಗೂ ಧೈರ್ಯ ಸ್ಥೈರ್ಯ ಚಾತುರ್ಯ ವಿಷಯಿಕೆ ಬುದ್ಧಿವಾದವನ್ನು ಹೇಳಿದರು. ಇಷ್ಟಲ್ಲದೆ ದುರ್ಗಾಧ್ಯಕ್ಷ, ಬಲಾಧ್ಯಕ್ಷ ಇತ್ಯಾದಿ ಸಪ್ತಾಂಗ ಲಕ್ಷಣದವರ ಸಹಿತ

ಕುಳಿತು, ರಾಜಕೀಯ ಸ್ಥಿತಿಯನ್ನು ಅವರೊಂದಿಗೆ ಚರ್ಚಿಸಿ ಶತ್ರುಗಳ ಮೇಲೆ ಬೀಳಬೇಕೆಂದು ಸಿದ್ಧಾಂತಮಾಡಿದರು.

ಇತ್ತಲಾಗಿ ಮೂರುಮಂದಿ ಪಾದಷಹರೂ ಒಟ್ಟುಗೂಡಿರಲು ಜಾಸೂದನು ವಿಜಯನಗರದಿಂದ ಸಮುಖಕ್ಕೆ ಸಮಾಚಾರವನ್ನು ತಂದನು. ರಾಮರಾಯನ ನಿಶ್ಚಯವನ್ನು ಕೇಳಿ ಮೂವರೂ ಆಲಿ ಅದಿಲಷಾಹಿಗೆ ಹೀಗೆ ಹೇಳಿ ಕಳುಹಿಸಿದರು.

"ನಾವು ಮೂರುಮಂದಿಯೂ ಸೇರಿ ನಮ್ಮ ನಮ್ಮ ಸೈನ್ಯದೊಂದಿಗೆ ನರಪತಿಯ ಕರ್ನಾಟಕ ದೇಶವನ್ನು ಮುಲಕಗಿರಿ ಮಾಡುವುದಕ್ಕಾಗಿ ಹೊರಡಲು ಸಿದ್ಧರಾಗಿದ್ದೇವೆ. ನಿಮ್ಮ ನಿಮ್ಮ ಸೈನ್ಯವನ್ನು ತೆಗೆದುಕೊಂಡು ಯುದ್ಧಕ್ಕೆ ಬರಬೇಕು. ನಾವೀಗ ನಿಮ್ಮ ರಾಷ್ಟ್ರದ ಮಾರ್ಗ ಹಿಡಿದು ಬರುತ್ತೇವೆ; ನಮಗೆ ಮಾರ್ಗವನ್ನು ಕೊಡತಕ್ಕದ್ದು. ಈಗ ನಾವು ನೀವು ಕಲೆತು ಶರತ್ತಿನಿಂದ ಕರ್ನಾಟಕದ ಮೇಲೆ ದಂಡೆತ್ತಿ ಹೋಗಬೇಕು."

ಹೆಜೀಬನು ಈ ವಾರ್ತೆಯನ್ನು ಅದಿಲಷಾಹಿಗೆ ತಿಳಿಸಿದನು. ಇದಕ್ಕೆ ಆಲಿ ಅದಿಲಷಾಹಿಯು "ರಾಜಭೂವರನ ಮೇಲೆ ನಾನು ಕಾಣಿಸಿಕೊಳ್ಳಬಾರದು. ನಾನು ಆತನ ಮಗನೆನಿಸಿಕೊಂಡಿದ್ದೇನೆ. ಸರ್ವಥಾ ಸ್ವಾಮಿದ್ರೋಹವನ್ನು ಮಾಡಲಾಗದು." ಎಂದುತ್ತರ ಕೊಟ್ಟು ಹೆಜೀಬನಿಗೆ ಯೋಗ್ಯತಾನುಸಾರ ವಸ್ತ್ರಾಲಂಕಾರಗಳನ್ನು ಆನೆ ಕುದುರೆ ಮೊದಲಾದ ಬಹುಮಾನಗಳನ್ನೂ ಕೊಟ್ಟುಕಳುಹಿಸಿದನು.

ರಾಜಭೂವರರ ಹರಿಕಾರನು, ಮೂರು ಮಂದಿ ಪಾದುಷಹರೂ ಆಲಿ ಅದಿಲಷಹನ ಬಳಿಗೆ ತಮ್ಮ ಹೆಜೀಬನನ್ನು ಕಳುಹಿಸಿದ್ದ ಸಮಾಚಾರವನ್ನು ಅದಿಲಷಹನು ಹೆಜೀಬಿನಿಗೆ ಕೊಟ್ಟ ಉತ್ತರವನ್ನೂ ನರಪತಿಯವರಿಗೆ ತಿಳಿಸಿದನು. ಇದೇ ವಿಚಾರವನ್ನು ಅದಿಲಷಾಹಿಯ ಬಳಿ ಇರುವ ನರಪತಿಯವರ ಹೆಜೀಬನೂ ತನ್ನ ದಣಿಗಳಿಗೆ ಬರೆದು ಕಳುಹಿಸಿದನು. ಈ ವಾರ್ತೆಯನ್ನು ಕೇಳಿ ರಾಜಭೂವರರಿಗೆ ಬಹು ಹರುಷವುಂಟಾಯಿತು. ಕೂಡಲೇ ಸೇನಾಪತಿ ಬಿಸಲಪ್ಪನಾಯಕನನ್ನು ಕರೆದು ವೂಚು ಹೊದಿಕೆಗಳು, ಮುತ್ತಿನ ತುರಾಯಿಗಳು, ಕಡಗ ಕಂಠಮಾಲೆ ಐದು ಕೊತಲಿಕುದುರೆಗಳು ಮುಂತಾದುವನ್ನು ಆಲಿ ಅದಿಲಷಾಹಿಗೆ ಬಹುಮಾನವಾಗಿ ಕೊಟ್ಟುಬಾರೆಂದು ಅರಸರು ಆಜ್ಞೆ ಮಾಡಿದರು. ಆಜ್ಞೆಯಂತೆ ಬಿಸಲಪ್ಪನಾಯಕನು ಅದಿಲಷಾಹಿಯ ಅರಮನೆಗೆ ಬಂದನು. ಅದಿಲಷಾಹಿಯು ಕುಶಾಲಿನಿಂದ ಸದರುಮಾಡಿಕೊಂಡು ಕುಳಿತಿದ್ದನು. ನರಪತಿಯವರು ಬಹುಮಾನಗಳನ್ನು ಕಳುಹಿಸುವರೆನ್ನುತ್ತಲೇ ಮಹದಾನಂದದಿಂದಲೂ ಆತುರದಿಂದಲೂ ಅವುಗಳನ್ನು ಅಂಗೀಕರಿಸಿ ಅದಕ್ಕೆ ಪ್ರತಿಯಾಗಿ ಮಣಿಮುಕುಟ ನವರತ್ನ ಖಚಿತವಾದ ಅಲಂಕಾರಗಳನ್ನೂ ಗಜತುರಗಗಳನ್ನೂ ಕೊಟ್ಟು ತನ್ನ ವಕೀಲನೊಂದಿಗೆ ನರಪತಿಯ ಸಮುಖಕ್ಕೆ ಕಳುಹಿಸಿದನು.

ಅದಿಲಷಾಹಿಯ ಬಳಿಯಲ್ಲಿದ್ದ ಮೂರು ಮಂದಿ ಪಾದುಷಹರ ಹೆಜೀಬರೂ ಒಟ್ಟಾಗಿ ನರಪತಿಯವರ ಒಂದಿಗೆ ಅದಿಲಷಹನು ನಡೆಸುತ್ತಿರುವ ಸಂಧಾನ ವಿಚಾರವನ್ನು

ಕುರಿತು ತಮ್ಮ ತಮ್ಮ ದಣಿಗಳಿಗೆ ಕೂಡಲೇ ಬರೆದು ಕಳುಹಿಸಿದರು. ಈ ವಿಚಾರವನ್ನು ತಿಳಿದು ಮೂರು ಮಂದಿ ಪಾದಷಹರೂ ಮತ್ತೊಂದು ಬಾರಿ, ಬುದ್ಧಿವಂತನೂ ಚತುರನೂ ಆದ ಸುಬೇದಾರನೊಬ್ಬನನ್ನು ಅದಿಲಷಾಹಿಯ ಬಳಿಗೆ ಕಳುಹಿಸಿದರು. ಆ ಸುಬೇದಾರನು ಅದಿಲಷಾಹಿಯ ಸಮುಖವನ್ನು ಸೇರಿ ಈ ರೀತಿ ಹೇಳಿದನು.

"ನೀವಾದರೆ ಮುಸಲ್ಮಾನ ಪಾದುಷಹರು. ಹೀಗೆ ಹಿಂದೂ ಬೇಮಾನನೊಂದಿಗೆ ಸೇರುವುದು ಸರಿಯಲ್ಲ. ಇದರಿಂದ ನಿಮಗೆ ಕೀರ್ತಿ ಬರುವುದಿಲ್ಲ. ಇಂದಿನವರೆಗೆ ಆದದ್ದು ಆಗಿಹೋಯಿತು. ಇನ್ನು ಮೇಲಾದರೂ ತಾವು ಚೆನ್ನಾಗಿ ಯೋಚಿಸಿ ಮೂರುಮಂದಿ ಮುಸಲ್ಮಾನ ಪಾದುಷಹರೊಂದಿಗೆ ಕಲೆತು ಏಕಮುಖವಾಗಿ ಕರ್ಣಾಟಕ ದೇಶದಲ್ಲಿ ಠಾಣೆ ಹಾಕಿ ಕೀರ್ತಿಯನ್ನು ಸಂಪಾದಿಸಬೇಕು. ಇದರಿಂದ ಭೂಷಣವುಂಟು. ನಮ್ಮ ಮಾತನ್ನು ಈಗ ತಾವು ಕೇಳದೆ ಹೋದರೆ ಮುಳುಗಿಹೋದೀರಿ; ತಮ್ಮ ದೇಶವು ನಾಶವಾದೀತು; ಸ್ಥಳಭ್ರಷ್ಟತ್ವವಾದ ಮೇಲೆ ಮಾನವೇನುಳಿದೀತು? ಸಕಲವನ್ನೂ ತಿಳಿದವರು ನೀವು. ನಾನು ಅರಿಕೆಮಾಡಿಕೊಂಡಂತೆ ತಾವು ನಡೆಸಿದುದೇ ಆದರೆ ತಾವು ದೊಡ್ಡವರಾಗುವಿರಿ; ನಾಲ್ಕೂ ರಾಜ್ಯಕ್ಕೆ ಹೆಸರುಬರುತ್ತದೆ; ನಿಮ್ಮ ಹೆಸರುಳಿಯುತ್ತದೆ."

ಇದೆಲ್ಲವನ್ನೂ ಕೇಳಿ ಅದಿಲಷಹನಿಗೆ ದಿಕ್ಕು ತೋರದಂತಾಯಿತು. ಒಂದು ಬಾರಿ "ಈ ಮಾತಿನಲ್ಲೂ ಒಪ್ಪತಕ್ಕಂಥಾ ವಿಷಯಗಳಿವೆ" ಎಂದಂದುಕೊಂಡನು. ಆದರೂ ಕಡೆಗೆ ಎರಡು ಕಡೆಯಿಂದಲೂ ಬಂದ ಅನುಸಂಧಾನವನ್ನು ಬಿಡಲೊಪ್ಪದೆ ಸುಬೇದಾರನಿಗೆ "ರಾಜಭೂವರನು ಮಹಾ ಬಲಿಷ್ಠನಾಗಿದ್ದಾನೆ. ಅವಶ್ಯ ದೂರ ದೃಷ್ಟಿಯಿಂದ ಜಯಿಸುವ ರಾಜಕಾರ್ಯವನ್ನು ಮಾಡುವಂತೆ ನಿಮ್ಮ ದಣಿಗಳಿಗೆ ತಿಳಿಸು" ಎಂಬುದಾಗಿ ಹೇಳಿ ಅವನ ಯೋಗ್ಯತೆಗೆ ತಕ್ಕಂತೆ ಬಹುಮಾನವನ್ನು ಮಾಡಿ ಕಳುಹಿಸಿದನು. ಸುಬೇದಾರನು ಹಿಂದಿರುಗಿ ನಡೆದ ವರ್ತಮಾನವೆಲ್ಲವನ್ನೂ ತಮ್ಮ ದಣಿಗಳಿಗೆ ಸಾಂಗವಾಗಿ ತಿಳಿಸಿದನು. ಮೂರು ಮಂದಿ ಪಾದುಷಹರು ಆಲಿ ಅದಿಲಷಹನೊಂದಿಗೆ ಸುಬೇದಾರನ ಮೂಲಕ ಅನುಸಂಧಾನವನ್ನು ನಡೆಸುತ್ತಲಿರುವರೆಂಬ ಸುದ್ದಿ ವಿದ್ಯಾನಗರಕ್ಕೆ ಬಂತು. ಈ ಸಮಾಚಾರವನ್ನರಿತ ಬಿಸಲಪ್ಪನಾಯಕನು ನರಪತಿಗೆ ಶತ್ರು ಸಂಧಾನಗಳೆಲ್ಲವನ್ನೂ ವಿಶದವಾಗಿ ತಿಳಿಯಪಡಿಸಿದನು; ಇತರ ಸದಸ್ಯರೂ ಈ ರೀತಿಯಾಗಿ ಸಮುಖದಲ್ಲಿ ವಿಜ್ಞಾಪಿಸಿಕೊಂಡರು:-

"ಪ್ರಭುಗಳೇ ನೀವು ದೊಡ್ಡ ಪಾದುಷಹರು; 'ನವಕೋಟಿ ನಾರಾಯಣ' ರೆಂದೆನಿಸಿಕೊಂಡಿರುವಿರಿ; ಅಪ್ರತಿಮ ಪರಾಕ್ರಮಿಗಳಾದ ನೀವು ಈ ಸಮಯದಲ್ಲಿ, ಶತ್ರುಗಳು ನಮ್ಮ ದೇಶದ ಮೇಲೆ ಬಿದ್ದು ಪ್ರಜೆಗಳಿಗೆ ಉಪದ್ರವ ಕೊಡಲಿಕ್ಕೆ ಮೊದಲೇ ಅವರ ಪ್ರಯತ್ನಗಳಿಗೆ ಭಂಗವನ್ನುಂಟು ಮಾಡಬೇಕು. ಈ ಸಮಯದಲ್ಲಿ ದ್ರವ್ಯವ್ಯಯಕ್ಕೆ ಹಿಂದು ಮುಂದು ನೋಡಲಾಗದು. ದೊಡ್ಡ ದೊಡ್ಡ ಮನೆತನದವರಿಗೂ ವಜೀರರಿಗೂ ಅವರವರ ವಿದ್ಯಾಮಾನವರಿತು ಭೂಷಣಕೊಟ್ಟು ಸೈನ್ಯವನ್ನು ಸೇರಿಸಬೇಕು."

ಅಷ್ಟ ಪ್ರಧಾನರು, ಸೇನಾಧಿಪತಿ ದಳವಾಯಿ ಮೊದಲಾದ ಪ್ರಮುಖರು ಹೇಳಿದುದಕ್ಕೆ ನರಪತಿಯವರು ಬಹಳ ಹರುಷಿತರಾಗಿ ಯಾವತ್ಸಾಮಾಜಿಕರಿಗೂ ಯೋಧರಿಗೂ ತಾಂಬೂಲವನ್ನು ಕೊಡಿಸಿ ಸಾಮಾನುಪೇಷಖಾನೆ ಹೊರಗೆ ಹಾಕಿಸಿ ಮುಂದಾಗಿ ಒಂದು ಫೌಜನ್ನೂ ಕಳುಹಿಸಿ, ತಾವು ರಾಣಿವಾಸವನ್ನು ಪ್ರವೇಶಿಸಿದರು.

ಹಿರಿಯ ಅರಸಿ ಸತ್ಯಭಾಮೆ. ಆಕೆಯ ಮಹಲನ್ನು ಹೊಕ್ಕು ರತ್ನಖಚಿತವಾದ ಮಂಚದ ಮೇಲೆ ಕುಳಿತು ಸರ್ವಾಭರಣ ಭೂಷಿತೆಯಾಗಿದ್ದ ಹೆಂಡತಿಯನ್ನು ಸನ್ಮಾನಿಸಿ, ಅಲ್ಲಿ ಅಷ್ಟಭೋಗಗಳನ್ನು ಅನುಭವಿಸಿ, ಹೀಗೆಯೇ ದೇವಚಿಂತಾಮಣಿ, ತಿರುವೆಂಗಳಮ್ಮ, ಸುಭದ್ರೆ, ಮಿತ್ರವಿಂದೆ, ಜಾಂಬುವಂತೆ, ರಾಧೆ, ಮೋಹಿನಿ, ಚಾಮವರ್ಣಿನಿ ಮೊದಲಾದ ಅರವತ್ತ ನಾಲ್ಕು ಮಂದಿ ಹೆಂಡಿರ ಮನೆಗೂ ಹೋಗಿ ಜ್ಯೇಷ್ಠ ಪತ್ನಿಗೆ ಕೊಟ್ಟಂತೆ ಎಲ್ಲರಿಗೂ ವಿಶೇಷ ಸನ್ಮಾನವನ್ನು ಕೊಟ್ಟು, ಅನುಪಾನವನ್ನು ಮಾಡಿ ಪುತ್ರಮಿತ್ರರಿಗೆ ಬಹುಮಾನ ಮಾಡಿದ ತರುವಾಯ ನರಪತಿಯವರು ತಮ್ಮ ಮಾತೃಶ್ರೀಯವರಿದ್ದ ಚಂದ್ರಶಾಲೆ ಮಹಲಿನ ಮೇಲಕ್ಕೆ ಹೋಗಿ ಪಾದಗಳ ಮೇಲೆ ಬಿದ್ದು ವಿನಯಪೂರ್ವಕವಾಗಿ ವಂದನೆಗಳನ್ನು ಅರ್ಪಿಸಿದರು. ಮಾತೃಶ್ರೀಗಳು ಬಹಳ ಹರುಷಿತರಾಗಿ ಆಶೀರ್ವಾದನ್ನು ಮಾಡಿ, ಝುಡಿತ ಝುಡಾವು ನವರತ್ನ ಸುವರ್ಣಪುಷ್ಪ ನಿವಾಳಿಸಿ ಬ್ರಾಹ್ಮಣರಿಗೆ ಅವುಗಳನ್ನು ದಾನಮಾಡಿ ತಮ್ಮ ಪುತ್ರರ ಕೈಹಿಡಿದು ತಮ್ಮ ಮಹಲಿನೊಳಕ್ಕೆ ಕರೆದುಕೊಂಡು ಹೋದರು. ಒಳಗೆ ಕುಶಲ ಪ್ರಶ್ನೆಗಳಾದನಂತರ ನರಪತಿಯವರು ತಮ್ಮ ಮಾತೃಶ್ರೀಗಳಿಗೆ ಈ ರೀತಿ ಬಿನ್ನಹಮಾಡಿದರು.

“ಮೂರುಮಂದಿ ಪಾದುಷಹರೂ ಏಕವಾಗಿ ಕರ್ಣಾಟಕವನ್ನೆಲ್ಲ ಕೊಳ್ಳೆ ಹೊಡೆಯಬೇಕೆಂದು ನಿರ್ಧರಿಸಿ ನನ್ನ ಮೇಲೆ ಬರುವುದರಲ್ಲಿದ್ದಾರೆ. ಇದು ಧರ್ಮರಾಜ್ಯ; ದೇವಬ್ರಾಹ್ಮಣರ ಪಾಲಿಗೆ ಬಂದ ಧರ್ಮಕ್ಷೇತ್ರಗಳುಳ್ಳ ಸಂಸ್ಥಾನ. ನಿಮ್ಮ ಅನುಗ್ರಹದಿಂದಲೂ ಕುಲದೇವತಾಪ್ರಸಾದದಿಂದಲೂ ನನಗೆ ಯಾವುದರಲ್ಲೂ ಕಡಿಮೆಯಿಲ್ಲ. ಸಾಕಾದಷ್ಟು ಸೈನ್ಯವುಂಟು, ಬೇಕಾದಷ್ಟು ದ್ರವ್ಯವುಂಟು. ಸಕಲ ಸೈನ್ಯ ಸಮೇತನಾಗಿ ಹೊರಟು ಶತ್ರುಗಳನ್ನು ಧ್ವಂಸಮಾಡಿ ಬರುತ್ತೇನೆ. ನನಗೆ ತಮ್ಮ ಬುದ್ಧಿವಾದವೇನು?”

ಈ ಮಾತನ್ನು ಕೇಳಿ ಮಾತೃಶ್ರೀಗಳಿಗೆ ಬಹುಕ್ಲೇಶವುಂಟಾಯಿತು. ಆಗ ಅವರು “ನೀನು ದೊಡ್ಡ ನರಪತಿ. ಪೇಡಿದರ ಸೀಡಿ, ಈ ಹೊತ್ತಿಗೆ ಏಳು ಪಾದಶಹರ ಪಟ್ಟವಾಯಿತು. ಇದುವರೆಗೂ ಅವರು ತಮ್ಮ ತಮ್ಮ ಮರ್ಯಾದೆಗಳನ್ನು ಉಳಿಸಿಕೊಂಡಿದ್ದರು. ಕಾಲಗತಿಯಿಂದ ಈಗ ಅವರು ಅಧಿಕ ಉಪದ್ರವವನ್ನು ಕೊಡುತ್ತಲಿದ್ದಾರೆ. ಅನುಕೂಲ ಪ್ರತಿಕೂಲಗಳು ಅವರವೋ ನಿನ್ನದೋ ಗೊತ್ತಿಲ್ಲ. ನೀನಾದರೋ ಬಾಲಕನು. ಅವರೊಂದಿಗೆ ವಿರೋಧವೇಕೆ? ಕಾಲದ ಮೇಲೆ ದೃಷ್ಟಿಯಿಟ್ಟು ಅವರಲ್ಲಿ ಸಂಧಾನ ನಡೆಸಿ ಶಾಂತಿಗೊಳ್ಳುವುದು ಉತ್ತಮವೆಂದು ನನ್ನ ಬುದ್ಧಿಗೆ ತೋರುತ್ತದೆ” ಎಂದು ಹೇಳಿದರು.

ಇದಕ್ಕೆ ರಾಜಭೂವರರು ಬಹು ಅಸಮಾಧಾನಪಟ್ಟು "ನಾನಾದರೋ ದೊಡ್ಡ ಚಕ್ರವರ್ತಿ. ನನ್ನ ಮುಂದೆ ಅವರೆಲ್ಲಿ? ಅವರು ನನ್ನ ಕೈಯೊಳಗಿರುವವರು; ನಾನು ಕೊಟ್ಟ ದೇಶದಲ್ಲಿ ಜೀವಿಸಿಕೊಂಡಿರುವವರು. ಅಂಥವರೊಂದಿಗೆ ನಾನು ಅನುಸಂಧಾನವನ್ನು ನಡೆಸುವುದೇ? ಇದು ನನ್ನ ಗೌರವಕ್ಕೆ ತಕ್ಕುದಲ್ಲ. ವಿಜಯಿಯಾಗುವವರೆಗೂ ಯುದ್ಧ ಮಾಡಲು ಯಾವುದಕ್ಕೂ ಕಡಿಮೆಯಿಲ್ಲ. ಶತ್ರುಗಳನ್ನು ಕ್ಷಣದಲ್ಲಿ ಸೋಲಿಸುತ್ತೇನೆ" ಎಂದು ಬಿನ್ನಹ ಮಾಡಿದರು. ಆಗ ಮಾತೃಶ್ರೀಗಳು ತಮ್ಮ ಪುತ್ರರ ಕೈಹಿಡಿದು ಸಮಾಧಾನ ಮಾಡಿ ಜಯವಾಗಲೆಂದು ಅನೇಕ ಪ್ರಕಾರ ಹರಸಿದರು. ತರುವಾಯ ಅಪ್ಪಣೆ ತೆಗೆದುಕೊಂಡು ಪುತ್ರರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಪುಷ್ಪವೃಷ್ಟಿಯಂತೆ ಕನಕಾಭಿಷೇಕವನ್ನು ಮಾಡಿ, ಶತ್ರು ಪರಾಭವವಾಗಲೆಂದು ಹರಸಿ, ದೇವರನ್ನು ಪ್ರಾರ್ಥಿಸಿ, "ಜಯಿಸಿ ಬಾರಪ್ಪ" ಎಂದು ಕಳುಹಿಸಿಕೊಟ್ಟರು.

ಆ ರಾತ್ರಿ ರಾಜಭೂವರರು ಒಂದು ದುಸ್ವಪ್ನವನ್ನು ಕಂಡರು. ಕೂಡಲೇ ಎದ್ದು ಹರಿನಾಮ ಸ್ಮರಣೆಮಾಡಿದರು. ಮನಸ್ಸಿಗೆ ಅಸಮಾಧಾನವುಂಟಾಯಿತು. ಚಿಂತೆಯು ಬಲವಾಯಿತು. ಬೆಳಗಾಗುತ್ತಲೇ ವೇದಶಾಸ್ತ್ರ ಸಂಪನ್ನರಾದ ವಿದ್ವಾಂಸರನ್ನು ಕರೆಸಿ, ಕರ್ಣಕುಂಡಲಾದಿಗಳನ್ನು ಯಾರೋ ಕಳಚಿಕೊಂಡಂತೆ ದುಸ್ವಪ್ನವಾಯಿತೆಂದು ಹೇಳಿದರು. ಅದಕ್ಕೆ ವಿದ್ವಾಂಸರು 'ಜೀಯಾ! ತಾವು ಮನಸ್ಸಿಗೆ ಚಿಂತೆ ಹಚ್ಚಿಕೊಳ್ಳಬೇಡಿ, ಸಮಾಧಾನದಿಂದಿರಿ; ದೇವರ ಕೃಪೆಯಿಂದ ಎಲ್ಲ ಕಷ್ಟಗಳೂ ಪಾರಾಗುವುವು' ಎಂದು ಹೇಳಿದರು. ಅದಕ್ಕರಸರು "ಇಂಥಾ ದುಸ್ವಪ್ನವನ್ನು ನಾನೆಂದೂ ಕಂಡುದಿಲ್ಲ; ಎಂದೆಂದೂ ದೇವರು ನನ್ನ ಮೇಲೆ ಮುನಿಸು ಮಾಡಿದವನಲ್ಲ. ಐಶ್ವರ್ಯಕ್ಕೆ ಹಾನಿ ಬಂತು. ಭಾಗ್ಯಲಕ್ಷ್ಮಿ ಕುಲದೇವತೆ ನನ್ನ ಮೇಲೆ ಆಗ್ರಹವನ್ನು ತೋರಿದಳು. ದೇವಾನುಗ್ರಹವು ತಪ್ಪಿದ ಮೇಲೆ ನನ್ನ ಯತ್ನವೇನಿದ್ದೀತು? ಒಳ್ಳೆಯದು. ನನ್ನ ಕೈಯಿಂದಾಗುವ ಮಟ್ಟಿಗೂ ನಾನು ಧೈರ್ಯಗೆಡದೆ, ಕರ್ತವ್ಯ ಬಿಡದೆ ಹೋರಾಡುವೆನು. ಆ ತರುವಾಯ ದೈವಚಿತ್ತವಿದ್ದಂತಾಗಲಿ" ಎಂದು ಕುಳಿತರು. ಸಮಸ್ತ ಸದಸ್ಯರೂ ವಿದ್ವಜ್ಜನರೂ ಸಮಾಧಾನ ಹೇಳಿ ಆಶೀರ್ವದಿಸಿದರು. ವಯೋವೃದ್ಧರನೇಕರು "ನಿನಗೆ ಜಯವಾಗಲಿ! ನಿನ್ನ ಶತ್ರುಗಳಿಗೆ ಅಪಜಯವುಂಟಾಗಲಿ! ನೀನು ಜಯಶೀಲನಾಗಿ ಛತ್ರಪತಿಯೆನಿಸಿ ಧ್ರುವ ಮಾರ್ಕಂಡೇಯರಂತೆ ಆಯುಷ್ಮಂತನಾಗಿರು!" ಎಂದು ಹರಸಿದರು. ಬಂದ ಬ್ರಾಹ್ಮಣರಿಗೆ ಸುವರ್ಣರತ್ನಾಲಂಕಾರಗಳೊಂದಿಗೆ ಮನದಣಿಯೆ ದಾನಮಾಡಿದರು. ಮತ್ತೆ ರಾಯರು ಮಂಗಳ ಸ್ನಾನವನ್ನು ಮಾಡಿ ಬ್ರಾಹ್ಮಣರಿಗೆ ಅನೇಕ ದಾನಗಳನ್ನು ಮಾಡಿದರು. ಅನಂತರ ಜೋಯಿಸರನ್ನು ಕರೆಸಿ ಸುಮುಹೂರ್ತವನ್ನಿಡಿಸಿ, ಅಮೃತ ಸಿದ್ಧಿಯೋಗದಲ್ಲಿ ತಾವು ತಾಸಿಲಿ ರಾಜನೆಂಬ ತುರುಗವನ್ನು ಹತ್ತಿ ಅರಮನೆಯನ್ನು ಬಿಟ್ಟು ವಿದ್ಯಾನಗರದಿಂದ ಹೊರಹೊರಟು ನವಗಜ, ಜಯಭೇರಿ, ಅಷ್ಟಪ್ರಧಾನಿಗಳು, ಸೇನಾಧಿಪತಿಗಳು ಮೊದಲಾದ ಎಪ್ಪತ್ತೆರಡು ನಿಯೋಗದವರೊಡನೆ ನಗರಕ್ಕೆ ಉತ್ತರಭಾಗದಲ್ಲಿ ಠಾಣ್ಯವನ್ನು ಹಾಕಿಸಿದರು. ಸಮಸ್ತ ಸೈನ್ಯವೂ ಕೂಡಿತು. 'ವಿದ್ಯಾನಗರದ ಕುದುರೆ ಸವಾರರು ಮೊದಲಾದ ಎಲ್ಲಾ ಯೋಧರೂ

ಹೊರಡಿರಿ; ಬಾರದೆ ನಿಂತಿರಾದರೆ ಅರಮನೆಗೆ ಅಪರಾಧ ಕೊಡಬೇಕಾದೀತು." ಎಂದು ತಾಕೀತು ಮಾಡಿಸಿದ ಪ್ರಕಾರ "ಅರಸಿನವರಿಗಿಂತಲೂ ನಮ್ಮ ಜೀವ ಹೆಚ್ಚೆ?" - ಎಂದು ಹೇಳುತ್ತಾ ಯೋಗ್ಯವಯಸ್ಕರೆಲ್ಲರೂ ಅರಸರನ್ನು ಹಿಂಬಾಲಿಸಿದರು. ಆ ತರುವಾಯ ರಾಜಭೂವರರು ಅಷ್ಟ ಪ್ರಧಾನಿಗಳು, ದಳವಾಯಿ ಸದಾಶಿವನಾಯಕ, ಜಮೇದರಖಾನ, ಗೋಪಾಲಯ್ಯ, ಸಮಸ್ತ ಸಂಸ್ಥಾನಿಕರು, ಪಾಳೆಯಗಾರರು, ಪರಗಣೆಯವರು, ಮೊದಲಾದ ಸಮಸ್ತರಿಂದಲೂ ಕೂಡಿ ದಿನಸುವಾರಿ ಹೊನ್ನುಗಳನ್ನು ತರಿಸಿಕೊಟ್ಟು, ಸಮಸ್ತ ಸೈನಿಕರಿಗೂ ನಾಳೆ ಎಣಿಕೆಗೆ ಬರುವುದು ಎಂದು ಆಜ್ಞೆ ಮಾಡಿದರು.

ಮಾರನೆಯ ದಿನ ಸೈನ್ಯವೂ ಸಾಮಗ್ರಿಗಳೂ ಎಲ್ಲವೂ ಎಣಿಕೆಗೆ ಸಿದ್ಧವಾದುವು. ಕುದುರೆಗಳು, ಒಂಟೆಗಳು, ಆನೆಗಳು, ಹಿರಿಯತೋಪುಗಳು, ಸಣ್ಣ ತೋಪುಗಳು, ರಾಮಚಂಗಿಗಳು, ರಾಮಬಾಣಗಳು, ಮತಾಪುಗಳು, ತಾರಾಮಂಡಲ, ಭೂಚಕ್ರ, ರಣಗಾಡಿಗಳು, ಮೊದಲಾದ ಯುದ್ಧೋಪಕರಣಗಳನ್ನೆಲ್ಲ ಎಣಿಸಿದುದಾಯಿತು. ಕುದುರೆ ಸವಾರರು, ಕಾಲುಮಂದಿ, ರಥಿಕರು, ಆನೆಯವರು, ಒಂಟೆಯವರು, ಒಂದೆಡೆ ನಿಂತರು. ಕತ್ತಿಗಾರರು, ಬಾಣಕಾರರು, ತೋಪಿನವರು, ಭರ್ಜಿಯವರು, ಮತ್ತೊಂದು ಸಾಲಿನಲ್ಲಿ ನಿಂತರು. ಗೋಲಂದಾಜರು, ಕೊಳಲುತುಪ್ಪಟೆ, ನೀರುಗಂಟಿಗಳು, ಮಹಲುದಾರರು, ಚೋಪ್‌ದಾರರು, ಕಲ್ಲುಕುಟಿಗರು, ಜೀನುಗಾರರು, ಬಡಗಿಗಳು, ಸರಾಫರು, ಕಂಚುಗಾರರು, ಸೇರೆಯವರು, ಒಂದೆಡೆಯಲ್ಲಿ ಕಲೆತರು, ರಾಜಪುತ್ರಬಾಂಧವರು, ಶಾಸ್ತ್ರಿಗಳು, ಪೌರಾಣಿಕರು, ವೀಣೆಯವರು ಇನ್ನೊಂದೆಡೆ ಸೇರಿದರು. ಎಲ್ಲರದೂ ಎಣಿಕೆಯಾಯಿತು. ಅನಂತರ ರಾಜಭೂವರರು ಖಾಸಾ ಆನೆಗಳಿಗೆ ಶಿಲೆಬಖ್ತರ ಅಂಬಾರಿಗಳು, ಸವಡೋಲು ಹಾಕಿಸಿ, ತರಕಷಿ ಕಮಾನುಗಳನ್ನು ಆ ಸವಡೋಲಿನಲ್ಲಿಡಿಸಿ ಇವಲ್ಲದೆ ೧,೦೦೦ ನಿಶಾನೆ ಆನೆಗಳು, ೨,೦೦೦ ಬಜಾಯಿ ಆನೆಗಳೂ, ಇದ್ದುವು. ಇಷ್ಟು ಪರಿವಾರಸಮೇತರಾಗಿ ಹೊರಟು ರಾಜಭೂವರರು ತುಂಗಭದ್ರಾತೀರದಲ್ಲಿ ಎಂಟುಗಾವುದ ಅಡ್ಡಗಲ ಠಾಣ್ಯವನ್ನು ಹಾಕಿ ಕೃಷ್ಣಾ ತೀರದ ಪರಿಯಂತರ ಪೇಷಖಾನೆಯನ್ನು ಹೊರಗೆ ಹಾಕಿಸಿದರು. ರಾಜಭೂವರರಾದರೋ ಕಸಬೆ ತಾವರೆಗೆರೆ ಕೃಷ್ಣಗಿರಿ ಮಧ್ಯದಲ್ಲಿ ಇಳಿದವರಾದರು. ಅತ್ತಲಾಗಿ ನಿಜಾಂಷಹಾಪಾದುಷಹನೂ, ತಖ್ತದೌಲತಾಬಾದಿನ ಪಾದುಷಹನೂ, ಭೀಮರಥೀನದಿಯ ಬಳಿಯ ಸುಲತಾನಪುರವೆಂಬ ಫೆರೋಜಾ ಬಾದ್ ಎಂಬ ನಗರದ ಬಳಿ ಇಳಿದರು. ಜಲಾಲುದೀನ್ ಪಾದುಷಹನು ದಗ್ಗದ ಬಳಿ ತಂಗಿದನು. ವಾಹಿಬರ್ ಹಿಂಬಲ್ ಕುತುಬಷಹ ಪಾದುಷಹನು ಮುದಗಲ್ಲು ರಾಯಚೂರು ಮಧ್ಯದಲ್ಲಿ ಸೈನ್ಯಸಮೇತನಾಗಿ ಇಳಿದನು. ಇಮಾಮ್-ಉಲ್-ಮುಲಖ್ ಪಾದುಷಹನೂ, ಆಲಿ ಅದಿಲಷಹ ಪಾದುಷಹನೂ ಸೈನ್ಯಸಮೇತ ಕೃಷ್ಣಾನದಿಯ ಬಳಿ ಜಮಾಲಘರೆಂಬಲ್ಲಿ ಇಳಿದವರಾದರು. ಹೀಗೆ ನಾಲ್ಕು ದಿಕ್ಕಿನಲ್ಲೂ ಮುಸಲ್ಮಾನರ ಸೈನ್ಯವು ನಿಂತಿತು. ಈ ದಂಡಿನ ಕಾಲುಂಗಾರೆಯವರೂ, ಪಂಡಾರಿಯವರೂ, ಬಾಣಕಾರರೂ, ಕಳ್ಳ ಶಿಪಾಯಿಗಳೂ,

ಕೃಷ್ಣಾ ನದಿಯನ್ನು ದಾಟಿ ರಾಜಭೂವರರ ದೇಶವನ್ನು ಹೊಕ್ಕು ದೊಂಬಿ ಮಾಡಲುಪಕ್ರಮಿಸಿದರು. ಎಲ್ಲೆಲ್ಲೂ ಲೂಟಿ. ಕೊಳ್ಳೆ, ಸುಲಿಗೆ, ಕೊಲೆ!

ರಾಜಭೂವರರ ಆಜ್ಞಾನುಸಾರ ರಾಜಕುಮಾರರೂ, ರಾಜಮಾರ್ತಾಂಡರೂ, ರಾಜತೇಜೋನಿಧಿಗಳೂ, ರಾಜರತ್ನಾಕರರೂ, ಛತ್ರಪತಿಗಳೂ, ಕ್ಷತ್ರಿಯಕುಲದ ವಜೀರರೂ ತಮ್ಮ ತಮ್ಮ ಸೈನ್ಯದೊಂದಿಗೆ ರಾಕ್ಷಸತಂಗಡಿ ಬಳಿ ಇಳಿದರು. ಯುದ್ಧದ ಸಮಸ್ತ, ಸ್ಥೂಲ ಯಂತ್ರಗಳೂ ಮೂರು ಸಾವಿರ ಮಧ್ಯಸ್ಥ ಯಂತ್ರಗಳೂ ನಾಲ್ಕು ಸಾವಿರ ಅಣುಯಂತ್ರಗಳೂ, ಯಂತ್ರಧಾರಿಗಳೂ ಸೈನ್ಯವನ್ನಾವರಿಸಿದ್ದವು: ಪದಾತಿಯೊಂದೆಡೆಯಿತ್ತು, ಬಾಣಕಾರರು ರಾಮಬಾಣ, ಕುಮಾರಬಾಣ, ಚಡಿವಾಣವೆಂಬ ನಾಲ್ಕಾರು ದಿನಸಿನ ಬಾಣಗಳನ್ನು ಎತ್ತುಗಳ ಮೇಲೆ ಹೇರಿಸಿಕೊಂಡು ಬಂದರು; ಸಮಸ್ತ ಸೈನ್ಯದ ತುಕಡಿಗಳೂ ಮದ್ದು ಗುಂಡನ್ನು ಹಂಚಿದುದಾಯಿತು. ಯುದ್ಧಕಾಲವು ಸಮೀಪವಾಗುತ್ತ, ಆಗುತ್ತ ಸಕಲ ಸೈನ್ಯವನ್ನೂ ಬೇರೆ ಬೇರೆ ವ್ಯೂಹಗಳಾಗಿ ಮಾಡಲಾಯಿತು. ತರುವಾಯ ಸೇನಾನಾಯಕರು, ಅಷ್ಟ ಪ್ರಧಾನಿಗಳು, ಬಿಸಲಪ್ಪನಾಯಕ, ತಿರುವೆಂಗಳನಾಯಕ, ದಳವಾಯಿ ಕಾರ್ತಿಕ ನಾಯಕ, ವೀರಪ್ಪನಾಯಕ ಮುಂತಾದವರನ್ನು ನರಪತಿಯವರು ಕರೆಸಿ ತಕ್ಕಂತೆ ಅವರೆಲ್ಲರನ್ನೂ ಬಹುಮಾನಿಸಿ "ಮುಸಲ್ಮಾನ ಪಾದುಷಹರು ನಮ್ಮ ಮೇಲೆ ಬೀಳುವವರಿದ್ದಾರೆ. ನೀವು ಹೋಗಿ ನಿಮ್ಮ ಶೌರ್ಯಪರಾಕ್ರಮಗಳನ್ನು ತೋರಿಸಿ ಕರ್ಣಾಟಕದೇಶದ ಕೀರ್ತಿಯನ್ನುಳಿಸಿ" ಎಂದು ಹೇಳಿದರು. ಕೂಡಲೇ ಇವರೂ ರಾಕ್ಷಸತಂಗಡಿ ಬಳಿಗೆ ಬಂದಿಳಿದವರಾದರು.

ಈ ಸಮಾಚಾರವನ್ನು ಮುಸಲ್ಮಾನ ಹರಿಕಾರರು ನಾಲ್ಕು ಮಂದಿ ಪಾದುಷಹರಿಗೂ ತಿಳಿಸಿದರು. ಕೂಡಲೇ ಅವರೆಲ್ಲರೂ ಒಂದಾಗಿ ತಮ್ಮ ವಜೀರರನ್ನೂ, ಉಮ್ರಾಗಳನ್ನೂ ಸೇನಾನಾಯಕರನ್ನೂ, ಸಮಸ್ತ ಪ್ರಧಾನಿಗಳನ್ನೂ ಕರೆಸಿ "ನರಪತಿಪಾದುಷಹನ ದಂಡು ಬಂದು ರಾಕ್ಷಸತಂಗಡಿ ಬಳಿ ಇಳಿದಿದೆ. ಇನ್ನು ನಾವು ಹಿಂದುಳಿಯಲಾಗದು, ಕೂಡಲೇ ಯುದ್ಧ ಸನ್ನದ್ಧರಾಗಬೇಕು" ಎಂದು ಅಪ್ಪಣೆಕೊಡಿಸಿದರು. ಕೂಡಲೇ ಸಕಲ ಸಾಮಗ್ರಿ ಸಮೇತವಾಗಿ ಮುಸಲ್ಮಾನರ ದಂಡು ರಾಕ್ಷಸತಂಗಡಿಗೆ ಯೋಜನ ಪ್ರಮಾಣ ದೂರದಲ್ಲಿ ಬಂದು ನಿಂತಿತು.

ಉಭಯ ಪಕ್ಷದವರೂ ಯುದ್ಧಕ್ಕೆ ಅಣಿಯಾದರು. ಕೂಡಲೇ ಯುದ್ಧವು ಉಪಕ್ರಮವಾಯಿತು. ಮೂರು ದಿನಗಳು ಮದ್ದಿನ ಹೊಗೆಯಿಂದ ಒಬ್ಬರ ಮುಖ ಒಬ್ಬರಿಗೆ ಕಾಣಿಸಲಿಲ್ಲ, ಭಡಭಡ, ಸರಸರ, ಡಭಡಭ, ಸುರುಸುರು, ಛಟಛಟ, ಪಟ ಪಟ ಎಂಬ ಅನೇಕ ವಿಧವಾದ ಶಬ್ದಗಳಿಂದ ವಾತಾವರಣವು ತುಂಬಿತು. ಒಂದು ಕಡೆ ಸವಾರಸವಾರರಿಗೆ ಯುದ್ಧ ; ಮತ್ತೊಂದು ಕಡೆ ಶಿಫಾಯಿಶಿಫಾಯಿಗಳಿಗೆ ಯುದ್ಧ; ಈ ಪ್ರಕಾರ ಮೂರು ದಿನಗಳು ಯುದ್ಧವು ನಡೆಯಿತು. ಕರ್ಣಾಟಕದವರು ಬಹಳ ಪರಾಕ್ರಮವನ್ನು ತೋರಿಸಿದರು. ಯುದ್ಧರಂಗದ ವರ್ತಮಾನವನ್ನು ಹೇಳಲಿಕ್ಕೂ ಕೇಳಲಿಕ್ಕೂ

ಶಕ್ಯವಿಲ್ಲ. ಉಭಯ ಪಕ್ಷದಲ್ಲೂ ಅನೇಕರು ಸತ್ತರು; ಅನೇಕರಿಗೆ ಗಾಯಗಳಾದುವು; ಮತ್ತನೇಕರು ಕಾಣದೆ ಹೋದರು.

ನಿಜಾಂಷಹ ಪಾದುಷಹನೂ, ಕುತುಬಷಹನೂ, ತಮ್ಮ ಸೈನಿಕರು ಬಹಳ ಚೆನ್ನಾಗಿ ಯುದ್ಧ ಮಾಡಿದರೆಂದು ಬಹುಸಂತೋಷದಿಂದಿದ್ದರು. ಆಲಿ ಅದಿಲಷಹ ಪಾದುಷಹ ಕನ್ನಡ ಜಾಣನೂ, ವಹೀಮ್ ಉಲ್-ಮುಲ್ಕ್ ಪಾದುಷಹನೂ, ತಮ್ಮ ತಮ್ಮ ಸೈನ್ಯಗಳೊಂದಿಗೆ ತಾವು ತಂಗಿದ್ದ ಸ್ಥಳದಲ್ಲೇ ಇದ್ದರು. ಯುದ್ಧಕ್ಕೆ ಹೋಗಲಿಲ್ಲ. ತಮ್ಮ ಮೇಲೆ ಬೇಕೆಂದು ಬಂದು ಬಿದ್ದರೆ ಯುದ್ಧ ಮಾಡೋಣವೆಂದು ತಟಸ್ಥರಾಗಿದ್ದರು.

ಇತ್ತಲಾಗಿ ರಾಜಭೂವರರು ಆಲಿ ಅದಿಲಷಾಹಿ ಪಾದುಷಹನ ಬಳಿಗೆ ದಳವಾಯಿ ಗಿರಪ್ಪನಾಯಕ, ಜಮಾದಾರ ಖಾನಿಪವಾಡಿ ನಾಯಕ, ಇವರನ್ನು ಕಳುಹಿಸಿದರು. ಅವರು ಬಂದು ಆಲಿ ಅದಿಲ್‌ಷಾಹಿಯನ್ನು ಕಂಡು "ನೀನು ಬಾಲ್ಯದಾರಭ್ಯ ರಾಜಭೂವರರ ಪೋಷಣೆಗೆ ಒಳಪಟ್ಟಿದ್ದೆ. ಅವರು ನಿನ್ನನ್ನು ತೊಡೆಯ ಮೇಲಿರಿಸಿಕೊಂಡು ಆಡಿಸಿ ಬೆಳಸಿದ್ದಾರೆ: ಈ ಸಮಯದಲ್ಲಿ ನೀನು ಮೂರುಮಂದಿ ಮುಸಲ್ಮಾನರೊಂದಿಗೆ ಕಲೆತು ಅರಸರ ಮೇಲೆ ಯುದ್ಧ ಮಾಡುವುದು ಯುಕ್ತವಲ್ಲ; ನಿನ್ನ ಹಾಲು ಬೆಣ್ಣೆಗಾಗಿ ನರಪತಿಗಳು ರಾಯಚೂರು, ಮುದಗಲ್ಲು, ಆದವಾನೀ ಈ ಮೂರನ್ನೂ ನಿನಗೆ ಕೊಡಲಿಲ್ಲವೆ? ನೀನೀಗ ಶತ್ರುಗಳೊಂದಿಗೆ ಸೇರಿ ಅವರ ಮೇಲೆ ಕೈ ಮಾಡುವುದು ಸರಿಯಲ್ಲ; ಅದರಿಂದ ನಿನಗೆ ಮೇಲುಂಟಾಗದು'' ಎಂದು ಹೇಳಿದರು. ಆಗ ಅದಿಲ್‌ಷಾಹಿಯು ''ನಾನು ಮನಃಪೂರ್ವಕವಾಗಿ ಅವರೊಂದಿಗೆ ಕಲೆತವನಲ್ಲ; ಆದರೆ ಮುಂದುವರಿದು ನನ್ನ ರಾಜ್ಯವನ್ನು ಪ್ರವೇಶ ಮಾಡಿ ಪ್ರಜೆಗಳಿಗೆ ಹಿಂಸೆ ಕೊಟ್ಟಿರುವರು. ಕಾಡುಗಳನ್ನು ಕಡಿಸಿ ಘಟ್ಟದಲ್ಲಿ ಸೈನ್ಯವು ನಡೆಯಲು ಮಾರ್ಗವನ್ನು ವಿಸ್ತಾರಮಾಡಿದರು; ನನಗೆ ನರಪತಿಗಳಲ್ಲಿ ಪಿತೃಭಾವವುಂಟು. ನಾನವರಿಗೆ ಋಣಿಯಾಗಿದ್ದೇನೆ; ನೀವು ಈಗ ನನ್ನ ಮೇಲೆ ಅನುಮಾನಪಡಬೇಡಿರಿ; ನಾನು ನಿಮ್ಮನ್ನೇ ಅನುಸರಿಸಿದ್ದೇನೆ. ಆದರೆ ಒಂದು ದೂರಾಲೋಚನೆಯಿಂದ ನಾನು ಸೈನ್ಯ ಸಮೇತ ಇಲ್ಲಿ ಬಂದು ಇಳಿದಿದ್ದೇನೆ" ಎಂದುತ್ತರವನ್ನು ಕೊಟ್ಟು ಅವರೊಂದಿಗೆ ತನ್ನ ಹರಿಕಾರನೊಬ್ಬನನ್ನು ರಾಜಭೂವರರ ಬಳಿಗೆ ಕಳುಹಿಸಿದನು.

ಅವರು ಹಿಂತಿರುಗಿ ಬಂದು ರಾಜಭೂವರರಿಗೆ ಯಾವದ್ವೃತ್ತಾಂತವನ್ನೂ ತಿಳಿಸಿದರು. ಇವರೊಂದಿಗೆ ಬಂದಿದ್ದ ಅದಿಲ್‌ಷಾಹಿಯ ಹೆಜೀಬನಿಗೆ ರಾಯರ ಭೇಟಿಯಾಯಿತು. ರಾಯರು ಹೆಜೀಬನಿಗೆ ತಕ್ಕ ಮರ್ಯಾದೆಯನ್ನು ಮಾಡಿಸಿ ಅದಿಲಷಾಹಿಗೆ ಗೌರಾರ್ಥವಾಗಿ ಕೆಲವು ಮರ್ಯಾದೆಗಳನ್ನು ಕಳುಹಿಸಿದರು.

ಈ ಸಮಾಚಾರವು ದೌಲತಾಬಾದಿನಲ್ಲಿದ್ದ ನಿಜಾಂಷಾಪಾದುಷಹ, ಗೋಲುಕಂಡೆಯ ಕುತುಬ್‌ಷಹ ಮತ್ತು ಜಹಲನಾಪುರದಲ್ಲಿದ್ದ ಅಕ್‌ಬರ್ ಜಲಾಲುದ್ದೀನ್ ಮೊಘಲ್‌ಪಾದುಷಹ, ಮುಂತಾದವರಿಗೆ ತಿಳಿಯಬಂತು. ಎಲ್ಲರೂ ಒಂದಾಗಿ ಯೋಚಿಸಿ ಆಲಿ ಅದಿಲ್‌ಷಹ ಪಾದುಷಹನಿಗೆ ಹೀಗೆ ಹೇಳಿ ಕಳುಹಿಸಿದರು.

"ನಾವೆಲ್ಲರೂ ಒಂದಾಗಿ ರಾಜಭೂವರನ ಮೇಲೆ ದಂಡೆತ್ತಿ ಬಂದೆವು. ಆದರೆ ನೀನೀಗ ಒಳಗೊಳಗೆ ಸಂಧಾನಗಳನ್ನು ನಡೆಸುತ್ತಾ ಇರುವೆ. ನೀನು ರಾಜಭೂವರನಿಗೂ, ರಾಜಭೂವರನು ನಿನಗೂ, ಮರ್ಯಾದೆಗಳನ್ನು ಕಳುಹಿಸಲೇನು ಕಾರಣ? ನೀನು ಪಿತೂರಿ ನಡೆಸುತ್ತಿರುವಂತೆ ತೋರುತ್ತದೆ. ನೀನು ನಂಬಿಕೆಗೆ ಅರ್ಹನಲ್ಲ; ನೀನು ಈ ರೀತಿ ವರ್ತಿಸುವುದು ಯುಕ್ತವಲ್ಲ. ನಮ್ಮ ಪಕ್ಷವನ್ನು ನೀನು ಸೇರಿದರೂ ಸರಿಯೆ; ಸೇರದಿದ್ದರೂ ಸರಿಯೆ; ನಾವು ರಾಜಭೂವರನ ಮೇಲೆ ಯುದ್ಧ ಮಾಡಲು ನಿರ್ಧರಿಸುತ್ತೇವೆ. ನೀನು ನಮ್ಮನ್ನು ತಿರಸ್ಕರಿಸಿದರೆ ರಾಜಭೂವರನ ಮೇಲೂ ನಿನ್ನ ಮೇಲೂ ಬಿದ್ದು ಯುದ್ಧ ಮಾಡಬೇಕಾಗುತ್ತದೆ."

ಇದನ್ನು ಕೇಳಿ ಆಲಿ ಅದಿಲ್‌ಷಹನು ಭಯಪಟ್ಟು ಅವರಿಗೆ "ನೀವು ಹೇಗೆ ನಿಶ್ಚಯಿಸಿದರೂ ನನಗದು ಸಮ್ಮತವೇ. ನೀವು ಹೇಳಿದಂತೆ ನಾನು ನಡೆಯಲುಳ್ಳವನು" ಎಂಬುದಾಗಿ ಹರಿಕಾರರ ಸಂಗಡ ಹೇಳಿಕಳುಹಿಸಿದನು. ಇದನ್ನು ಕೇಳುತ್ತಲೇ ಮೂರು ಮಂದಿ ಪಾದುಷಹರಿಗೂ ಸಂತೋಷವುಂಟಾಯಿತು. ಬಂದ ಹರಿಕಾರರಿಗೆ ತಕ್ಕ ಬಹುಮಾನವನ್ನು ಮಾಡಿ ಕಳುಹಿಸಿಕೊಟ್ಟರು.

ಇತ್ತಲಾಗಿ ರಾಜಭೂವರರು ಸಕಲ ಸೈನ್ಯ ಸಮೇತರಾಗಿ ರಾಕ್ಷಸತಂಗಡಿ ಬಳಿಯ ಮೈದಾನದಲ್ಲಿ ಇಳಿದು ಅಲ್ಲಿ ರಣಗಂಟೆಗಳನ್ನು ಹೊಡೆಸಿ ರಣಸ್ತಂಭವನ್ನು ಕಟ್ಟಿಸಿದರು. ರಣಸ್ತಂಭದ ಬಳಿ ಸೈನ್ಯವ್ಯೂಹಗಳು ಸಿದ್ಧವಾದವು. ಶತ್ರು ಸೈನ್ಯವು ಬಂತು; ಯುದ್ಧವು ಮೊದಲಾಯಿತು. ಹೀಗೆ ೨೭ ದಿವಸಗಳು ಲಡಾಯಿ ಆಯಿತು. ಮಹಮ್ಮದೀಯರೂ, ಪಠಾಣರೂ, ರಾಜಪುತ್ರರೂ, ಮರಾಟೆಯವರೂ, ಮೊದಲಾದ ಸಮಸ್ತರೂ ತಾಳೀಕೋಟೆ ನಾಲ್ವತ್ತು ವಾಡೆಗಳ ಮಧ್ಯದಲ್ಲಿ ಇಳಿದರು. ಈ ಯುದ್ಧದಲ್ಲಿ ಉಭಯ ಪಕ್ಷದವರೂ ಚೆನ್ನಾಗಿ ಯುದ್ಧ ಮಾಡಿದರು; ಬಹು ಮಂದಿ ಸತ್ತರು; ಅನೇಕರು ಗಾಯ ಹೊಂದಿದರು. ಕಡೆಯದಿನ ಪ್ರಾತಃಕಾಲ ಮೊದಲುಗೊಂಡು ರಾತ್ರಿ ಒಂಬತ್ತು ತಾಸುವರೆಗೆ ಹೋರಾಡಿದರು. ಅನಂತರ ರಾಜಪಿಂಡೆಯವರೂ ವಜೀರರೂ ಮುಂತಾದವರು ರಾಜಭೂವರರಿಗೆ ಏಕಾಂತದಲ್ಲಿ ಹೀಗೆ ಬಿನ್ನವಿಸಿದರು:-

"ನಾವು ಸೈನ್ಯವನ್ನು ಬೇರೆ ಬೇರೆ ತುಕ್ಕಡಿಗಳನ್ನಾಗಿ ಮಾಡಿ ಬೇರೆ ಬೇರೆ ಕಡೆ ಶತ್ರುಗಳಿಗೆ ಯುದ್ಧ ಕೊಡಬೇಕು. ಒಂದೇಯೆಡೆ ನಿಂತರೆ ಲಾಭವಿಲ್ಲ, ನಾವು ಹಿಂದುಳಿಯದೆ ಶತ್ರುಗಳ ಮೇಲೆ ಬೀಳಬೇಕು. ಆಲಿ ಅದಿಲಷಹನೂ ಇಮಾಮುಲ್ ಮುಲ್ಕನೂ ತಮ್ಮ ಸೈನ್ಯ ಸಹಿತ ತಮ್ಮ ಸ್ಥಳದಲ್ಲಿದ್ದಾರೆ. ಅವರು ಯುದ್ಧಕ್ಕೆ ಬರುವುದಿಲ್ಲ. ಅವರು ದಗಾಕೋರರೇ ವಿನಾ ಸಹಾಯಕ್ಕೆ ಬರುವವರಲ್ಲ."

ಇದನ್ನು ಕೇಳಿ ಅರಸರಿಗೆ ಸಂತೋಷವುಂಟಾಯಿತು. ಅವರ ಹೇಳಿಕೆಯ ಪ್ರಕಾರ ಸೈನ್ಯವನ್ನು ವಿಂಗಡಿಸಿ ಬೇರೆ ಬೇರೆ ಸ್ಥಳಕ್ಕೆ ಯುದ್ಧಮಾಡಲು ವಜೀರರನ್ನು ಕಳುಹಿಸಿದರು. ಈ ಪ್ರಕಾರ ಯುದ್ಧವು ಪುನಃ ಆರಂಭವಾಯಿತು. ಅಕಬರ್ ಜಲಾಲುದೀನ್ ಪಾದುಷಹನು

ಹಿಂದಕ್ಕೆ ಸರಿದನು; ಅನಂತರ ಇವನೂ ನಿಜಾಂಷಹನೂ ಇವರಿಬ್ಬರೂ ಸೇರಿ ಯುದ್ಧ ಮಾಡಿದರು, ಆದರೂ ಕರ್ಣಾಟಕ ಸೈನ್ಯದ ಹೊಡೆತವನ್ನು ತಡೆಯಲಾರದೆ ಹೋದರು. ಅನೇಕರು ಇವರ ಕಡೆ ಸತ್ತರು; ಕೆಲವರು ಯುದ್ಧಭೂಮಿಯನ್ನು ಬಿಟ್ಟು ತಮ್ಮ ತಮ್ಮ ಬಿಡಾರಗಳಿಗೆ ಸೇರಿದರು.

ಇದಾದಮೇಲೆ ರಾಮರಾಜರಿಗೆ ಬಹು ಕೋಪವುಂಟಾಯಿತು; ಆಗ ರೋಷಾವೇಶದಿಂದ ರಾಜಹಂಸಾಮೃತ ಗಜದ ಮೇಲೆ ಕುಳಿತು ಸಕಲ ಸೈನ್ಯದಿಂದೊಡಗೂಡಿ ರಣಭೂಮಿಗೆ ಹೊರಟರು. ಎಡಬಲದಲ್ಲಿ ದೊಡ್ಡ ದೊಡ್ಡ ಅಂಬಾರಿಯಾನೆಗಳು, ಹಿಂದೆ ಭೇರಿ, ತುತ್ತೂರಿ, ಕೊಳಲು, ತಪ್ಪಟೆ, ಸ್ವನಾಯಿ, ಬಜಂತ್ರಿ ಮೊದಲಾದ ವಾದ್ಯಗಳು-ಇವುಗಳಿಂದ ಕೂಡಿ ನಾಲ್ಕು ಮಂದಿ ಪಾದುಷಹರ ಮೇಲೆ ಯುದ್ಧಕ್ಕೆ ತೊಡಗಿದರು. ಮಹಮ್ಮದೀಯ ಸೈನ್ಯವೂ ಅಪಾರವಾಗಿತ್ತು. ಯುದ್ಧವು ಮೊದಲಾದಾಗಿನಿಂದ ಮೂರು ದಿವಸಗಳ ಮೇಲೆ ಒಂಬತ್ತು ತಾಸುವರೆಗೆ ನಡೆಯಿತು. ಮಹಮ್ಮದೀಯರ ಕಡೆ ಪಲಾಯನವಾದವರ ಸಂಖ್ಯೆಗೆ ಮಿತಿಯೇ ಇಲ್ಲ. ಮುಸಲ್ಮಾನರಿಗೆ ಪೂರ್ಣ ಅಪಜಯವಾಯಿತು; ಕೂಡಲೆ ಪಾದುಷಹರ ದಂಡು ಎರಡು ಹರಿದಾರಿ ಹಿಂದಕ್ಕೆ ಹೋಗಿ ತಂಗಿತು.

ತಮಗೆ ಜಯವಾಯಿತೆಂಬ ಆನಂದದಿಂದಲೂ ಶತ್ರುಗಳ ಅಪಜಯದಿಂದುಂಟಾದ ಹೆಮ್ಮೆಯಿಂದಲೂ ರಾಜಭೂವರನ ಸೈನ್ಯವು ಠಾಣ್ಯಕ್ಕೆ ಹಿಂದಿರುಗಿತು. ಶತ್ರುಗಳು ತಮ್ಮ ಮೇಲೆ ಕೈಮಾಡರೆಂದೂ, ಅವರು ಪೂರಾ ಬಲಹೀನರಾಗಿರುವರೆಂದೂ, ರಾಜಭೂವರರು ಊಹಿಸಿ ಉದಾಸೀನದಿಂದ ಇದ್ದರು; ಸೈನಿಕರೂ ಬೇಹುಷಾರಿನಿಂದ ಇದ್ದರು.

ಇತ್ತಲಾಗಿ ಮೂರುಮಂದಿ ಪಾದುಷಹರೂ ಒಟ್ಟಾಗಿ ಮಾತಾಡಿಕೊಂಡು ಅದಿಲಷಹ ಪಾದುಷಹನ ಬಳಿಗೆ ತಮ್ಮ ಹಜೀಬರನ್ನೂ ಬಂಧುಗಳನ್ನೂ ಮತ್ತು ಹಿರಿಯರನ್ನೂ ಕಳುಹಿಸಿದರು. ಅವರು "ಮಹಮ್ಮದೀಯರಿಗೆ ಮಹಾ ಅಪಜಯವಾಯಿತು; ಈ ಜನಾಂಗವೇ ನಿರ್ನಾಮವಾಗುವ ಕಾಲ ಬಂದಿದೆ. ನೀವಿದುವರೆಗೂ ನಮ್ಮ ಕಡೆಗೆ ಸೇರದೆ ತಟಸ್ಥರಾಗಿದ್ದೀರಿ; ಈಗಲಾದರೂ ತಾವು ದೂರಾಲೋಚನೆ ಮಾಡಿ ಯುದ್ಧ ಸನ್ನದ್ಧರಾಗಿ" ಎಂದು ಹೇಳಿದರು. ಇದಕ್ಕೆ ಅದಿಲಷಾಹಿಯು ಒಪ್ಪಿ ರಾಜಭೂವರರ ಮೇಲೆ ದಂಡೆತ್ತಿ ಹೊರಡಲು ತನ್ನವರಿಗೆ ಆಜ್ಞೆಯಿತ್ತನು. ಕೂಡಲೇ ತಾನು ಮೊದಲನೆಯ ನಮಾಜನ್ನು ಮುಗಿಸಿಕೊಂಡು ಮುಸಲ್ಮಾನರ ರಕ್ಷಣೆಗಾಗಿ ದೇವರನ್ನು ಪ್ರಾರ್ಥಿಸಿದವನಾಗಿ ಸೈನ್ಯದೊಂದಿಗೆ ಹೊರಟು ರಾಜಭೂವರರ ಮೇಲೆ ಯುದ್ಧ ಮಾಡಲಾರಂಭಿಸಿದನು.

ರಾಜಭೂವರರ ಸೈನ್ಯವೂ ಅವರೂ ಬೇಹುಷಾರಿನಿಂದ ಇದ್ದರೆಂದು ಹಿಂದೆಯೇ ತಿಳಿದುದಾಯಿತು. ಏಕೀಭವಿಸಿ ನಾಲ್ಕೂ ಪಾದುಷಹರ ಸೈನ್ಯವು ಹಿಂದೂ ಸೈನ್ಯವನ್ನಾವರಿಸಿತು. ಠಾಣ್ಯವೆಲ್ಲ ಲೂಟಿಯಾಗಿ ಹೋಯಿತು; ರಾಜಭೂವರರ ಸೈನ್ಯದಲ್ಲುಂಟಾದ ಗಜಿಬಿಜಿಯನ್ನು ಹೇಳತೀರದು. ಆದರೇನು? ಯುದ್ಧವು ನಡೆಯುತ್ತಲೇ

ಇತ್ತು. ಈ ಮಧ್ಯೆ ರಾಜಭೂಪರರು ಅದಿಲಷಾಹಿಯನ್ನು ಕುರಿತು "ನೀನು ನನ್ನ ಮಗನಾಗಿ ಈ ಪ್ರಕಾರ ನಡೆಯುವುದು ಯುಕ್ತವಲ್ಲ. ಸಾಕಿ ಸಲಹಿದ ತಂದೆಗೆ ಹೀಗೆ ಮಾಡಿದೆ, ಪಿತೃದ್ರೋಹಿ! ನೀನೇ ಈ ಆಘಾತುಕತನಕ್ಕೆ ಹೇಸಲಿಲ್ಲವಾದರೆ ನಾನಿನ್ನೇನು ಮಾಡಲಿ? ದಂಡೆಲ್ಲವೂ ಮುಳುಗಿತು; ರಣರಂಗದಲ್ಲಿ ನೀನು ನನಗೆ ಮೋಸಮಾಡಲಾರೆಯೆಂದು ಸಂಪೂರ್ಣವಾದ ನಂಬಿಕೆಯಿಂದ ಇದ್ದೆನು. ನನ್ನ ನಂಬಿಕೆಯನ್ನು ನೀನು ಸುಳ್ಳು ಮಾಡಿದೆ; ನನ್ನನ್ನು ವಂಚಿಸಿದೆ; ಒಳ್ಳೆಯದು. ಈಗ ಏನು ಮಾಡಲಾದೀತು? ನೀನು ನನ್ನ ಮಗನಾದುದಕ್ಕೆ ನನಗೊಂದು ಉಪಕಾರವನ್ನು ಮಾಡು; ನನ್ನನ್ನು ವೈರಿ ಕೈಗೆ ಕೊಟ್ಟು ತಲೆ ಹೊಯಿಸಬೇಡ; ನೀನೇ ನನ್ನನ್ನು ಫಿರಂಗಿಯಿಂದ ಹೊಡೆದು ಕೊಲ್ಲು" ಎಂದು ಹೇಳಿ ಕರಿಗದಲೆ ಟೋಪಿ, ಮಾಣಿಕ್ಯದ ಕುಲಾವಿ ಹಾಕಿಕೊಂಡು ಶಹಲು ಹೊದ್ದುಕೊಂಡು, ದೇವರ ಧ್ಯಾನವನ್ನು ಮಾಡುತ್ತಾ ನಿಂತರು. ಅದಿಲಷಹನು ಕೊಂಚ ನಿಧಾನಿಸಿ, ತರುವಾಯ ತಾನೇ ಫಿರಂಗಿಯನ್ನು ಹಾರಿಸಿ ರಾಜಭೂಪರರ ತಲೆಯನ್ನು ಹೊಯಿದನು. ಈ ಸಮಾಚಾರವನ್ನು ಕೇಳಿ ಮೂರು ಮಂದಿ ಪಾದುಷಹರೂ ಸಂತೋಷಭರಿತರಾದರು. ಅನಂತರ ಕರ್ಣಾಟಕದ ಸೈನ್ಯವು ಚದುರಿತು; ಠಾಣ್ಯವು ಲೂಟಿಯಾಯಿತು; ಕಳೆದುಳಿದ ಸೈನ್ಯವು ಓಡಿತು.

ಮಗನು ಸತ್ತ ಸುದ್ದಿಯು ಅರಮನೆಗೆ ಬರುತ್ತಲೇ ಮಾತೃಶ್ರೀಯವರು ಪ್ರಾಣ ತ್ಯಾಗವನ್ನು ಮಾಡಿದರು. ಮೂರು ಮಂದಿ ಹೆಂಡಿರು ವಸ್ತ್ರಾದ್ಯಲಂಕಾರಗಳೆಲ್ಲವನ್ನೂ ದೇವರಿಗರ್ಪಿಸಿ ವಿಷ ಕುಡಿದು ಪ್ರಾಣಗಳನ್ನು ನೀಗಿದರು.

ಹೈದರ್ ನಾಮಾ

ಶ್ರೀರಂಗಪಟ್ಟಣದಲ್ಲಿ ದವಲತ್ತು ಮಾಡಿದ ನವಾಬ ಹೈದರಲ್ಲಿಖಾನ ಬಹದರವರ ದರಬಾರಿನ ವರ್ತಮಾನದ ವಿವರಾ

ಯೀ ಹೈದರಲ್ಲಿ ಖಾನರ ಹಿರೇರು ಪೂರ್ವದಲ್ಲಿ ಅರಬ್ಬದೇಶದಿಂದ ಅಷರಾಷ ಸಾಹೇಬ ಸುಂನತ ಜಮಾತಮ ಷಾಹೇಬ ಜಾದೇರು ಬಿಜಾಪುರದ ಸಂಸ್ಥಾನಕ್ಕೆ ಬಂದು ಅಲ್ಲಿನ ಬಹದರಲ್ಲಿ ನೌಕರೀ ನಿಂತು, ದಿನೇ ದಿನೇ ಭಾರೀ ಖಿಜಮತ್ತು ಸರದಾರಿ ಮಾಡುತ್ತಾಯಿದ್ದು ಕೆಲವು ದಿವಸದ ಮ್ಯಾಲೆ ಯೀ ವಂಶದ ಜನರ ಪೈಕಿ ತುಟಾಯಿಸಿ ಅಲ್ಲಿಂದಾ ಹೊರಟು ಮಹಂಮದ ಮಹಂಮದ ಪತ್ತಾಹುಲ್ಲಾ ಸಾಬರ ಜನ ೧ ಯಿವರ ತಂಮ ಗುಲಾಮ ಹೈದರ ಸಾಬರ ಜನ ೧ ಗುಲಾಂ ಅಲ್ಲಿಸಾಬರ ಜನ ೧ ಸಹಾ ವಂದು ತಾಯಿ ಮಕ್ಕಳು ಮೂರು ಜನ ಅಂಣ ತಮ್ಮಂದಿರು ಯಿವರ ತಂದೆತಾಯಿ ಸಹಾ ಕೋಲಾರಕ್ಕೆ ಬಂದು ಕೆಲವು ದಿನ ಅಲ್ಲಿ ಯಿದ್ದು ಆ ಬಳಿಕ ತಂದೆತಾಯಿ ಅಲ್ಲಿಯೆ ಸಂದುಹೋದ್ದರಿಂದ ಅವರಿಗೆ ಗುಂಮಗೆ ಕೋಲಾರದ ಬಳಿಯಲ್ಲೇ ಮಾಡಿದರು. ಆ ಬಳಿಕ ದೇವನ ಶೀರ್ಯದ ನವಾಬ ದಿಲದಿಲೇರುಖಾನರು ಕರಶಿದ್ದರಿಂದ ಫತ್ತಾಹುಲ್ಲಾ ಸಾಬರು ಶೀರ್ಯಕೆ ಬಂದು ನೌಕರೀ ನಿಂತು ಕುದುರೆ ೫೦೦ ಪ್ಯಾದೆ ೬೫೦ ಸಹಾ ಭರ್ತಿಮಾಡಿ ಶೀರ್ಯದ ಬಳಿ ಗುಂಮನಹಳ್ಳಿಯಲ್ಲಿ ಮನೆ ಬಾಗಿಲು ಮಾಡಿ ಬಾಬಸ್ತು ಸುದಾ ಯಿದ್ದುಕೊಂಡು ಯೀ ಗ್ರಾಮವೂ ಯಿವರಿಗೆ ಜಹಗಿರಾಯಿತು.

ಮಹಂಮದು ಪತ್ತಾಹುಲ್ಲಾ ಸಾಬರು ಪ್ಯಾದೇರ ಭರ್ತಿಮಾಡಿ ಇದ್ದ ಸಬಬೂ ಪತ್ತೇನಾಯಕರೆಂಬ ಹೆಸರು ವಾಡಿಕೆ ಆಯಿತು.

ಯಿವರ ತಂಮ ಹೈದರಸಾಬರು ಮದ್ದಗಿರಿ ಬದುಕು ಮಾಡುವವರ ಬಳಿಯಲ್ಲಿ ಮಂದಿ ಕುದುರೆ ಕಟ್ಟಿ ಮಲ್ಲರಾಜೈಯ್ಯನವರ ಬಳಿ ನೌಕರಿ ನಿಂತರು. ಯಿವರ ಚಿಕ್ಕ ತಂಮ್ಮ ಅಲ್ಲಿಸಾಬರು ದೊಡ್ಡಬಳ್ಳಾಪುರದಲ್ಲಿ ಬಾದಷಾಹಿ ಸಂನದಿನ ಕಿಲ್ಲೆದಾರ ಬಳಿಯಲ್ಲಿ ನೌಕರಿ ನಿಂತರು.

ಕೆಲವು ದಿನದ ಮೇಲೆ ಚಿತ್ರಗಲ್ಲ ಪಾಳೇಗಾರನು ಶೀರ್ಯದವರ ಮೇಲೆ ಲಡಾಯಿಗೆ ಬಂದಲ್ಲಿ ಗುಂಮ್ಮನಹಳ್ಳಿ ಬಳಿಯ ಪತ್ತೆಸಾಬರು ಆನೆ ಅಂಬಾರಿ ಮ್ಯಾಲೆ ಕುಳಿತು ಆನೆ ಕಾಲಿಗೆ ಅಂದೂ ಜಡಾಯಿಸಿ ನಿಂತ್ತು ಬಹಳ ಲಡಾಯಿ ಮಾಡಿ ಯುದ್ಧದಲ್ಲಿ ಮ್ರುತವಾದರು. ಆವಾಗ್ಯೆ ಪತ್ತೇಸಾಬರ ಮೇಲೆ ಶೀರ್ಯದ ಸರಕಾರದ ಕಡಾ ೩೦೦೦ ವರಹಾ ವರ್ತಕರ ಕಡಾ ೬೦೦೦ ವರಹಾ ಸಹಾ ಯಿದ್ದದ್ದಕ್ಕೆ ಶೀರ್ಯದ ನವಾಬರು ವರಾತಾಮಾಡಿದ ಕಾರಣ ಹೆಂಗಸರು ಮಕ್ಕಳು ವೋಲುಯಿಟ್ಟು ಪತ್ತೇಸಾಬರು ಹಿರೇ ಮಗ ಮಹಂಮದ ಶಾಬಾ ಸಾಹೇಬರು ಕಿರೀ ಮಗ ಹೈದರಲ್ಲಿ ಕಾನರು ಸಹಾ ದೊಡ್ಡಬಳ್ಳಾಪುರಕ್ಕೆ ತಂಮ್ಮ ಚಿಕ್ಕಪ್ಪ ಅಲ್ಲಿಸಾಬರ ಬಳಿಗೆ ಬಂದೂ ಯೀ ವರ್ತಮಾನವೆಲ್ಲ ಹೇಳಿದರು.

ಆವಾಗ್ಯೆ ದೊಡ್ಡಬಳ್ಳಾಪುರದ ಅಬ್ಬಾಸಕುಲ್ಲೀಖಾನರಿಗೆ ಯೀ ಅಲ್ಲೀ ಸಾಬರಿಂದ ೧೦೦೦ ವರಹಾ ನಾಜಲು ಹಣಾ ಬರಬೇಕಾಗಿ ಯಿದ್ದದಕೆ ಅಬಾಸಕುಲ್ಲೀಖಾನರು ಅಲ್ಲೀಸಾಬರನ್ನೂ ಹೈದರಲ್ಲಿಖಾನರ ಸಹ ಬಹಳ ಸಖ್ತಿ ಮಾಡಲಾಗಿ ಯೀ ವರ್ತಮಾನವೆಲ್ಲ ಮದ್ದಗಿರಿಯಲ್ಲಿ ಯಿದ್ದ ಗುಲಾಂ ಹೈದರಸಾಬರು ತಿಳಿದು ಸದರಿ ವಿವರವೆಲ್ಲಾ ಬಳ್ಳಾಪುರದಿಂದ ತಮಗೆ ಬರೆದು ಬಂದು ಯಿದ್ದ ಕಾಗದವಂನ್ನೆ ಮಲ್ಲರಾಜೈಯ್ಯನವರಿಗೆ ತೋರಿಶಿ ಹೈದರಸಾಬರು ಬಹಳತರವಾಗಿ ಹೇಳಿಕೊಂಡು ಅವರ ಹೆಸರಿಂದಾ ಪಟ್ಟಣಕ್ಕೆ ದಳವಾಯಿ ದೇವರಾಜೈಯ್ಯನವರ ಬಳಿಗೆ ಅರ್ಜಿ ಬರಸಲಾಗಿ ದಳವಾಯಿ ದೇವರಾಜೈಯ್ಯನವರು ಅಪ್ಪಣೆಕೊಟ ಶಿಖಾವುತ್ರ ಮಲ್ಲರಾಜೈಯ್ಯನವರಿಗೆ ಬರಶಿದ ವಿವರ. ನೀಊ ಬರಶಿ ಕಳುಹಿಸ್ತ ಅರ್ಜಿ ವಿವರ ತಿಳಿಯಿತು. ಅದೆ ಮೇರೆಗೆ ೧೦೦೦೦ ಹತ್ತು ಸಾವಿರ ವರಹಾವನ್ನು ಕೊಟ್ಟು ಕಳುಹ್ಸಿ ಅಲ್ಲಿಸಾಬ ಶಾಬಸಾಬ ಹೈದರಸಾಬರನ ಮ್ಯೆ ಬಾಬಸ್ತ ಮದ್ದಗಿರಿಗೆ ಕರೆಸುವುದೆಂದು ಅಪ್ಪಣೆ ಬಂದದ್ದರಿಂದ ಆವಮ್ಯಾರೆ ಮಲ್ಲರಾಜೈಯ್ಯನವರು ಹಣವೂ ಕೊಡ್ಸಿ ಕೊಟ್ಟರಾಗಿ ಶೀರ್ಯ ಬಳ್ಳಾಪುರದ ತಂಟೆ ತೀರಿಶಿಕೊಂಡು ಕುಟುಂಬ ಮಕ್ಕಳು ಸಹಾ ಅಲ್ಲಿ ಸಾಬರು ಶಾಬಾಸಾಬರು ಹೈದರಲ್ಲಿಖಾಂ ಸಾಬರು ಸಹ ಮದ್ದಗಿರಿಗೆ ಬಂದು ದಾಖಲಾದರು.

ಆ ಬಳಿಕ ಮದ್ದಗಿರಿಯಲ್ಲಿ ಯಿವರ ಚಿಕ್ಕಪ್ಪ ಗುಲಾಮ ಹೈದರಸಾಬರು ದೈವಾಧೀನವಾದ್ದರಿಂದ್ದಾ ಆ ರಿಸಾಲೆ ಖಿಜಮತ್ತು ಶಾಬಾಸಾಬರು ಹ್ಸೆರಿಗೆ ಮೊಕರೂರಾಗಿ ಯಿರುತ್ತಾ ಇದ್ದರು. ಅಲ್ಲಿಂದ ಬೆಂಗಳೂರು ತೈನಾತಿಗೆ ಅಪ್ಪಣೆಯಾಗಿ ಕತ್ತಿಗೋಪಾಲೈಯ್ಯ ಅರಶಿನವರ ತೈನಾತಿಯಲ್ಲಿ ಯಿದ್ದರು.

ತರುವಾಯ ನಾರಾಯಣಗೌಡನ ಹೊಡೆದು ದೇವಂಡನಹಳ್ಳಿ ಸಾಧಿಸುವ ಬಗ್ಯೆ ಪಟಣದಿಂದ ದಳವಾಯಿ ದೇವರಾಜೈಯ್ಯನವರ ತಂಮ್ಮ ಕರಾಚೂರಿ ನಂಜರಾಜೈಯ್ಯ ಅರಶಿನವರು ಬಂದಲ್ಲಿ ಬೆಂಗಳೂರಿಂದ್ದ ಕತ್ತಿ ಗೋಪಾಲರಾಜೈಯ್ಯನವರ ಸಂಗಡ ಶಾಬಾಸಾಬರು ತಂಮ್ಮ ಮಂದಿ ಕುದುರೆ ಸಹಾ ಬಂದು ಯಿದ್ದರಾಗಿ ಆವಾಗ ವಂದು ದಿವಸ ಕರಾಚೂರಿ ನಂಜರಾಜೈಯ್ಯ ಅರಶಿನವರು ನಿಂಬೆಹಂಣ ಗುರಿಯಿಡಿಶಿ ಸರ್ವ ಜನರಿಂದಾಲು ಶಿಸ್ತು ಹೊಡೆಸಲಾಗಿ ವಬ್ಬರ ಕೈಯಿಂದಲೂ ಗುರಿ ತಗಲದೆ ಶಾಬಾಸಾಬರ ತಂಮ್ಮ ಹೈದರಲ್ಲಿಖಾನರ ಕೈಯಿಂದ್ದಾ ಬಂದೂಖಿನ ಗುರಿ ತಗಲಿದ ಕಾರಣ ಅರಶಿನವರು ಬಹಳ ಸಂತೋಷಪಟ್ಟು ಪಸಂದುಮಾಡಿ ಸರಫರಾಜು ಮಾಡಿದರೂ.

ಆವಾಗ ಶಾಲಿವಾಹನ ಶಖೆ ೧೬೬೮ನೆಯ ಅಕ್ಷಯ ಸಂವತ್ಸರದಲ್ಲೂ ದ್ಯಾವಂಡನಹಳ್ಳಿ ಮುತ್ತಿಗೆಯಲ್ಲಿ ಹೈದರಲ್ಲಿಖಾನರಿಗೆ ಬ್ಯಾರೆ ರಿಸಾಲೆ ಸರಫರಾಜಾಗಿ ಸವಾರು ಜನ ೫೦ ಅಹಷಾಂ ಪ್ಯಾದಿ ಜನ ೨೦೦ ಸಹಾ ನೇಮಕವಾಗಿ ಪ್ರಾಬಲ್ಯಕ್ಕೆ ಪ್ರಾರಂಭವಾಯಿತು.

ಆ ಜಗಳದಲ್ಲಿ ದೇವಂಡನಹಳ್ಳಿ ಪ್ಯಾಟೆ ಮೇಲೆ ಹಲ್ಲಾದಲ್ಲಿಯೂ ಯಿದಲ್ಲದೆ ವಂದು ದಿನ ಕೋಟೆವಳಗಣಿಂದ್ಧಾ ನೂರಾರು ಜನ ಹೊರಹೊರಟು ಮೊಹರ್ಚ್ಯ ಮ್ಯಾಲೆ ಬಿದ್ದು ಜನರ ಗಾಶಿಮಾಡುವದುನ್ನು ಶಾಬಾಸ್ನಾಬರು ಕಂಡು ವುಡಾನ್ನು ಯಂಬ ಹೆಸರಿನ ವಂಟಿ ಕುದುರೆ ಚಲಾಯ್ಸಿ ಅವರನ ಹೊಡೆಯುತ್ತಿದ್ದಲ್ಲಿ ಮತ್ತು ಕೋಟೆಯಿಂದ ನಾನೂರ ಜನ ಕುಮುಕುಹೋಗಿ ಶಾಬಾಸಾಬರನ ಸುತ್ತಿಕೊಂಡು ವಂಟಿ ಕುದುರೆಯಲ್ಲಿ ಯಿಷ್ಟು ಜನರ ಸಂಗಡಲೂ ಲಡಾಯಿ ಆಗುವುದ ಕೇಳಿ ಗುಡಾರದಿಂದ ಹೈದರಲ್ಲಿಖಾನರು ಕುದುರೆ ವುಡಾನ್ನು ಮಾಡುತ್ತಾ ಬಂದು ತಂಮ ಮಂದಿ ಸಹಾ ನುಗ್ಗಿ ವಳಗಣಿಂದ ಬಂದು ಯಿದ್ದ ಜನರನೆಲ್ಲಾ ಕಡದು ಅಂಣ ಶಾಬಾಸಾಬರನು ಕರೆದುಕೊಂಡು ಪತ್ತೆಮಾಡಿ ಬಂದರು. ಯೀ ಸುದ್ದಿ ತಿಳಿದು ಅರಶಿನವರು ಸಂತೋಷಪಟ್ಟು ವಡವೆವಸ್ತು ಖಿಲ್ಲತ್ತು ಸಹ ಕೊಟ್ಟು ತೇಜೀತುತಕೀ ೨ ಕುದುರೆ ಸಂಬಳ ಸಹಾ ಹೈದರಲ್ಲಿ ಖಾನರಿಗೆ ನೇಮಕ ಮಾಡಿ ಸರಫರಾಜು ಮಾಡಿದರು.

ಅಲ್ಲಿಂದ ವಂಭತ್ತು ತಿಂಗಳು ಜಗಳವಾಗಿ ದೇವಂಡನ ಹಳ್ಳಿ ಠಾಂಣ್ಯ ಹಾಕಿ ಅಕ್ಷಯ ಸಂವತ್ಸರದಲ್ಲು ಪಟ್ಟಣಕ್ಕೆ ಕರಾಚೂರಿ ನಂಜರಾಜೈಯ್ಯ ಅರಶಿನವರು ಬಂದು ದಾಖಲಾದರು. ದೇವಂಡನ ಹಳ್ಳಿ ನಾರಾಯಣ ಗೌಡನ ಕವುಲಿನ ಮೇಲೆ ಯಿಳಿಶಿ ಬಿಟ್ಟು ಕೊಟ್ಟದ್ದರಿಂದ ಅವನು ಚಿಕ್ಕಬಳ್ಳಾಪುರದವರ ಅಂಣ ತಮ್ಮನಾದ್ದರಿಂದ ಅಲ್ಲಿಗೆ ಹೋಗಿ ಶೇರಿಕೊಂಡನು.

ತರುವಾಯ ಶಕೆ ೧೬೭೧ನೆ ಶುಕ್ಲ ಸಂವತ್ಸರದಲ್ಲು ನಡದ ವಿವರಾ. ಮೊದಲು ಆರ್ಕಾಡು ನವಾಬ ಸಾಹುಲ್ಲಾಖಾನರ ಸೋದರಳಿಯ ಅಲ್ಲಿ ದೋಸ್ತಖಾನರ ದೊರೆತನದಲ್ಲಿ ಅವರ ಮಗ ಸಬ್ದರಲ್ಲಿಖಾನರು ತಂಮ್ಮ ಭಾವಮ್ಯೆದ ಚಂದಾಸಾಬರ ಮೇಲಣ ದ್ವೇಷದಿಂದ್ಧಾ ನಾಗಪುರದ ರಘೋಜಿ ಪತ್ತೆ ಶಿಂಗ ಭೋಸಲಾನವರಿಗೆ ಬರಶಿ ಕಳುಹಿಸಿದ್ದರಿಂದ್ಧಾ ಅವರ ದಂಡು ಬಂದು ಚಂಗಮಾವು ಘಾಟಿ ಬಳೀ ಲಡಾಯಲ್ಲಿ ಅಲ್ಲಿದೋಸ್ತಖಾನರ ಕೊಂದುಹಾಕಿ ಅಲ್ಲಿಂದ್ಧಾ ಮಧುರೆ ತಿರುಚನಾಪಲ್ಲಿ ತೆಗೆದುಕೊಂಡು ಅಲ್ಲಿ ಯಿದ್ದ ಸಾದಕಸಾಬು ಬಡೆಸಾಬರನ ಹೊಡೆದು ಚಂದಾ ಸಾಬರನ ಕೈಶೆರೆ ಹಿಡಿದುಕೊಂಡು ಮುರಾರಿ ರಾಯರಿಗೆ ತಿರುಚನಾಪಲ್ಲಿ ಕೊಟು ಸಬ್ದರಲ್ಲಿ ಖಾನರು ಆಕಾರ್ಡು ಆಳುತ್ತಾಯಿದ್ದು ವಂದು ದಿನ ಸವಾರಿ ಹೋಗಿ ರಾತ್ರೆ ರಾಯವೆಲೂರ ಕೋಟೆಯಲ್ಲಿ ನಿಲ್ಲಲಾಗಿ ಅವರ ಭಾವಮ್ಯೆದ ಮೃತ್ತೂಜಾ ಖಾನರು ಯೀ ಸಬ್ದರಲ್ಲಿ ಖಾನರನ ಕೊರಳ ಕೊಯಿದು ತಾವು ಆರ್ಕಾಟಿಗೆ ಬಂದು ವಂದು ತಿಂಗಳು ದವಲತ್ತು ಮಾಡಿ ನಿರ್ವಹಿಸಲಾರದೆ ವೆಲೂರಿಗೆ ವೋಡಿ ಹೋಗಿ ಕಿಲ್ಲೆ ಬಲಕಾಯಿಶಿಕೊಂಡದ್ದರಿಂದ ಆರ್ಕಾಡ ದವಲತ್ತು ಅನಾಯಕವಾದ ವರ್ತಮಾನ ಹೈದರಾಬಾದಿನಲ್ಲಿ ಟಿಕವೀಸಖಾನ ನಿಜಾಮದ್ದವಾಲ ಅಸಫ್ ಜಹಾ ಬಹದರವರು ತಿಳಿದು ಫವುಜು ಸುದಾ ಬಂದು ತಿರಚನಾಪಲ್ಲಿ ಸಾಧಿಸಿ ತಿರಚನಾಪಲ್ಲಿ ಆರ್ಕಾಡು ಸಹಾ ದವಲತ್ತು ಯಲ್ಲಾ ಖಾಜಿ ಅಬ್ದುಲ್ಲಾಖಾನರಿಗೆ ಕೊಡುತ್ತಲೆ ಆ ರಾತ್ರಿಗೆ ಅವರು ಮೃತವಾದ್ದರಿಂದ ಆ ಮರುದಿನ ಅನವರ್ದಿ ಖಾನರಿಗೆ ದವಲತ್ತು ಕೊಟ್ಟು ತಾವೂ

ಹೈದರಾಬಾದಿಗೆ ಹೋದ ಕೆಲವು ದಿನದ ಮೇಲೆ ನಾಗಪುರದಿಂದ ಚಂದಾಸಾಬರು ತಂಮ್ಮ ದಿವಾನ ಶೇಷಗಿರಿರಾಯನ ಮುಖಾಂತ್ರ ಮಧ್ಯಸ್ತಾ ಮಾಡಿ ಶೆರೆಬಿಡಿಶಿಕೊಂಡು ಬರುತ್ತಾ ನೂರು ಕುದುರೆ ಜಮಾಹಿಶಿ ಮಾರ್ಗದಲ್ಲಿ ರಾಯದುರ್ಗ, ಹರಪನಹಳ್ಳಿ, ಸಾವನೂರು, ಬಿದನೂರು, ಮುಂತಾದವರ ಸಂಗಡ ಚಿತ್ರಕಲ್ಲು, ದೊಡ್ಡಮೆದೆಕೆರೆ ನಾಯಕನನ್ನೂ ಮುರಾರಿರಾಯನ ವಹಿಸಿಕೊಂಡು ಲಡಾಯಿ ಮಾಡುವಲ್ಲಿ ಯಿವರ ಕುಮಕಿಗೆ ಹೋಗಿ ಮಾಯಕೊಂಡೆ ಬಳಿ ಯೀ ಮೆದೆಕೆರೆ ನಾಯಕನ ಜೊತೇಯಲ್ಲಿ ಚಂದಾಸಾಬರ ಹಿರೀ ಮಗನು ಹತವಾಗಿ ಅವರವರಿಗೆಲ್ಲಾ ಸಲ್ಲಾ ಆಗಿ ಕಸ್ತೂರಿ ರಂಗಪ್ಪನಾಯಕರಿಗೆ ಚಿತ್ರಕಲ್ಲು ದೊರೆತನವಾದ ಬಳಿಕ ಚಂದಾಸಾಬರು ಆದವೇನಿಗೆ ಬಂದು ಅಲ್ಲಿ ದವಲತ್ತು ಮಾಡುತ್ತಿದ್ದ ಪೂರ್ವ ಷಾಹಿಜಹಾ ಬಹದಾರ ವಜೀರಮುಲ್ಲಾ ಸಾತಲ್ಲಾಖಾನರ ಮೊಂಮೊಗ ನವಾಬ ಮುತವಾಶೀಲಖಾನರು ಮಗ ಹಿದಾಯತ ಮೊಹಿಯ್ಯದೀನಖಾನರು ನಿಜಾಮಲ್ ಮುಲ್ಕರನವಾಸಾ ಆದ್ದರಿಂದ್ದಾ ಅವರ ಅಧೀನದಲ್ಲಿ ಆದವಾನೀ ದವಲತ್ತು ತಮಗೆ ಮಾಡಿಕೊಟ್ಟರೆ ವಂದು ಕೋಟಿ ರೂಪಾಯಿ ಕೊಡುತ್ತೇವೆಂದು ಫವುಜು ಸುದಾ ಯಿಪ್ಪತ್ತು ಸಾವಿರ ಕುದುರೆ ಸಹಾ ಹೊರಟು ಅಂಬೂರು ಗಡದ ಬಳಿ ಲಡಾಯಿಯಲ್ಲಿ ಅನವರದಿಖಾನರನ ಕೊಂದು ಹಾಕಿ ಅವರ ಜೊತೆಯಲ್ಲಿ ಮೊದಲು ಅಲ್ಲಿದೋಸ್ತಖಾನರ ದಿವಾನ ನವಾಬ ಹುಶೇನ ಕಾಯುರಖಾನರನೂ ತೀರಿಶಿ ಆರ್ಕಾಡ ದವಲತ್ತು ಚಂದಾಸಾಬರವರಿಗೆ ಹಿದಾಯತ ಮೊಹಿಯದ್ದೀನಖಾನರು ಮಾಡಿ ಕೊಟ್ಟರಾಗಿ ಅವರಿಗೆ ನಿಜಾಮದ್ದವಲಾನವರು ಸಂದು ಹೋಗಿ ಅವರ ಹಿರೇ ಮಗ ಗಾಜುದ್ದಿ ಖಾನರು ಗತವಾಗಿ ಯೀ ಗಾಜುದ್ದೀಖಾನರ ಮಗ ಚಿಕ್ಕಪ್ರಾಯದವನು ಡಿಳ್ಳೀಯಲ್ಲಿ ವಜೀರಿ ಖಿಜಮತ್ತಿನಲ್ಲಿ ಯಿದ್ದ ಕಾರಣ ಅಸಫಜಾನವರ ಯರಡನೆ ಮಗ ನಾಸರುಜಂಗರು ಆರ್ಕಾಡು ಸುದ್ದಿ ಕೇಳಿ ಶಿಟ್ಟಿನಿಂದಾ ಹೊರಟು ಲಕ್ಷಾಂತ್ರ ಫವುಜು ಸದಾ ಆರ್ಕಾಡು ಮೇಲೆ ಹೊರಟು ತಂಮ್ಮ ಸೋದರ ಅಳಿಯ ಹಿದಾಯತು ಮೊಹಿಯದ್ದೀನಖಾನರನ ಹಿಡಿದು ಪಹರೆ ಹಾಕಿದಲ್ಲಿ ಚಂದಾಸಾಬರು ಮಲಚೇರಿಕೋಟೆ ಶೇರಿದ್ದರಿಂದಾ ಅಲ್ಲಿಗೆ ನಾಸರಜಂಗರು ಮುತ್ತಿಗೆ ಹಾಕಿ ಮಳೆಗಾಲದಲ್ಲಿ ತಂಮ್ಮ ದಿವಾನ ಷಾನವಾಸ ಖಾನನ ಪಿತೂರಿಯಿಂದಾ ಖಾನಾಜಂಗೀಯಲ್ಲಿ ಕಂಗೊಲ ನವಾಬ ಹಿಂಮತ ಬಹದರನ ಕೈಬಂದುಕದ ಗುಂಡಿನಿಂದಾ ಹೊಡೆದ ಬಳಿಕ ಆ ದವಲತ್ತೆಲ್ಲಾ ಹಿದಾಯತಮೊಹಿಯದ್ದೀನಖಾನರಿಗೆ ಆಗ ಹಿಂದಿರುಗಿ ಹೋಗುತ್ತಾ ರಾಚೋಟಿ ಬಳಿ ಪುನಹಾ ಖಾನಾಜಂಗಿಯಾಗಿ ಹಿಂಮತ ಬಹದರ ಹಿದಾಯತ ಮೋಹೀಯದ್ದೀನಖಾನ ವಗೈರೆ ಸಂಜೀಷಹೀದರಾಗಿ ಆವಾಗ ಮರಾಟೇರ ಬಗೆ ಸರದಾರು ರಾಜಾ ಚಂದ್ರಸೇನ ಬಹದರನ ಆಸರೆಯಿಂದ ನಾಜರ ಜಂಗರ ತಂಮ್ಮ ಸಲಾಬತ ಜಂಗ ೧ ಬಸಾಲತ ಜಂಗ ೧ ನಿಜಾಮಲ್ಲಿ ಖಾನರು ೧ ಮೀರ್ ಮಗರ್ ೧ ಯೀ ನಾಲಕ್ಕು ಜನರೂ ಭಾಗಾನಗರ ಶೇರಿ ಬಸಾಲತ ಜಂಗಗೆ ಆದವಾನಿ ಸಲಾಬತಜಂಗಗೆ ಗೋಲಕೊಂಡೆ ಸಹಾ ದವಲತ್ತು ಆಯಿತಾಗಿ ಆವಾಗ ನಾಸರಜಂಗರ ಫವುಜಿನ ಕುಮುಕಿಗೆ ಶ್ರೀರಂಗಪಟ್ಟಣದಿಂದ ಹೋಗಿಯಿದ್ದ ಬರಕ್ಕಿ ವೆಂಕಟರಾಯರ ತೈನಾತಿಯಲ್ಲಿ ಯಿದ್ದ

ಹೈದರಲ್ಲಿಖಾನರು ನಾಜರುಜಂಗರ ಖಜಾನೆದ್ರವ್ಯವೆಲ್ಲ ದಿಕ್ಕಾಪಾಲಿಗೆ ಲೂಟಿಸಿಕೊಂಡೂ ಹೋಗುವರಲ್ಲಿ ಕೆಲವರನ ಹೊಡೆದು ಆ ಪೈಕಿ ೧೫ ವಂಟೆ ಮೇಲಣ ಅಕಬರೀಮೊಹರಾ ಹೇರುಗಳಂನು ಹಸ್ತಗತಾ ಮಾಡಿಕೊಂಡು ಯಿದ್ದ ವರ್ತಮಾನಂವನ್ನು ಮಹಾರಾಜಶ್ರೀ ದಳವಾಯಿ ದೇವರಾಜೈಯ್ಯನವರು ಯೀ ಹಣಕಾಸು ಕೊಳ್ಳಬೇಕೆಂದು ಪ್ರಯತ್ನಾ ಮಾಡಿದಲ್ಲಿ ಮಹಾರಾಜಶ್ರೀ ಕರಾಚೂರಿ ನಂಜರಾಜೈಯ್ಯ ಅರಶಿನವರು ಅಂಣನವರಿಗೆ ಹೇಳಿ ಮಾಫ್ತ ಮಾಡಿಸ್ತರು.

ಸದರಿ ಅಫರಾತಫರಿಯಲ್ಲಿ ಮೈಲಾಪುರದ ಕೋಟೆ ಯಿಂಗ್ರೇಜ ಕುಮುಕು ಮಾಡಿಕೊಂಡು ಆರ್ಕಾಡು ದವಲತ್ತು ಬಲಕಾಯಿಸಿ ತಿರುಚನಾಪಲ್ಲಿಯಿದ್ದ ಮೊಮದಲ್ಲಿ ಖಾನರು ತಂಮ್ಮ ಮೇಲೆ ಪುಲಚೇರಿಯಿಂದ ಪರಾಷೀಸತ ಫಉಜು ಸುದಾ ಚಂದಾಸಾಬರು ಬಂದು ಮುತ್ತಿಗೆ ಹಾಕಲಾಗಿ ನಿಭಾಯಿಸಲಾರದೆ ಶ್ರೀರಂಗಪಟ್ಟಣಕ್ಕೆ ವಕೀಲ ಶೇಷಗಿರಿ ಪಂತನ ಕಳುಹಿಸಿ ಯೀ ಮುತ್ತಿಗೆ ನೀಉ ಬಂದು ಯಬ್ಬಿಶಿದಲ್ಲಿ ತಿರಚನಾಪಲ್ಲಿ ಕೋಟೆ ಯೀ ಸೀಮೆ ಸಹಾ ನಿಮಿಗೆ ಕೊಡುತೇವೆಂದು ಕರಾರು ಮಾಡಲಾಗಿ ಸಂಗಡ ಕುದುರೆ ೧೦೦೦೦ ಮಂದಿ ೫೦೦೦೦ ತೋಪುಗಳು ಸಕಲ ಸನತನುತು ಸಹಾ ಕರಾಚೂರೀ ಅರಶಿನವರು ಶಕೆ ೧೬೭೩ನೆ ಪ್ರಜೋತ್ಪತ್ತಿ ಸಂವತ್ಸರದಲ್ಲೂ ಹಮವಷಾ ಮುರಾರಿರಾಯನ ಸವಾರರು ೫೦೦೦ ಸುದಾ ಹೊರಟು ನಡೆಯುವಲ್ಲಿ ಯೀ ಸುದ್ದಿ ತಿಳಿದು ಚಂದಾಸಾಬರು ಕಳುಹಿಸ್ತ ಫವುಜಿಗೂ ಅರಶಿನವರ ಫವುಜಿಗೂ ಕ್ರಿಷ್ಣರಾಜಪುರದ ಬಳಿ ಸಂಗ್ರಾಮವಾಗಿ ಬಂದಿದ್ದ ಹೂಬಸಾಬ ಸೈದಯಾಕೂಪ ಸಹಾ ಕೈಶೆರೆ ಶಿಕ್ಕಿದ್ದರಿಂದಾ ವತ್ತಾ ಆಗಿ ಕರೂರು ಬಳಿಗೆ ಫವುಜು ಹೋಗಿ ಅಲ್ಲಿಂದ್ದಾ ತಿರುಚನಾಪಲ್ಲಿಗೆ ಹೋಗುವ ಮಾರ್ಗದಲ್ಲಿ ಪುನಹಾ ಚಂದಾಸಾಬ ಕಳುಹಿಸ್ತ ಫಉಜಿಗೆ ಅಡ್ಡೆಯಾಗಿ ಅರವಾಸಿ ಫಉಜು ಲಡಾಯಿಮಾಡುತ್ತಾ ನಿಂತ ಅರವಾಸಿ ಫಉಜು ಸುದಾ ಮಹಮದಲ್ಲಿ ಖಾನರ ತಂಮ್ಮ ಅಬ್ದುಲ ವಹಾಬಖಾನನ್ನೂ ಬಂದು ಕರೆದುಕೊಂಡು ಹೋಗಿ ಪ್ರತ್ಯೇಕ ಮಾರ್ಗದಿಂದ ಅರಶಿನವರು ತಿರಚನಾಪಲ್ಲಿ ಬಳಿಗೆ ದಾಖಲಾದ್ದು ಕಂಡು ಚಂದಾಸಾಬರ ಫಉಜು ಹಿಂದಿರುಗಿ ತಿರುಚನಾಪಲ್ಲಿ ಬಳಿಗೆ ಶೇರಿದ್ದರಿಂದ ಅರಶಿನವರ ಕಡಿಮೆ ಅರ್ಧಾಜಮಾಯತು ಅರಶಿನವರ ಬಳಿಗ್ಗೇ ಬಂದು ದಾಖಲಾಯಿತು.

ಆ ಬಳಿಕ ಚಂದಾಸಾಬರು ಮುತ್ತಿಗೆ ತೆಗೆದು ಕಿನ್ನಾರಾಗಿ ಹೋಗಿ ಯಿಳಕೊಂಡ ಕಾರಣ ಮಹಮದಲ್ಲಿಖಾನನು ಬಂದು ಅರಶಿನವರ ಭೇಟಿ ತೆಗೆದುಕೊಂಡು ಕರೀಕುಲೂಫ ವಪ್ಪಿಶಿ ಕೋಟೆಗೆ ನಿಂಮ್ಮ ಠಾಣ್ಯ ಕಳುಹಿಸಬೇಕು. ತನಗೆ ಮೈಬಾಬಸ್ತು ಯಿರತಕ್ಕ ಬಗ್ಯೆ ಕರೂರಲ್ಲಿ ಜಾಗೇ ಕೊಟ್ಟು ಖೇತ ಮಾಡಿಶಿಕೊಡಬೇಕೆಂದು ಹೇಳಿಕೊಂಡದರಿಂದಾ ಚಂದಾಸಾಬರು ಫವುಜು ಫಲಾಯನ ಮಾಡಿಸ್ತಮ್ಯಾಲೆ ನಿನಗೆ ಹರದನಹಳ್ಳಿಯಂನ್ನು ಜಹಗೀರು ಕೊಡಿಸುತ್ತೇವೆ. ನೀನು ನಂಮ ಮಗನಾಗಿ ಯಿರು. ಯೀಗಾ ಸಧ್ಯಾ ಕೋಟೆಬಾಗಿಲು ಬೀಗಮುದ್ರೆ ನಿಂನ ವಶದಲ್ಲಿ ಯಿರಲಿ ಯಂದು ಹಿಂದಕ್ಕೆ ಕೊಟ್ಟು ಸದ್ಯಾ ಕೋಟೆಗೆ ವಬ್ಬ ಅರಸುಮಗನ ಸಂಗಡ ಜುಜುವಿ ಮಂದಿ ಕೋಟೆವಳಕ್ಕೆ

ಕಳುಹಿಸಿಕೊಟ್ಟು ಬಳಿಕ ತಂನ ಮಂದಿ ಖರ್ಚಿನ ಬಗ್ಗೆ ಕಡವಾಗಿ ೧೦೦೦೦ ವರಹಾ ಅರಶಿನವರ ಕಡೆಯಿಂದಾ ತೆಗೆದುಕೊಂಡು ಮುರಾರಿರಾಯರಿಗೆ ಲಂಚಹಾಕಿ ಕಟಿಕೊಂಡು ಮೊದಲು ತಂನ ಕುಮುಕಿಗೆ ಕರಶಿ ಯಿದ್ದ ತಂಜಾವೂರು ಜಮೀಯತು ದಿವಾನ ಮಾನಾಜಿ ಸಹಾ ತಂದು ಯಿಳಿಶಿಕೊಂಡು ಅರಶಿನವರ ಬಳಿ ಠಕ್ಕು ಭಕ್ತಿಗಳ ಮಾಡುತ್ತಾ ಕಿಲ್ಲೆ ವಳಗೆ ಅಮ್ಮಾಸು ಅರಶಿನವರ ಕಡೆ ಜನರು ಹೋಗಿ ಬರುವುದಕ್ಕೆ ಅಟಕಾವು ಮಾಡುತ್ತಾ ಮೋಸದ ವಿದ್ಯಕೆ ಪ್ರಾರಂಭಿಸ್ತನೂ.

ಚಂದಾಸಾಬರು ವಂದು ತಡವೆ ಅರಶಿನವರ ಬಳಿಗೆ ವಕೀಲನ ಕಳುಹಿಶಿ ಮಹಮದಲ್ಲಿ ಖಾನನ ನಂಬಲಾಗದು ತಾನು ನಿಂಮುವನಾಗಿ ಕೋಟೆ ತೆಗೆದು ಕೊಡುತ್ತೇನೆಂದು ಹೇಳಿಕಳುಹ್ಸಿ ಯಿದ್ದ ಮಾತಿಗೆ ಅರಶಿವರು ಕಬೂಲಾಗದೆ ಯಿದ್ದು ಮಹಮದಲ್ಲಿಖಾನನ ಕ್ರಿತ್ತಿಮವನ್ನು ತಿಳಿದ ಬಳಿಕ ಫಉಜಿಗೆ ರಸ್ತುಬಂದಾಗಿ ಅಜೀಜೀ ಯಿದ್ದ ಚಂದಾಸಾಬರಿಗೆ ಮಾನಾಜೀ ಮುಖಾಂತ್ರ ಕವುಲುಮಾಡಿ ಚಿಂತ್ತಾಮಣಿ ನದಿ ಘಾಟಿವಬ್ಬೆಗೆ ಆತನ ಫಉಜು ಕರಶಿ ಯಿಳಿಸಿದರು.

ಅವರಿಗೆ ಮಹಮದಲ್ಲಿಯು ತಂನಲ್ಲಿ ಚಾಕರಿಯಿದ್ದ ಯಿಂಗ್ರೇಜರು ಸಂಬಳ ಸಲ್ಲದ್ದರಿಂದ ತಂನ್ನ ಮೇಲೆ ತಿರುಗಿಬಿದ್ದ ಪ್ರಯುಕ್ತ ಕೋಟೆ ತಂನ್ನ ಅಧೀನ ತಪ್ಪಿದ ಹಾಗೂ ಚಂದಾಸಾಬರು ಕೈಶೆರೆ ಹಿಡಿದರೆ ಕಿಲ್ಲೆ ನಿಂಮ್ಮದೇ ಯಿಥೆಯೆಂಬ ಹಾಗೂ ಕುಹಕಗಳ ಆಡುತ್ತಾ ಮೊದಲು ಕೋಟೆಗೆ ಕಳುಹ್ಸಿಯಿದ್ದ ಜನರನ ಕೈದುಮಾಡಿ ಮಾನಾಜೀಗೆ ಲಂಚಾಹಾಕಿ ವಂದು ದಿನ ರಾತ್ರಿ ಅರಶಿನವರು ಕರಶಿದೋಪಾದೀ ಯೇಕಾಂತಕ್ಕೆ ಮಾನಾಜೀನ ಡೇರೆಖೆ ಕರಶಿ ಚಂದಾಸಾಬರನ್ನು ಯಿವರ ದಿವಾನ ಶೇಷಗಿರಿರಾಯನ ಸಹಾ ಹಿಡಿದು ತಲೆಗಳ ಕೊಯ್ದು ಅರಶಿನವರ ಬಳಿಗೆ ಕಳುಹಿಸಿ ಮಹಮದಲ್ಲಿಯೂ ಕೋಟೆ ವಳಕ್ಕೆ ಹೋದನಾಗಿ ಆ ತಲೆಗಳಂನ್ನು ಪಟ್ಟಣಕ್ಕೆ ಕಳುಹಿಸಿದ್ದರಿಂದ ಆಳಿದ ಮಹಾಸ್ವಾಮಿ ಚಿಕ್ಕಕ್ರಿಷ್ಣರಾಜ ವಡೆಯರವರು ಮಹಾರಾಜಶ್ರೀ ದಳವಾಯಿ ದೇವರಾಜೈಯ್ಯ ಅರಶಿನವರೂ ಸಹಾ ತಲೆಗಳಂನ್ನು ಮೈಸೂರು ವೂರು ಬಾಗಿಲಿಗೆ ಕಟಿಸ್ತರು.

ಆ ಬಳಿಕ ಚಂದಾಸಾಬರನಂತೂ ಹೊಡದು ಹಾಕಿದ್ದಾಯಿತು. ಕಿಲ್ಲೆ ಠಾಣೆ ನಮಗೆ ಕೊಡೂಯಂಬುದಾಗಿ ಅರಶಿನವರು ಮಹಮದಲ್ಲಿಖಾನರಿಗೆ ಹೇಳಿ ಕಳುಹಿಸಲಾಗಿ ಅವಸ್ಯಾ ಅದೇ ಮೇರೆಗೆ ಮುಖ್ಯ ಸರದಾರರನೆಲ್ಲಾ ಕರದುಕೊಂಡು ಸ್ವಲ್ಪ ಜನದಿಂದ ಖಾಸಾ ನೀವೇ ಕಿಲ್ಲೇ ವಳಗೆ ಬಂದು ಯಾವತ್ತೂ ನೋಡಿಕೊಂಡು ಠಾಣೆ ಯಿಟ್ಟು ಹೋಗಬಹುದೆಂದು ಮಹಮದಲ್ಲಿಖಾನರು ಹೇಳಿಕಳುಹ್ಸಿದರಿಂದ ಅದೇ ಮೇರೆ ಅರಶಿನವರು ಮಿತಜನ ಸಹಾ ಹೊರಟು ಬೀದಿ ಹುಲಿಮುಖದ ವಂದು ಬಾಗಿಲ ದಾಟಿ ಮತ್ತು ವಳಹೋಗುವ ವ್ಯಾಳೆಯಲ್ಲಿ ಹೈದರಲ್ಲಿಖಾನರು ಅರಸಿನವರಿಗೆ ಅಡ್ಡ ನಿಂತು ಕೋಟೆಗೆ ಹೋಗತಕ್ಕದ್ದಲ್ಲಾ. ಯಿದೆಲ್ಲ ಪಿತೂರಿ ವ್ಯಾಪಾರವಾಗಿಯಿದೆಯಂದು ಅರಶಿನವರ ಹಿಂದಿರುಗಿಶಿ ತರುವಲ್ಲಿ ಹಿಂದಮುಂದಣ ಬಾಗಿಲುಗಳಂನ್ನು ಹಾಕಿಕೊಂಡು ಕೋಟೆ

ಮೇಲಣಿಂದಾ ಗುಂಡುಗಳ ಹೊಡೆದ ಕಾರಣ ಯೀ ಸುದ್ದಿ ತಿಳಿದು ಮಹಮ್ಮದಲ್ಲಿಖಾನರ ತಾಯೀ ತಂನ ಮಗಂನ ತಪ್ಪು ಹಿಡಿದು ಅರಶಿನವರಿಂದಾ ನಮಗೆ ಪ್ರಾಣೋಪಕಾರವಾದ್ದಕ್ಕೆ ಅವರಿಗೆ ನಾಉೂ ಸ್ವಾಮಿದ್ರೋಹ ಮಿತ್ರದ್ರೋಹ ಮಾಡಬಾರದೆಂದು ತಿಳೀಹೇಳಿ ಗುಂಡುಗಳ ನಿಲ್ಲಿಶಿ ಹೊರಬಾಗಿಲ ತೆಗಶಿಕೊಟು ಅರಶಿನವರನ ಹೊರಕ್ಕೆ ಕಳುಹಿಸಿ ಬಿಟ್ಟರು.

ಆ ಬಳಿಕ ಕೋಟೆಯಿಂದ ಹೊರಗೆ ತೋಪಿನಯಶಿಗೆ ಹೊರಗಾಗಿ ಅರಶಿನವರ ದಂಡು ಯಿಳಿಕೊಂಡು ತಂಮ್ಮ ಫವುಜಿನ ಸರದಾರರಿಗೆಲ್ಲಾ ಹೆಚ್ಚು ಮಂದಿ ಕುದುರೆ ಬಾರು ಜಮಾಯಿಸುವಂತ್ತೆ ಹ್ಯಾರಳವಾಗಿ ಹಣಕಾಸುಗಳ ಕೊಟ್ಟು ಮುರಾರಿ ರಾಯರಿಗೆ ದಿನಕ್ಕೆ ೫೦೦೦ ರೂಪಾಯಿ ಮ್ಯಾರೆಗೆ ಅವರ ಫವುಜಿಗೆ ಸಂಬಳ ಮಾಡಿಕೊಟು ಯಿಟುಕೊಂಡು ಕೋಟೆಗೆ ಮುತ್ತಿಗೆ ಮಾಡಿದರು.

ಆವರಿಗೆ ಹೈದರಲ್ಲಿಖಾನರು ಮೊದಲು ತಮಗೆ ನಾಜರ ಜಂಗರ ದಂಡು ಮುಳುಗಿದಾಗ ಶಿಕ್ಕಿದ ಖಜಾನೆ ಬಲದಿಂದ ಕುದುರೆಮಂದಿ ಸಹಾ ವಿಶೇಷವಾಗಿ ಜಮೆಮಾಡಿ ಪ್ರಬಲವಾಗಿ ಜಮೆಮಾಡಿ ಬರುತ್ತಾ ಯಿದ್ದ ಪ್ರಯುಕ್ತ ವೊದಲು ಹೈದರಲ್ಲಿಖಾನರು ವುದುವೆಯಾಗಿ ಯಿದ್ದ ಸೈದಮುಖದೂಮರ ತಂಗಿಗೆ ವಾಯುರೋಗದಿಂದ ಕಾಲುಗಳು ಹೋದ ಪ್ರಯುಕ್ತ ನಾಜರಜಂಗರ ಹಮರಹಾ ಹೋಗಿ ಯಿದ್ದ ವ್ಯಾಳೇಲಿ ಪೂರ್ವದಲ್ಲಿ ಬಾದಷಾಹಿ ಸನಂದಿನ ಮೇಲೆ ಗುರುಂಕೊಂಡೆ ಕಿಲ್ಲೆದಾರಿ ಕೆಲವು ದಿವಸಾಮಾಡಿ ಯಿದ್ದವರ ಹೆಂಡತಿ ಮಕ್ಕಳು ಮಲಕಯಿಸಲಾಂಖಾನರ ಆಶ್ರಯದಲ್ಲಿ ಆರ್ಕಾಡಿನಲ್ಲಿ ಯಿದ್ದ ಸಬಬು ಮಲಕೈಸಲಾಂಖಾನರ ಮಾರೀಫತಿನಿಂದ ಆ ಗುರುಂಕೊಂಡೆ ಮೀರಲ್ಲಿರಜಾಸಾಬರ ಸಹೋದರಿಯಂನ್ನು ಮದುವೆಯಾಗಿ ದೇವಂಡನಹಳ್ಳಿಯಲ್ಲಿ ಮನೆಬಾಗಿಲು ಮಾಡಿಯಿಟ್ಟು ತಿರುಚನಾಪಲ್ಲಿ ಹಮರಹಾ ತಾವೂ ಯಿದ್ದದ್ದರಿಂದ ಯೀತನ ಬಹಳ ಸರಫರಾಜು ಮಾಡಿ ಬಹದರನೆಂದು ಕಿತಾಬುಕೊಟ್ಟು ಮಂದಿ ಕುದುರೆ ಜಮಾಯಿಸುವಂತ್ತೆ ಅರಶಿನವರು ಅಪ್ಪಣೆ ಕೊಟ್ಟಿದ್ದರಿಂದಾ ಯೀತನು ಬಹಳ ಸರಫರಾಜುಮಾಡಿ ಪೂರ್ವದ ಶಿಲಕು ಸಹಾ ಖರ್ಚುಮಾಡುತ್ತಾ ಕುದುರೆ ೨೦೦೦ವಾಗಿ ವಗ್ಯೆರೆ ಅಹಷಾಂ ೪೦೦೦ ಬಾರು ೪೦೦೦ ಸಹಾ ಜಮಾಯಿಸಿ ಕೋಟೆ ಸುತ್ತ ಯರಡು ಗಾವುದ ಪರಿಯಂತ್ರ ಜಮಾಯಿಸಿ ದವುಡುತ್ತಾ ಚಂದಾಸಾಬರ ದಂಡು ಮುಳುಗಿಸಿದಾಗ ಅಲ್ಲಲ್ಲಿ ಪಡಾವು ಶಿಕ್ಕಿದ ಬಾರು ತುಪಾಕಿಗಳನ್ನು ದರ ಮೂರು ನಾಲ್ಕು ರೂಪಾಯಿ ಮ್ಯಾರೆಗೆ ಕ್ರಯಕ್ಕೆ ತೆಗೆದು ಜವಾನರಿಗೆ ಕೊಡುತ್ತಾ ಬಹಳ ಝುರಮತ್ತಿನಿಂದ ವಂದು ಪಡಿಕಾಳು ಆದರೂ ಕೋಟೆ ವಳಕ್ಕೆ ಹೋಗದಂತ್ತೆ ರಸ್ತು ಬಂದ್ದು ಮಾಡಿ ಬಹು ಪ್ರಬಲವಾದರು.

ಯೀ ಮಧ್ಯೆ ಚಂದಾಸಾಬರು ಯಿರುವಾಗ್ಯೆ ಚಂನ್ನಪಟ್ಣದಿಂದ ತಿರಚನಾಪಲ್ಲಿಗೆ ರಸ್ತು ತರತಕ್ಕ ಬಗ್ಯೆ ಮಹಂಮದ ಅಲ್ಲಿಖಾನರ ಬಳಿಯಣಿಂದ ಮೇಸ್ತರ ಕೇಲೀಸಯಂಬ ಯಿಂಗರೇಜ ಸರದಾರನ ಹಮರಹಾರಸ್ತು ಸಂರಕ್ಷಣೆ ನಿಮಿತ್ಯ ಪಟ್ಣದ ಫವುಜಿನಿಂದ

೩,೦೦೦ ಸವಾರ್ಯ ಸಹಾ ಬರಕ್ಕಿ ವೆಂಕಟರಾಯನ ತೈನಮಾಡಿ ಕಳುಹ್ಸಿ ಯಿದ್ದ ದೋಸ್ತಿಯಿಂದಾ ಆ ಮೇಸ್ತರ ಕೆಲೀಸನ ಬಳಿಗೆ ಹೋಗಿ ಆತನ ಮುಖಾಂತ್ರ ಚಂನ್ನಪಟ್ಣದಲ್ಲಿ ಗೋರಂದರ ಪಿಕ್ಕಟಸಾಹೆಬರ ಹೆಸರ ಸಂನದ ತರಿಶಿ ತಿರಚನಾಪಳಿ ಕೈವಶಾಮಾಡಿಕೋ ಬೇಕೆಂದು ಅರಶಿನವರು ಯೋಚಿಸಿ ಚಂನ್ನಪಟ್ಣಕ್ಕೆ ವೆಂಕಟರಾಯರ ಕಳುಹ್ಸಿ ಯಿದ್ದಲ್ಲಿ ಯೀ ವರ್ತಮಾನಾ ತಿಳಿದು ಮಹಂಮದಲ್ಲಿಖಾನನು ವೆಂಕಟರಾಯರನ ಚಂನ್ನಪಟ್ಣದಲ್ಲೆ ಕೈದುಮಾಡಿಸಲಾಗಿ ನಾಲ್ಕೈದು ವರ್ಷ ಪರ್ಯಂತರ ರಾಯರು ಕೈದಿನಲ್ಲಿದ್ದು ಪಿಕ್ಕಟಸಾಬರು ಯಿಲಾಯತ್ತಿಗೆ ಹೋಗೂವಲ್ಲಿ ರಾಯರನ ಬಿಟರು.

ಆ ಬಳಿಕ ಕೋಟೆವಳಗೆ ತಿಂನುವದಕ್ಕೆ ಕಾಳು ಯಿಲ್ಲದೆ ಮಹಂಮದಲ್ಲಿ ಖಾನನು ಮುರಾರಿರಾಯರಿಗೆ ಲಂಚಾಹಾಕಿ ಆತನ ಮುಖಾಂತ್ರ ಅರಶಿನವರ ಬಳಿಯಲ್ಲಿ ಕವುಲುಮಾಡಿಕೊಂಡ ವಿವರ. ತಾನೂ ಚಂನ್ನಪಟಣಕ್ಕೆ ಹೋಗಿ ಅಲ್ಲಿಂದಾ ಯರಡು ತಿಂಗಳಲ್ಲಿ ತಿರಚನಾಪಲ್ಲಿ ಕೋಟೆ ಅರಶಿನವರಿಗೆ ಕೊಡುವಂತೆ ಯಿಂಗ್ರೇಜೀ ಗವುನರ ಸಂನದು ಕಳುಹಿಸುವುದಾಗಿಯೂ ಆಪರಿಯಂತ್ರ ಕೋಟೆವಳಕ್ಕೆ ವಬ್ಬ ಕಿಲ್ಲೆದಾರ ೨೦೦ ಜನ ಪೇದೇರು ಸಹಾ ಅರಶಿನವರ ಕಡೆಯಿಂದಾ ಬಂದು ಠಾಣೆಯಿರುವ ಹಾಗೂ ಯೀ ಯರಡು ತಿಂಗಳು ಕೋಟೆಗೆ ಅಮಖಾಸ್ತು ರಸ್ತು ಬರುವಲ್ಲಿ ಅಡ್ಡಿಯಿಲ್ಲದ ಹಾಗೂ ಕರಾರು ಮಾಡಿಕೊಂಡು ಅರಶಿನವರ ಭೇಟಿಗೆ ತಾನು ಬಂದನು.

ಅವರಿಗೂ ಅರಶಿನವರ ಕಡೆ ದರೋಬಸ್ತು ಸರದಾರರು ಹೈದರಲ್ಲಿಖಾನರು ಸಹಾ ಅರಶಿನವರಿಗೆ ಬೋದಿಸ್ತ ವಿವರ. ಯೀವರಿಗೂ ಯಷ್ಟು ಉಪಕೃತೀ ಮಾಡಿದಾಗ್ಯೂ ಮಹಂಮದಲ್ಲಿಖಾನನು ನಿಮಿಗೆ ಮೋಸವೇ ಮಾಡುತ್ತಾ ಬರುತಾನಾಗಿ ಯೀಗ ಯಿವನಿಗೆ ಸಮಯ ತಪ್ಪಿ ನಾಲ್ವತ್ತು ಮೂವತ್ತು ಜನದಿಂದ ನಿಂಮ್ಮ ಭೇಟಿಗೆ ಬಂದು ಯಿರುವವನ ನಾವೆಲ್ಲರೂ ಯಿಲ್ಲೆ ಅಟಕಾಯಿಸಿ ಕೋಟೆವಳಗಣ ಠಾಣೆ ಹೊರತೆಗಶಿ ನಂಮ್ಮ ಠಾಣೇಯಂನ್ನು ಕಿಲ್ಲೆವಳಗೆ ಬಲಕಾಯಿಸಿ ಆ ಬಳಿಕ ನಿಂಮ್ಮ ಚಿತ್ತಕ್ಕೆ ಬಂದರೆ ಯಿವಂನ್ನು ಬಿಟ್ಟರೂ ಬಿಡಬಹುದು. ಯೀ ಸಮಯ ತಪ್ಪಿ ಯಿವನು ಚಂನ್ನಪಟ್ಣ ಶೇರಿದ ಬಳಿಕ ಪುನಹಾ ಯೀ ಕಿಲ್ಲೆ ನಂಮ್ಮ ಕೈವಶವಾಗುವುದಿಲ್ಲವೆಂದು ಬಹುತರವಾಗಿ ಅರಿಕೆ ಮಾಡಿಕೊಂಡರು.

ಯೀ ಮಾತಿಗೆ ಅರಶಿನವರು ಅಪ್ಪಣೆಕೊಟ್ಟ ವಿವರ. ನಾವಂತ್ತೂ ಯಂದಿಗೂ ಕವಲುಕೊಟ್ಟು ತಪ್ಪತಕ್ಕದಿಲ್ಲಾ. ಅವನ ದ್ರೋಹ ಅವಂನೇ ತಿಂದೀತು. ಯಿದಲ್ಲದೆ ಮುರಾರಿರಾಯರು ದೊಡ್ಡ ಮನುಷ್ಯರು. ಅವರ ಮುಖಾಂತ್ರ ಅದ ಮಾತಿಗೆ ಮಹಂಮದಲ್ಲಿ ಯಿಂನ್ನು ಮೇಲೆ ತಪ್ಪಿ ನಡೆಯತಕ್ಕದಿಲ್ಲವೆಂದು ಹೇಳಿಬಿಟ್ಟರು.

ತರುವಾಯ ಮಹಂಮದಲ್ಲಿಖಾನನು ಮಿತಜನರಿಂದ ಮುರಾರಿರಾಯರ ಹಮರಹಾ ಬಂದು ಅರಶಿನವರ ಭೇಟಿ ತೆಗೆದುಕೊಂಡು ತಿರಚನಾಪಲ್ಲಿ ಕೋಟೆವಳಕ್ಕೆ ಕತ್ತಿ ಗೋಪಾಲರಾಜೈಯ್ಯನವರನೂ ಪ್ರಧಾನ ಚಂನಪ್ಪಯ್ಯನವರನೂ ೨೦೦ ಜನ ಅಹಷಾಂ

ಪ್ಯಾದೇರನ ಸಹಾ ಕಳುಹಿಸಿ ಕೋಟೆವಳಗೆ ಯಿಂಗರೇಜು ಬಹದರವರ ಠಾಣೆ ಯಿಟ್ಟು ಮಹಂಮದಲ್ಲಿ ಖಾನನು ಚೆಂನ್ನಪಟ್ಟಣಕ್ಕೆ ಹೊರಟುಹೋದನು.

ಆ ಬಳಿಕ ಅರಶಿನವರು ಶ್ರೀರಂಗಕ್ಕೆ ದೇವರ ದರುಶನಕೆ ಬಂದು ಫವುಜು ಆ ದೇವಸ್ಥಾನದ ದೊಡ್ಡಪೌಳಿಯಲ್ಲಿ ಯಿಳಿದ ರಾತ್ರೆ ಬೆಳಗಿನ ಝಾವಕೆ ತಿರಚನಾಪಳಿ ಕೋಟೆ ವಳಗಣಿಂದ ಕೆಲವು ಬಾರಿ ಕೆಲವು ಸೋಜರರು ಸಹಾ ನಾಲ್ಕು ತೋಫುಗಳ ಯಳಕೊಂಡು ಹೊರಗೆ ಬಂದು ಅಂಮಾ ಮಂಟಪದ ಮೇಲೆ ತೋಫುಗಳ ಯಿಟ್ಟು ಅರಶಿನವರ ದಂಡಿಗೆ ಗುಂಡುಗಳ ಹೊಡೆದರಾಗಿ ಆವಾಗ ಹರೀಶಿಂಗ ಜಮಾದಾರನು ಹೈದರಲ್ಲಿ ಖಾನ ಬಹದರರೂ ಸಹಾ ಕುದುರೆ ಫವುಜು ಚಲಾಯಿಶಿ ಸದರಿ ಸೋಜರರು ಬಾರು ಜನರಲ್ಲಿ ಹೊಕ್ಕು ಹೊಡೆದು ಖತಲುಮಾಡಿ ತೋಫುಗಳ ಕಸುಕೊಂಡರು.

ಆವಾಗ ಮುರಾರಿರಾಯನ ತಂಮ್ಮ ಭುಜಂಗರಾಯ ಸಾಕುಮಗ ಬಾಳಾಜೀರಾಯ ಬಕಷೀ ಗೋವಿಂದರಾಯ ವಗೈರೆ ಠಾರಾದರು. ಆ ವ್ಯಾಳೆ ಮುರಾರಿರಾಯರನ್ನು ಅರಶಿನವರಿಗೆ ಹೇಳಿ ಬಲವಂತ್ತದಿಂದಾ ಯೀ ತೋಫುಗಳ ತೆಗೆದುಕೊಂಡವನಾಗಿ ಆ ಪೈಕಿ ವಿಷ್ಣುಚಕ್ರವೆಂಬ ಗೋಪಾಲಚಕ್ರದ ಬಂಣದ ವೂಚು ತೋಫು ಹೋಯಿತೆಂಬ ಸಂಕಟಳ್ಕೆ ಬಹದೂರರೂ ಯೀ ತೋಫಿನ ಸಂಗಡ ನಿಂನನೂ ನಿನ್ನ ಕುಟುಂಬ ಮಕ್ಕಳನ್ನೂ ನಿಂನ್ನ ಗುತ್ತಿದುರ್ಗ ಸಹಾ ತೆಗೆದುಕೊಳ್ಳುತ್ತೇನೆ ಮರೆಯ ಬ್ಯಾಡವೆಂದು ಮುರಾರಿರಾಯರಿಗೆ ವದಲಿಶಿಬಿಟ್ಟು ದ್ವೇಷಾ ಮನಶ್ಶಿನಲ್ಲಿಯಿಟ್ಟರು.

ಆ ಬಳಿಕ ಕೋಟೆವಳಗೆ ಕತ್ತಿ ಗೋಪಾಲರಾಜೈಯ್ಯನವರು ಕೈದು ಮಾಡಿ ಕೋಟೆಯಿಂದಾ ಅರಶಿನವರ ದಂಡಿನ ಮೇಲೆ ಗುಂಡುಗಳು ಹೊಡೆಯುತ್ತಾ ಬಂದ ಕಾರಣ ಪುನಹಾ ಕೋಟೆಗೆ ರಸ್ತು ಬಂದುಮಾಡಿ ಜಗಳವಾಗುತ್ತಾಯಿತ್ತು.

ತರುವಾಯ ಮುರಾರಿರಾಯರು ಫುಲಚೇರಿಗೆ ಪ್ರಯಾಣವಾದಲ್ಲಿ ಫರಾಷೀಸರನ ತಮಗೆ ಕುಮುಕು ತರುವಂತ್ತೆ ಮುರಾರಿರಾಯರಿಗೆ ಹೇಳಿಯಿವರ ಸಂಗಡ ವಕೀಲ ವೆಂಕಟನಾರಾಯಣಪ್ಪನ ಕಳುಹಿಸಿದ್ದರಿಂದ್ದಾ ಅಲ್ಲಿ ಮುರಾರಿರಾಯನು ತಾತಾನಿರಾಮಾಡಲಾಗಿ ವೆಂಕಟನಾರಣಪ್ಪನೂ ತಂನ ಸ್ವಬುದ್ಧಿಯಿಂದಾ ಸಾಹಸಾ ಮಾಡಿ ಫುಲಚೇರಿಯಿಂದ ಪರಂಗಿಯವರಂನ್ನು ಕುಮಕು ತಂದದ್ದರಿಂದಾ ಅವರು ವಂದು ದಿವಸಾ ರಾತ್ರಿ ಕಸ್ತು ಮಾಡಿ ಹಲ್ಲಾಯೇರಿ ಅಲಂಗದ ಮೇಲೆ ಯೇರುತ್ತಲೆ ವಳಗಿನವರು ಕಂಡು ಹುಷಾರಾಗಿ ಜಮಾಯಿಸಿ ನಿಂತದ್ದರಿಂದ ನಿರ್ವಹಿಸದೆ ಕವುಲುಮಾಡಿಕೊಂಡು ಫರಾಷೀನರು ಸ್ವಲ್ಪ ಜನ ಆ ಸಬಬು ಹೊರಕ್ಕೆ ಬಂದು ಫುಲಚೇರಿಗೆ ಹೊರಟುಹೋದರು. ತರುವಾಯಾ ಯೀ ಮೊಹಿಂಮು ಮೂರು ವರುಷ ಪಟ್ಟದ ಖಜಾನೆ ಹಣವೆಲ್ಲಾ ವೆಚ್ಚವಾಗಿ ಮತ್ತು ಫವುಜಿಗೆ ಕರಾರುಬಾಕಿ ಮಾಡಬೇಕಾದ್ದಕ್ಕೆ ದಂಗೆ ಧರಣೆ ಆಗಿ ಯಿರುವುದಂನ್ನು ತಿಳಿದು ಚೆಂನಪಟ್ಟಣದಿಂದ ಮಹಂಮದಲ್ಲಿಖಾನನು ಗೋಪ್ಯವಾಗಿ ಅರಶಿನವರ ದಂಡಿನ

ಕೆಲವು ಸರದಾರರಿಗೆ ಲಂಚಾಹಾಕಿ ಕ್ರಿತ್ರಿಮದಿಂದಾ ಘವುಜಿನವರು ಅರಶಿನವರ ಮೇಲೆ ತಗಾದಿ ಕುಳಿತರು.

ಯೀ ವರ್ತಮಾನವಂನ್ನು ಹೈದರಲ್ಲಿಖಾನ ಬಹದರವರು ತಿಳಿದು ಅರಶಿನವರಿಗೆ ಗೋಪ್ಯದಲ್ಲಿ ಹೇಳಿಕಳುಹಿಶಿದರಿಂದಾ ಘವುಜಿನವರಿಗೆಲ್ಲಾ ಮೂರುದಿವಸದಲ್ಲಿ ಅರವಾಶಿ ಸಂಬಳಾ ಕೊಡುತ್ತೇವೆಂದು ಕರಾರುಮಾಡಿ ಡಂಗೆ ಯೆಬ್ಬಿಶಿ ಮರು ದಿವಸಾ ಕರಾಚೂರಿ ನಂಜರಾಜೈಯ್ಯ ಅರಶಿನವರೂ ಸವಾರಿ ಹೊರಟು ಶ್ರೀರಂಗ ಜಂಬುಕೇಶ್ವರಸ್ವಾಮೀ ದರುಶನಮಾಡಿಕೊಂಡು ಬರುವಾಗ ಹೈದರಲ್ಲಿಖಾನರು ಬಂದೂ ಕಂಡೂ ತಮ್ಮ ಘವುಜಿನಲ್ಲೆ ಅರಶಿನವರನ ಯಿಟ್ಟುಕೊಂಡರಾಗಿ ಕಡಿಮೆ ಘವುಜೆಲ್ಲಾ ಯೇನು ಕಾರಣ ಯಿಟ್ಟುಕೊಂಡಿರಿ ಯೆಂದು ಕೇಳಿದಲ್ಲಿ ನಮಗೆ ಕರಾರು ಬಾಕಿ ಬರತಕ್ಕದ್ದಕ್ಕೆ ಅಟಕಾಯಿಸಿ ಯಿಟ್ಟುಕೊಂಡು ಯಿದ್ದೇವೆಂದು ಬಹದರರು ಜವಾಬು ಹೇಳಲಾಗಿ ಯಲ್ಲಾರು ಸಮರ ಸಂನಾಹರಾಗಿ ಬಹದರರ ಘವುಜು ತಯಾರಾಗುತ್ತಲೆ ಕಂಡು ಯಲ್ಲರೂ ಹಿಂಜೆಗ್ಗಿ ಮಧ್ಯಸ್ತವಾಗಿ ಪಟ್ಣಕ್ಕೆ ಯಲ್ಲರೂ ಹೊರಡುವುದಾಗಿಯೂ ಬಹದರನ ಗೊತ್ತುಮಾಡಿಕೊಂಡು ಸ್ವಸ್ತವಾದರು.

ಅವರಿಗೆ ಶಕೆ ೧೬೭೭ನೆ ಯುವ ಸಂವತ್ಸರದಲ್ಲೂ ಹೈದರಾಬಾದಿನಿಂದಾ ಸಲಾಬತಜಂಗರು ಘರಾಷೀ ಸಮೂಸಾ ಭೂಸೀ ಘವುಜು ಸಹಾ ಪಟ್ಣಕ್ಕೆ ಬರುತ್ತಾ ಹಾಗಲವಾಡಿ ಕುಣಿಗಿಲು ಸಹಾ ಲುಟಾಯಿಸಿ ಪಟ್ಣದ ಬಳಿ ಯಿಳಿದು ತೋಪುಗಳ ಷುರು ಮಾಡಿದ ಸುದ್ದಿ ಬಂದ ಕಾರಣ ತಿರಚನಾಪಲ್ಲಿ ಬಳಿಯಣ ಘವುಜು ಹೊರಟು ಪಟ್ಣದ ಮಾರ್ಗವಾಗಿ ಸಾಗಿ ಬಂತು.

ಮಧ್ಯೆ ಮಾರ್ಗದಲ್ಲಿ ಕೆಳಗಣ ಶೀಮೆ ಭಾರಿ ಅಮಲುಮಾಡುವ ನಾಮಕಲ್ಲು ರಾಮಾರೆಡ್ಡಿ ಮುಂತಾದವರನ ಭೇಟಿಗೆ ಕರಶಿ ಅವರಿಗೆಲ್ಲಾ ಬಹುತರ ಸಂನ್ಮಾನಾ ಮಾಡಿಶಿ ಐದಾರು ಲಕ್ಷ ವರಹಾ ಪರ್ಯಂತ್ರ ಅವರಿಂದ ಅರಶಿನವರಿಗೆ ನಜರು ಕೊಡಿಶಿ ಆ ಹಣದಲ್ಲಿ ಘವುಜಿನವರ ತಲಬು ಬಾಕಿ ಬಗ್ಯೆ ಕೆಲವೂ ಕೊಡಿಸುತ್ತಾ ಹರದನಹಳ್ಳಿ ನಂಜನಗೂಡು ಬಳಿಗ್ಗೆ ಬಂದು ದಾಖಲಾದರು.

ಅಷ್ಟರಲ್ಲೇ ೫೬,೦೦,೦೦೦ ರೂಪಾಯಿ ಮೇಲೆ ಸಲಾಬತ್ತು ಜಂಗರಿಗೆ ಸಲ್ಲಾ ಚುಕಾಯಿಸಿ ಖಜಾನೆ ಹಣ ಜವಾಹಿರು ದೇವಸ್ತಾನದ ವಡವೆಗಳು ಮುಂತ್ತಾಗಿ ವಂದು ಹಿಸ್ಸೆ ಸರಿಮಾಡಿಕೊಟ್ಟು ನಿಂತ ಯರಡು ಹಿಸ್ಸೆ ಹಣಕ್ಕೆ ಸಾಹುಕಾರರ ಗುಮಾಸ್ತೆರನ ವೋಲು ಕೊಟ್ಟಿದ್ದರಿಂದ ಹಣ ತೀರಿಸುವುದಕ್ಕೆ ಯಿಲ್ಲದೆ ಕೆಲವು ಜನ ಗುಮಾಸ್ತೇರು ಅಲ್ಲೆ ಸತ್ತರು. ಕೆಲವು ಜನ ಗುಮಾಸ್ತರು ವೋಡಿಹೋದರು. ಕರಾಚೂರಿ ನಂಜರಾಜೈಯ್ಯ ಅರಶಿನವರು ನಂಜನಗೂಡು ಬಳಿ ಕೆಲವು ಘವುಜು ಭರತರ್ಫುಮಾಡಿ ದಿಂಡಿಗಲ್ಲು ಕಡೆ ಷರಾರತಿ ಪಾಳ್ಯೇಗಾರರ ತಂಬೀ ಬಗ್ಯೆ ಹೈದರಲ್ಲಿ ಖಾನ ಬಹದರವರಿಗೆ ಮೊಕರೂರು ಮಾಡಿ ಕಣವೇ ಕೆಳಗಣ ಸತ್ಯಮಂಗಲ ಯಿರೋಡು ಶಂಖಗಿರಿ ಶೀಮೆ ಮೇಲೆ ೩,೦೦,೦೦೦ ವರಹಾ ಗೋಪಾಲೀ ತನಖೆ ಬರಶಿಕೊಟ್ಟು ದಿಂಡಿಗಲ್ಲು ಕಡೆಗೆ ಬಹದರನ

ರವಾನೆ ಮಾಡಿ ಯೂವ ಸಂವತ್ಸರ ಶ್ರಾವಣದಲ್ಲು ನಂಜರಾಜೈಯ್ಯ ಅರಶಿನವರು ಪಟ್ಟಣಕ್ಕೆ ಬಂದರು.

ಹೈದರಲ್ಲಿಖಾನ ಬಹದರವರು ದಿಂಡಗಲ್ಲು ಬಳಿ ದಂಡು ಯಿಳಿದೂ ಅಲ್ಲಿ ಪಳನೀ ವಿರೂಪಾಕ್ಷ ಮಿಳೆಮಿರಂಗಿ ಅಂಮೀನಾಯಕ ಅಪ್ಪೆನಾಯಕ ವಗ್ಗೈರೆ ಪಾಳೆಗಾರ್ರನ್ನೆಲ್ಲಾ ಹೊಡದು ಹಣಕಾಸುಗಳ ತೆಗೆದು ಮತ್ತು ಜನರಿಗೆ ನಜಾರಾನೆಗಳ ಮಾಡಿ ೨,೦೦,೦೦೦ ರೂಪಾಯಿ ಪರ್ಯಂತರ ಜಮಾಯಿಸಿ ಪಟ್ಟದಲ್ಲಿ ವಕೀಲ ಖಂಡೇರಾಯನ ಯಿಟ್ಟು ಬೇಕಾದ ಕೆಲಸಕ್ಕೆಲ್ಲಾ ಅಪ್ಪಣೆ ತರಿಸುತ್ತಾ ಹಣ ಫವುಜು ಸಹಾ ಜಾಸ್ತಿ ಮಾಡುತ್ತಾ ತಿರಚನಾಪಲ್ಲಿಯಿಂದಾ ಕಾರೇಗಾರರ ಕರಶಿ ಹೊಸ್ತಾಗಿ ಪಂಚದಶೀ ತೋಪುಗಳಂನ್ನು ಮಾಡಿಸುತ್ತಾ ಯಿದ್ದರು.

ಆ ಬಳಿಕ ಶಕೆ ೧೬೭೮ನೆ ಧಾತು ಸಂವತ್ಸರದಲ್ಲು ಖಜಾನೆ ಹಣ ಸವದ ಸಬಬು ಮನಸ್ತಾಪಗಳೂ ಹುಟ್ಟಿ ಕರ್ತರು ಚಿಕ್ಕಕ್ರಿಷ್ಣರಾಜ ವಡೆಯರವರು ಕರಾಚೂರಿ ನಂಜರಾಜೈಯ್ಯ ಅರಶಿನವರೂ ಸಹಾ ಪಟ್ಟದಲ್ಲಿ ನಿಂತು ದಳವಾಯಿ ದೇವರಾಜೈಯ್ಯನವರು ಮಾತ್ರಾ ಸತ್ಯಮಂಗಲಕೆ ಬಂದು ನಿಂತರು. ಆವಾಗಾ ಕಲ್ಲಿಕೋಟೆಯವರಿಗೂ ಪಾಲಘಾಟೀ ತಲಚೇರಿಯವರಿಗೂ ಕಲಹಾ ಬಿದ್ದ ವರ್ತಮಾನ ಕೇಳಿ ಹೈದರಲ್ಲಿಖಾನ ಬಹದರರೂ ತಂಮ್ಮ ಭಾವಮೈದ ಸೈದ ಮಕದೂಮರನೂ ದಿವಾನ ವೆಂಕಟರಾಯರನೂ ಸಹಾ ಕುದುರೆ ೨,೦೦೦ ಬಾರು ೪,೦೦೦ ಸಹಾ ಕೊಟ್ಟು ಕಳುಹಿಸಿ ಕಲ್ಲೀಕೋಟೆ ಕೊಚ್ಚಿ ಕಡೆ ಕೆಲಊ ಶೀಮೆ ಲೂಟಿಸಿ ಠಾಣ್ಯಾಹಾಕಿ ಪಾಲಘಾಟಿ ತಲಚೇರಿ ಖಂಡಣೆ ಚುಕಾಯಿಸಿಕೊಂಡದ್ದರಿಂದ ಕಲ್ಲಿಕೋಟೆ ನಾಯಿಮಾರರು ೧೨,೦೦,೦೦೦ ರೂಪಾಯಿಗೆ ಪಗದೀ ವಪ್ಪಿಕೊಂಡು ವಳಗೆ ಸತ್ಯಮಂಗಲಕೆ ದಳವಾಯಿ ದೇವರಾಜೈಯ್ಯನವರ ಬಳಿಗೆ ಸಂದಾನ ಹಚ್ಚಿಸಿ ಸದರಹೂ ಹನ್ನೆರಡು ಲಕ್ಷ ರೂಪಾಯಿ ನಿಮಿಗೆ ಕೊಡುತ್ತೇವೆ. ಹೈದರಲ್ಲಿಖಾನರು ಫವುಜು ಹಿಂದಕ್ಕೆ ಕರಶಿಕೊಳ್ಳುವುದೂ ಯಂಬುದಾಗಿ ದಳವಾಯಿ ಪುತ್ರ ಕಳುಹಿಸಿದ್ದರಿಂದ್ದಾ ತಂಮ್ಮ ಫವುಜಿನ ಖರ್ಚು ಹ್ಯಾರಳ ಮುಟ್ಟಿಯಿಥೆ ಯಂದು ಬಹದರರು ಜವಾಬು ಬರೆಯಲಾಗಿ ಬಹದರವರ ಫೌಜು ಖರ್ಚಿಗೆ ೩,೦೦,೦೦೦ ರೂಪಾಯಿಗೆ ವಾಡೆಬಾಗಿಲ ರಂಗಂಣನ ಹೆಸರಿಗೆ ಪತ್ರವಂನ್ನು ಬಹದರವರಿಗೆ ಬರಶಿಕೊಟು ಅವರ ಫವುಜು ಹಿಂದಕೆ ತಿರುಗಿಶಿ ತಂಮ್ಮ ಕಡೆಯಿಂದ ಹರಿಶಿಂಗ ಜಮೆದಾರ್ರಂನ್ನು ನಡಕರೆ ರಾಮಂಣನ ಮಗ ಶಾಸ್ತ್ರಿಯಂನ್ನು ಹರಿಶಿಂಗನ ರಿಸಾಲೆ ೫೦೦ ಕುದುರೆ ಸಹಾ ಸದರಿ ಹನ್ನೆರಡು ಲಕ್ಷ ರೂಪಾಯಿ ತರತಕ್ಕ ಬಗ್ಗೆ ಕಳುಹಿಸಿಕೊಟ್ಟರು.

ಯೀ ಮಧ್ಯೆ ಕಣಿವೆ ಕೆಳಗಣ ಶಂಖಗಿರಿ ಹಿರೋಡು ಸತ್ಯಮಂಗಲದಿಂದ ಬಹದರರಿಗೆ ಸಲ್ಲತಕ್ಕ ತನಖೆ ಹಣವಂನ್ನು ಸತ್ಯಮಂಗಲದಲ್ಲಿ ದಳವಾಯಿ ದೇವರಾಜೈಯ್ಯ ಅರಶಿನವರು ತರಿಶಿಕೊಳ್ಳುತ್ತಾ ಯಿರಲಾಗಿ ಯೀ ನಿಮಿತ್ಯ ಜವಾಬು ಸವಾಲು ಮಾಡುವ ನಿಮಿತ್ಯಾ ಹೈದರಲ್ಲಿಖಾನರು ದಿಂಡಿಗಲ್ಲಿಂದ ಪಟ್ಟಣಕ್ಕೆ ಬಂದರು.

ಆವಾಗಾ ಮೊದಲು ಹೊಸೂರಿನಲ್ಲಿ ಪ್ರಧಾನ ವೆಂಕಟಪತ್ತೈಯ್ಯನ ಕರತರಶಿ ಚೆಂನ್ನಪ್ಪೈಯ್ಯನ ಬದಲುಮಾಡಿ ವೆಂಕಟಪತ್ತೈಯ್ಯನವರಿಗೆ ಪ್ರಾಧಾನ್ಯಾ ಕೊಟರು.

ಶಕೆ ೧೬೭೭ನೆ ಧಾತು ಸಂವತ್ಸರದಲ್ಲೂ ಪುನ್ನೆದಿಂದ ಬಾಜೀರಾಯರ ಮಗ ಬಾಳಾಜೀರಾವು, ನಾನಾಸಾಹೇಬರು, ಯಿವರ ತಂಮ್ಮ ರಘುನಾಥರಾಯರು, ನಾನಾರಾಯರ ಮಗ ವಿಶ್ವಾಸರಾಯರು, ಮಾಧವರಾಯರು, ನಾರಾಯಣರಾಯರು, ನಾನಾರಾಯರ ಚಿಕ್ಕಪ್ಪ ಮಣಾಜೀಪಂತರ ಮಗ ಸದಾಶಿವರಾಯರು, ಬಾಹೂ ಸಾಹೇಬರು ಸಹಾ ೧,೦೦,೦೦೦ ಕುದುರೆ ೧,೦೦,೦೦೦ ಪಾಯಿದಳದಿಂದ ಪಟ್ಣದ ಬಳಿಗೆ ಬಂದು ಯಿಳಿದೂ ಮೊಹರ್ಚೆ ಹಾಕಿ ಲಡಾಯಾಗಿ ಬೀನೀ ಯಸ್ನಾಜೀ ಪಂತರು ಬಲವಂತರಾಯ ಸಹಾ ಪಟ್ಣದ ಕೋಟೆವಳಗೆ ಬಂದು ಮಧ್ಯಸ್ತವಾಗಿ ೩೨,೦೦,೦೦೦ ರೂಪಾಯಿ ಖಂಡಣೆಯಾಗಿ ೬,೦೦,೦೦೦ ರೂಪಾಯಿಗೆ ಜವಾಹಿರಿ ವಗೈರೆ ಸಂದಾಯವಾಗಿ ಬಾಕಿ ೨೬,೦೦,೦೦೦ ರೂಪಾಯಿಗೆ ಹಣವಿಲ್ಲದೆ ಶೀಮೆ ವೋಲು ಯಿಟ್ಟರು. ವಿವರ :

ನಾಗಮಂಗಲ	೧	ಚನ್ನರಾಯಪಟ್ಣಣ	೧	ಬೇಲೂರು	೧
ಕಡಬ	೧	ಹೊಂನವಳ್ಳಿ	೧	ಚಿಕ್ಕನಾಯ್ಕನಳ್ಳಿ	೧
ಬಾಣಾವರ	೧	ಕಡೂರು	೧	ಹಾರನಹಳಿ	೧
ಕಿಕ್ಕೇರಿ	೧	ತುರುವೆಕೆರೆ	೧	ಹುಲಿಯೂರ ದುರ್ಗ	೧
ಕಂದಿಕೆರೆ	೧				

ಈ ಹದಿಮೂರು ತಾಲ್ಲೋಕು ಸಹಾ ವೋಲು ಯಿಟ್ಟು ಹಣ ತೀರಿದ ಬಳಿಕ ತಾಲ್ಲೋಕುಗಳ ಬಿಟ್ಟುಕೊಡುವುದಾಗಿ ಕರಾರು ಮಾಡಿ ನಾನಾರಾಯರು ಫವುಜು ಸಹಾ ಪುನ್ನೆಗೆ ಹೊರಟುಹೋದರು. ಯಿವರ ಕಡೆಯಿಂದಾ ರಾಘೋ ಬಾಬಾಜಿ ಯಂಬ ಸರದಾರ ೬,೦೦೦ ಕುದುರೆ ಸಹ ಈ ದೇಶದಲ್ಲಿ ಯಿದ್ದುಕೊಂಡು ಶಖೆ ೧೬೭೯ನೆ ಯೀಶ್ವರ ಸಂವತ್ಸರದಲ್ಲೂ ಅವರವರಿಗೆ ಅಲ್ಲಲ್ಲಿ ಜಗಳವಾಗುತ್ತಾ ಯಿತ್ತು. ದಿಂಡುಗಲ್ಲಿಂದಾ ಹೈದರಲ್ಲಿ ಖಾನ ಬಹದರರೂ ಬಂದು ಪಟ್ಣದ ಬಳಿ ಮರಾಟೀರು ಮೊಹರ್ಚೆ ಹಾಕಿ ಯಿದ್ದ ಸ್ಥಳಾ ನೋಡಿ ಆ ವ್ಯಾಳೆಯಲ್ಲಿ ನಂಮಗ ಕರಸಬೇಕಾಗಿ ಯಿತ್ತು. ಬಂದರೆ ತಮಾಸೆ ನೋಡುವಿರೀ ಯೆಂದೂ ಹೇಳಿ ಮೊದಲಿನ ತನಿಖೆ ಹಣ ಸತ್ಯಮಂಗಲಕ್ಕೆ ಕೊಡದೆ ತಂನ್ನ ಕಡೆಗೆ ಕೊಡುವಂತೆ ತಾಕೀತಿಗಳಂನ್ನು ಬರಶಿಕೊಂಡು ಸತ್ಯಮಂಗಲಕ್ಕೆ ಬಂದು ದಳವಾಯೀ ದೇವರಾಜೈಯ್ಯನವರ ಭೇಟಿ ಮಾಡಿಕೊಂಡೂ ಖಂಡೇರಾಯನ ಮುಖಾಂತ್ರ ದಳವಾಯರಿಗೆ ಹೇಳಿ ಸ್ವಸ್ಥಾ ಮಾಡಿಕೊಂಡು ಹಣ ಬರುವಂತೆ ಹರಮಮಾಡಿ ಪುನಹಾ ದಿಂಡುಗಲ್ಲಿಗೆ ಹೊರಟು ಹೋದರು.

ತರುವಾಯ ಶೀಮೆಯಿಂದ ಪಟ್ಣಕ್ಕೆ ಹಣವೂ ಹರದೂ ಬರದೆ ಜಾನೆಯೂ ಬತ್ತಿ ಬಂದು ಫವುಜು ಸರದಾರರೂ ಸಹಾ ಯಲ್ಲಾ ಕೋಟೆವಳಗೆ ಜಮಾಯಿಸಿ ಚಿಕ್ಕ ಕ್ರಿಷ್ಣರಾಜ ಒಡೆಯರವರು ಕರಾಚೂರಿ ನಂಜರಾಜೈಯ್ಯ ಅರಶಿನವರುನ ಸಹಾ ಮನೆ

ಬಾಗಿಲುಗಳಲ್ಲಿ ಶಿಪಾಯೇರು ದಂಗೇ ಮಾಡುವುದರಿಂದ್ದಾ ಹೈದರಲ್ಲಿಖಾನ ಬಹದರರ ಕರಸಲಾಗಿ ಯಿವರು ಸತ್ಯಮಂಗಲಕ್ಕೆ ಬಂದು ದಳವಾಯಿಯವರನ್ನು ಪಟ್ಣಕ್ಕೆ ಬರಹೇಳಿ ಕರದಲ್ಲಿ ಅವರು ವಪ್ಪದೆ ಹೋದಕಾರಣ ಹೊರಗೆ ಗುಟ್ಟೆ ಮೇಲೆ ತೋಫುಗಳ ಯಿಟ್ಟು ಸತ್ಯಮಂಗಲದ ಕೋಟೆಗೆ ಹೊಡೆದು ವುದ್ಯೋಗಸ್ತರನ್ನೆಲ್ಲ ಬೆದರಿಸಲಾಗಿ ಅವರು ಭಯಪಟ್ಟು ದಳವಾಯೀರಿಗೆ ತಿಳೀ ಹೇಳಿ ದಳವಾಯೀರು ಸಹಾ ಪಟ್ಣಕ್ಕೆ ಹೊರಟುಬಂದರು.

ಆವಾಗಾ ಪಟ್ಣದಿಂದ್ದಾ ಕರಾಚೂರಿ ಅರಶಿನವರು ಮೈಸೂರು ಬಳಿಗೆ ಬಂದ್ದು ದಳವಾಯಿರ ಭೇಟಿಮಾಡಿಕೊಂಡು ಅಂಣತಮ್ಮಂದಿರ ಮನಸ್ತಾಪ ಸಮಾಧಾನವಾಗಿ ಪಟ್ಣಕ್ಕೆ ಬಂದರು.

ಪಟ್ಣದಲ್ಲಿ ಚಿಕ್ಕ ಕ್ರಿಷ್ಣರಾಜ ವಡೇರಿಗೆ ಶಿಖಾಸರಾ ಹಾಕಿ ದೊಡ್ಡ ವೋಲಗವಾಗಿ ದಳವಾಯಿರು ಅರಶಿನವರು ಕರ್ತರಿಗೆ ಸಹಾ ಪುನಹಾ ಕಷಾಯತ್ತಿದ್ದವಿಟು ಹೈದರಲ್ಲಿಖಾನ ಬಹದರರೂ ವುಭಯ ಕಾವೇರಿ ಮಧ್ಯೆ ಮಹಾರ್ನವುಮೀ ಮಂಟಪದ ಬಳಿ ದಂಡು ಯಿಳಿದರು.

ಶಖೆ ೧೬೮೦ನೆ ಬಹುಧಾನ್ಯ ಸಂವತ್ಸರದ ಜೇಷ್ಠ ಶುಕ್ಲ ೨ರಲ್ಲು ದಳವಾಯಿ ದೇವರಾಜೈಯ್ಯನವರು ವೈಕುಂಠ ಪ್ರವೇಶವಾದರು.

ತರುವಾಯ ಮರಾಟೀರ ಕಡೆ ಸರದಾರನೂ ತಮಗೆ ವೋಲು ಕೊಟ್ಟ ಶೀಮೆ ಮಟ್ಟಿಗೆ ಹದ್ದಿನಲ್ಲಿ ಯಿಡದೆ ಮತ್ತು ಶೀಮೇನೆಲ್ಲಾ ಠಾಣ್ಯ ಹಾಕುತ್ತಲೂ ಪಟ್ಣದ ಕಾವೇರಿ ನದೀ ಪರ್ಯಂತ್ರ ದವುಡು ಮಾಡುತ್ತಾ ಶೀಮೇಯಲ್ಲಿ ಹಂಗಾಮು ಹೇರಳವಾಗಿ ಸರಕಾರಕ್ಕೆ ಹಣಕಾಸುಗಳು ಬಾರದೆ ನಿಂತುಹೋಗಿ ಖಜಾನೆ ಹಣವೆಲ್ಲಾ ತಿರಚನಾಪಲ್ಲಿ ಮೋಹೀಮು ಸಲಾಬತ್ತು ಜಂಗರು ನಾನಾರಾಯರ ಪೇಷ್ಕಶಿಗೆ ಸಹಾ ಖರ್ಚಾಗಿ ಕರ್ತರು ಅರಶಿನವರು ಅಂತಃಪುರ ಕಲಹದಿಂದ ಫವುಜಿನ ಸರದಾರರೆಲ್ಲಾ ಪಟ್ಣದ ಕೋಟೆಯಲ್ಲಿ ಯಿಳಕೊಂಡು ನಿತ್ಯಚರಿಯಲ್ಲೂ ಕರ್ತರ ಮನೆ ಅರಶಿನವರ ಮನೆಬಾಗಿಲುಗಳಲ್ಲಿ ದಂಗೆ ಕುಳಿತು ಮನೆ ವಳಕ್ಕೆ ನೀರು ಬಿಡದೆ ಕೇವಲ ಮುಚ್ಚಿಡು ಆದ್ದರಿಂದಾ ನಾಲ್ಕು ದಿನ ಮೂರು ದಿನಕ್ಕೆ ವಂದಾವರ್ತಿ ಹೈದರಲ್ಲಿಖಾನರು ಕರ್ತರ ಬಳಿಗೂ ಅರಶಿನವರ ಬಳಿಗೂ ಬರುತ್ತಾ ಯಿದ್ದರು.

ಆ ಬಳಿಕ ಕರ್ತರು ಅರಶಿನವರು ಸಹಾ ಹೈದರಲ್ಲಿ ಖಾನರಿಗೆ ಹೇಳಿದ್ದು. ಯೀ ಫವುಜಿನ ಡಂಗೆ ಯಾವ ರೀತಿಯಲ್ಯಾದರೂ ಸಾಹಸಮಾಡಿ ನೀವು ನಿರ್ವಹಿಸಿ ಮಾತಿನ ವಾಶಿ ಮಾಡಿಕೊಳಬೇಕೆಂದೂ ಬಹುತರವಾಗಿ ಸಮುದಾಯಿಸಿ ಹೇಳಿದ್ದರಿಂದ್ದ ಅದಕ್ಕೆ ಯಿವರು ಜವಾಬು ಕೊಟ ವಿವರಾ. ಯಿದು ವಿಷಮಸಂಧಿ ವ್ಯಾಳೆ. ಖಾವಂದರಾದವರು ತಾವೆ ಯಿದಕ್ಕೆ ಸಾಹಸ ಮಾಡಿದರೆ ಚಂನವಲ್ಲದೆ ನಂಮಂತ್ಥಾ ಚಾಕರವಾನರು ಮಾಡುವ ಕೆಲಸವಲ್ಲಾ, ಅಥವಾ ನಾವು ಯೀ ಕೆಲಸಕೆ ವುದ್ಯುಕ್ತವಾಗಿ ನಿಂತರೆ ಸರ್ವೇ ಜನಕ್ಕೂ ದ್ವೇಷಿಗಳಾಗಿ ಕ್ಷುದ್ರಗಳಿಂದಾ ತಂಮ್ಮ ಚಿತ್ತಕ್ಕೂ ನಂಮ್ಮಲ್ಲಿ ಬ್ಯಾಸರ ಹುಟ್ಟೆ ಆಬಂದರ

ಆಗುವದೇ ವಿನಹಾ ಮತ್ತೊಂದಲಾವೆಂದು ಹೈದರಲ್ಲಿ ಖಾನರು ಹೇಳಲಾಗಿ ಅದೇನೂ ಕೆಲಸವಿಲ್ಲಾ, ನಾವು ಮಾಡುವ ಕೆಲ್ಸ ನಂಮ್ಮ ಮಗನಾಗಿ ಯಿರುವ ನೀನೇ ಮಾಡಬೇಕೆಂದು ವುಭಯ ಖಾವಂದರು ಹೇಳಿದಲ್ಲಿ ಆ ರೀತಿಗೆ ಕರಾರುನಾಮೆ ಬರಶಿಕೊಡಬೇಕೆಂದು ಹೈದರಲ್ಲಿಖಾನರು ಕೇಳಿದರಾಗಿ ಕರಾರುನಾಮೆ ಬರಶಿಕೊಟ ವಿವರ. ತಾವು ತಂಮ್ಮ ಕುಟುಂಬ ಮಕ್ಕಳು ವಿನಹಾ ನಿಂತ ಜನ ಯಾರನ ಯಾರನ ನೀವು ದಂಡನೆ ಕಂಡನೆ ಮಾಡಿದಾಗ್ಯೂ ನಾವು ಆ ಮಾತಿಗೆ ಬರತಕ್ಕದಿಲ್ಲಾ ಯಂಬದಾಗಿ ನೀವು ವುಭಯತ್ರ ಖಾವಂದರು ಕರಾರುನಾಮೆ ಬರಶಿ ದಸಕತ್ತು ಮೊಹರ ಮಾಡಿಕೊಟ್ಟಿದ್ದರಿಂದಾ ಹೈದರಲ್ಲಿ ಖಾನರು ವಪ್ಪಿಕೊಂಡರು.

ಆ ಬಳಿಕ ಶಕೆ ೧೬೮೦ನೆ ಬಹುಧಾನ್ಯ ಸಂವತ್ಸರದಲ್ಲು ಹೈದರಲ್ಲಿ ಖಾನರು ನಿತ್ಯದಲ್ಲೂ ಕರ್ತರ ದೇವಡಿಗೆ ಬಂದು ಕೂಡುತ್ತಾ ಸರ್ವಾಧಿಕಾರವಂನ್ನು ತಂಮ್ಮ ಬಗೆ ಖಂಡೇರಾಯರಿಗೆ ಮೊಕರೂರು ಮಾಡಿಸಿ ಸಕಲ ಪಣಕಟ್ಟುಗಳ ಅಧಿಕಾರಿಗಳಂನ್ನು ಹಿಡಿತರಿಶಿ ನಯದಿಂದಲೂ ಮೊಂಡರಿಗೆ ಮೇಖು ಛಡಾಯಿಸಿ ಕೊರಡೆಗಳ ಯಿಂದಲೂ ಸಹಾ ಗರಮಾಗರಮೀಮಾಡಿ ಜನರಿಂದ ನಜರಾನೆ ತೆಗೆದು ಹೇರಳ ಹಣ ಕಾಸುಗಳ ಜಮಮಾಡಿ ಫವುಜಿನ ಡಂಗೆಯೆಬ್ಬಿಸಿ ಕರಾರು ಬಾಕಿ ಲೆಕ್ಕಾ ಮಾಡಿಶಿ ಕೆಲವು ಹಣ ಭಟವಾಡೆ ಮಾಡಿಶಿ ೪೦೦೦ ಕುದುರೆ ಬರತರಫು ಮಾಡಿಶಿ ૩೦೦೦ ಕುದುರೆ ಸರಕಾರದಲ್ಲಿ ಚಾಕರಿಯಿಟ್ಟು ಷರಾರತ್ತು ಮಾಡಿದವರು ಭರತರ್ಫಾಗಿ ಹೋಗುವಲ್ಲಿ ಮಾರ್ಗದಲ್ಲಿ ಅವರನೆಲ್ಲಾ ಲೂಟೀ ಮಾಡಿ ಭರತರ್ಫು ಕುದುರೆ ಪೈಕಿ ಕೆಲವೂ ತಂಮ್ಮ ಕಡೆ ಲಾರಣಾ ಬರಶಿಕೊಂಡು ಪಟ್ಟಣದ ಕೋಟೆ ಬಾಗಿಲುಗಳ ಚವುಕೀ ಪಹರೇಕ್ಕೆ ತಂಮ್ಮ ಕಡೆ ಬಾರಿನ ಜವಾನರನ ಯಿಟ್ಟು ಬಂದೋಬಸ್ತುಮಾಡಿ ಕೋಟೆಯಲ್ಲಿ ಯಿದ್ದ ಫವುಜುನೆಲ್ಲಾ ತೆಗೆದು ಕಡತನಾಳು ಕೆಂಗಾಳು ಬೋರೆ ಮೇಲೆ ಯಿಳಿಸಿದರು.

ಪ್ರಾಕು ಕಲ್ಲೀಕೋಟೆ ಕಡೆ ಹಣದ ವರಾತದ ಬಗ್ಯೆ ಹೋಗಿ ಯಿದ್ದ ಹರಿಶಿಂಗು ಜಮಾದಾರನು ಅಲ್ಲಿನ ಹಣ ವಸೂಲು ಮಾಡದೆ ಅವನಾಶಿ ಬಳಿ ಬಂದು ಯಿಳದನಾಗಿ ಹೈದರಲಿಖಾನರು ತಂಮ್ಮ ಭಾವಮೈದ ಮೊಕದುಂ ಸಾಬರ ಸಂಗಡ ಬಾರು ೨,೦೦೦ ಕುದುರೆ ೫೦೦ ಸಹಾ ಕೊಟ್ಟು ಕಳುಹ್ಸಿ ಅವನ ದಂಡು ಲೂಟಿಸಿ ಹರಿಶಿಂಗನ ಹೊಡೆದುಹಾಕಿ ಬಹುಧಾಂನ್ಯ ಸಂವತ್ಸರದಲ್ಲು ಕುದುರೆ ૩೦೦ ಬಂದೂಕ ೧,೦೦೦ ತೋಫು ૩ ಆನೆ ೧ ಹ್ಯಾರಳ ಹಣಕಾಸು ಸಂಜಾಮು ಸಹ ತೆಗೆದುಕೊಂಡು ಆ ಪೈಕಿ ಕುದುರೆ ೧೫ ತೋಫು ૩ ಆನೆ ೧ ಸಹಾ ಸರಕಾರಕ್ಕೆ ಕೊಟ್ಟರು.

ಆ ಬಳಿಕ ಕರಾಚೂರಿ ನಂಜರಾಜೈಯ್ಯ ಅರಶಿನವರು ತಂಮ ಖಾಸಗೀ ಖರ್ಚು ಬಗ್ಯೆ ನೌಕರೀ ಬಗ್ಯೆ ಸಹಾ ಕುದುರೆ ೧,೦೦೦ ಬಾರು ૩,೦೦೦ ಸಹಾ ಯಿಟ್ಟು ನೌಕರಿ ಮಾಡುತ್ತೇವೆಂದು ಬಹದರವರ ಮುಖಾಂತ್ರ ಸವಾಲುಮಾಡಿ ૩,೦೦,೦೦೦ ವರಹಾಕ್ಕೆ ಜಹಗೀರು ಕರಾರು ಮಾಡಿಕೊಂಡದೂ

೧ ನಾಮಕಲು	೧ ಬೆಟದಪುರ	೧ ಅನಂತಗಿರಿ
೧ ಪರಮರೆ	೧ ಅರಕಲಗೂಡು	೧ ಮೈಸೂರು
೧ ಶ್ಯಾದಮಂಗಲ	೧ ಕೊಣನೂರು	೧ ಕಟೆಮಳಲವಾಡಿ
		೧ ಪಿರೀಪಟ್ಣ

ಯೀ ಹತ್ತು ತಾಲೋಕು ೩೦೦೦೦೦ ವರಹಾದ ರಾಜ್ಯ ಜಹಗೀರು ಕೊಡಿ ಮೈಸೂರು ಕೋಟೆಯಲ್ಲಿ ಯಿರಕೆಲಸವಿಲ್ಲ ಕೊಣನೂರಲ್ಲಿ ಅರಶಿನವರ ಯಿರುವಂತ್ತೆ ಮೊಕರೂರು ಮಾಡಿ ಕಳುಹಿಸ್ತರು.

ಸದರಿ ಶಖೆ ೧೬೮೦ನೆಯ ಬಹುಧಾಂನ್ಯ ಸಂವತ್ಸರದಲ್ಲೂ ಹೊಸಕೋಟೆಯಲ್ಲಿ ಮರಾಟೇರ ಕಡೆ ಮುಕುಂದರಾಯನೆಂಬುವನು ಯಿದ್ದು ಕೊಂಡು ೫೦೦ ಕುದುರೆಯಿಂದ ಯರಡು ದಿನ ಮೂರುದಿನಕೆ ವಂದೊಂದು ತಡವೆ ತಪ್ಪದೆ ಬೆಂಗಳೂರು ಪ್ಯಾಟೆ ಹೊಕ್ಕು ಲೂಟಿಸುತ್ತಾ ಬೆಂಗಳೂರು ಶೀಮೆನೆಲ್ಲಾ ತಾರಾಜು ಮಾಡಿ ಕೋಟೆಗೆ ರಸ್ತು ಬಿಡದೆ ಬಹಳ ಮುಗ್ಗಡೆಯಾದ್ದರಿಂದ ಪಟ್ಟಣದಿಂದ ಬರಕ್ಕಿ ವೆಂಕಟರಾಯರ ಮಗ ಶ್ರೀನಿವಾಸರಾಯರು ಕರ್ತರ ಅರಶಿನವರ ಅಪ್ಪಣೆ ಪ್ರಕಾರ ಹೋಗಿ ಬೆಂಗಳೂರಿಗೆ ಹೋಗದೆ ಹೊರಬ್ಬಾಸೆ ಹೊಸಕೋಟೆಯಿಂದ ಬೆಂಗಳೂರಿಗೆ ಬರುವ ಮಾರ್ಗದಲ್ಲಿ ೪೦೦ ಜನ ಸವಾರರಿಂದ ಅಡಗಿಯಿದ್ದು ಅರುಣೋದಯಕ್ಕೆ ಹೊಸಕೋಟೆಯಿಂದ ಮುಕುಂದರಾಯ ೫೦೦ ಕುದುರೆ ಸಹಾ ಬೆಂಗಳೂರು ಮಾರ್ಗವಾಗಿ ಬರುವಲ್ಲಿ ನಾಲ್ಕು ಕಡೆಯಿಂದಲೂ ಅವನ ಮೇಲೆ ಕುದುರೆ ಚಲಾಯಿಸಿ ಹೊಡೆದು ಅವರು ಬೆಂನ್ನು ಕೊಡಲಾಗಿ ಬೆಂನಟ್ಟಿ ಹೊಸಕೋಟೆ ಪೇಟೆವಳಗೂ ಹೊಕ್ಕು ಕಡದು ಬಹುಜನಕ್ಕೆ ಜಖಂಮಾಡಿ ನೂರಾರು ಕುದುರೆ ಹಿಡಿದುಕೊಂಡೂ ಪತ್ತೆಮಾಡಿ ಬೆಂಗಳೂರಿಗೆ ಬಂದು ದಾಖಲಾದರು.

ಬರಕ್ಕಿ ಶ್ರೀನಿವಾಸರಾಯರು ಸದರಿ ಬಹುಧಾಂನ್ಯ ಸಂವತ್ಸರದಲ್ಲೂ ಬೆಂಗಳೂರಿನಲ್ಲಿ ನಿಂತ್ತು ಸದರಿ ತಂದ ಕುದುರೆ ಸಹಾ ಯಿಂನೂರು ಕುದುರೆ ಜಮಾಯಿಶಿ ನಿತ್ಯದಲ್ಲೂ ಹೊಸಕೋಟೆ ಪ್ಯಾಟೆ ಲೂಟಿಸುತ್ತಾ ಹೊಸಕೋಟೆಗೆ ಬಹಳ ವುಬ್ಬುಸಾ ಮಾಡಿದ ಕಾರಣ ಮುಕುಂದರಾಯನು ಮರಾಟೀರ ಬಗೆ ಮಿರ್ಜೀ ಗೋಪಾಲಹರೆ ಮಲ್ಲಾರಾವು ರಾಸ್ತೆ ಸಹಾ ಪಟ್ಣ ಶೀಮೆ ಆರ್ಕಾಟಶೀಮೆ ಚವುಥಾಯ ಹಣದ ನಿಮಿತ್ಯಾ ಯೀ ಪ್ರಾಂತ್ಯದಲ್ಲಿ ಸಂಚರಿಸುತ್ತಾ ಯಿದ್ದವರಿಗೆ ಫಿರ್ಯಾದು ಹೇಳಿ ಅವರ ಫವುಜು ಕುದುರೆ ೪೦,೦೦೦ ವಿಸ್ತಾರವಾಗಿ ಪಾಯದಳ ಸಹಾ ತಂದೂ ಬೆಂಗಳೂರಿಗೆ ಮುತ್ತಿಗೆ ಹಾಕಿದ್ದರಿಂದ ಶ್ರೀನಿವಾಸರಾಯರು ಬಹಳ ಲಡಾಯಿ ಮಾಡುತ್ತಾ ಯಿದ್ದರು.

ಆವಾಗ ಸದರಿ ಫವುಜು ಮದ್ದೂರು ಚಂನಪಟ್ಣ ಸಹಾ ಠಾಣೆ ಹಾಕಿ ಬೆಂಗಳೂರು ಲಡಾಯಿ ಆಗುವಲ್ಲೂ ಕೋಟೆಯಲ್ಲಿ ಧಾನ್ಯ ಮುಗಿದು ಜನಕ್ಕೆ ಅಂನಕ್ಕೆ ಬಹಳ ಗೋಷ್ಟಾದ ಕಾರಣ ಪಟಣಕ್ಕೆ ಬಂದ ವಿವರ ಬರಕ್ಕಿ ಶ್ರೀನಿವಾಸರಾಯರು ಪಟ್ಣಕ್ಕೆ ಬಂದು ಕೋಟೆಯಲ್ಲಿ ರಸ್ತು ಮುಗೀತು ತಿಂಡಿಗೆ ಯಿಲ್ಲದೆ ಜನ ನಿಲ್ಲದು ನಾನಂತೂ ಕೋಟೆ ವಪ್ಪಿಸಿ

ಹೆಣಮೋರೆಯಿಂದಾ ಖಾವಂದಿರ ಯೆದುರಿಗೆ ಬರತಕ್ಕದಿಲ್ಲಾ ರಸ್ತಿನ ಕುಮುಕು ಜಲದು ಆಗದಿದ್ದರೆ ಬೆಂಗಳೂರು ಕೋಟೆಯು ಸಂಗಡ ತಂನ ಶರೀರ ಸಹಾ ನಿಂಮ್ಮ ಯಿಲಾಖೆ ಯಿಂದಾ ಸ್ವಲ್ಪದಲ್ಲೆ ದೂರವಾಗುತೆಂದು ಕರ್ತರಿಗೆ ನಂಜರಾಜೈಯ್ಯ ಅರಶಿನವರಿಗೆ ಸಹಾ ಅರ್ಜಿ ಬಿಂನವತ್ತಲೆ ತಂಮ್ಮ ತಂದೆ ವೆಂಕಟರಾಯರಿಗೆ ಕಾಗದ ಸಹಾ ಲಕ್ಕೋಟು ೩ ಕ್ಕು ಗುಟ್ಟು ಕಡ್ಡಿ ಕಟ್ಟಿ ಕಳುಹಿಸ್ತ ಕಾರಣ ಯಂಕಟರಾಯರು ವುಭಯಖಾವಂದರಿಗೂ ಹೇಳಿಕೊಂಡು ಸರ್ವಸಾಹಸಾ ಮಾಡಿ ನೋಡಿದಾಗ್ಯೂ ಬೆಂಗಳೂರಿಗೆ ರಸ್ತು ಕುಮುಕ್ಕು ಸಹಾ ಪಟ್ಣದಿಂದಾ ಆಗುವ ಮಟ್ಟು ಯಾವ ಸರದಾರನ ವಿಚಾರಿಶಿದಾಗ್ಯೂ ನಿರ್ವಾಹ ಕಾಣಲಿಲ್ಲವಾಯಿತು.

ಆವಾಗ ಬರಕ್ಕಿ ವೆಂಕಟರಾಯರು ಯೋಚನೆ ಮಾಡಿ ಹೈದರಲ್ಲಿಖಾನ ಬಹದರರು ಯಿಳಿದು ಯಿದ್ದ ಬಳಿಗೆ ಬಂದರಾಗಿ ಬಹದರರೂ ಯದುರಿಗೆ ಬಂದು ಕರೆದುಕೊಂಡು ಹೋಗಿ ಮಸಲತ್ತಿನ ಮೇಲೆ ದಿಂಬಿಗೆ ವರಗಿಸಿ ಕುರುಡಿಶಿ ಅದಬಿನಿಂದಾ ತಾನು ಕುಳಿತು ಹೇಳಿದ ವಿವರ. ತಾವು ತಂದೆಗಳು ನಾನು ಮಗ. ಹೀಗೆ ಯಿರುವಲ್ಲಿ ಕೆಲಸವಿದ್ದರೆ ನಂನ್ನನೆ ಕರೆಸಬೇಕು. ಅಲ್ಲದೆ ತಾವೂ ಬರುವದೂ ವಿಹಿತವೋ ಯೇನೋ ಯಂದು ಕೇಳಲಾಗಿ ವೆಂಕಟರಾಯರು ಜವಾಬು ಕೊಟ್ಟಿದ್ದು. ನಮಗೆ ನೀವೇ ಹಿರೇ ಕೊಮಾರರು. ಶ್ರೀನಿವಾಸರಾಯರು ಚಂದಾರಾಯರು ಕಿರಿಯ ಮಕ್ಕಳು. ಆದ್ದರಿಂದ ನಿಂಮ ತಂಮ್ಮ ಶ್ರೀನಿವಾಸರಾಯನ ಬೆಂಗಳೂರಿಂದ್ದಾ ನಿರ್ವಹಿಸಿ ವುಳಿಸಬೇಕೋ ಬಿಡಬೇಕೋ ನಿಮಗೆ ಯುಕ್ತ ತೋರಿದಂತೆ ಮಾಡಬೇಕೆಂದು ಹೇಳಲಾಗಿ, ನಂಮ್ಮ ಅಂಣ ಶ್ರೀನಿವಾಸರಾಯನ ಕ್ಷೇಮಲಾಭ ನಂನದೇ ವಿನಹಾ ಬೇರೆ ಅಲ್ಲಾವಾಗಿ ಬದುಕಿದರೆ ಅವರು ನಾನೂ ಯಿಬ್ಬರು ನಿಮಗೆ ಮಕ್ಕಳು. ಅವರಿಗೆ ಮೋಸ ಬರುವಲ್ಲಿ ನಂನ್ನ ಶರೀರ ಯಿಡತಕ್ಕದಿಲ್ಲಾ. ನಾನೂ ಅವರೂ ಯಿಬ್ಬರೂ ಅಳಿಯಲೀ ಉಳಿಯಲೀ ಸಹಾ ಯೋಗಕ್ಷೇಮವೇ ವಿನಹಾ ವಬ್ಬರು ಅಳಿದು ವಬ್ಬರು ವುಳಿಯುವದು ಯಿಲ್ಲವೆಂದು ಕರಾರು ಹೇಳಿ ವಸ್ತ್ರಾಭರಣಗಳಿಂದ ಸಂನ್ಮಾನಾಮಾಡಿ ವೆಂಕಟರಾಯರನ ಮನೆಗೆ ಕಳುಹಿಸಿಕೊಟ್ಟರು.

ಆ ಬಳಿಕ ಆ ದಿವಸ ಹೈದರಲ್ಲಿಖಾನ ಬಹದರರು ಮಸಲತ್ತಿಗೆ ಕುಳಿತು ಮೊಕದುಂಸಾಬರು ಕಬೀರಬೇಗರು ಸಹಾ ಯೋಚಿಸುವಲ್ಲಿ ಬೆಂಗಳೂರು ಕಾರ್ಯದ ಬಗ್ಯೆ ಮೊದಲು ಚಂನಪಟ್ಣ ಮದ್ದೂರು ಸ್ವಾಧೀನವಾದಲ್ಲದೆ ಮುಂದಣ ಯತ್ನ ಸಾನುಕೂಲವಾಗದೂ ಯೆಂದೂ ಪ್ರಸ್ತಾಪವಾದಲ್ಲಿ ಸಾರಂಗಿ ವೆಂಕಟಗಿರೈಯ್ಯನೆಂಬ ಬ್ರಾಂಹ್ಮಣನು ಹುಲೀಯೂರು ದುರ್ಗದ ಗುರಿತನಮಾಡುತ್ತಾ ಯಿದ್ದು ಅಲ್ಲಿನ ಯಿನ್ನೂರುಮಂದಿ ಸಹಾ ಮರಾಟೇರ ಭಯಕ್ಕೆ ಗಡೀಬಿಟ್ಟು ವೋಡಿ ಆ ದಿವಸವೇ ಪಟ್ಣಕ್ಕೆ ಬಂದು ಕರ್ತರ ಅರಶಿನವರ ದೇವಡೀ ಬಳಿಯಿಂದ ಬಹದರರ ಬಳಿಗೆ ಬಂದು ಕರ್ತರ ಯದುರಿಗೆ ನಿಂತಿದ್ದನಾಗಿ ಅವನು ಜವಾಬು ಹೇಳಿದ್ದು, ಚಂನ್ನಪಟ್ಣದಲ್ಲಿ ತಂಮ್ಮ ಅಬಚೀ ಮಗ ಹಿರೀ ಪಂತ ಅಲಂಗದ ಶಾನುಭಾಗ ಯಿದ್ದನಾಗಿ ಅವನ ಮುಖಾಂತ್ರ ಚಂನಪಟ್ಣಾ ತಾನು ಸಾಧಿಸುತ್ತೇನೆಂದು ಅರಿಕೆ ಮಾಡಿದನು. ಆ ಮಾತಿನ ಮೇಲೆ ಕೆಲವು

ಫವುಜು ಮೊಕದುಂಸಾಬರು ಕಬೀರಬೇಗರು ವೆಂಕಟಗಿರ್‍ಯೆಯನ ಸಹಾ ಕಳುಹಿಸಿದ್ದರಿಂದ ಯಿವರು ರಾತ್ರೆವೇಳೆ ಹೋಗಿ ಕೋಟೆ ಒಳಗಣವರು ಬೆಫಾಮಾಗಿ ಯಿದ್ದದ್ದರಿಂದಾ ಕೋಟೆಗೆ ಯೇಣೀ ಹಾಕಿ ಯಿಳೇ ಬಿದ್ದು ಕೋಟೆ ತೆಗೆದುಕೊಂಡರು. ಕೋಟೆವಳಗೆ ಜಮೆಯಾದ ಸುತ್ತನ ಗಡಿಗಳ ಯಿರಸಾಲು ೨,೦೦,೦೦೦ ವರಹಾ ಪರ್ಯಂತ್ರ ಕೈವಶವಾಯಿತು. ಅಲ್ಲಿಂದಾ ಮರುದಿನ ಸ್ವಾರಿ ಬಂದಲ್ಲಿ ಮದ್ದೂರು ಠಾಣೇದವರು ಹೊರ ಹೊರಟು ಅವರಿವರಿಗೆ ಜಗಳವಾಗಿ ಕೋಟೆ ಮಂದಿ ಮುರಕಡದೂ ಅವರು ಕೋಟೆ ಹೋಗುವಲ್ಲಿ ಸಂಮಿಶ್ರವಾಗಿ ಕುದುರೆಯವರು ಹೊಕ್ಕು ಮದ್ದೂರು ಠಾಣೆ ಬಹದರರ ಕೂಟವಾಯಿತು.

ಆ ಬಳಿಕ ಹೈದರಲ್ಲಿಖಾನ ಬಹದರವರು ಯೀ ವರ್ತಮಾನ ಕೇಳಿ ಪಟ್ಣದಿಂದ ಹೊರಟು ಬೆಂಗಳೂರು ಬಳಿಗೆ ಬಂದು ಗೋಪಾಲಹರಿ ರಾಸ್ತೆದವರು ದಂಡಿನ ಮೇಲೆ ಷಬಕೂನುಮಾಡಿ ಮರುದಿನ ವಿಭಾಮ ಕೊಡಲಾಗಿ ಅವರವರಿಗೆ ಲಡಾಯಿ ಹತ್ತಿ ಬೆಂಗಳೂರು ಮುತ್ತಿಗೆ ತೆಗೆದು ಮರಾಟೇರ ಫವುಜು ಬಹದರನ ದಂಡಿನ ಬೆಂನ್ನು ಅಟ್ಟಿ ಬರುವಲ್ಲಿ ಚಂನಪಟ್ಣದ ಗಿಡದಲ್ಲಿ ತಂದು ಝಾಡೇಜಂಗಲ್ ತಿರುಗಿಸುತ್ತಾ ಧಣಿದು ಯಲ್ಲ ಮಕಾಂ ಮಾಡಿ ಠಾವುಟಿಗಳ ಹಾಕುತ್ತಲೆ ಅಲ್ಲಿ ಗುಟ್ಟೆಗಳ ಮೇಲಣಿಂದಾ ತೋಪಿನ ಗುಂಡು ಬಾಣಗಳ ಸಹಾ ಹೊಡೆದು ಯಬ್ಬಿಸುತ್ತಾ ತಿಂಗಳುವರೆ ಪರಿಯಂತ್ರ ಯದುರು ನಿಲ್ಲದೆ ನಿಲ್ಲುಗೊಡದೆ ವಂದೊಂದು ವೇಳೆ ಯೆದುರು ಬಿದ್ದು ಹೊಡೆಯುತ್ತಾಲೂ ಮರಾಟೆ ಫವುಜನೆಲ್ಲಾ ಹಲಾಖು ಮಾಡಿ ಕೊನೆಗೆ ಪ್ರಾಕಿನ ಬಾಕಿ ಹಣ ಖಂಡಣೆ ಸಹಾ ೩೦ ಲಕ್ಷ ರೂಪಾಯಿ ಮೇಲೆ ಚುಕಾಯಿಸಿ ಯೀ ಹಣಕ್ಕೆ ಪಟ್ಣದಿಂದ ಅಸಲೆಕಾರ ನಜರಾಣೆ ಮೊ ಮಲಕಿ ಅರವಾಸಿಗೆ ಬಹದರು ಜಾಮೀನಾಗಿ ಮರಾಟೇರ ದಂಡಿನ ವರ್ತಕರಂನ್ನು ಪಟ್ಣಕ್ಕೆ ಕರೆದುಕೊಂಡು ಪಟ್ಣಕ್ಕೆ ಬಂದರು.

ಆವಾಗಾ ಮರಾಟೇರ ಕಡೆಯಿದ್ದ ಶೀಮೇನೆಲ್ಲಾ ಬಿಡಿಸಿಕೊಂಡು ಪಟ್ಣದ ಕೂಟವಾಯಿತು. ಪಟ್ಣದಲ್ಲಿ ನವಾಬ ಹೈದರಲ್ಲಿಖಾನ ಬಹದರಾಯಂಬದಾಗಿ ಕರ್ತರು ಅರಶಿನವರು ಸಹಾ ಕಿತಾಬು ನವಬತ್ತು ಸಹಾ ಕೊಟ್ಟು ಕರಾಚೂರಿ ನಂಜರಾಜೈಯ್ಯ ಅರಶಿನವರು ತಾಜೀಮು ಸಹಾ ಕೊಟ್ಟು ಬಹು ಸಂನ್ಮಾನಾ ಮಾಡಿದರು.

ಮತ್ತೆ ನಾಲ್ಕು ತಿಂಗಳ ಮೇಲೆ ನವಾಬರು ಸವಾಲು ಮಾಡಿದ್ದು. ಸದರಿ ಕಾರ್ಯಭಾಗಗಳಿಗೆ ಜಾಸ್ತಿ ಫವುಜು ಯಿಟ್ಟೆವೆಂಬ ಹಾಗೂ ಖಂಡಣೆ ಬಾಕಿಗೆ ವರ್ತಕರ ಗುಮಾಸ್ತೇರು ವರಾತಾಮಾಡುತ್ತಾರೆಂಬ ಹಾಗೂ ಸವಾಲು ಮಾಡಿದ್ದರಿಂದಾ ಯೀ ಬಗ್ಯೆಲ್ಲಾ ಅರವಾಸಿ ರಾಜ್ಯ ನವಾಬರಿಗೆ ಸರಕಾರದಿಂದ ತನಖೆ ಬರದುಕೊಟ್ಟರು.

ಶಕೆ ೧೬೮೧ನೆ ಪ್ರಮಾತ್ತಿ ಸಂವತ್ಸರದ ಜೇಷ್ಟಮಾಸದಲ್ಲು ಕರಾಚೂರಿ ಅರಶಿನವರು ಕರ್ತರ ಸಂಗಡ ಮನಸ್ತಾಪದಿಂದ ತಂಮ್ಮ ಕಡೆ ಫವುಜು ಬರಕ್ಕಿ

ಶ್ರೀನಿವಾಸರಾಯರೂ ತಂಮ್ಮ ಕುಟುಂಬ ಸಹಾ ಪಟ್ಣದಿಂದಾ ಮೈಸೂರಿಗೆ ರವಾನೆ ಮಾಡಿಬಿಟ್ಟರು.

ಆವಾಗಾ ಕಣಿವೆ ಕೆಳಗೆ ಚಂದಾಸಾಬರ ಯರಡನೆ ಮಗ ನವಾಬ ಜಿಯಾಹುದ್ದವಲಾ ಅಲ್ಲಿ ರಾಜಾ ಖಾಚ ಕಮಕಜಂಗ ಬಹದರು ಫುಲಚೇರಿಯಿಂದ ಫಸ ಅರೆಮಾನಿ ಸವಾರು ೨,೦೦೦ ಗೋರಾ ಸೋಜರು ೪,೦೦೦ ಬಾರು ೬೦೦೦ ಮಯಿ ತೋಫುಖಾನೆ ಸರಂಜಾಮು ಮೂಶೆ ಚಬೀನಾ ಯಂಬ ಸರದಾರು ಸಹಾ ಹೊರಟು ಗೂಡಲೂರು ಧಾರಣ ಪಟ್ಟಣವಂನ್ನು ತೆಗೆದುಕೊಂಡು ಮೈಲಾಪುರೀ ಚಂನಪಟ್ಟಣಕ್ಕೆ ಮುತ್ತಿಗೆ ಹಾಕಿ ಬಹಳ ಲಡಾಯಿ ಮಾಡಿ ಜಂಗಿನಲ್ಲಿ ಚಬಿನಾ ಮ್ರುತವಾಗಿ ನಿಂತ ಸರದಾರುದಾರರ ಪೈಕಿ ಕೆಲವರು ಚಂನ್ನಪಟ್ಟಣದ ಮಂಮದಲ್ಲಿ ಖಾನಗೆ ವಳಬಿದ್ದು ಕೆಲವು ಸರದಾರರಿಗೂ ಅಲ್ಲಿರಜಾಖಾನರಿಗೂ ಅಂತಃಕಲಹ ಬಿದ್ದು ಸದರಹೂ ಫವುಜು ಹಿಂದಿರಿಗಿ ಪುಲಚೇರಿಗೆ ಸಾಗಿಹೋಯಿತು. ತರುವಾಯ ಮಂಮದಲ್ಲಿ ಖಾನನು ತಂನ ಫವುಜು ಯಿಂಗರೇಜಿ ಬಹದರರ ಫವುಜು ಸುದಾ ಹೊರಟು ಪುಲಚೇರಿಗೆ ಹೋಗಿ ಮುತ್ತಿಗೆ ಹಾಕಿದುದರಿಂದ ಫುಲಚೇರಿಯವರಿಗೆ ಕುಮುಕಾಗಿ ನವಾಬರು ಪಟ್ಣದಿಂದ ಕುದುರೆ ೩,೦೦೦ ಕೆಲವೂ ಪಾಯಿದಳ ಅಹಷಾಂ ಬಾರು ತೋಫು ೧೨ ಸಹಾ ಮೊಕದಂ ಅಲ್ಲಿ ಖಾನರನು ದಿವಾನ ವೆಂಕಟರಾಯನ ಸಹಾ ಕಳುಹಿಸಿಕೊಟ್ಟರು.

ಮೊಕದುಂಸಾಬರು ಹೋಗುವ ಮಾರ್ಗದಲ್ಲಿ ಪಾಳ್ಯಗಾರನಿಂದ ಆನೆಕಲ್ಲು ಠಾಣೆ ಹಾಕಿ ತನ್ನ ತಂಮ್ಮ ಸೈದು ಯಿಸ್ಮಾಲು ಅಲ್ಲಿ ಯಿಟ್ಟು ಮುಂದೆ ಹೋಗುತ್ತಾ ಬಾರಾಮಾಲು ತಾಲೋಕಿನಲ್ಲಿ ಕಡಪೆಯವರ ಬಗೆ ಕುದುರೆ ೧೦೦೦ ಅಜೀಜಖಾನನೆಂಬ ಸರದಾರನ ಹೊಡೆದು ಬಾರಾಮಹಲು ಠಾಣೆ ಹಾಕಿ ತ್ಯಾಗ್ಗಡದ ಹಾದೀಯಲ್ಲಿ ಪುಲಚೇರಿ ಬಳಿಗೆ ಶೇರಲಾಗಿ ಅಲ್ಲಿಯು ಯಿವರ ಯತ್ನವೇನೂ ನಡೆಯದೆ ಯಿವರು ನವಾಬರ ಅಪ್ಪಣೆ ಮ್ಯಾಲೆ ಹಿಂದಕ್ಕೆ ಬಂದ ಬಳಿಕ ಪುಲಚೇರಿ ಕೋಟೆಯಲ್ಲಿ ರಸ್ತು ಮುಗದು ಅಲ್ಲಿ ರಾಜಾಖಾನರು ಜಹಜಿನ ಮೇಲೆ ಹೊರಟು ಹೋದರಾಗಿ ಕವುಲಿನ ಮೇಲೆ ಯಿಂಗರೇಜ ಬಹದರರ ಕೂಟವಾಯಿತು.

ಕರಾಚೂರಿ ನಂಜರಾಜ್ಜೈಯ್ಯ ಅರಶಿನವರು ಮೈಸೂರಲ್ಲಿ ಯಿದ್ದು ಕೊಂಡು ಫವುಜು ಜಮಾಯಿಸಿ ದವಲತ್ತಿಗೆ ಮೋಸಾ ತರುತ್ತಾರೆಂದು ಖಂಡೇರಾಯರು ಪ್ರಧಾನ ವೆಂಕಟಪತ್ಯೆಯ್ಯ ಲಾಲಾರಾಜರು ವಗೈರೆ ಕರ್ತರಿಗೆ ದುರ್ಬೋಧನೆ ಸುಳುಮಾತುಗಳು ಬೋಧಿಶಿ ಕರ್ತರಿಂದ ನವಾಬರಿಗೆ ಹೇಳಿಸಲಾಗಿ ಮಯೆ ಫವುಜು ನವಾಬರು ಹೊರಟು ಮೈಸೂರಿಗೆ ಮುತ್ತಿಗೆ ಹಾಕಿ ಮೂರು ನಾಲ್ಕು ತಿಂಗಳು ಲಡಾಯ ಮಾಡಿ ಆ ಬಳಿಕ ಸಲ್ಲಾ ಆಗಿ ಲಕ್ಷ ಶೀಮೆಗೆ ಸರಿಯಾಗಿ ಕಟ್ಟೆಮಳಲವಾಡಿ ಪಿರಿಪಟ್ಣ ಕೊಣನೂರು ಬೆಟ್ಟದಪುರ ಅರಕಲಗೂಡು ಸಹಾ ಅರಶಿನವರಿಗೆ ಕೊಟ್ಟು ಅರಶಿನವರವ ಕೊಣನೂರಿಗೆ ಕಳುಹಿಸಿ ಮೈಸೂರಲ್ಲಿ ಕರ್ತರು ಠಾಣೆ ನವಾಬರು ಪಟ್ಣಕ್ಕೆ ಬಂದರು.

ಕರಾಚೂರಿ ನಂಜರಾಜೈಯ್ಯ ಅರಶಿನವರು ಬರಕ್ಕಿ ವೆಂಕಟರಾಯರು ಚಂದ್ರರಾಯನ ಸಹಾ ಪಟ್ಣಕ್ಕೆ ಕಳುಹಿಸಿ ಶ್ರೀನಿವಾಸರಾಯನ ಸಂಗಡ ಕರೆದುಕೊಂಡು ಶಕೆ ೧೬೮೧ನೆ ಪ್ರಮಾದಿ ಸಂವತ್ಸರದಲ್ಲು ಕೊಣನೂರಿನಲ್ಲಿ ನಿಂತರು.

ಕೆಲವು ದಿನದ ಮೇಲೆ ಮೈಸೂರು ಮೊಹಿಂಮು ಮುಂತ್ತಾಗಿ ಬಹಳ ಖರ್ಚಾಯಿತು; ಯಿಂನ್ನು ಶೀಮೆ ಬೇಕೆಂದು ನವಾಬರು ಸವಾಲು ಮಾಡಲಾಗಿ ಖಂಡೇರಾಯ ಪ್ಪವದೆ ಅಡ್ಡಸಾಲುಮಾಡಿದಾಗ್ಯೂ ಕರ್ತರು ಸ್ಯಾದುಮಂಗಲ ಪರಮರೆ ನಾಮಕಲ್ಲು ವಗೈರೆ ಅರಶಿನವರ ಕಡೆಯಿಂದ ನಾಲ್ಕು ತಾಲೋಕು ನವಾಬರಿಗೆ ಕೊಟ್ಟದ್ದರಿಂದ ಖಂಡೇರಾಯರಿಗೆ ಮನಸ್ತಾಪು ಹುಟ್ಟಿತು.

ತರುವಾಯ ಶಕೆ ೧೬೮೨ ವಿಕ್ರಮ ಸಂವತ್ಸರದಲ್ಲೂ ಮರಾಟೇರ ಕಡೆ ಬೀನೀ ಯಸ್ಸಾಜೀಪಂತ ೨೦೦೦೦ ಫವುಜಿನಿಂದ ದೇವಂಡನಹಳ್ಳಿಯಿಂದ್ದಾ ಬಳ್ಳಾಪುರದ ಪ್ರಾಂತ್ಯದಲ್ಲಿ ಯಿಳಿದು ಯಿದ್ದದ್ದರಿಂದ ಪಟ್ಣದಲ್ಲಿ ಖಂಡೇರಾಯ ಪ್ರಧಾನ ವೆಂಕಟಪತೈಯ್ಯ ನರಸುಂಹ್ವದಾಸರು ತಮ್ಮ ಲಾಲಾದಾಸರು ಕೊಳಾಗಾಲದ ವೀರಂಣ್ಣಶೆಟ್ಟಿ, ಅಂಣ್ಣಯ್ಯಶಾಸ್ತ್ರಿ ಪ್ರಭೃತಿಗಳೆಲ್ಲಾ ಯೋಚಿಸಿ ನವಾಬರು ಬಹು ಪ್ರಬಲವಾದರು ಶೀಮೆನೆಲ್ಲಾ ಆಕ್ರಮಿಸಿದರು. ಯೀತನ ಮುಗಿಶಿಕೊಂಡಲ್ಲದೆ ದವಲತ್ತು ನಿಲ್ಲುವದಿಲ್ಲವೆಂತೆಂದು ಚಿಕ್ಕ ಕೃಷ್ಣರಾಜ ಒಡೆಯರ ಕುಟುಂಬ ದೊಡಂಮ್ಮನವರಿಗೂ ಸಹ ಬೋಧಿಶಿ ಮೊದಲು ಪಟ್ಣಕ್ಕೆ ಬಂದಿದ್ದ ಪುನೇದ ಕಡೆ ಬುಕಣೋಜೀಯಂಬ ಸಾವಕಾರನ ಮುಖಾಂತ್ರ ಯಿಸ್ಸೋಜಿಪಂತನ ಕಡೆ ೬,೦೦೦ ಫವುಜು ಕುಮುಕು ಕರಶಿ ಯಿದ್ದರು.

ಸದರಿ ಶಕೆ ೧೬೮೨ನೆ ಪ್ರಮಾದಿ ಸಂವತ್ಸರದ ಶ್ರಾವಣ ಶು ೧೩ರಲ್ಲೂ ಕಾವೇರಿ ಪೂರ್ನಪ್ರವಾಹ ಬಂದಿರುವಾಗ ವುದಯವಾದ ಯೇಳು ಯೆಂಟು ಘಳಿಗೆ ವ್ಯಾಳೆಯಲ್ಲಿ ಪಟ್ಣದ ಮೂಡ್ಲು ಬಾಗಿಲು ಹಾಕಿಶಿ ಕೋಟೆಯ ಮೇಲಣಿಂದ ತೋಪುಗಳಂನ್ನು ವುಭಯ ತಾವೇ ಆ ಮಧ್ಯದಲ್ಲಿ ಯಳದು ಯಿದ್ದ ನವಾಬರು ಫವುಜಿನ ಮೇಲೆ ಗುಂಡುಗಳ ಷರುವುಮಾಡಿ ಶೇತುವೆ ಬಾಗಿಲಿಂದಾ ಕೆಲವೂ ಫವುಜು ಹೊರಟು ಕರೀಗಟ್ಟದ ಬಳಿಯಲ್ಲಿ ನವಾಬರ ಬಗೆ ಸ್ವಲ್ಪ ಬಾಂ ಅಮನ ವೈಲ್‌ವೆಂಬ ಫಿರಂಗಿ ಸಹಾ ಹೊಡದುಹಾಕಿದರು.

ಆ ದಿವಸ ಗುಂಡು ಷುರುವಾಗುತ್ತಲೆ ನವಾಬರು ತಕ್ಷಣ ಹುಡುಕಿಶಿ ಪಬ್ಬ ಅಂಬಿಗರವನು ಶಿಕ್ಕಿದನಾಗಿ ಅವಂನ್ನು ಹಿಡಿತರಿಶಿ ತಂಮ್ಮ ಯದರಿಗೆ ನಿಲ್ಲಿಶಿಕೊಂಡು ಹೊಳೇಬಳಿ ಯಿದ್ದ ಹರಗೋಲುಗಳೆಲ್ಲಾ ಖಂಡೆರಾಯ (ಕಂಡೆರಾಯ) ಕೋಟೆ ವಳಿಕ್ಕೆ ಹಾಕಿಶಿ ಯಿದ್ದನಾಗಿ ವಂದ ಭಾರಿ ಬಿದರೆ ಟೊಕರೆ ಮಾತ್ರ ಬಿದ್ದು ಯಿದ್ದದಂನ್ನು ತರಿಶಿ ದಂಡಿನ ಪರಾಲಿಗಳು ಹರಿಶಿ ತಂಮ್ಮ ಯೆದುರಿಗೆ ಆ ಟೊಕರಿಗೆ ಚಂಮಡೆ ಮಚಾಯಿಶಿ ಯಿದ್ದ ನಗದು ಜವಾಹಿರಿ ಸಾಗಿದಷ್ಟು ಹಣದ ಥೈಲಿಗಳ ಕಟ್ಟಿಶಿ ಅಸ್ತಮಾನವಾಗುತ್ತಲೆ ೨೦ ಕುದುರೆ ಸಹಾ ಸದರು ಜವಾಹಿರಿ ಸಾಗಿದಷ್ಟು ಹಣ ತಂಮ್ಮ ಸೋದರಮಾವ ಯಿಬ್ಬರಾಯಂಸಾಬರು ಯಿವರ ಮಗ ಹುಸೇನ್ನು ಸಾಬ ದಿಂಡುಗಲ್ಲು ವೆಂಕಟಪ್ಪ

ವುತ್ತಮಪಾಳ್ಯದ ವೆಂಕಟರಾವು ತೋಷಿಖಾನೆ ಶ್ರೀನಿವಾಸ ಜೀವಾಜೀ ಮೀರ ಅಲ್ಲಿರಜಾಖಾನರು ಸಹಾ ಆ ಟೋಕರ ವಬ್ಬ ಅಂಬಿಗನಿಂದ್ದಾ ಶುಕ್ರವಾರದ ಪ್ಯಾಟೆ ಕಡಗಿನಲ್ಲಿ ನದಿ ದಾಟಿಹೋದರು. ಆ ಬೆಳಿಗ್ಗೆ ಖಂಡೆರಾಯರು ಹೊರಗೆ ಬಂದು ನವಾಬರ ಕುಟುಂಬವನ್ನು ಯಂಟು ವರುಷದ ಹುಡುಗ ಟೀಪ್ಪೂಸುಲತಾನರನೂ ಸಹಾ ಕೋಟೆವಳಕ್ಕೆ ಕರೆದುಕೊಂಡು ಹೋಗಿ ಕೈದುಮಾಡಿ ಯಿಟ್ಟರು.

ನವಾಬರು ಹೊರಟುಹೋಗುತ್ತಾ ಹಾರೋಹಳಿ ಮಾರ್ಗವಾಗಿ ಅಲ್ಲಿನ ಅಮೀಲ ವೆಂಕಟಪತ್ತೈಯ್ಯ ಕೂಡಿಯಿಟ್ಟ ಯಿರಸಾಲು ಸಹ ತೆಗೆದುಕೊಂಡು ಬೆಂಗಳೂರ ಬಳಿಗೆ ಹೋಗಿ ಮೊದಲೆ ನವಾಬರ ಅಧೀನವಾಗಿ ಬೆಂಗಳೂರು ಕಿಲ್ಲೆದಾರಿ ಮಾಡುತ್ತಿದ್ದ ಕಬೀರಬೇಗರಂನ್ನು ಹೊರಕ್ಕೆ ಕರಶಿಕೊಂಡು ಆಲೋಚನೆಮಾಡಿ ಯಿಸ್ತಕಬಾಲಗೆಯಂದು ಕೋಟೆವಳಗಣ ಮಂದಿಯೆಲ್ಲಾ ಹೊರತೆಗೆದು ಪರಸ್ತಳದ ಮಂದಿ ಕೋಟೆವಳಗೆ ಕಾಯಾಮಾದ ಸ್ತಳದ ಮಂದಿ ಜ್ವತೆಗೆ ನಿಲಿಸಿ ಪರಸ್ತಳದ ಮಂದಿ ಮಿಲಾವೆಮಾಡಿ ಪೇಟೆಕಾವಲಲ್ಲಿ ಯಿಟ್ಟು ತಾವೂ ಕೋಟೆವಳಗೆ ಹೋಗಿ ಬದಸ್ತೂರು ಆನೆಕಲ್ಲನ್ನು ಬಲಕಾಯಿಸಿ ಆ ಬಳಿಕ ಬೆಂಗಳೂರು ಪ್ಯಾಟೆ ಮಾತಬರ ವರ್ತಕರ ಕರಶಿ ಸಮಜಾಯಿಷೀಯಿಂದ ಪತ್ರಗಳ ಬರಕೊಟ್ಟು ಲಕ್ಷಾಂತ್ರ ವರಹಾ ಕಡಾ ಮಾಡಿ ಜಮಾಯಿಸುತ್ತಾ ಮೊದಲು ಫುಲಚೇರಿ ಕಡೆಗೆ ಕಳುಹಿಸಿಯಿದ್ದ ಮೊಖದುಂಸಾಬರು ದಿವಾನ ವೆಂಕಟರಾಯರು ಫವುಜು ಸಹಾ ಹಿಂದಕ್ಕೆ ತಂಮ್ಮ ಬಳಿಗೆ ಕರಶಿದರು.

ಪಟ್ಣದಿಂದ ಖಂಡೇರಾಯರು ಫರವಾನೆಗಳು ತಂನ ಹೆಸರ ಪತ್ರಗಳ ಸಹಾ ಗಡಿಗಳಿಗೆಲ್ಲಾ ವೋಡಿಶಿ ಹೈದರನಾಯಕ ಸ್ವಾಮಿದ್ರೋಹಾಮಾಡಿ ವೋಡಿ ಬಂದು ಯಿದ್ದನಾಗಿ ಹುಡುಕಿ ಶಿಕ್ಕಿದ ಬಳಿ ಹಿಡಿದು ಪಟ್ಣಕ್ಕೆ ಕಳುಹಿಸಿದಲ್ಲಿ ಹಿಡಿದವರಿಗೆ ಮಾನ ಬಹುಮಾನ ಮಾಡುತ್ತೇವೆಂದು ಬರಶಿ ಕಳುಹಿಸಲಾಗಿ ಯೀತ ಶಿಕ್ಕದೆ ಬೆಂಗಳೂರು ಶೇರಿದ್ದಾಗಿ ತಿಳಿದು ಮರಾಟೇರ ಫವುಜಿಗೆ ಬೀನೀ ಯಸ್ನಾಜೀ ಪಂಡಿತರಿಗೆ ಬರದು ಫುಲಚೇರಿಯಿಂದಾ ಬರುವ ಮುಕದುಂಸಾಬರನ ಫವುಜಂನ್ನು ಅಡಗಟ್ಟುವಂತೆ ಮಾಡಿದ ವಿವರ.

ಆವಾಗ ಶೀರ್ಯದಿಂದ ದಿಲಾಫರಖಾನ ನವಾಬರ ಅಳಿಯ ತಿಮಿರಿ ಜಹಗಿರುದಾರ ಮೀರ ಫವುಜುಲ್ಲಾಖಾನರು ಬೆರೋಜಿ ಯಿದ್ದು ಕೋಲಾರದಿಂದ ಬಂದರಾಗಿ ಅವರಿಗೆ ಬಹುಮರಿಯಾದೆ ಸಂಬಳ ತಿಂಗಳು ವಂದಕೆ ರೂಪಾಯಿ ಯಿದಲದೆ ವಂದು ಲಕ್ಷ ರೂಪಾಯಿ ಜಹಗೀರು ಕೊಡುತ್ತೇವೆಂದೂ ಮೊಕರೂರು ಮಾಡಿ ಬೆಂಗಳೂರಲ್ಲಿ ನವಾಬ ಹೈದರಲ್ಲಿಖಾನರು ನೌಕರಿಯಿಟ್ಟುಕೊಂಡರು.

ಶಕೆ ೧೬೮೨ ವಿಕ್ರಮ ಸಂವತ್ಸರದಲ್ಲು ಮೊಕದುಂಸಾಬರು ಅಂಚಟಿ ದುರ್ಗದ ಬಳಿಗೆ ಬರುವಾಗ್ಯೆ ಯಿಸ್ನಾಜಿಪಂತರ ಕಡೆ ಆನಂದಗೋಪಾಲೈಯ್ಯನೆಂಬ ಸರದಾರರಿಂದ ಫವುಜು ಸುದಾ ಸುತ್ತಿಕೊಂಡು ಯಿರಲಾಗಿ ಬೆಂಗಳೂರಿಂದಾ ಫವುಜುಲ್ಲಾಖಾನರು

ಕಬೀರಬೇಗರು ಸಹಾ ಕೆಲವು ಮಂದಿ ಕುದುರೆ ತೆಗೆದುಕೊಂಡು ಹೋಗಿ ಲಡಾಯಾಗಿ ಮೊಕದುಂಸಾಬರು ದಿವಾನ ವೆಂಕಟರಾಯರು ಅವರ ಸಂಗಡ ಫವುಜು ಸುದಾ ಬೆಂಗಳೂರು ದಾಖಲಾದರು.

ಸದರಿ ಯಿಸ್ಲಾಜಿ ಪಂತರು ಪುನ್ನೇಕೆ ಹೋಗುವ ಜರೂರು ನಿಮಿತ್ಯ ಪಟ್ಣದ ಕರ್ತರಿಂದ್ದಾ ೩೦,೦೦೦ ರೂಪಾಯಿ ತೆಗೆದುಕೊಂಡು ಬಾಬಾ ಮಹಲು ಕ್ರಿಷ್ಣಗಿರಿ ತಂಮ್ಮ ಕಡೆಗೆ ಬರಶಿಕೊಂಡು ದೇಶಕ್ಕೆ ಹೊರಟು ಹೋದರು.

ಯೀ ವಿಕ್ರಮ ಸಂವತ್ಸರದ ಕಾರ್ತಿಕದಲ್ಲೂ ಮೊಕದುಂಸಾಬರು ಫವುಜು ಸಹಾ ಬೆಂಗಳೂರಿಗೆ ಬರುತ್ತಾಲೆ ಬೆಂಗಳೂರು ಕಿಲ್ಲೆದಾರಿ ಬಗ್ಯೆ ಯಿಬ್ಬರಾಂ ಸಾಬರನ ಯಿಟ್ಟು ಅವರಿಗೆ ಹಾಜರು ಯಿದ್ದ ಫವುಜು ಕುದುರೆ ೩,೦೦೦ ಬಾರು ೬,೦೦೦ ಕರ್ನಾಟಕ ೪,೦೦೦ ಸಹಾ ವಟ್ಟುಮಾಡಿ ಕೆಲವು ಫವುಜು ಮೀರ ಅಲ್ಲಿರಜಾಖಾನರ ಸಂಗಡ ಕೊಟ್ಟು ತಾಲೋಕುಗಳ ಸಾಧಿಸುವ ಹಾಗೂ ಕೆಲವೂ ಜಮಾಯತ್ತು ಕಣಿವೆ ಕೆಳಗಣ ಸತ್ಯಮಂಗಲ ಮುಂತಾದ ತಾಲೋಕಗಳ ಸಾಧಿಸುವ ಹಾಗೂ ಕಳುಹಿಸಿ ಗೆಜ್ಜಲಹಟ್ಟಿ ಕಣಿವೆ ಬಳಿ ಸ್ವಲ್ಪ ಜಮಾಯತನ್ನುಯಿಂದ ನವಾಬರು ಬಂದು ಯಿಳಿದು ಯಿದ್ದರು.

ಸದರಿ ವಿಕ್ರಮ ಸಂವತ್ಸರದ ಪುಷ್ಯದಲ್ಲೂ ಖಂಡೇರಾಯನು ಪಟ್ಣದಿಂದಾ ಫವುಜು ಸುದಾ ಹೊರಟು ನಂಜನಗೂಡು ಹರದನಹಳ್ಳಿ ಬಳಿಗೆ ಹೋಗಿ ನವಾಬರ ಫವುಜನ್ನು ಹೊಡೆದು ವೋಡಿಸ್ತನು.

ಅಲ್ಲಿಂದಾ ಕೋಣನೂರಿಗೆ ಕರಾಚೂರಿ ನಂಜರಾಜೈಯ್ಯ ಅರಶಿನವರ ಬಳಿಗೆ ನವಾಬರು ಬಂದು ತಂಮ್ಮ ಅಪರಾಧವನ್ನು ಕ್ಷಮೆಮಾಡಿ ರಕ್ಷಿಸಬೇಕೆಂದು ಶರಣಾಗತರಾಗಿ ಅಡ್ಡಬಿದ್ದಲ್ಲಿ ಮಹಾರಾಜಶ್ರೀಯವರಿಗೆ ಕಟಾಕ್ಷ ಬಂದು ಚಿಂತಿಸಬೇಡ ಯೇಳೂ ಯಂದು ಅಭಯ ಕೊಟ್ಟು ಯಬ್ಬಿಸಿ ನೀನು ನಂಮ ಚಾಕರನಾಗಿ ನಂಮಿಂದಾ ಬೆಳೆದು ನಮಿಗೆ ದ್ರೋಹ ಯೋಚಿಸಿ ಮೈಸೂರು ಮ್ಯಾಲೆ ನೀನೂ ಗುಂಡು ಹೊಡದದ್ದರಿಂದಾ ನಿಂನ ಚಾಕರ ಖಂಡೆರಾಯಾ ನಿಂನ ಮೇಲೆ ಗುಂಡು ಹೊಡದಾಯಂದೂ ಅರಶಿನವರು ಮಂದಲಿಸಲಾಗಿ ನವಾಬರು ಯದ್ದು ಪುನಹಾ ಕೈಜೋಡಿಸಿಕೊಂಡೂ ಹಿಂದೆ ತಾನು ನಡದ ದುಷ್ಕ್ರತಕ್ಕೆ ತನಗೆ ಶಿಕ್ಷೆ ಆಯಿತ್ತು ಮುಂದೆ ಜಂನ್ಮಾವಧಿಗು ತಮಗೆ ದ್ರೋಹಮಾಡತಕ್ಕದಿಲ್ಲಾವೆಂದು ಪ್ರಮಾಣಪೂರ್ವಕ ಹೇಳಿಕೊಂಡರು. ಅಲ್ಲಿ ಆವಾಗ ಯಿದ್ದ ಸಾಮಾಜೀಕರು ಬರಕ್ಕಿ ಶ್ರೀನಿವಾಸರಾಯರು ಸಹಾ ವಿಂಗಡವಾಗಿ ಅರಶಿನವರಿಗೆ ಬಹುತರವಾಗಿ ಹೇಳಿ ಸಹಸಾ ಯೀತನ ನಂಬಬಾರದು ಯಿಲ್ಲೆ ಕೈದುಮಾಡಬೇಕೆಂದು ಬೋಧಿಸ್ತರು.

ಆದಾಗ್ಯೂ ಮಹಾರಾಜಶ್ರೀ ಕರಾಚೂರಿ ನಂಜರಾಜೈಯ್ಯ ಅರಶಿನವರು ಬಹು ಸತ್ಯಸಂಧರು ಧರ್ಮಿಷ್ಟರು ಏದವಾಖ್ಯ ಪ್ರಮಾಣಜ್ಞರಾದ್ದರಿಂದಾ ಶರಣಾಗತನಾದಂತ್ತಾವನ ಮೇಲೆ ಮೋಸದ ಯೋಚನೆ ಯಾವ ಜೀವವೂ ತಂಮ್ಮಲ್ಲಿ ಬರತಕ್ಕದಿಲ್ಲವೆಂದೂ ಹೇಳಿ ನವಾಬರಿಗೆ ವಸ್ತ್ರಾಭರಣಗಳಂ ಕೊಟ್ಟು ತಂಮ್ಮ ಬಳೀಯಿದ್ದ ಫವುಜು ಸುದಾ ಯೀತನ

ತೈನು ಕೊಟ್ಟು ತಾವೂ ಸಂಗಡ ಹೊರಟು ಗಡಿಗಳೆಲ್ಲಾ ನವಾಬರಿಗೆ ಠಾಣೆಕೊಡುವುದೆಂದು ಪತ್ರಗಳ ಬರಶಿಕೊಟ್ಟು ಹೊರಟು ಬಂದರಾಗಿ ಕಟ್ಟೆಮಳಲವಾಡಿ ಠಾಣೆ ತೆಗೆದುಕೊಳ್ಳುತ್ತಾಲೆ ಪಟ್ಣದಿಂದಾ ಖಂಡೆರಾಯ ಫವುಜನೂ ತೆಗೆದುಕೊಂಡು ಸಾಮಾಜೀಕರ ಸಹಾ ಲಡಾಯಿಗೆ ಬಂದನು.

ಅರಿಶಿನವರು ತಂಮ್ಮ ಮಾತ ಕೇಳಲಿಲ್ಲವೆಂದು ನಾಖುಷಿಯಿಂದ ಬರಕ್ಕಿ ಶ್ರೀನಿವಾಸರಾಯರು ಹೊರಟು ಹೋಗಿ ಪಟ್ಟಣಕೆ ದಾಖಲಾದರು.

ಆವಾಗಾ ನವಾಬರು ಪಿತೂರಿ ಕಾಗದಗಳ ತಂಮ್ಮ ಹೆಸರಿನಲ್ಲಿ ಅರಶಿನವರ ಹೆಸರಿನಲ್ಲಿ ಸಹಾ ಬರದು ಸಕಲ ಸಾಮಾಜಿಕರೆಲ್ಲಾ ತಮಿಗೆ ವಳಬಿದ್ದು ಖಂಡೆರಾಯನ ಹಿಡಿದುಕೊಡುವುದಕ್ಕೆ ವುದ್ಯುಕ್ತರಾಗಿ ಅಂಚೆಗಳ ತಂದಿರುವುದಾಗಿಯೂ ಹಿಡಿಕೊಟ್ಟು ಬಳಿಕ ಮತ್ತೂ ಅವರಿಗೆಲ್ಲಾ ವಿಶೇಷವಾಗಿ ತಾವು ಕೊಡುವುದಾಗಿಯು ಆಣೆ ಭಾಷೆಗಳಿಂದ ಬರದ ಸುಳ್ಳುಕಾಗದಗಳು ಚೋರ ಪಹರೆಯಲ್ಲಿ ಶಿಕ್ಕಿದಂನ್ನು ಖಂಡೆರಾಯ ನೋಡಿಕೊಂಡು ಗಾಬರಿಯಾಗಿ ಠಾಕಣಾಸವಾರನಾಗಿ ತಕ್ಷಣವೆ ವಂಟಿ ಕುದುರೆಯಿಂದ ಪಟ್ಣಕ್ಕೆ ವೋಡಿ ಹೋದರು. ಯೀ ಬಾತಮೀ ತಿಳಿದು ನವಾಬರು ಪಟ್ಣದ ದಂಡಿನ ಮೇಲೆ ಬಿದ್ದು ಲೂಟಿಸಿ ತೋಫುಗಳು ಮುಂತಾಗಿ ಕೈವಶಮಾಡಿಕೊಂಡು ಪತ್ತೆ ಮಾಡಿದರು.

ಸದರಿ ವಿಕ್ರಮ ಸಂವತ್ಸರದ ಮಾಘ.... ಲ್ಲೂ ಪತೆಯಾಗಿ ನಂಜರಾಜೈಯ್ಯ ಅರಶಿನವರನ ಕಟ್ಟೆಮಳಲವಾಡಿ ಬಳೀಯಲ್ಲಿ ನಿಲ್ಲಿಸಿ ನವಾಬರು ಪಟ್ಣದ ಬಳಿಗೆ ಬಂದು ಯೀ ಮಾಘ ಬ ೧೩ ಶಿವರಾತ್ರೆ ದಿವಸ ಶೇತುವೆ ಬಾಗಿಲು ಬಳೀಯಿಂದ ಜಮೀಯತಂನ್ನು ಲೂಟಿಮಾಡಿಹೋದರು.

ಅಲ್ಲಿಂದ ಹೊರಟು ಗೆಜ್ಜಲಹಟ್ಟಿ ಘಾಟಿ ಯಿಳಿದು ಸತ್ಯಮಂಗಲ ಮುಂತ್ತಾದ ಕಣಿವೆ ಕೆಳಗಣ ಶೀಮೆಯೆಲ್ಲಾ ಸಾಧಿಶಿ ಬಹು ಜನಕೆ ನಜರಾಣೆಗಳು ಮಾಡಿ ಹಣ ಹ್ಯಾರಳ ಸಂಪಾದಿಶಿ ಫವುಜು ವಿಸ್ತಾರಾಮಾಡಿಕೊಂಡು ಮಧ್ಯೆ ಗೋಪ್ಯದಿಂದ ಜನರ ಕಳುಹಿಸಿ ಪಟ್ಣದಲ್ಲಿ ಯಿದ್ದ ಸಾಮಾಜೀಕರಿಗೆಲ್ಲಾ ಲಂಚಗಳ ಹಾಕಿ ಸ್ವಾಧೀನ ಮಾಡಿಕೊಂಡರು.

ಅಲ್ಲಿಂದಾ ವಿಷು ಸಂವತ್ಸರದಲ್ಲಿ ಪಟ್ಣದ ಬಳಿಗೆ ಬಂದು ಯಿಳಿದು ಕರ್ತರಿಗೆ ಹೇಳಿಕಳುಹಿಸ್ತ ವಿವರ. ಬೆವಕೂಫ್ ಲಂಚಗುಂಡಿ ಚಾಕರರು ಬಹಳ ಜನ ಯಿಧಾರೆ. ಅವರಿಂದ ನಿಮಗೆ ಕ್ಷೇಮ ತಟ್ಟತಕ್ಕದಿಲ್ಲ. ಅದಾಗ್ಯೂ ನಿಂಮ್ಮ ಚಾಕರಿಯಿದ್ದಂತೆ ಮಾಡಿಕೊಳ್ಳತಕ್ಕದ್ದು. ನಮ್ಮ ಸವಾಲಿನ ವಿವರ. ಖಂಡೆರಾಯ ನಂಮ ಚಾಕರನೇ ಹೊರ್ತು ನಿಂಮ್ಮ ಚಾಕರನಲ್ಲವಾಗಿ ಆತಂನ ನಮಿಗೆ ವಪ್ಪಿಶಿಕೊಡುವ ಕಲಂ ೧ ಯಿದಲ್ಲದೆ ನಿಂಮ್ಮ ಸರಕಾರದಿಂದ ನಮಿಗೆ ಹಿಂದಿನ ಫವುಜಿನ ಸಂಬಳ ವಗ್ಯೆರೆ ಹ್ಯಾರಳ ಹಣ ಬರಬೇಕು. ಆ ಹಣವೆಲ್ಲಾ ಕೊಡಿಸುವ ಕಲಂ ೧ ಯಿಷ್ಟಾದರೆ ನಾವೂ ನಿಂಮ್ಮಲ್ಲಿ ಯಿಂನ್ನು ಮೇಲೆ ನೌಕರೀ ಯಿರತಕ್ಕದಿಲ್ಲಾ. ಮತೆಲ್ಯಾದರೂ ಹೊರಟುಹೋಗುತ್ತೇವೆ. ಸದರಿ ೨ ಕಲಮಿಗೂ

ಅಡ್ಡಿ ನೀವು ಹೇಳಿದಲ್ಲಿ ನಾವು ಲಡಾಯಿ ಮಾಡುತ್ತೇವೆ ಯೆಂದು ಹೇಳಿಕಳುಹಿಸಲಾಗಿ ಸಾಮಾಜೀಕರು ಯಲ್ಲಾ ದೊಡ್ಡಂಮಣೀಯವರಿಗೂ ಕರ್ತರಿಗೂ ಬೋಧಿಶಿ ನಡಶಿದರು.

ಶಕೆ ೧೬೮೩ನೆ ವಿಷು ಸಂವತ್ಸರದ ಜೇಷ್ಠ ಬ ೩ ಲ್ಲೂ ನವಾಬರಿಗೆ ಖಂಡೆರಾಯನ ಹಿಡಿದುಕೊಟ್ಟು ಕರ್ತರಿಗೆ ಮಹಲು ಖರ್ಚಿನ ಬಗ್ಯೆ ೩,೦೦,೦೦೦ ಶೀಮೆ ಅರಶಿನವರಿಗೆ ೧೦೦೦೦೦ ಶೀಮೆ ಉಭಯಂ ನಾಲ್ಕು ಲಕ್ಷ ವರಹಾದ ಶೀಮೆ ವಿಂಗಡಿಸಿಕೊಂಡು ನಿಂತ ಶೀಮೆಯೆಲ್ಲಾ ನವಾಬರ ಕೂಟವಾಗಿ ಯಿರುವ ಹಾಗೂ ಫವುಜಿನ ಖರ್ಚಿಗೆ ಮೊಗಲು ಮರಾಟೇರ ಪೇಷಕಶೀ ಸಹಾ ನವಾಬರೇ ತೀರಿಶಿಕೊಳಬೇಕೆಂಬ ಹಾಗೂ ಯೀ ಮ್ಯಾರೆ ಮಾಡಿ ಕೊಟ್ಟಿದಕ್ಕೆ ಪ್ರಧಾನ ವೆಂಕಟಪತ್ಯೆಯ್ಯನವರಿಗೆ ಕುಣಿಗಲು ತಾಲೋಕು ಯಿನಾಮು ಯಿದೇ ಮೇರೆ ಸಾಮಾಜಿಕರಿಗೆಲ್ಲಾ ಅವರವರ ಯೋಗ್ಯಾನ್ನುಸಾರವಾಗಿ ಮಾತನಾಡಿಕೊಂಡು ಪಟ್ಟಣದ ಕಿಲ್ಲೆ ನವಾಬರಿಗೆ ವಪ್ಪಿಸಿಕೊಟರು.

ಆವಾಗಾ ಶಕೆ ೧೬೮೨ನೆ ವಿಷು ಸಂವತ್ಸರದ ಆಷಾಡ ಶು ೧ ರಲ್ಲಿ ಪಟ್ಟಣದ ಕಿಲ್ಲೆ ದಾರಿ ಬಗ್ಯೆ ಮೊಕದುಂ ಸಾಬರನ ಯಿಟು ಕೆಲವು ಬಾರು ಆಹಷಾಮ ಸುದಾ ತೈನಾತಿ ಮಾಡಿ ಕೆಲವು ದಿನ ಅಲ್ಲಿ ನಿಂತು ಬೇಕಾದ ಬಂದೋಬಸ್ತು ಮಾಡಿ ಅಲ್ಲಿಂದಾ ಬೆಂಗಳೂರಿಗೆ ಹೊರಟು ಬಂದರು.

ನವಾಬರು ಬೆಂಗಳೂರಿಗೆ ಬರುವಾಗಾ ಮೊದಲು ಪಟ್ಟಣದಲ್ಲಿ ಶೇರಿಯಿದ್ದ ತಂಮ್ಮ ಹೆಂಡತಿ ಮಗನ ಸಹಾ ಸಂಗಡ ಕರದುಕೊಂಡು ಬೊಕ್ಕಸದ ವೆಂಕಟಪತಯ್ಯಗೆ ಕರ್ತರ ಶೀಮೆ ಕಾರಬಾರು ಕೊಟ್ಟು ಹೊರಟು ಬಂದರು.

ತರುವಾಯಾ ಯೀ ವಿಷು ಸಂವತ್ಸರ ಆಶ್ವಿಜಮಾಸದಲ್ಲಿ ಮೊದಲು ಶೀರ್ಯ ಹೊಸಕೋಟೆ ಸಹಾ ಮರಾಟೀರ ಠಾಣೆ ಯಿದ್ದದ್ದಂನೂ ಸಾಧಿಸುವ ಬಗ್ಯೆ ಅದವಾನಿಯಿಂದಾ ಬಸಲತ್ತು ಜಂಗರು ಫವುಜು ಸದಾಶಿರಾದ ಕೋಟೆಗೆ ಮುತ್ತಿಗೆ ಹಾಕಿ ಕಿಲ್ಲೆ ಬಾರದೆ ನವಾಬರನ ಸಹಾಯಕೆ ಕರಸಲಾಗಿ ಯಿವರು ಹೋಗಿ ಮೊರ್ಚೆ ಕಟಿ ತೋಫುಗಳ ಪೆಟ್ಟಿನಿಂದ ಹೊಡದು ಅಜೀಜುಮಾಡಿ ಕವಲಿನಿಂದಾ ಫಯಿಸಲಾಗಿ ಬಸಲತ್ತುಜಂಗರು ಸಂತೋಷಪಟ್ಟು ಹೈದರಜಂಗರು ಯಿಂದು ನವಾಬರಿಗೆ ಕಿತಾಬು ಕೊಟ್ಟರು. ಆ ಬಳಿಕ ಆ ಕಿಲ್ಲೆನೂ ನವಾಬರಿಗೆ ಕೊಟರು.

ಅಲ್ಲಿಂದ ಬಸಾಲತ್ತಜಂಗರು ನವಾಬರು ಸಹಾ ಶೀರ್ಯಕ್ಕೆ ಹೋಗಿ ಲಡಾಯಿಮಾಡಿ ಲಕ್ಷಣ ಹರಿ ಕೈಯಿಂದ ಶೀರ್ಯವು ತೆಗದುಕೊಂಡು ೩೦೦೦೦೦ ರೂಪಾಯಿ ನಜರು ನವಾಬರು ಕೊಟದಂನ್ನು ಬಸಾಲತ್ತು ಜಂಗರು ತೆಗೆದುಕೊಂಡು ಶೀರ್ಯ ಹೊಸಕೋಟೆ ಸಹ ನವಾಬರಿಗೆ ಸಂನದು ಬರದುಕೊಟು ರಾಯದುರ್ಗದ ಮಾರ್ಗವಾಗಿ ಆದವಾನಿಗೆ ಹೋದರು.

ಆವಾಗಾ ದೊಡ್ಡಬಳ್ಳಾಪುರದಿಂದ ಅಬಾಸ ಖುಲ್ಲಿಖಾನರು ನವಾಬರ ಭೇಟಿ ಬಗ್ಯೆ ಶೀರ್ಯದ ಬಳಿಗೆ ಬರುತೇವೆಂದು ಬರಶಿ ಕಳುಹಿಸಲಾಗಿ ಹಿಂದಕ್ಕೆ ನವಾಬರ

ಚಿಕ್ಕಪ್ಪ ಅಲ್ಲಿಸಾಬರ ಮೇಲೆ ೧ ಫೌಜು ನಿಮಿತ್ಯ ನವಾಬರ ಮಾಡಿದ ದ್ವೇಷದ ಮಾತುಗಳನ್ನು ನವಾಬರ ವಕೀಲನ ಮುಂದೆ ಆಡಲಾಗಿ ಆಬಾಸ ಖುಲ್ಲಿಖಾನರೂ ಭಯಪಟು ಆರ್ಕಾಡಿಗೆ ಫರಾರಿಯಾಗಿ ಹೋದದ್ದರಿಂದ್ದಾ ಆತನ ಹಿರೆಹೆಂಡತಿ ವಬ್ಬಳು ಮಾತ್ರ ಬಳ್ಳಾಪುರದಲ್ಲೆ ನಿಂತಳಾಗಿ ಶೀರ್ಯದಿಂದ ನವಾಬರು ಬಂದೂ ಬಳ್ಳಾಪುರಕ್ಕೆ ಠಾಣೆ ಹಾಕಿ ಆಬಾಸ ಖುಲ್ಲಿ ಖಾನರ ಹೆಂಡತಿಗೆ ತಿಂಗಳು ೧ಕ್ಕೆ ೫೦ ವರಹಾ ಪ್ರಕಾರ ಸಂಬಳ ಸಲುವಂತ್ತೆ ಸನದು ಬರಶಿಕೊಟು ಮುಂದಕ್ಕೆ ಚಿಕ್ಕಬಳ್ಳಾಪುರಕ್ಕೆ ಹೊರಟುಹೋದರು.

ಅಲ್ಲಿಂದಾ ಚಿಕ್ಕಬಳ್ಳಾಪುರದ ಮುತ್ತಿಗೆ ಮೂರುತಿಂಗಳು ಲಡಾಯಿ ಆಗುವಲ್ಲಿ ವಳಗೆ ಚಿಕ್ಕಬಳ್ಳಾಪುರದ ಧೊರೆ ಬರಶಿ ಕಳುಹಿಸಿ ಯಿದ್ದ ಪ್ರಯುಕ್ತಾ ಮುರಾರಿರಾಯನ ಕಡೆಯಿಂದಾ ಮಡಿಕಶೀರ್ಯದ ಭಾನಾಜಿ ಪಂತನ ಮಗ ತಿಂಮಪ್ಪನು ಚಿಕ್ಕಬಳ್ಳಾಪುರಕ್ಕೆ ಕುಮುಕ ನಿಮಿತ್ಯ ಬಂದು ಶಿಡ್ಲಗಟ್ಟದ ಬಳಿ ಯಿಳಿದುಯಿದ್ದ ಬಾತಮೀ ಬರುತ್ತಲೆ ಅರವಾಶಿ ಫವುಜು ಕೋಟೆ ಮುತ್ತಿಗೆ ಕಾಯಂ ಯಿಟ್ಟು ನಿಂತ ಅರವಾಶಿ ಫವುಜು ಸಾ ಆ ರಾತ್ರೆಯೇ ನವಾಬರು ಹೊರಟು ತಿಂಮಪ್ಪನ ದಂಡಿನ ಮೇಲೆ ನಾಲ್ಕೂ ದಿಕ್ಕಿನಿಂದಲೂ ಬಾಣಗಳು ತೋಫುಗಳು ಸಹ ಹೊಡದು ಕುದುರೆಗಳ ಚಲಾಯಿಸಿ ಫವುಜು ಲೂಟಿಸಿ ತಿಂಮಪ್ಪನ ತಲೆ ಕೊಯಿದು ಫತ್ತೆ ಮಾಡಿ ಪುನಹಾ ಚಿಕ್ಕಬಳ್ಳಾಪುರಕ್ಕೆ ಬಂದು ಕೋಟೆಗೆ ಸುರಂಗ ಹಾಕಿಸಿ ವಂದು ನಿಟ್ಟಿನಲ್ಲಿ ಕೆಲವು ಕೋಟೆ ಕೆಡವಿ ಹಲ್ಲಾಮಾಡಿದಾಗ್ಯೂ ಪಾಳೆಗಾರನು ಮರ್ದುಮೀಯಿಂದ ನಿರ್ವಹಿಸಲಾರದೆ ಆ ಬಳಿಕ ಕೂರಟಗೆರೆ ಪಾಳೆಗಾರ ಚಿಕ್ಕಪ್ಪಗೌಡನ ಮುಖಾಂತ್ರ ೩೦೦೦೦೦೦ ವರಹಾ ಖಂಡಣೆಗ ವಪ್ಪಿಕೊಂಡು ಸಾಬಕು ಪಟ್ಟಣದ ದಳವಾಯಿ ಕಾಂತೆ ಅರಶಿನವರ ತಲೆ ಕೊಯಿದ್ದಕ್ಕೆ ಬದಲಾಗಿ ಚಿಂನದ ತಲೆ ತಂದು ಕೊಟ್ಟು ಸಲ್ಲಾ ಆದ್ದರಿಂದಾ ಸದರಹೂ ತಲೆಯಂನ್ನು ಪಟ್ಟಣಕೆ ಕರ್ತರ ಬಳಿಗೆ ಅರ್ಜಿ ಬರದು ರವಾನೆ ಮಾಡಿ ಖಂಡಣೆ ಹಣ ತರುವಂತೆ ಕೋಟೆವಳಗೆ ಚಿಕ್ಕಪ್ಪಗೌಡನ ಕಳುಹಿಸಿ ನವಾಬರು ದೇವಂಡನ ಹಳ್ಳಿ ಬಳಿಗೆ ದಂಡು ಕೂಡುಮಾಡಿಕೊಂಡು ಹೊರಟುಬಂದರು. ಆ ಮರುದಿವಸವೇ ಪುನಹಾ ಆ ಪಾಳೆಗಾರನು ಪಿತೂರಿಯಿಂದಾ ಮುರಾರಿರಾಯರಿಗೆ ಕೋಟೆ ಠಾಣೆ ಕೊಟು ತಾನು ನಂದೀಗಡಕ್ಕೆ ಹೋಗಿ ಗಡಾ ಬಲಕಾಯಿಶಿಕೊಂಡು ಚಿಕ್ಕಪ್ಪಗೌಡನ ಖೈದುಮಾಡಿದ ಶುದ್ಧಿ ತಿಳಿದು ನವಾಬರು ಪುನಹ ಹಿಂತಿರುಗಿ ಚಿಕ್ಕಬಳ್ಳಾಪುರ ಹಲ್ಲಾಮಾಡಿ ತೆಗೆದುಕೊಂಡರು.

ಯೀಮ್ಯಾಲೆ ಶಖೆ ೧೬೮೩ ನೆ ವಿಷು ಸಂವತ್ಸರದ ಪಾಲ್ಗುಣದಲ್ಲು ಚಿಕ್ಕಬಳ್ಳಾಪುರಕ್ಕೆ ಠಾಣೆ ಹಾಕಿ ಅವರಿಗೆ ಚಿರುಚನಾಪಲ್ಲಿಯಿಂದಾ ಕತ್ತಿ ಗೋಪಾಲರಾಜೈಯ್ಯನವರು ಬಿಟುಯಿದ್ದಕಾರಣ ಯೀ ಗೋಪಾಲರಾಜೈಯ್ಯನವರನ ಚಿಕ್ಕಬಳ್ಳಾಪುರದ ಆಧಿಪತ್ಯಕ್ಕೆ ಯಿಟ್ಟು ಬೆಂಗಳೂರಿಂದ ಯಿಬ್ಬರಾಯಮ ಸಾಹೆಬರು ಫವುಜು ಸುದಾ ನಂದೀಗಡದ ಸುತ್ತಾ ಸವಾರಿ ಮಾಡುವಂತ್ತೆ ಬರಸಿ ಕಳುಹಿಶಿ ನವಾಬರು ಶೀರ್ಯದ ಬಳಿಗೆ ಹೊರಟುಹೋದರು.

ಅಲ್ಲಿಂದಾ ಶಖೆ ೧೬೮೪ನೆ ಚಿತ್ರಭಾನು ಸಂವತ್ಸರದಲ್ಲೂ ನವಾಬರು ಹೊರಟು ಮಡಕಶೀರ್ಯ ಪೆನುಗೊಂಡೆ ಕೊಡಕೊಂಡೆ ಸಹಾ ಸಾಧಿಸಲಾಗಿ ನಾಲ್ಕು ಮೂರು ತಡವೆ ಮುರಾರಿರಾಯನೂ ಲಡಾಯಿ ಮಾಡಿ ನಿರ್ವಹಿಸಲಾರದೆ ಗುತ್ತಿದುರ್ಗಕ್ಕೆ ಹೊರಟುಹೋದನು.

ಮೊದಲು ನವಾಬರು ಭಾವಮೈದ ಮೀರ ಅಲ್ಲೀರಜಾಖಾನರು ಶೀಮೇ ಸಾಧಿಸುವಾಗ್ಯೆ ಸ್ವಲ್ಪ ಫವುಜಿನಿಂದಾ ಬರುವಾಗಾ ಸಂಗಡ ಸಾರಂಗಿ ವೆಂಕಟಗಿರ್‍ಯೆಯ್ಯ ಬಂದರು. ಆವಾಗಾ ತುಮಕೂರು ಗುರಿತನ ಪಾರುಪತ್ಯ ಮಾಡುತ್ತಾಯಿದ್ದ ವೆಂಕಪ್ಪಯ್ಯನವರು ಯೀ ವೆಂಕಟಗಿರ್‍ಯೆಗೆ ಚಿಕಂಮ್ಮನ ಮಗನಾದ್ದರಿಂದಾ ಯೀ ವೆಂಕಟಗಿರ್‍ಯೆಯ್ಯನ ಮಾರಿಫತ್ತು ಮೀರಸಾಬರಿಗೆ ವಳಬಿದ್ದು ತುಮಕೂರು ಕಟಿಕೊಟ್ಟು ಸುತ್ತಮುತ್ತಣ ಹೆಬ್ಬೂರು ಕಡಬಾ ದೇವರಾಯದುರ್ಗಾ ವಗೈರೆ ಠಾಣೆ ಹಾಕಿಶಿ ಮೀರಸಾಬರಿಗೆ ಹಣವೂ ವಿಶೇಷವಾಗಿ ದುಡಿದುಕೊಟು ಯಿವರಲ್ಲಿ ಪ್ರಮುಖರಾಗಿ ಪಟ್ಣದ ಬಳಿ ನವಾಬರು ಯಿಳಿದಾಗಾ ಅಲ್ಲಿ ಭೇಟಿಯಾಗಿ ಮದ್ದಗಿರಿ ಚೆಂನರಾಯದುರ್ಗ ಸಾಧಿಸುತ್ತೇವೆಂದು ನವಾಬರಿಗೆ ಅರಿಕೆಮಾಡಿ ಸದರಹೂ ಮೀರಸಾಬರಂನ್ನೂ ಫವುಜ ಸುದಾ ತೆಗೆದುಕೊಂಡು ಬಂದು ಮದ್ದಗಿರಿಗೆ ಮುತ್ತಿಕೊಂಡಾಗಾ ಮಡಿಕೆಶೀರ್ಯದಿಂದಾ ಮುರಾರಿರಾಯನ ಕಡೆ ಫವುಜು ಮದ್ದಗಿರಿ ಠಾಣೆ ಹಾಕಬೇಕೆಂದು ಬಂದ ವರನ ಗರಣೀ ಬಳಿ ಹೊಡದು ಪಲಾಯನಾ ಮಾಡಿ ಬಂದು ಅಂದೂ ಶ್ರೀ ತಿಂಮ್ಮರಾಜೈಯ್ಯನವರ ಕೈಯಿಂದಾ ಮದ್ದಗಿರಿ ಸಾಧಿಸಿ ಠಾಣೆ ಹಾಕಿ ಅಲ್ಲಿ ಹಣಕಾಸು ಹ್ಯಾರಳಾ ದುಡಿದು ನವಾಬರಿಗೂ ಮೀರ ಸಾಬರಿಗೂ ಕೊಟ್ಟು ಬಹಳ ದಯಕ್ಕೆ ಪಾತ್ರರಾಗಿ ಗಡಿಗಳ ಬದುಕೆಲ್ಲಾ ಮೀರ ಸಾಬರ ಕೈದಿನಲ್ಲಿ ವೆಂಕಪ್ಪೈಯ್ಯನವರ ಜುಂಮೆ ಮಾಡಿದರು.

ಅಲ್ಲಿಂದಾ ನವಾಬರು ಯೋಚನೆ ಮಾಡಿಕೊಂಡು ಚಿತ್ರಕಲ್ಲು ಶೀಮೆ ಮೇಲೆ ಸವಾರಿ ಹೊರಟು ಸಂಣಕ್ಕಿ ಬಾಗೂರು ಹೊಸದುರ್ಗ ವಗೈರೆ ಸಾಧಿಸಲಾಗಿ ಚಿತ್ರಕಲ್ಲು ಪಾಳೆಗಾರ ಮೆದೆಕೆರೆನಾಯಕನೂ ದುರ್ಗಿ ಯಂಟು ಲಕ್ಷ ೮,೦೦,೦೦೦ ವರಹಾಕ್ಕೆ ಖಂಡಣೆ ಚುಕಾಯ್ಸಿಕೊಂಡು, ಸಲ್ಲಾಮಾಡಿಕೊಂಡು, ಭೇಟಿಯಾಗಿ, ಆವಾಗಾ ರಾಯದುರ್ಗ ಹರಪನಹಳ್ಳಿಯವರ ಕಡೆಯಿಂದಾಲ್ಲೂ ಪೇಷಕಶೀ ತೆಗೆದುಕೊಂಡು ಪತ್ತೆ ಆಯಿತು.

ಆ ವ್ಯಾಳೆಯಲ್ಲಿ ಚಿತ್ರದುರ್ಗದ ಮೆದೆಕೆರೆನಾಯಕನ ಸಂಗಡಾ ನವಾಬರು ಹೇಳಿದ ವಿವರ. ನಾವೂ ಯೀ ಕಾರ್ಯಾಭಾಗಕೆ ಬರುವಲ್ಲಿ ಪೂರ್ವದ ನಗರದವರು ಪಟ್ಣದ ಕರಾರು ಪ್ರಕಾರ ನಗರದವರನ ಸಹಾಯ ಬರಹೇಳಿ ನಾವೂ ಬರಶಿ ಕಳುಹ್ಸಿದಕ್ಕೆ ಅಲ್ಲಿ ದಾದು ಪಿರ್ಯಾದು ಯಿಲ್ಲದೆಹೋದ್ದರಿಂದಾ ನಂಮ್ಮ ಕಡೆ ಹರಿಕಾರ್ರು ಜವಾಬು ಬರದುಕೊಡ ಹೇಳಿ ನಗರ ದಿವಾನ ನಂಜೈಯ್ಯ ನಿರ್ವಾಣ್ಯೆಯ್ಯನ ಸಹಾ ಕೇಳಲಾಗಿ ಅವರು ಯೋಚನೆಮಾಡಿ ಯೀಗಾ ಸಂಗತಿಯಿಲ್ಲವೆಂದು ಜವಾಬು ಬರೆಯಹೇಳಿದಲ್ಲಿ ರಾಯಸ್ತವನ್ನು ವಕಣೆತುಥವಾಗಿ ಬರೆಯಬೇಕೆಂದದಕ್ಕೆ ಗೊಲ್ಲದ ದಫೆದಾರ ಭದ್ರನ

ತಿಂಮನೆಂಬುವನು ಯೀ ಮೇರೆ ಬರೆಯುತಕ್ಕದ್ದು ವಿಹಿತವಲ್ಲಾ. ಆತನು ಸಂಸ್ಥಾನಾಧಿಪತಿಯಾಗಿ ಯಿಧಾನೆ. ಪಟ್ಟದ ದೊರೆತನ ತುಟಾಯ್ಸಿ ಯೀತನ ಕೈವಶವಾಗಿ ಯಿರುವಲ್ಲಿ ಯೀತನಿಗೆ ನೀವು ಕೇಳುವ ವಖ್ಖಣೆ ಬರೆದರೆ ಹ್ಯಾಗೆ ಕೂಡಿ ಬಂಧೀತು ಯಂದು ಹೇಳಿದಲ್ಲಿ ರಾಯಸದವನು ಶಿಟ್ಟುಕೊಂಡು ಗೊಲ್ಲರೆಲ್ಲಾ ಸಾಮಾಜೀಕರಾದ ಮೇಲೆ ನಾವ್ಯಾಕೆ ಬೇಕೂ ಯಂದೂ ಕೂಗಲಾಗಿ ಆ ಲುಚ್ಛಾನ ಮಾತು ಅವರೆಲ್ಲ ಪಸಂದು ಮಾಡಿ ಕೀಳು ವಕಣೆ ಬರಶಿ ಯಿಧಾರೆ. ಆ ಸಂಸ್ಥಾನ ಹೆಂಗಸಿನ ಪ್ರಭುತ್ವ. ಅಲ್ಲಿನ ಧೊರೆತನದಲ್ಲಿ ಬಲಕರವಿಲ್ಲಾ. ಯೀ ಬಗ್ಯೆ ನೀನೇನು ಹೇಳುತ್ತೀಯೆಂದು ಕೇಳಿದಲ್ಲಿ ಮೆದೆಕೆರೆನಾಯ್ಕ ಹೇಳಿದ ವಿವರ.

ಬಿದಲೂರು ಸಂಸ್ಥಾನದ ಧೊರೆ ದೈವಗತಿಯಾಗುವಾಗಾ ಮತ್ತೊಬ್ಬ ಚಂನಬಸಪ್ಪನಾಯ್ಕನೆಂಬವಂನ್ನ ದತ್ತು ಮಾಡಿಕೊಂಡು ಅವನಿಗೆ ಪಟ್ಟಾಕಟ್ಟಿ ಹೋದನಾಗಿ ಆ ಹೋದ ಅರಶಿನ ಹೆಂಡತಿ ವೀರಮರಾಣೀಯಂಬವಳು ನಂಬ್ಯೆಯ್ಯನೆಂಬನ ಸಂಗಡ ನಡದುಕೊಳ್ಳುತ್ತಾ ಅವನಿಗೆ ಸರ್ವಾಧಿಕಾರ ಕೊಟು ಯಿರುವ ದುಶ್ಚರಿತ್ರೆ ಆ ಚಂನ್ನಬಸಪ್ಪನಾಯ್ಕನೆಂಬವನು ಯೀ ನಂಬ್ಯೆಯ್ಯನ ಅಂತಃಪುರಕ್ಕೆ ಬಾರದಂತೆ ಮಾಡಿದಲ್ಲಿ ಸಹಿಸದೆ ಯೀ ರಾಣಿಯು ಜಟಿ ಕೈಯಿಂದ್ದಾ ಯಂಣೆ ವತ್ತುವಾಗಾ ಕ್ರಿತ್ತಿಮದಿಂದ್ದಾ ಚಂನ್ನಬಸಪ್ಪನಾಯ್ಕನ ಕೊರಳು ಹಿಸುಕಿಶಿ, ಗುಣಿಯಲ್ಲಿ ಹಾಕಿ, ಮತ್ತೊಬ್ಬ ಹುಡುಗನ ತಂದು ದತ್ತುಮಾಡಿಕೊಂಡು ದವಲತ್ತು ಮಾಡುತ್ತಾ ಸಕಲವೂ ನಂಬ್ಯೆಯ್ಯನ ಸ್ವಾಧೀನದಲ್ಲಿ ದುಶ್ಚರಿಯದಿಂದಾ ನಡದುಬರುತ್ತಾಯಿಧೆ. ಕಲ್ಲಕೆರೆ ಕ್ರಿಷ್ಣಪ್ಪನಾಯ್ಕನೆಂಬವ ವಬ್ಬ ಕಾರುಬಾರಿಯಾಗಿ ಯಿಧಾನೆ. ಹಳಬರೆಲ್ಲಾ ಮೂಲೆಗೆ ಬಿದ್ದು ದಳವಾಯಿ ವೀರಭದ್ರನಾಯ್ಕನ ಸಹಾ ತೆಗೆದುಹಾಕಿ ಯಿಧಾರೆ. ಫವುಜಿನಲ್ಲಿ ಸತ್ವವಿಲ್ಲ, ಸದರಹು ಚಂನ್ನಬಸಪ್ಪನಾಯ್ಕನು ಪೂರಾ ಪ್ರಾಣಹೋಗಿಯಿರಲಿಲ್ಲಾ! ವುಸುರು ತಿರುಗಿ ಗುಣಿಯಿಂದಾ ಯದು ಬಂದು ಚಿತ್ರಕಲ್ಲಲ್ಲಿ ತಂನ ಬಳಿ ಯಿಧಾನೆ. ಯಿವನಿಗೆ ಬಿದಲೂರು ರಾಜ್ಯ ಕೊಡ್ಸಬೇಕೆಂದು ಮೆದೆಕೆರೆನಾಯ್ಕರು ಹೇಳಲಾಗಿ ಅದೇ ಪ್ರಕಾರಾ ಮಾಡಿಸುತ್ತೇವೆಂದು ನವಾಬರು ಹೇಳಲಾಗಿ, ಅದೇ ಪ್ರಕಾರ ಆ ಸುಳ್ಳುಮಾತಿನ ಗ್ಯೆಬರಾಜನೆಂಬವನ ಕರಶಿ ಭೇಟೀ ತೆಗೆದುಕೊಂಡು ಸಂಗಡ ಮೆದೆಕೆರೆನಾಯಕರ ಫವುಜು ಸಹಾ ಕರದುಕೊಂಡು ನಗರದ ಶೀಮೆ ಮೇಲೆ ಹೊರಟು ನವಾಬರು ಫವುಜ ಸುದಾ ಬಂದರು.

ಆವಾಗ ಹೊದ್ದಿಕೆರೆ, ಸಂತ್ತೆಬಿದನೂರು, ಠಾಣೆ ಹಾಕಿ ಪೂರ್ವದಲ್ಲಿ ತರಿಕೆರೆಯವರ ಶೀಮೆ ಸಂತ್ತೆಬಿದನ್ನೂರಂನ್ನು ಸಾಧಿಸಲಾರದೆ ಆ ಸಂಗತಿಯಿಂದಾ ಚಿತ್ರದುರ್ಗದವರು ಹೊರಟುಬರುತ್ತಾ ತಂಮ್ಮ ದಟ್ಟಿ ಕಠಾರಿ ಸುದಾ ಕೋಟೆ ವಳಗೆ ಹಾಕಿ ಬಂದು ಯಿದ ಶರತ್ತಿನ ವಿವರ ಮೆದೆಕೆರೆ ನಾಯ್ಕರು ಹೇಳಿಕೊಳಲಾಗಿ ನವಾಬರಿಗೆ ದಯ ಬಂದು ಸಂತೆಬಿದನೂರಂನ್ನು ಮೆದೆಕೆರೆನಾಯ್ಕರಿಗೆ ಕೊಟು ಅಲ್ಲಿಂದಾ ಮುಂದೆ ನಗರದ ಶೀಮೆಗೆ ಹೊರಟು ಬಂದರು.

ನಗರ ಶೀಮೆಗೆಲ್ಲಾ ಗೈಬು ಚೆಂನಬಸಪ್ಪನಾಯಕನ ಹೆಸರಿಂದಾ ಠಾಂಣ್ಯಗಳ ಬಿಟ್ಟುಕೊಡುತ್ತೆ ಪರವಾನೆಗಳ ಕಳುಹಿಸಿಕೊಡುತ್ತಾ ಬಿದಲೂರು ಧೊರೆ ಬಿದಲೂರು ಶೀಮೆ ಧೊರೆತನಕ್ಕೆ ಫವುಜು ತಂದು ಯಿಧಾನೆಂದು ವದಂತ್ತಿ ಹುಟ್ಟಿಶಿ ಯೀತನ ಸಂಗಡ ಕೆಲವೂ ಫವುಜೂ ಸಹಾ ನಮೂದು ಮಾಡಿ ಬಯಲಲ್ಲಿ ಯಿವನ್ನು ಬರುವ ಹಾಗೂ, ಗಿಡದ ಮಾರ್ಗದಲ್ಲಿ ಬೇರೆ ಫವುಜು ಸುದಾ ತಾವು ಬರುತ್ತಾಲೂ ಬೆಂಕೀಪುರ, ಶಿವಮೊಗ್ಗೆ, ಕುಮಷೀ, ಅಯನೂರು, ಅನಂತಪುರ, ಮುಂತ್ತಾದಂನ್ನು ಠಾಣೆ ಹಾಕಿ ಮೂರಂಗಡಿ ಮಾರ್ಗವಾಗಿ ಬಿದಲೂರು ಘಟ್ಟಿನ ಬಾಗಿಲು ಬಳಿಗೆ ನವಾಬರ ಫವುಜು ಬಂದು ದಾಖಿಲಾಯಿತು.

ಆವಾಗಾ ಪಹರೆಯಲ್ಲಿ ಯಿದ್ದ ದಳವಾಯಿ ವೀರಭದ್ರನಾಯಕನ ಕರಶಿ ವ್ಯಾಳೆ ಬಂದು ಯಿಧೆ; ಜಗಳಮಾಡಿ ನಿರ್ವಹಿಸ ಹೇಳಿ, ಘಟ್ಟಿನ ಬಾಗಿಲಿಗೆ ಕಳುಹಿಸಲಾಗಿ ಅವರಿಗೆ ಮೊದಲು ಬಿದಲೂರು, ಸರ್ವಾಧಿಕಾರ ಮೂಡಬಿದುರೆ ಲಿಂಗಪ್ಪನೆಂಬವನೂ, ಕುಮುಶೀಯಲ್ಲಿ ಖೈದಿನಲ್ಲಿ ಯಿದ್ದು ಕುಮುಶೀ ನವಾಬರ ಕೂಟವಾಗುತ್ತಲೆ ನವಾಬರಲ್ಲಿ ಹೊಂದಿಕೊಂಡು ಕಳಮಾರ್ಗದಿಂದ ನವಾಬರ ಫವುಜಂನ್ನು ಬಿದಲೂರು ಶಹರಿನ ವಳಗೆ ಕರದುಕೊಂಡು ಹೋದನು.

ಶಕೆ ೧೬೮೪ನೆ ಚಿತ್ರ ಭಾನು ಸಂವತ್ಸರದ ಮಾಗ ಶು ೫ ಲ್ಲೂ ಬಿದಲೂರು ಸಂಸ್ಥಾನ ನವಾಬರ ಕೈವಶವಾಯಿತ್ತಾಗಿ ಆವಾಗಾ ರಾಣೀ ವೀರಮ್ಮನು ಗಾಬರಿಯಾಗಿ ತಂನ ಜಿಂದಗಿಯೆಲ್ಲಾ ವಂದು ಹವೇಲಿಯಲ್ಲಿ ಹಾಕಿ ಬೆಂಕಿ ಹಾಕೂವಂತೆ ಹೇಳಿ ಜನಗಳ ಯಿಟ್ಟು ತಾನೂ ನಂಬೈಯ್ಯ ಸಹಾ ಸ್ವಲ್ಪ ಫವುಜಿನಿಂದಾ ಹೊಸ ಅಂಗಡಿ ಘಾಟೀಯಲ್ಲಿ ಯಿಳಿದು ಬಳಾಳರಾಯನ ದುರ್ಗಕ್ಕೆ ವೋಡಿಹೋಗಿ ದಾಖಲಾದಳೂ. ನವಾಬರು ಕಳಮಾರ್ಗ ಮೊಸರೂರು ಹಾದಿಯಲ್ಲಿ ಬಿದಲೂರು ಷಹರು ಹೊಕ್ಕರು.

ಅಲ್ಲಿ ರಾಣೀ ಅರಮನೆಗೆ ಹತ್ತಿದ ಬೆಂಕಿಯಂನ್ನು ಆರಿಶಿ ಆ ತರಾಫು ೩ ಹರಿದಾರಿ ಷಹರಂನ್ನು ಬಂದೋಬಸ್ತುಮಾಡಿಗೂಂಡು ಕೆಲವು ಫವುಜು ಸಹಾ ದರದಾರಖಾನನ ಕಳುಹಿಸಿ ಗೈಬು ಚೆಂನ್ನಬಸವನಾಯ್ಕನ ಕವಲಿನ ಮೇಲೆ ರಾಣೀಯಂನ್ನು ಕರಶಿ ಆ ಬಳಿಕ ಈ ಧೊರೆತನಕ್ಕೆ ಭಾದ್ಯ, ಯೀ ರಾಣೀ ವೀರಂಮ್ಮನೋ, ಚೆಂನ್ನಬಸವನಾಯ್ಕನೋ, ನಿಷ್ಕರ್ಷೆ ಮಾಡಹೇಳಿ ಪಂಚಾಯಿತಿಗೆ ಹಾಕಿ ಯೀ ಪಂಚಾಯಿತಿ ನಿರ್ಣಯ ಮದ್ದಗಿರಿಯಲ್ಲಿ ಚುಕಾಯಿಸ ತಕ್ಕದ್ದೆಂದು ಮೀರಅಲ್ಲಿ ರಜಾಖಾನರಿಗೆ ಫರವಾನೆ ಬರದು ಯಿವರು ಯಿಬರಿಗೂ ಪಹರೆ ಮೇಲೆ ಮದ್ದಗಿರಿಗೆ ರವಾನೆಮಾಡಿಬಿಟರು.

ಆ ಬಳಿಕ ಬಿದಲೂರಿಗೆ ಹೈದರನಗರವೆಂದು ಹೆಸರಿಟ್ಟು ಯೀ ತಾಲೋಕು ಮೇಲು ಶೀಮೆ ಗಡಿಗಳು ಘಟ್ಟದ ಕೆಳಗಣ ಶೀಮೆ ಕೊಡಿಯಾಲ ಮುಂತ್ತಾದ ಫವುಜ ಸುದಾ ಹೋಗಿ ಸಾಧಿಸಿ ಬಂದೋಬಸ್ತು ಮಾಡಿದರು. ಆ ಬಳಿಕ ಶಿಬಂದಿ ೨೫,೦೦೦ ಯಿಟು ಶೀಮೆ ಬಂದೋಬಸ್ತುಮಾಡಿ ಅವರಿಗೆ ಮದ್ದಗಿರಿ ವಗೈರೆ ವೆಂಕಪ್ಪೈಯ್ಯನವರು ತಾಲೊಕ್ಕು

ಮಾಮಲೆಗಳೆಲ್ಲಾ ಯಿವರ ತಂಮ್ಮ ವೆಂಕಟೇಶ್ಯೆಯ್ಯನವರಿಗೆ ನೇಮಕಮಾಡಿ ವೆಂಕಪ್ಪೆಯ್ಯನವರ ಸಂಗಡಲೆ ನಗರಕ್ಕೆ ಕರತಂದು ನವಾಬರು ದಯ ಬಹಳವಾಗಿ ಯಿವರಲ್ಲಿ ಯಿದ್ದದ್ದರಿಂದ ನಗರದ ಸಂಸ್ಥಾನದ ದಿವಾನಗಿರಿಯಂನ್ನು ವೆಂಕಪ್ಪೆಯ್ಯನವರಿಗೆ ನೇಮಕಾಮಾಡಿ ಪಟ್ಣದ ಶೀಮೆ ದಿವಾನಗಿರಿಯಂನ್ನು ದಿಂಡುಕಲ್ಲು ವೆಂಕಟಪ್ಪನವರಿಗೆ ನೇಮಕಾಮಾಡಿ ನಗರದಲ್ಲಿ ಬಹದರ ವರಹಾದ ಟಂಕಸಾಲೆ ಹಾಕಿಸಿದರು.

ಆವಾಗಾ ಮೀರು ಫೈಜುಲ್ಲಾಖಾನರ ಸಂಗಡ ಫವುಜ ಕೊಟುಕಳುಹಿಸಲಾಗಿ ಅವರು ಸೊದೆ ಸಂಸ್ಥಾನದ ಮೇಲೆ ನಡದ್ದರಿಂದ್ದಾ ಸೊದೆ ಅರಸು ಫರಾರಿಯಾಗಿ ಗೋವೇ ಬಳಿ ಷಹರಿನಲ್ಲಿ ಸೇರಿದನೂ.

ಶಕೆ ೧೬೮೫ನೆ ಸ್ವಭಾನು ಸಂವತ್ಸರದಲ್ಲೂ ಸೊದೆ ಸಂಸ್ಥಾನ ಅಂಕೋಲೆ ಪಂಚಮಹಲು ಸಹಾ ನವಾಬರ ವಶವಾಯಿತು. ಯೀ ಮಧ್ಯೆ ಮೀರಅಲ್ಲಿ ರಜಾಖಾನರ ನಗರದಿಂದಾ ಮದ್ದಗಿರಿಗೆ ಕಳುಹಿಸಲಾಗಿ ಅವರು ನಿಡಗಲ್ಲೂ ಪಾವುಗೊಂಡೆಯಿಂದ್ದಾ ಖಂಡರಣೆ ಹಣಾ ತೆಗೆದುಕೊಂಡರು.

ಶಕೆ ೧೬೮೫ನೆ ಸ್ವಭಾನು ಸಂವತ್ಸರದಲ್ಲಿ ನವಾಬರು ನಗರದಲ್ಲಿ ಮಳೆಗಾಲ ಧಾವಣಿ ಯಿರುವಾಗ್ಯೆ ನವಾಬ ಹುಸೇನನ ದೋಸ್ತು ಭಾಷಂ ಷುದ್ದೌಲಾ ಚಂದಾಸಾಬರ ಮಗ ಜಿಯಾವುದ್ದವಲಾ ಚಕಮಕಜಂಗ ಅಲ್ಲಿ ರಜಾಖಾನರು ಪುಲಚೇರಿ ಕೋಟೆಯಲ್ಲಿ ಯಿದು ಮಮದಲ್ಲಿ ಖಾನ ಯಿಂಗ್ರೆಜಿಯವರ ಸಹಾ ಮುಕ್ತಿಗೆ ಹಾಕಿ ಬಹಳ ದಿವಸ ಜೋರು ಮಾಡಿದ್ದಕ್ಕೆ ತಿನ್ನುವುದಕ್ಕೆ ಯಿಲ್ಲದೆ ಪರಾಷೀಸರ ಆ ಕೋಟೆ ಯಿಂಗ್ರೇಜೀರಿಗೆ ಕೊಡೂ ವ್ಯಾಳೆಯಲ್ಲಿ ಜಹಜಿನ ಮೇಲೆ ಹತ್ತಿ ವ್ಯಾಪಾರ ಬಂದರಕ್ಕೆ ಹೋಗಿ ಅಲ್ಲಿಂದಾ ನಗರಕ್ಕೆ ಬಂದ ಕಾರಣ ಅವರಿಗೆ ಬಹಳ ಮರ್ಯಾದೆಮಾಡಿ ಅವರ ಮಹಲ ಖರ್ಚಿನ ಬಗ್ಯೆ ನೆಲಮಂಗಲದ ಶೀಮೆ ಕೊಟು ಮುಂದೆ ಆರ್ಕಾಡು ಸಾಧಿಸಿ ಕೊಡುತೇವೆಂದು ನಿಲ್ಲಿಶಿಕೊಂಡರು.

ಆವಾಗಾ ಮಳೆಗಾಲದಲ್ಲಿ ನವಾಬರ ಶರೀರಕ್ಕೆ ಕೇವಲ ವುಪದ್ರವದಿಂದ ಆಯಾಸವಾಗಿ ಯಿರುವ ವ್ಯಾಳೆಯಲ್ಲಿ ಮೂಡಬಿದರೆ ಲಿಂಗಪ್ಪನೆಂಬವನು ನಗರದ ಷಹರಿನ ಶೀಮೆ ಜನ ಸಹಾ ಆಗುಂಬಿ ಹೆಗ್ಗಡಿ ತಿಂಗಳ ಹೆಗ್ಗಡಿ ಮುಖಾಂತ್ರಾ ನಾಟಕೂಟಾ ಮಾಡಿ ನಗರದ ಷಹರಿನಲ್ಲಿ ವಂದು ದಿವಸ ರಾತ್ರೆ ನಾಲ್ಕು ಸಾವಿರ ೪,೦೦೦ ಜನ ಆಯುಧಪಾಣಿಗಳಾಗಿ ತಯಾರಾಗಿ ವೆಂಕಪ್ಪೆಯನವರನೂ ನವಾಬರಂನ್ನೂ ಯಿಂನ್ನೂ ಮುಖ್ಯ ಜನರುಗಳನೆಲ್ಲಾ ಹೊಡದು ಹಾಕಿ ನಗರ ತಾವು ಬಲಕಾಯಿಸಿಕೊಳಬೇಕೆಂದು ಪ್ರಯತ್ನವಾಗಿ ಬೀದಿ ಬೀದಿಯಲ್ಲಿ ಜನಗಳ ಗುಂಪು ಕೂಡಿಯಿತ್ತು. ಆವಾಗಾ ವೆಂಕಪ್ಪೆಯನವರ ಬಳಿ ಪೆಷ್ಕಾರಮಾಡುತ್ತಾ ಯಿದ್ದ ಗುರಿಕಾರ ವೆಂಕಟಪತ್ಯೆಯ್ಯನವರು ನಗರದ ಶೀಮೆ ಸರ್ವಜನಕ್ಕು ದುರ್ಜನವಿಲ್ಲದೆ ವಿಶ್ವಾಸದಿಂದಾ ನಡಸುತ್ತಾ ಯಿದಾರಾಗಿ ನಗರದ ಶೀಮೆ ಜನರ ಪೈಕಿ ಬಿಳಗಿ ಸಂಸ್ಥಾನದ ದಳವಾಯಿ ಸಂಗನ ಬಸಪ್ಪನೆಂಬ

ಗ್ರಹಸ್ತನು ಬಹುಷಾ ಆಪ್ತವಿಕಯಿಂದಾ ವೆಂಕಟಪತ್ತೈಯ್ಯನವರಿಗೆ ತಿಳಿಶಿದ ಕಾರಣ ಅವರು ತಕ್ಷಣ ವೆಂಕಪ್ಪೈಯ್ಯನವರಿಗೂ ತಿಳಿಶಿ ವುಭಯಿತ್ರರೂ ವೆಂಕಪ್ಪೈಯ್ಯನವರು ಯಿದ್ದ ಶಿದ್ದಪ್ಪನಾಯಕ್ನ ಮನೆ ಲಾಯದ ಬಾಗಿಲ ದಿಡಿಯಿಂದಾ ಹೊರಟು ನವಾಬರ ದೇವಡಿ ಬಳಿಗೆ ಹೋಗಿ ಅಲ್ಲಿ ಆ ಪಹರೆ ಬಾರು ಕುಮುಂದಾರನಾದ ಸರದಾರಖಾನರಿಗೆ ಯೀ ವಿವರವೆಲ್ಲಾ ಹೇಳುತ್ತಾಲೆ ೧,೦೦೦ ಬಾರು ದೇವಡೀ ಬಳಿ ತಯಾರುಮಾಡಿ ನಿಲ್ಲಿಸಿ ೨,೦೦೦ ಬಾರು ಟೋಲಮಾಡಿ ಸರದಾರಖಾನನ್ನು ಬೀದಿಗಳಲ್ಲಿ ಹೊರಟು ಗುಂಪುಕೂಡಿದ ಜನರ ಮೇಲೆ ಶಬಖೂದೆ ವದಾಮಾಡಿಸುತ್ತಾ ಬಂದನಾಗಿ ಅಷ್ಟರಲ್ಲಿ ವೆಂಕಪ್ಪೈಯ್ಯ ವೆಂಕಟಪತ್ತೈಯ್ಯನವರು ನವಾಬರಿಗೆ ತಿಳಿಸಲಾಗಿ ಅವರು ಯೆದ್ದು ದೇವಡಿ ಶೆಜ್ಜೆ ಮೇಲೆ ಬಂದು ಕುಳಿತು ಮಹಾತೋಪುಗಳ ಹತ್ತಿಸಿ ಹಾಜರು ಯಿದ್ದ ಫವುಜು ಗಡಾಬಡಿಯಿಂದಾ ಜಲದು ಜಮಾಯಿಸಿ ಷಹರಿನಲ್ಲಿ ಕೊಡಗುಂಪನೆಲ್ಲ ಕತ್ತಲುಮಾಡಿಸಿದ್ದರಿಂದ್ದಾ ಮೂಡುಬಿದರೆ ಲಿಂಗಪ್ಪೈಯ್ಯನು ಪರಾರಿಯಾಗಿ ಆ ಷಹರಿನ ಬಂದೋಬಸ್ತು ಆ ರಾತ್ರಿಯೇ ಆಯಿತು.

ಆವಾಗಾ ಗುರಕಾರ ವೆಂಕಟಪತ್ತೈಯ್ಯನವರಿಂದ್ದಾ ತಂಮ್ಮ ಕೆಲಸ ಕೂಡಿ ಬಂತು ಯಿವರ ಖೈರಖಾಯಿಂದಾ ಪಾಲಖೀಮಾಡಿ ತಿಂಗಳು ೧ಕ್ಕೆ ಬಹದರಿ ೧೦೦ ವರಹಾ ದರ್ಮಹಾಮಾಡಿ ನಗರ ಶೀಮೆಗೆ ಫವುಜು ಸಕಲವೂ ಹುಕುಮತ್ತಿಗೂ ನಾಯಕ ಖಿಜಮತ್ತು ಮಕರೂರು ಮಾಡಿ ಯಿವರ ಮಗ ರಮಣ್ಣೈಯ್ಯನವರಿಗೆ ಪಾಲಕಿ ಯಿನಾಮು ಮಾಡಿ ನಗರದ ಕಚೇರಿ ಶಿರಸ್ತೆ ಯಿದ್ದ ವೆಂಕಪಟತ್ತೈಯ್ಯನವರ ಅಳಿಯ ಕಚೇರಿ ಕ್ರಿಷ್ಣಯ್ಯನಿಗೆ ಹುಜೂರು ಮಹಲಾತಿ ಕಚೇರಿ ಕರಣೀಕತನ ಸಂಬಳ ತಿಂಗಳು ೧ಕ್ಕೆ ೨೦೦ ರೂಪಾಯಿ ಮೇರೆಗೆ ಸಹಾ ಮಾಡ್ಸಿಕೊಟರು.

ಆ ಬಳಿಕ ನವಾಬರು ಘಟ್ಟದ ಕೆಳಗಣ ಶೀಮೇ ನೋಡುವ ಬಗ್ಯೆ ಹೋಗಿ ಯಿದ್ದ ವ್ಯಾಳೆಯಲ್ಲಿ ವೆಂಕಪ್ಪೈಯ್ಯನ..... ನಗರದಲ್ಲಿ ಯಿದ್ದರಾಗಿ ಆಗುಂಬೆ ಹೆಗ್ಗಡಿ ತಿಂಗಳ ಹೆಗ್ಗಡಿ ಸಹ ಪಡಿದ ಕಾನಿನ ಯಿಕ್ಕಟ್ಟಿನ ಸ್ತಳದಲ್ಲಿ ಶೇರಿಕೊಂಡು ಶೀಮೇನೆಲ್ಲಾ ನಾಡಕೂಟಾ ಪ್ರಬಲಾಮಾಡಿ ಯಿದ್ದ ಕಾರಣ ನಗರದಿಂದಾ ಗೊಲ್ಲರ ದಫೆದಾರ ಭದ್ರನ ತಿಂಮ್ಮೈಯನ ಸರಕಾರದಲ್ಲಿ ಸರಫಸಾಜು ಯಿ (ದ) ನಾಗಿ ಅವರು ಪಿತೂರಿನಿಂದ್ದಾ ಕೆಲವು ಬಾರು ಸಂಗಡ ತೆಗೆದುಕೊಂಡು ಹೋಗಿ ಸಾಹಸಾಮಾಡಿ ಸದರಿ ವುಭಯ ಹೆಗ್ಗಡಿಗಳನ್ನು ನಗರಕ್ಕೆ ಹಿಡಿತಂದ ಕಾರಣ ಹಜೂರು ಹುಕುಂ ಮೇಲೆ ಅವರಿಬ್ಬರಿಗೂ ಗಲ್ಲುಕೊಡಿಶಿ ಭದ್ರನ ತಿಂಮ್ಮೈಯ್ಯಗೆ ಕಡೆಕೊಡೆ ವಂಟಿ ಖಿಲ್ಲತ್ತು ದರ್ಮಹಾ ಯಿ ಜಾಷಾ ಮುಂತ್ತಾಗಿ ಸರಫರಾಜು ಆಯಿತು.

ಯೀ ಮಧ್ಯೆ ನವಾಬರು ನಗರದಲ್ಲಿ ಯಿರುವಾಗಾ ತಂಮ ಫವುಜಿನ ಮಮಜುದಾತು ಮಾಡಿ ಬಾರು ಅವಲು ದುಯಂ ವಿಂಗಡಿಸಿ ಬನಾತು ಕುಡಿತೆ ನೀಲ ಪಾಗು ಮೊಕರೂರುಮಾಡಿ ಬಾರಿನಲ್ಲಿ ಮೊದಲಿದ್ದ ಅರಬಸ್ತಾನತ್ತಾಸಾ ವುರಫ ಬಾಜಾ

ಮೊಖೂಮಮಾಡಿ ಪರಂಗಿ ಜಾಬಿತ್ತೆ ಮೇರೆಗೆ ತಂಬೂದಾ ಕವಾಯಿತು ಮೊಕರೂರು ಮಾಡಿದ ಜಮೋತ್ತ ಜನವೆಲ್ಲ ಫವುಜಿನಿಂದಾ ವಿಂಗಡಿಸಿ ವಟುಮಾಡಿ ಜ ಚಾಯಿಲ ಬರವಾವರನು ಕರ್ನಾಲು ಮೊಕರೂರು ಮಾಡಿ ಸವಾರಿ ಜಿಲ್ಲೆ ಬಲ್ಲೆ ವಿಂಗಡಿಶಿ ಬಂದೋಬಸ್ತು ಮಾಡಿದರು.

ಅಲ್ಲಿಂದಾ ಶಖೆ ೧೬೮೫ನೆ ಸ್ವಭಾನು ಸಂವತ್ಸರದಲ್ಲೂ ಮೀರ ಫಜುಲ್ಲಾಖಾನರ ಸಂಗಡ ಫವುಜು ಕೊಟ್ಟು ನಗರದಿಂದಾ ರವಾನೆ ಮಾಡುತ್ತಾ ರಾಣಿಬಿದನೂರು ಬಳಿಗೆ ಫವುಜು ಹೋಗುವಾಗ್ಯೆ ಸವಣೂರು ನವಾಬ ಅಬ್ದುಲ್ ಹಕಿಂಖಾನನೂ ತಂನ ಫವುಜು ಸುದಾ ಬಂದು ಲಡಾಯಿ ಆಗಿ ಫವುಜುಲ್ಲಾಖಾನರು ರಾಣೀಬಿದನೂರು ಹೊಕ್ಕು ಹಕೀಂಖಾನ ಫವುಜು ಘೇರಾಯಿಸಿ ಯಿರುವ ವರ್ತಮಾನಾ ನಗರಕ್ಕೆ ಬಂದ ಕ್ಷಣವೆ ನವಾಬರು ಹೊರಟು ಶಿಖಾರಿಪುರದ ಬಳಿಗೆ ಹೋಗಿ ಜಮಾಯಿಸಿ ಹಕೀಂಖಾನರಿಗೆ ಹೇಳಿಕಳುಹಿಸ್ತ ವಿವರ. ನಾವು ನಾಳೆ ರಾತ್ರೆ ನಿಂಮ್ಮ ಫವುಜಿನ ಮೇಲೆ ಲಡಾಯಿಗೆ ಬರುತೇವೆಂದು ಹೇಳಿಕಳುಹಿಸುತ್ತಾಲೆ ಅವರ ಫವುಜು ತಯಾರಾಗಿ ಆ ರಾತ್ರೆ ಮರುದಿನ ಹಗಲು ಯಂಟು ಘಳಿಗೆ ಪರಿಯಂತ್ರ ಲಯಸ್ಸು ನಿಂತಾಗ್ಯೂ ಯಿವರ ಫವುಜು ಬರಲಿಲ್ಲವಾಗಿ ಅವರು ಕೆಲವರು ಮಲಗುತ್ತಲೂ, ಕೆಲವುರ ಅಂನ್ನಗಳ ಬೇಯುಸುತ್ತಲೂ, ನವಾಬರ ಫವುಜು ಹಗಲು ಬರುವುದಿಲ್ಲವೆಂದು ಬೇಫಾರಿನಿಂದಾ ಯಿದ್ದ ಕಾರಣ ಆ ರಾತ್ರಿ ವಂದು ಹಳದಲ್ಲಿ ನವಾಬರ ಫವುಜು ನಿಂತು ಬಾತಮೀ ತರಿಸುತ್ತಾ ಅರಾಂ ಮಾಡಿ ಮರುದಿನ ಸವಣೂರು ಫವುಜಿನ ಮೇಲೆ ಹೋಗುವುದಕ್ಕೋಸ್ಕರ ಅವರು ಬೇಫಾರಾದ ಬಾತಮೀ ಬರುತ್ತಲೇ ನವಾಬರು ಫವುಜು ಸುದಾ ಯೇಕದಂ ಸವಣೂರು ಫವುಜಿನ ಮೇಲೆ ಕುದುರೆಗಳ ಚಲಾಯಿಸುತ್ತಾ ಆ ರಾಣಿಬಿದನೂರು ವಳಗಣಿಂದಾ ಪಊಜುಲ್ಲಾಖಾನರು ಹೊರಹೊರಟು ಸವಣೂರ ಫವುಜನ್ನು ಹೊಡದು ಬೆಂನಟ್ಟಿ ಸವಣೂರು ಷಹರಿನ ಪರಿಯಂತ್ರವೂ ಲುಟಾಯಿಸಿ ಅಲ್ಲಿ ಇಳಿದು ಸಲ್ಲಾ ಮಾಡಿಕೊಂಡು ೩,೦೦,೦೦೦ ವರಹಾ ಸವಣೂರು ನಾಂಣ್ಯ ಖಂಡಣೆ ತೆಗೆದುಕೊಂಡು ರತ್ನ ಖಚಿತ ಕಠಾರಾ ಹಕೀಮಖಾನರಿಂದಾ ತೆಗೆದುಕೊಂಡು ಅಲ್ಲಿಂದ ಮರಾಟೇರ ಶೀಮೆ ಬಂಕಾಪುರ ಧಾರವಾಡ.... ಹಾಕಿ ಧಾರವಾಡದಲ್ಲಿ ನವಾಬರು ಭಾವಮೈದನ ಸೈದ ಯಿಸಮಾಯಿಲಖಾನರ ಯಿಟ್ಟು ಮುಂದೆ ಕ್ರಿಷ್ಣನದೀ ಪರಿಯಂತ್ರ ಶೀಮೆ ಕಟ್ಟುವಂತೆ ಫವುಜುಲ್ಲಾಖಾನರ ಸಂಗಡ ಫವುಜು ಕಳುಹಿಸಿ ನವಾಬರು ನಗರಕ್ಕೆ ಬಂದರು.

ಯೀ ಸುದ್ದಿ ತಿಳಿದು ಮಿರ್ಜಿಯಿಂದಾ ಗೋಪಾಲರಾಯರು ಫವುಜು ಸುದಾ ಬಂದು ಫವುಜುಲ್ಲಾಖಾನರಿಗೂ ಅವರಿಗೂ ಲಡಾಯಿ ಆಗಿ ಗೋಪಾಲರಾಯರ ಫವುಜು ಶಿಕಸ್ತಾಗಿ ಅವರ ಕಡೆ ಮೇಘಶ್ಯಾಮ ರಾಮಯೆಂಬವರನ ಖಾನನು ಜಕೂರರು ಫಡಾಮ ತಂದರು.

ಶಖೆ ೧೮೬೫ನೆ ಸ್ವಭಾನು ಸಂವತ್ಸರದಲ್ಲು ಸದರಿ ನವಾಬರ ಹಂಗಾಮು ಕೇಳಿ ಪುನೆದಿಂದಾ ಪೆಷವೆ ಮಾಧವರಾವು ಬಳ್ಳಾಳರು.... ಫವುಜಿನಿಂದಾ ಹೊರಟು ಕ್ರಿಷ್ಣನದೀ

ದಾಟಿ ಬರುತ್ತಾಲೆ ಶೀರ್ಯದ ಕಡೆಯಿಂದ ಮೀರ ಅಲ್ಲ ರಜಾಖಾನರನು ಕರಶಿಕೊಂಡು ನಗರದಿಂದಾ ಹೊರಟು ಫಉಜುಲ್ಲಾ ಖಾನರು ಸಹಾ ಕೂಡಿ ಸವಾರು ೧೦,೦೦೦, ಬಾರು ೨೦,೦೦೦, ಅಹಷಾಂಮು ೨೦,೦೦೦ ಸಹಾ ಮೈತೋಫುಖಾನ ರಟಹಳಿ ಮೈದಾನದಲ್ಲಿ ಯಿಳಿದ ಕಾರಣ ಮಾಧವರಾಯರು ಮೂರು ತಿಂಗಳು ಧಾರವಾಡಕ್ಕೆ ಮುತ್ತಿಗೆ ಹಾಕಿ ಕವಲಿನ ಮೇಲೆ ತೆಗೆದುಕೊಂಡು ನವಾಬರು ಮೊಕಾಬಿಲೆಗೆ ಬಂದು ಯಿಳಿದು ಕಯೆಕ ಬಾಡಕ್ಕೆ.... ದ ಬಳಿ ಜಗಳವಾಗುತ್ತಯಿತ್ತು. ತಾರಣ ಸಂವತ್ಸ.... ಸದಲ್ಲಿ ನಗರದಿಂದ್ದ ಗುರಿಕಾರ ವೆಂಕಟಪತ್ತೈಯ್ಯನವರು ಹಮರಹ ಮಿಟ್ಟಿಖಾನ ಅಜಂಪುರದ ಮಲ್ಲಿಕಸಾಬಿ ೫೦೦ ಕುದುರೆ ಸಹಾ ಆವಾಗಾ ಕಣಿವೆ ಬಳಿಗೆ ಹೋಗಿ ಅಲ್ಲಿಗೆ ಬಂದು ಯಿದ್ದ ಮರಾಟೇರ ಕುದುರೆ ೬,೦೦೦ ಮೇಲೆ ಶಬಕೂನು ಮಾಡಿ ೪೦೦ ಕುದುರೆ ಹಿಡಿದುಕೊಂಡು ಕಡಮೆ ಫವುಜು ಫರಾರಿ ಮಾಡಿ, ಕಣಿವೆ ಬಂದೋಬಸ್ತುಮಾಡಿ ಬಂದರು.

ಆ ಬಳಿಕ ವಂದು ದಿವಸ ಯರಡು ಫವುಜು ತಯಾರಾಗಿ ಸಾಯಂಕಾಲದವರಿಗೂ ಮೈದಾನ ಲಡಾಯಿ ಆಗಿ ಯೆರಡು ಕಡೇಯಲ್ಲೂ ಬಹಳ ಜನ ಜಾಯಿಜಖಮಿ ಆಗಿ ರಾತ್ರೆ ನವಾಬರು ಹಿಂಜಗ್ಗಿ ಗಿಡದ ಮಾರ್ಗಾ ಹಿಡಿದು ಆನವಟ್ಟಿ ಬಳೀ ಬಂದು ಯಿಳಿದ್ದರಿಂದಾ ಮಳೆಗಾಲ ಬಂತಾಗಿ ಮರಾಟೇರ ಫವುಜು ಮೊದಲು ಯಿದ್ದ ಬಳಿಯಲ್ಲೇ ಯಿದ್ದು ಕಯೆಕಬಾಡದಲ್ಲಿ ಮಾತ್ರಾ ಕೊಂಚ ಕೊಂಚ ಜಗಳವಾಡುತ್ತಾ ಮಳೆ ತಗ್ಗುವದೂ ಆನೆವಟ್ಟಿ ಬಳಿಗೆ ಕಪೋತ ಗುಡ್ಡದ ಬಳಿಯಿಂದಾ ಮರಾಟೇರ ಫವುಜು ಬಂದು ಲಡಾಯಿ ಆಗುತ್ತಾಯಿತ್ತು.

ವಂದು ದಿನ ಲಡಾಯದಲ್ಲಿ ಮರಾಟೇರ ಅಂಗೀಜು ಮಾಡಿ ಕುದುರೆಗಳ ಚಲಾಯಿಸಿ ಹೊಡದ್ದರಿಂದಾ ನವಾಬರ ಫವುಜು ಪೈಕಿ ಬಾರು ೬,೦೦೦ ಕುದುರೆ ೨,೦೦೦ ಸಹಾ ಸಖ್ತಿಯಾಗಿ ದಿವಾನ ವೆಂಕಟರಾಮ ಮತ್ತು ಕೆಲವು ಮಾತಬರ ಸರದಾರು ಸಹಾ ಹತವಾಗಿ ಕೆಲವರು ಕೈಶೆರೆ ಶಿಕ್ಕಿ ಆ ಪೈಕಿ ಶಿಕ್ಕಿದ ಬರಕ್ಕಿ ವೆಂಕಟರಾಯನ ಯಿವರ ಮಗ ಶ್ರೀನಿವಾಸ ರಾಮಚಂದ್ರರಾಯ ಸ್ವಕೀಯಜನ ನೂರಾರು ಸಹಾ ಹೊಕ್ಕು ಬಿಡಿಶಿಕೊಂಡು ಕೇವಲಾ ಫವುಜು ಹಲಾಕಾಗದಂತೆ ಚಿತ್ರಕಲ್ಲು ಮೆದೆಕೆರೆನಾಯ್ಕರು ನವಾಬರ ಕುಮುಕಾಗಿ ಬಹಳ ಲಡಾಯಿಮಾಡಿ ಅಲ್ಲಿಂದಾ ಹಿಂಜಗ್ಗಿ ನವಾಬರ ಫವುಜು ಸುದಾ ನಗರದ ಬಳಿ ಕೂಬತ್ತಿ ಮಹಲೆಗ ಬಳಿಗೆ ಬಂದು ಯಿಳಿದರು.

ಮರಾಟೇ ಫವುಜು ಬಿದರಿ ಹೊಂನ್ನಾಳಿ ಕುಮಶಿ ಸಹಾ ತೆಗೆದುಕೊಂಡು ಅನಂತಪುರಕ್ಕೆ ಫವುಜು ಯಿಳಿದ್ದರಿಂದಾ ಅವರಿಗೆ ಪುನೇದಿಂದಾ ಮಾಧವರಾಯರ ಚಿಕ್ಕಪ್ಪಾ ರಾಘೋವಾನವರು ೨೦,೦೦೦ ಕುದುರೆ ಸಹಾ ಬಂದು ಮಾಧವರಾಯರ ದಂಡಿಗೆ ದಾಖಲಾದ ಕಾರಣ ನಾರೋಶಂಕರನೆಂಬ ಸರದಾರನ ಗುಜರಾತಿ ರಾಘೋಖಾನನ ಮಾರೀಫತ್ತು ನವಾಬರು ಸಲ್ಲಾ ಮಾಡಿದ ವಿವರ. ಪೆನುಗೊಂಡೆ ಕೊಡಿಕೊಂಡೆ

ಮಡಿಕೆಶೀಯರ್ವ ವಗ್ಯೆರೆ ಮುರಾರಿ ರಾಯರ ಶೀಮೆ ಅವರಿಗೆ ಬಿಡಿಶಿ ಕೊಡುವಂತ್ತೆ ಕಲಂ ೧ ಸವಣೂರವರ ಗೋಜು ಹೋಗದಂತೆ ಕಲಂ ೧ ಬಂಕಾಪುರ ಮರಾಟೀರಿಗೆ ಬಿಟುಕೊಟ ಕಲಂ ೧,೩೨,೦೦,೦೦೦ ರೂಪಾಯಿ ಮರಾಟೇರಿಗೆ ಪೇಷ್ಕಶಿ ಕೊಟ ಕಲಂ ೧ ಯೀ ಮೇರೆಗೆ ಸಲ್ಲಾ ಆಯಿತು.

ಶಖೆ ೧೬೮೭ನೆ ಪಾರ್ಥಿವ ಸಂವತ್ಸರದ ಚೈತ್ರ ಶು ೨ ಲ್ಲು ಶ್ರೀಮಂತ ಮಾಧೂರಾಯರು ಘವುಜು ಪುನೆಗೆ ಹೊರಟುಹೋದರು. ಅಲ್ಲಿಂದಾ ಚಿತ್ರಕಲ್ಲು ವಗ್ಯೆರೆ ಪಾಳೆಗಾರಿಗೆಲ್ಲ ಸ್ಥಳಕ್ಕೆ ಅಪ್ಪಣೆ ಕೊಟ್ಟು ನವಾಬರು ನಗರಕ್ಕೆ ದಾಖಲಾದರು.

ಯೀ ಮಧ್ಯೆ ೧೬೮೫ನೆ ಸ್ವಭಾನು ಸಂವತ್ಸರದಲ್ಲು ಬೆಂಗಳೂರಿಂದ್ದಾ ಯಿಬ್ಬರಾಯಿಮ ಸಾಹೆಬರು ನಂದೀಗಡ ಸುತ್ತಾ ಸವಾರಿಮಾಡುತ್ತಾ ಯಿರುವಲ್ಲಿ ಬೆಟ್ಟದ ಮೇಲೆ ತಿಂನ್ನುವುದಕ್ಕೆ ಅವಕಾಶವಿಲ್ಲದೆ ಶೀಯರ್ವದಲ್ಲಿ ಯಿದ್ದ ಮೀರಸಾಬರ ಮುಖಾಂತ್ರ ಚಿಕ್ಕಬಳ್ಳಾಪುರದ ಅರಸುಗಳು ಕೌಲಾಗಿ ಬಾಬಾಸ್ತು ಸುದಾ ಅವರನ ಖ್ಯೆದುಮಾಡಿ ಬೆಂಗಳೂರಿಗೆ ಕಳುಹಿಸಿ ಅಲ್ಲಿಂದಾ ಕೆಲವು ದಿನದ ಮೇಲೆ ಕೊಯಮುತ್ತೂರಿಗೆ ರವಾನೆ ಮಾಡಿದರು.

ಆ ಬಳಿಕ ಯಿದೇ ಪಾರ್ಥಿವ ಸಂವತ್ಸರದಲ್ಲೂ ಶಾಬಾಸಾಬರ ಅಳಿಯ ಲಾಲಾಮಿಯಾನವರ ಸಂಗಡ ಗಡಸವಾರು ೩೦೦೦ ಬಾರು ೪೦೦೦ ಪ್ಯಾದೆ ೬೦೦೦ ಸಹಾ ಕೊಟ್ಟು ಬಸವಾಪಟ್ಣದ ಬಳಿ ತೈನಾತಿ ಯಿಟ್ಟರು. ಪಾಳೆಗಾರ ಖಂಡಣೆ ಹಣದ ವಸೂಲಿ ಬಗ್ಯೆ ಘೈಜುಲ್ಲಾಖಾನನ ಘೌಜು ಸುದಾ ಕಳುಹಿಸಿ ಕೊಟರು.

ಯೀ ಶಖೆ ೧೬೮೭ನೆ ಪಾರ್ಥಿವ ಸಂವತ್ಸರದಲ್ಲೂ ನವಾಬರು ಘವುಜು ಸುದಾ ಹೊರಟು ಕೊಡಿಯಾಲದ ಬಳಿಗೆ ನಗರದಿಂದ್ದಾ ಬಂದು ಯಿಳಿದರಾಗಿ ಆವಾಗಾ ಕನಿಯಾರೂರು ಪಾಳೆಗಾರ ಅಲ್ಲಿ ರಾಜನೂ ನವಾಬರಿಗೆ ಬರಶಿ ಕಳುಹಿಸ್ತ ವಿವರ. ಕಲ್ಲಿಕೋಟೆ ಶೀಮೆ ಬೆಬಂದ್ದಾಗಿ ವಬ್ಬರ ಗೊತ್ತುಗುರಿಯಿಲ್ಲದೆ ಯಿಧೆ. ತಂಮ್ಮ ಸವಾರಿ ಬಂದರೆ ನಾನೂ ತಂಮ್ಮ ಖಿಜಮತ್ತಿನಲ್ಲಿ ಹಾಜರಾಗುತ್ತೇನೆಂದು ಬರಶಿ ಕಳುಹಿಸ್ತ ಕಾರಣ ಅಷ್ಟಕೆ ಮೊದಲೆ ಸಾಬಕು ಕಡಪೆ ಅಬ್ದುಲ್ ಮಜೀದ್‌ಖಾನರ ಕಡೆಯಿಂದ್ದಾ ಬಾರಾಮಹಲು ಘವುಜುದಾರಿ ಶೀಮೆ ಸಹಾ ಅಸತ್ತಖಾನ ಮೆಹಕರಿಯಂಬ ದೊಡ್ಡ ಸರದಾರ ಮರಾಟೀರ ಕಡೆಯಿಂದ ೧೨,೦೦೦ ಸಾವಿರ ಕುದುರೆ ಸಹಾ ಬಾರಾಮಹಲು ಸಾಧಿಸುವ ಬಗ್ಯೆ ಬಂದು ಯಿದ್ದ. ಅಮ್ರುತರಾಯನೆಂಬ ಸರದಾರಂನ್ನು ಐದು ಸವಾರಿಂದ್ದಾ ಕುದುರೆ ಚಲಾಯಿಸಿ ಅಮ್ರುತರಾಯನ ಹೊಡದು ಹಾಕಿ ಪತ್ತೆ ಮಾಡಿಯಿದ್ದವರನ ಮಜೀದಖಾನರ ಮಗ ಹಲ್ಲಿಮಖಾನರು ಮತ್ತೊಬ್ಬ ಅಜೀಜಖಾನರೆಂಬವರನ ಯಿಟ್ಟು ಯಿರಲಾಗಿ ಆತನಿಂದಾ ಬಾರಾಮಹಲಂನು ನವಾಬರು ತೆಗೆದುಕೊಂಡು ಕೆಲವು ದಿನ ಯೀ ಅಸತ್ತಖಾನ್ ಮೆಹಕರಿಯವರಿಗೆ ಬಾರಾಮಹಲು ಕೊಟ್ಟುಯಿದ್ದು ಕಲ್ಲಿಕೋಟೆ ಸಾಧಿಸೂವಂತ್ತೆ ಕಳುಹಿಸಿಯಿದ್ದಲ್ಲಿ ಅವರು ಹೋಗಿ ಅಲ್ಲಿ ಬಹಳ ಲಡಾಯಿ ಮಾಡಿ ಯುದ್ಧದಲ್ಲಿ ಅಸತ್ತಖಾನ

ಮೆಹಕರಿಯವರು ಸಂದುಹೋಗಿ ಯಿದ್ದ ಶಿಟ್ಟಿನಿಂದಾ ನವಾಬರು ಕಲ್ಲಿಕೋಟೆಗೆ ಮೊಹಿಂ ಹೊರಟರು.

ಯೀ ಮಧ್ಯೆ ಸ್ವಭಾನು ಸಂವತ್ಸರ ತಾರಣ ಸಂವತ್ಸರದಲ್ಲೆ ಆರ್ಕಾಟು ಮಮದಲ್ಲಿ ಖಾನರ ಬಗೆ ಸರದಾರ ಯಿಸು ಮಹಂಮದ ಕುಮುಂದಾರನೆಂಬವನಿಗೆ ಮಧುರೆ ಜಿಲ್ಲೆ ಯೀ ಶೀಮೆ ಸಹಾ ಜಹಗೀರಾಯಿತು. ಫವುಜು ಬಂದೀ ಮಾಡಿ ಯಿವನಿಗೂ ಮಹಂಮದ ಅಲ್ಲಿಖಾನರಿಗೂ ದ್ವೇಷಾ ಬಿದ್ದು ಯಿಂಗ್ರೇಜು ಬಹದರವರ ಫವುಜು ಸುದಾ ಮಧುರೆ ಮುತ್ತಿಗೆ ಯಿಳಿದು ೩.೭ ತಿಂಗಳು ಲಡಾಯಿ ಆಗೂವಲ್ಲಿ ಕುಮುಂದಾರ ಮಜಕೂರಂನ್ನು ತನಿಗೆ ನೀವು ಕುಮುಕುಮಾಡಿ ಮಮದಲ್ಲಿ ಖಾನರ ಫವುಜು ಯೆಬ್ಬಿಸ್ತರೆ ಮಧುರೆ ಕಿಲ್ಲೆ ನಿಮಗೆ ಕೊಟ್ಟು ನಿಮ್ಮಲ್ಲಿ ನೌಕರಿ ಯಿರುತ್ತೇವೆಂದು ತಂನ ಕಡೆಯಿಂದ ವಕಾಲತ್ತಿನ ಬಗ್ಯೆ ಅಲ್ಲಿ ಜಮಾಂಖಾನರನ ನವಾಬರಲ್ಲಿ ಕಳುಹಿಸಲಾಗಿ ಮರಾಟೀರ ಹಂಗಾಮಿನಿಂದ್ದಾ ಯಿವರು ಹೋಗುವುದಕ್ಕೆ ಯಿಲ್ಲದೆ ಮಧುರೆಯಲ್ಲಿ ಬಹಳ ಲಡಾಯಿ ಆಗಿ ಕುಮುಂದಾರನ ಬಗೆ ದಿವಾನ ಶೇಷಗಿರಿರಾಯನೆಂಬವನು ಪಿತೂರಿಮಾಡಿ ಬಕಷಿ ಬಾವಾ ಸಾಬರನ ಖೈದು ಮಾಡಿಶಿದ್ದರಿಂದಾ ಬಂದೋಬಸ್ತು ತಪ್ಪಿ ಮಧುರೆ ಕಿಲ್ಲೆ ಮಹಮದಲ್ಲಿ ಖಾನರ ವಶವಾಗಿ ಯಿಸಾಮಹಂಮದ ಕುಮುಂದಾರನ ನಡತೆ ಅಟಕಾಯಿಸಿದರಿಂದ ಅಲ್ಲಿ ಜಮಾಖಾನರು ನವಾಬರಲ್ಲಿ ನಿಂತರು.

ಯೀ ಮಧ್ಯೆ ಶಕೆ ೧೬೮೫ನೆ ಸ್ವಭಾನು ಸಂವತ್ಸರದಲ್ಲು ಶೀರ್ಯದಿಂದ ಮೀರ ಅಲ್ಲಿ ರಜಾಖಾನರು ಹೋಗಿ ಸಾಬಕ್ಕು ಯೀಶ್ವರ ಸಂವತ್ಸರದ ಶಕೆ ೧೬೭೯ನೆ ಅಧಿಕ ಆಶ್ವಿಜ ಶುದ್ಧ ೧೧ರಲ್ಲು ಕಡಪೆ ನವಾಬ ಅಬ್ದುಲ್ ಮಜೀದಖಾನರು ಮರಾಟಿ ಬಲವಂತರಾಯರ ಜಗಳದಲ್ಲಿ ಮ್ರುತರಾಗಿ ಯಿವರ ಚಿಕ್ಕಪ್ಪಾ ಮೊಹದೀನ ಖಾನರು ಸಲ್ಲಾ ಮಾಡಿಕೊಂಡು ಅರ್ಧ ಶೀಮೆ ಗುರಂಕೊಂಡ ಸಹಾ ಮರಾಟೀರಿಗೆ ಕೊಟು ಯಿದ್ದರಾಗಿ ಅವರ ಕಡೆ ಭಗವಂತ ತ್ರಿಯಂಬಕ ಸುಭೇದಾರನೂ ಗುರಂಕೊಂಡೆಯಲ್ಲಿ ಯಿದ್ದ ಕಾರಣ ಸದರಹೂ ಮೀರ ಅಲ್ಲಿ ರಜಾಖಾನರು ಜಗಳಾ ಮಾಡಿ ಕವಲಿನ ಮೇಲೆ ಗುರಂಕೊಂಡೆ ಕಿಲ್ಲೆ ಶೀಮೆ ಸಹಾ ತಂಮ್ಮ ಕಡೆ ಮಾಡಿಕೊಂಡರು.

ಹೈದರಾಬಾದಿನಿಂದ ಪ್ರಾಕು ದವಲತ್ತು ಮಾಡುತ್ತಾ ಯಿದ್ದ ಸಲಾಬತ್ ಜಂಗರಿಗೆ ಪೈತ್ಯವೃದ್ಧಿಯಾಗಿ ಫರಾಷೀಸ ಮೂಸಾ ಭೂಶೀ ಪ್ರಬಲವಾದ್ದರಿಂದಾ ಸಲಾಬತ್ ಜಂಗರ ತಂಮ್ಮ ನಿಜಾಂ ಅಲ್ಲಿ ಖಾನರು ಯಿವರ ದಿವಾನ ವಿಠಲದಾಸ ಬಹದರ ಸಹಾ ಸಲಾಬತ ಜಂಗರನ ಖೈದುಮಾಡಿ ಮೂಸಾ ಭೂಶೀನಾ ಹೊರಡಿಶಿ ನಿಜಮಲ್ಲಿ ಖಾನರು ಯಿವರ ದಿವಾನ ಸಹಾ ದವಲತ್ತಿಗೆ ಕುಳಿತು ಅಲ್ಲಿಂದಾ ಮೆಹೀಮರಾತಬು ಯಿನಾಯಿತನಾಮಾ ಸಹಾ ಆರ್ಕಾಡ ಮಹಂಮದ ಮಹೂಕೂಜೀ ಖಾನರ ಸಂಗಡಾ ನಾಖುಷಿಯಾಗಿ ಬಂದಿದ್ದು ನಗರದಿಂದ ಪುನಹಾ ಚಂನಪಟ್ಟಣಕ್ಕೆ ಹೋದರು.

ಮೊದಲು ನವಾಬರು ಖಂಡೇರಾಯನ ಅವಾಂತರಕ್ಕೆ ಹೊರಟಾಗ ಕೋಡಿಹಳ್ಳಿ ಶ್ಯಾನಭೋಗ ನಾರಣ್ಕೈಯ್ಯಾ ಯಂಬವನೂ ಮಧ್ಯೆ ಮಾರ್ಗದಲ್ಲಿ ಕಂಡು ಅರಳುಹಿಟ್ಟು

ನೀರು ಕೊಟನೆಂಬ ನೆನಪಿನಿಂದಾ ನಗರಕ್ಕೆ ಅವನು ಬಂದು ಪರದೇಶಿ ಯಿದ್ದವನ ವಂದು ದಿವಸ ನೋಡಿ ಗುರುತಹಿಡಿದು ಅವನಿಗೆ ಖುಮಿಷಿ ಹಾರಳಹಳಿ ಅಮುಲು ಕಿಲ್ಲೆದಾರಿ ಪಾಲಖೀ ಸಹಾ ಕೊಟು ಸರಫರಾಜು ಮಾಡಿದರು. ಹಾರೆಹಳಿ ಆಮೀಲ ವೆಂಕಟಪತಯ್ಯನು ಅದೇ ಸಮಯದಲ್ಲಿ ಸಂಗಡ ಷರತು ಆದನೆಂಬ ಪ್ರೇಮದಿಂದ ಕೆಲವು ಗಡಿಗಳ ಬದುಕು ಕೊಟು ಸರಫರಾಜು ಮಾಡಿದರು.

ಸಾರಂಗಿ ವೆಂಕಟಗಿರ್ರೈಯ್ಯನೆಂಬವನು ಮೊದಲು ತಂಮ್ಮ ಸಂಗಡ ಮೆಹನತ್ತು ಮಾಡಿದನೆಂದು ಮೀರಸಾಬರ ಯಿಜನಿನಲ್ಲಿ ತುಮಕೂರು ಮಾಮಲೆಮಾಡಿ ಕೆಲವು ಹಣ ಕಾಸುಗಳ ಹಾಳುಮಾಡಿಯು ತಿಂದು ಸಹಾಯಿದ್ದು ತಹಶೀಲ ಅವನಿಗೆ ಆಗುವದಂನ್ನು ನವಾಬರು ಕೇಳಿ ಸ್ವಾರರ ಕಳುಹಿಶಿ ಕರಶಿ ಅವನಿಗೆ ಕವಲೆ ದುರ್ಗದ ಮಾಮಲೆ ಕಿಲ್ಲೆ ಸಹಾ ಕೊಟು ಸರಫರಾಜು ಮಾಡಿದರು.

ಸದರಿ ಶಖೆ ೧೬೮೭ನೆ ಪಾರ್ಥಿವ ಸಂವತ್ಸರದಲ್ಲು ನವಾಬರು ನೀಲೇಶ್ವರನ ಮಾರ್ಗವಾಗಿ ಮಲೆವಾರು ದೇಶದ ಮೇಲೆ ಕನಿಯಾನೂರು ಬಳಿಗೆ ದಂಡು ಹೋಗಿ ಅಲ್ಲಿ ರಾಜನ್ನು ಭೇಟಿಯಾಗಿ ಅವನ ಕಡೆ ಕೆಲವು ಮಾಪಿಳ್ಳೆ ಜನ ಸಹಾ ಹಮರಹಾ ಹೊರಟನಾಗಿ ಸಮುದ್ರದ ಗಟಿನಲ್ಲೆ ಚಿರಕಲ್ ಕೋಟಂಗಡಿ ಕಡತಾಡು ವಗೈರೆ ೫ ಸಂಸ್ಥಾನ ೨೫೦೦೦ ಜನ ಪರಿಯಂತ್ರ ಯಿದ್ದವರನ ಹೊಡದು ನಡವಲ್ಲಿ ಯಲ್ಲರಿಗೂ ಯೀ ಕೆಂಪು ಕುಡುತ್ತೆ ಕರಿಪಾಗು ಸನೀನ್ನು ಡಬ್ಬಾ ವಗೈರೆ ಕಾಣದ ನಾಯಿಮಾರರು ಯೀ ಫವುಜಿನ ದಾಷತ್ತಿಗೆ ಮೋಡಿ ಹೋಗಿ ಗಿಡಾಬಿದ್ದು ಕೆಲವರು ಜಗಳವಾಗಿ ಸತ್ತು ಶೀಮೆ ಯಾವತ್ತು ಠಾಣೆಯಾಯಿತು.

ಶಕೆ ೧೬೮೮ನೆ ವ್ಯಯ ಸಂವತ್ಸರದ ಚೈತ್ರ ಶು ೧ ಲ್ಲೂ ನವಾಬರು ಕಲ್ಲಿಕೋಟೆ ಬಳಿ ಹೋಗಿ ಯಿಳಿಯುತ್ತಾರೆ. ಕಲ್ಲಿಕೋಟೆ ಧೊರೆ ರಾಜಾ ಮಾನವಿಕ್ರಮನೆಂಬವನು ಕವಲ ಮೇಲೆ ಯಿಳಿದು ೨೦೦೦ ನಾಯಿರು ಜನ ಸುಧಾ ಭೇಟಿಗೆ ಬರಲಾಗಿ ಮುತ್ತಿನ ಹಾರ ಕಡಗ ವಂಟಿ ಖಿಲ್ಲತ್ತು ವಗೈರೆ ಕೊಟ್ಟು ಸಂಸ್ಥಾನಾ ನಿನಗೆ ಕೊಡುತ್ತೇವೆ. ನಮ್ಮ ಫವುಜಿನ ಖರ್ಚಿಗೆ ೪೦,೦೦,೦೦೦ ಶಾಣಾರಿ ಕಾಸು ಕೊಟು ನಂಮ್ಮ ಫರಮಾಬ ದಾರಿಯಲ್ಲಿ ಯಿರು ಯಂದೂ ಮೊಕರೂರು ಮಾಡಿ ನಾಲ್ಕು ಬುರುಜಿನ ಜಾರದಿವಾಲಿ ಚಿಕ್ಕುಕಿಲ್ಲೆ ಕಲ್ಲಿಕೋಟೆ ಬಳಿ ಡೇರಿ ಬಾಕಿ ಯಿಳಿದು ದರಹೂ ರಾಜನೂ ವಂದುಗೂಡಿಶಿ ಯೆಳಿಶಿ ನಾಲ್ಕೈದು ದಿನದ ಮೇಲೆ ಖಂಡಣೆ ಕೇಳಿದಲ್ಲಿ ರಾಜಾಗೆ ಮಾತು ಕೊಟು ಯಿದ್ದ ಕೈಕೆಳಗಣವರೆಲ್ಲ ತಿರುಗಿಬಿದ್ದು ಹಣ ಸಲ್ಲದೆ ಹೋದ್ದರಿಂದ್ದ ರಾಜನ ಮೇಲೆ ಪಹರೆ ಕಳುಹಿಸಿ ಹಣಕ್ಕೆ ಸಜಾನಲ್ಲೀ ಆದಲ್ಲಿ ಅಧಿಕಾರಿಗಳ ಮೇಲೆಲ್ಲಾ ಪಹರೆಯಿಟ್ಟದ್ದರಿಂದಾ ರಾಜನು ಗುಡಿ ಬಾಗಿಲ ಹಾಕಿಕೊಂಡು ವಳಗೆ ಬೆಂಕಿ ಹಚ್ಚಿಕೊಂಡು ಮರದುಹೋದ್ದರಿಂದ ಸಂಗಡಲೆ ನವಾಬರು ತಿಳಿದು ನೀರು ಹಾಕಿಶಿ ನೋಡಿದಾಗ್ಯೂ ಮೀರಿಹೋಯಿತಾಗಿ ಅವನ ಕಡೆ ಜನರಿಂದ ಯಾವತ್ತೂ ವಂದಕ್ಕೆರಡು ವಸೂಲಿಮಾಡಿಕೊಂಡು ಮೊದಲಿದ್ದ ಚಾರು ದಿವಾಲಿ ದೊಡ್ಡದಾಗಿ ಜಂಗಿ ಕಿಲ್ಲೆ ಕಟ್ಟಿಸಿ ತೋಫು ವಗೈರೆ ಯಿಟ್ಟು ದುರಸ್ತುಮಾಡಿ

ಅಲ್ಲಲ್ಲಿ ಠಾಣೆಯಿಡೋ ಬಳಿಲೆಲ್ಲಾ ಯಿಟ್ಟು ಫೌಜುದಾರಂನ್ನ ಬೇರೆ ನಿಲ್ಲಿಸಿ ತೆರಕಣಾಂಬಿ ಶಂಕರಗೌಡನ ಮಗ ಕೋಯಮುತ್ತೂರು ಮಾದಂಣಗೆ ಕಲ್ಲಿಕೋಟೆ ಸಂಸ್ಥಾನದ ಬದುಕು ಕೊಟು ಹಿಂತ್ತಿರುಗಿ ಬರುತ್ತಾ ಮಳೆಯಿಂದ್ದಾ ಫವುಜು ಕಚಾಯಿಸಿ ಹೊಂನ್ನಾಳೀ ಮಾರ್ಗದಿಂದ ಪಾಲಘಾಟೀ ಕಚೇರಿ ಬಳಿಗೆ ಬರುತ್ತಾಲೆ ಅಲ್ಲಿನ ಅಮುಲುದಾರ ನಾಯರ ಯಿಟ್ಟಿಕೊಂಬಚ್ಚನೆಂಬವನು ಬಹಳ ಸರಂಜಾಮು ವದಗಿಶಿದ್ದರಿಂದಾ ಅವನ ಸ್ತಳಾ ಅವನಿಗೆ ಕೊಟು ೧೦೦೦೦೦ ರೂಪಾಯಿ ಖಂಡಣೆ ತೆಗೆದುಕೊಂಡು ಕೊಚ್ಚಿ ಪಾಳೆಗಾರನಿಂದ ವರುಷ ೧ ಕ್ಕೆ ನಾಲ್ಕತ್ತು ಸಾವಿರ ವರಹಾ ಪ್ರಕಾರ ಬರುವಂತ್ತೆ ಖಂಡಣೆ ಮಾಡಿ ಹಣಕ್ಕೆ ನಿಶಾ ಮಾಡಿಕೊಂಡು ಅಲ್ಲಿಂದಾ ಕೋಯಮುತ್ತೂರಿಗೆ ಬಂದು ದಾಖಲಾದರು.

ಸದರ ಹೂ ವ್ಯಯ ಸಂವತ್ಸರದ ಚೈತ್ರಮಾಸದಲ್ಲು ಪಟ್ಟಣದಲ್ಲಿ ಚಿಕ್ಕಕೃಷ್ಣರಾಜ ಒಡೆಯರು ಸ್ವರ್ಗಸ್ಥರಾದ ಶುದ್ದಿ ತಿಳಿದು ಕಲ್ಲಿಕೋಟೆ ಬಳಿಯಣಿಂದ ನವಾಬರು ಅಪ್ಪಣೆ ಪ್ರಕಾರ ಪಟ್ಟಣದಲ್ಲಿ ಮೊಕದಂ ಸಾಬರು ಕರ್ತರ ಮಗ ನಂಜರಾಜ ವಡೆಯರಿಗೆ ಪಟ್ಟಾಭಿಷೇಕ ಮಾಡಿದರು.

ವ್ಯಯ ಸಂವತ್ಸರದಲ್ಲಿ ಕೋಯಮುತ್ತೂರಲ್ಲಿ ನವಾಬರು ಯಿರುವಾಗ್ಯೆ ಮಲೆವಾರು ಕಲ್ಲಿಕೋಟೆ ಶೀಮೆಯಲ್ಲಿ ಕೆಲವು ಅರಸುಗಳು ಯಿಪ್ಪತ್ತು ಮೂವತ್ತು ಸಾವಿರ ಜನ ಸಹಾ ಗುಂಪುಕೂಡಿ ಶರಾರತ್ತು ಮಾಡಿ ಅಲ್ಲಿ ಠಾಣೆಯಿದ್ದವರನ್ನೆಲ್ಲಾ ಹೊಡದು ಮಳೆಗಾಲ ಹೊಳೆಗಳೆಲ್ಲಾ ಕಟ್ಟಿಯಿರುವದರಿಂದ ಕುಮುಕು ಬರುವುದಕ್ಕೆ ಯಿಲ್ಲವೆಂದು ತುಂಟಾಟವ ಮಾಡುವ ವರ್ತಮಾನ ನವಾಬರು ತಿಳಿದು ಯಂಟು ದಿನದ ರೊಟ್ಟಿ ಬುತ್ತಿ ಸಹಾ ಧಡೇ ಫವುಜು ತೆಗೆದುಕೊಂಡು ಹೊರಟು.... ಗೆರೆಗೆ ತಲಪಿ ನಾಲ್ಕೆಂಟು ಕಡೆ ಫವುಜು ಕಳುಹಿಸಿ ನಾಯರನೆಲ್ಲಾ ಹೊಡದು ಶಿಕ್ಕಿದವರ ಗಲ್ಲು ಹಾಕಿ ಹತ್ತು ಹದಿನೈದು ಸಾವಿರ ಜನ ಪರಿಯಂತ್ರ ಪಟ್ಟಣದ ಶೀಮೆಗೆ ರವಾನೆ ಮಾಡಿ ಪಾದಾಕ್ರಾಂತರಾದವರನೆಲ್ಲಾ ಮಂನಿಶಿ ಬಂದೋಬಸ್ತು ಮಾಡಿ ಠಾಣೆಗಳನೆಲ್ಲಾ ಬಲಕಾಯಿಸಿ ಬರುತ್ತಾ ಪಾಲಘಾಟೀಚೇರಿ ಕೋಟೆ ಕಟುವಂತ್ತೆ ನೇಮಕಾ ಮಾಡಿ ಪುನಹಾ ಕೋಯಮುತ್ತೂರಿಗೆ ಬಂದು ದಾಖಲಾದರು.

ಮೊದಲು ನಗರದಿಂದಾ ಯೀಗಲ ಶಾಮರಾವು ರಂಗರಾಯನ ಸಹಾ ಫವುಜು ಭರ್ತಿ ನಿಮಿತ್ಯ ಹತ್ತು ಲಕ್ಷ ರೂಪಾಯಿ ಕೊಟು ನವಾಬರು ಕಳುಹಿಸಿಯಿದ್ದರಾಗಿ ಯಿವರು ನಾಗನೂರು ವಗ್ಯೆರೆ ಪ್ರಾಂತ್ಯಕ್ಕೆ ಹೋಗಿ ಶಿವಾಜಿ ಕೇಶವರಾಜೀ ಬಹದರ ಯಂಬ ಯಿಬರು ಮಾತಬರು ಸರದಾರ್‍ರು ವ್ಯೆ ಫವುಜು ಸವಾರು ೪೦೦೦ ಸಾವಿರ ಸಹಾ ಕೋಯಮುತ್ತೂರಿಗೆ ವ್ಯಯಸಂವತ್ಸರದ ಭಾದ್ರಪದದಲ್ಲೂ ಬಂದ ಕಾರಣ ಅವರವರ ಮಾಫಕ್ಕು ಮರಿಯಾದೆ ಮಾಡಿ ಆನೆ ಕುದುರೆ ಜವಾಹಿರು ವಗ್ಯೆರೆ ಕೊಟ್ಟು ನೌಕರಿ ಯಿಟ್ಟರು.

ಯೀ ಮಧ್ಯೆ ವ್ಯಯ ಸಂವತ್ಸರದಲ್ಲೂ ಪೂರ್ವಕ್ಕೆ ಕುರುಕ್ಷೇತ್ರದಲ್ಲಿ ಅ-ಲ ಜಂಗಿನಲ್ಲಿ ಹತವಾದ ಪುನೇದ ಸದೋಬ ಆವಾಗ ಸಾಯಲಿಲ್ಲ ಜೀವದಲ್ಲಿ ಯಿದ್ದು ತಾನೆ ಯೀಗ

ಸದೋಬ ಬಂದಲ್ಲಿ ಪುನೆದವರು ಪಪ್ಪಲಿಲ್ಲವಾಗಿ ನಿಂಮಲ್ಲಿ ಬಂದಿದೇನೆ ಯಂದು ಅದೇ ರೂಪನಿಂದಾ ಪಬ ಬಂದು ನವಾಬರಲ್ಲಿ ಕೆಲವು ದಿನ ಪೆಷರಪಾಗಿ ಕೆಲವರ ನೋಡಿ ನೀವು ಫಲಾನೆ ವ್ಯಾಖ್ಯಾದಲ್ಲಿ ನಂಮಲ್ಲಿ ಬಂದು ಯಿಧಿರಿಯೆಂದು ಗುರುತುಗಳ ಹೇಳಿದೆಲ್ಲಾ ನಿಜವಾಗುತ್ತಾ ರೂಪಿನಲ್ಲಿ ಭೇದವಿಲ್ಲದೆ ಕೆಲವು ದಿನ ಯಿದ್ದು ಆ ಬಳಿಕ ಸುಳನೆಂದು ತಾತ್ಸಾರ..... ಹೊರಟುಹೋದನು.

ವ್ಯಯ ಸಂವತ್ಸರದ ಮಾಘದಲ್ಲಿ ಪುನೆದಿಂದಾ ಮಾಧವರಾಯರು ಹೊರಟು ತುಂಗಭದ್ರೆ ಆಚೆ ಬೆಂಣೆಹಳ್ಳದ ಬಳೀಲಿ ಯಿಳಿದು ಅಲ್ಲಿಂದಾ ಧಡೆ ಸವಾರಿ ಹೊರಟು ದೊಡಶೀರ್ಯದ ಬಳಿಗೆ ಠಾಕಾಠಾಟಿಕೆ ಬಂದು ಯಿದ್ದು ೧೫ ದಿವಸಾ ಮೀರಲ್ಲಿ ರಜಾಖಾನರ ಫವುಜಂನ್ನು ಶೀರ್ಯದ ಚಿಕ್ಕಕೆರೆ ಬಳೀಯಲ್ಲಿ ಉಟಾಯಿಸಿ ಅಲ್ಲಿ ಮೀರಾಸಾಬರ ತೋಪುಗಳು ಶಿಕ್ಕಲಾಗಿ ಅದೇ ಕೋಟೆಗೆ ಯೇರಿಶಿ ಹೊಡದು ಮೂರು ದಿವಸ ಲಡಾಯಿ ಆಗಿ ಕೊರಟಗೆರೆ ಚಿಕ್ಕಪ್ಪಗೌಡ ಮೀರಾಸಾಬರು ಸಹಾ ಶೀರ್ಯದ ಕೋಟೆ ಹೊಕ್ಕು ಯಿದ್ದವರ ಸಲ್ಲಾಮಾಡಿಕೊಂಡು ಶೀರ್ಯದ ಕೋಟೆ ಮರಾಟೀರ ವಶಕ್ಕೆ ಕೊಟ್ಟದ್ದರಿಂದ ಆವಾಗಾ ಮೀರಾ ಸಾಬರನ ಮಾಧವರಾಯರು ಪ್ರೀತಿ ಮಾಡಿ ಯಿವರ ಸಲತನತು ಯಿವರಿಗೆ ಕೊಟು ಸಂಗಡ ಅವರಂನ್ನು ಕರದುಕೊಂಡು ಮದ್ದಗಿರಿ ಹಳ್ಳದ ಬಳಿಗೆ ಹೋಗಿ ಯಿಳಿದರು.

ಆವಾಗಾ ನವಾಬರಿಗೆ ಮೀರಾ ಸಾಬರ ಮೇಲೆ ಶಿಟ್ಟು ಹುಟ್ಟಿ ಕೃತ್ರಿಮದಿಂದಾ ಯಿಬ್ಬರು ಚೋಪದಾರರಂನ್ನು ಬಿಟು ಯಿಲ್ಲದ ತಪ್ಪು ಹಾಕಿ ಹೊಡದು ಹೊರಗೆ ಹಾಕಿದ್ದರಿಂದ್ದಾ ಅವರು ಬಂದು ಮಾಧವರಾಯರಲ್ಲಿ ಚಾಕರಿ ನಿಂತು ನಾಲ್ಕೆಂಟು ದಿವಸ ಬೇಷರತ್ತಾಗಿ ವೊಡ್ಯಾಡಿ ಮದ್ದಗಿರಿ ತೆಗೆದುಕೊಂಡು ಚೆಂನರಾಯದುರ್ಗಕ್ಕೆ ಮುತ್ತಿಗೆ ಹಾಕಿಕೊಂಡು ಯಿರುವಾಗಾ ಮುರಾರಿರಾಯನ ದಂಡಿಗೆ ಯೀ ಯರಡು ಜನ ಚೋಪದಾರು ಬಂದು ಮೀರಾ ಸಾಬರ ದಂಡು ಲುಟಾಯ್ಸಿ ಯಿವರಿಗೆ ಬೇಡೀ ಹಾಕುವಂತೆ ಶ್ರೀಮಂತರ ಹುಕ್ಕುಂ ಆಗಿ ಯಿಧೆಯೆಂದು ಅವರು ತಕ್ಷಣವೆ ಮೀರಾ ಸಾಬರ ದಂಡಿನ ಮೇಲೆ ಬಿದ್ದು ಲುಟಾಯಿಸಿ ಮೀರಾಸಾಬರ ಮುಸ್ಕಿಕಟ್ಟಿದಲ್ಲಿ ಯೀ ಸುದ್ದಿ ಶ್ರೀಮಂತರಿಗೆ ತಿಳಿದು ಯೀ ಮೇರೆಗೆ ಮಾಡುವುದಕ್ಕೆ ಕಾರಣಯೇನು ಯಂದು ಮುರಾರಿರಾಯನ ಕರದು ಕೇಳಿ ಶಿಟ್ಟು ಮಾಡಿದಲ್ಲಿ ಮುರಾರಿ ರಾಯಾ ತಂಮ್ಮ ಹುಕುಂ ಆಗಿದೆ ಯಂದು ಚೋಪದಾರ್ರು ಹೇಳಿದರು ಯಂಬದಾಗಿ ಹೇಳಲು ಚೋಪದಾರ್‍ರ ವಿಚಾರಿಸಿದಲ್ಲಿ ಅವರು ಪರಾರಿಯಾದ್ದರಿಂದ್ದಾ ತಿಳಿದು ಯಿದೆಲ್ಲಾ ನವಾಬರ ಕೃತ್ರಿಮವೆಂದು ಮೀರಾಸಾಬರನ ಸರಫರಾಜು ಮಾಡಿ ಮುಂದೆ ಮೀರಾಸಾಬರು ನವಾಬರಲ್ಲಿ ಸೇರದೆ ತಂಮವರಾಗಿ ಯಿರುವಂತೆ ಆಣೆ ಭಾಷೆಗಳ ಮಾಡಿಸಿ ಯಿವರಿಗೆ ಗುರುಮುಕೊಂಡೆ ಜಹಗೀರಿ ತಂಮ್ಮ ಕಡೆಯಿಂದ ಕೊಡ್ಸಿಕೊಟರು.

ಮದ್ದಗಿರಿ ಪಂದೆರಡು ದಿನದಲ್ಲೆ ತೆಗೆದುಕೊಂಡು ಚಂನ್ನರಾಯ ದುರ್ಗಕ್ಕೆ ಮರಾಟೇರ ದಂಡು ಬರುವಾಗ್ಯೆ ನವಾಬರ ಬಳಿಯಿಂದ್ದಾ ಸರದಾರ ಖಾನರು ೨೦೦೦

ಬಾರು ೧೦೦೦ ಅಷಾಮು ಸಹಾ ಕುಮುಕು ಬಂದು ವಂದೆ ದಿನದಲ್ಲಿ ಸುತ್ತಣ ಹಳಿ ಹಗೆಯಗಳನ್ನೆಲ್ಲಾ ಕಿತ್ತು ಗಡದ ಮೇಲೆ ಜಖೀರಾ ತುಂಬುವುದರಲ್ಲೇ ಘವುಜು ಸುತ್ತಿಕೊಂಡು ೨೩ ದಿವಸ ಲಡಾಯಾಗಿ ರಸ್ತುಮುಗಿದು ಕಿಲ್ಲೆ ಕವಲಿಗೆ ಕೊಟ್ಟು ಸರದಾರ ಖಾನರು ಶಕೆ ೧೬೮೯ನೆ ಸರ್ವಜಿತ್ತು ಸಂವತ್ಸರದ ಚೈತ್ರದಲ್ಲು ನವಾಬರ ಬಳಿಗೆ ಹೊರಟು ಹೋದರು.

ಅಲ್ಲಿಂದ್ದಾ ಮರಾಟೀರ ಘವುಜು ಚಿಕ್ಕಬಳ್ಳಾಪುರಕ್ಕೆ ಹೊಸಕೋಟೆ ಪ್ರಾಂತ್ಯಕ್ಕೆ ಹೋಗಿ ಚಿಕ್ಕಬಳ್ಳಾಪುರದಲ್ಲಿ ಮೊದಲು ಯಿದ್ದ ಕತ್ತಿ ಗೋಪಾಲರಾಜೈಯ್ಯನವರ ನಗರಕ್ಕೆ ಕರಶಿ ಸೊದೆ ಶೀಮೆ ಅಮುಲು ಕಿಲ್ಲೆ ಸಹಾ ಕೋಟು ಬದರ ಜಮಾಖಾನರಿಗೆ ಬಳಾಪುರವಂನ್ನು ಕೊಟು ಯಿದ್ದರಾಗಿ ಸದರಹೂ ಮರಾಟೀರು ಹೊಸಕೋಟೆ ಚಿಕ್ಕಬಳ್ಳಾಪುರ ದೊಡ್ಡಬಳ್ಳಾಪುರ ಸಹಾ ತೆಗೆದುಕೊ.... ಬದರ ಜಮಾಖಾನರು ಕಡಪೆಗೆ ಹೊರಟುಹೋದರು. ಯಿವರು ಲಡಾಯಿ ಮಾಡುವಲ್ಲಿ ಚಿಕ್ಕಬಳ್ಳಾಪುರದ ಸ್ಥಳದ ಜನರೆಲ್ಲಾ ಫಿತೂರಾಗಿ ಮರಾಟೇರಿಗೆ ವಳಬಿದ್ದದ್ದರಿಂದ್ದಾ ಕೆಲಸ ಹದ ಕೆಟ್ಟದ್ದ ನೋಡಿ ತಂಮ್ಮ ಬಳಿಗೆ ೪೦ ಜನ ಮುಸಲುಮಾನರಿಂದ ಶಕ್ತಿಮೀರಿ ಜಗಳಾ ಮಾಡಿ ನಿರ್ವಹಿಸದೆ ಕೋಟೆ ಕವಲಿಗೆ ಕೊಟು ತಂಮ್ಮ ತಂದೆ ಮುರದಾ ಸಾಬರು ಕಾಜಿನ ಸಾಬರ ಹೆಸರಿಗೆ ನಾಮೂಷಿ ಬಂತೆಂದು ರೋಷದಿಂದ ನವಾಬರಿಗೆ ಮೊಖ ತೋರಿಸದೆ ಕಡಪೆ ಶಿದ್ದಟದ ಕಡೆಗೆ ಬದರ ಜಮಾಖಾನರು ಹೊರಟುಹೋದರು.

ಆ ಬಳಿಕ ನಿಜಾಮಲ್ಲಿಖಾನರಿಗೂ ನವಾಬರಿಗೂ ಜವಾಟಾ ನಡದು ಚಂದಾಸಾಬರ ಮಗ ರಾಜ ಮಲ್ಲಿಖಾನರಿಗೂ ಆರ್ಕಾಡ ದವಲತ್ತು ಕೊಡಿಸಬೇಕೆಂಬ ನಿಮಿತ್ಯ ಹೈದರಾಬಾದಿನಿಂದಾ ನವಾಬರಿಗೆ ಮಾಹೆಮರಾಡುತಬಿಗೆ ಯಿನಾಯೆತ್ತ ನಾಮಾ ಸಹಾ ಬಂದು ಮೊಗಲಾಯಿ ಘವುಜು ಸಹ ಶ್ರೀರಂಗಪಟ್ಟದ ಬಳಿಗೆ ಬರುವಾಗ್ಯೆ ಸರ್ವಜಿತ್ತು ಸಂವತ್ಸರದ ಚೈತ್ರಮಾಸದ.... ನವಾಬರು ಕೋಯಮತ್ತೂರಿನಿಂದ ಪಟ್ಟದ ಬಳಿಗೆ ಬಂದು ಮಹರ್ನವಮೀ ಮಂಟಪದ ಬಳಿ ಯಿಳಿದರು.

ಸದರಿ ಸರ್ವಜಿತು ಸಂವತ್ಸರದ ಚೈತ್ರದಿಂದ್ದಾ ಭಾದ್ರಪತದವರಿಗೂ ನವಾಬರು ಪಟ್ಟದ ಬಳಿ ಯಿದ್ದಾಗ ಕರಾಚೂರಿ ನಂಜರಾಜೈಯ್ಯ ಅರಶಿನವರು ಮೈಸೂರಲ್ಲಿ ಯಿದ್ದ ಕಾರಣ ಅವರ ಬಳಿಗೆ ನವಾಬರು ಹೋಗಿ ಕೇವಲಾ ವಿನಯಾಮಾಡಿ ಅವರ ಕೋಮಾರು ದಳವಾಯಿ ವೀರರಾಜೈಯ್ಯನವರಿಗೆ ಪಟ್ಟದಲ್ಲಿ ಬಹು ವುತ್ಸವದಿಂದಾ ಮದುವೆ ಮಾಡಿಸುತ್ತೇವೆಂಬದಾಗಿಯೂ ಮೂರುಲಕ್ಷ ವರಹಾದ ಶೀಮೆ ಅರಶಿನವರ ಮಹಲ ಖರ್ಚಿಗೆ ಕೊಡುತ್ತೇವೆಂಬ ಹಾಗೂ ಮೈಸೂರು ಬಾಗಿಲು ಮಳಬಾಗಿಲು ಸಹಾ ಅರಶಿನವರ ವಶಕ್ಕೆ ಕೊಡುತ್ತೇವೆಂಬ ಹಾಗೂ ಆಣೆ ಹಾಕಿ ಕರಾರುನಾಮಾ ಬರದು ಕೊಟು ಅಕಲಿ ಷಾಬಾದರ ಬಾಕೀಷಾ ಮೀರ ಫೈಜುಲ್ಲಾಖಾನರ ಕೈಯಿಂದಾ ಸಹಾ ಅರಶಿನವರ ಮಹಲಿಗೆ ಪಹರೆಯಿಟ್ಟು ಖೈದುಮಾಡಿ ಯಿವರ ಬಗೆ ವೋಬಳಯ್ಯ ಕಾಳಪ್ಪ ಮುಂತಾದವರಿಗೆ ತೋಷಿಖಾನ ದಫ್ತರ ವಗೈರೆ ಚಾಕರಿಗಳ ಕೊಟು ಮಲ್ಲೂ ಅಂಣಾ ಮುಂತಾದವರಿಗೆಲ್ಲಾ

ದಂಡ ದೋಷಾ ಕಟ್ಟಿ ಕಳಲೆ ತಾಲೊಕ್ಕು ಶೀಮೆ ಅರಶಿನವರ ಮನೆ ಖರ್ಚಿಗೆ ಕೊಟ್ಟು ತಾವೂ ಕಣಿವೆ ಕೆಳಗೆ ಸಾಗಿಹೋದರು.

ತರುವಾಯಾ ಸರ್ವಜಿತ್ತು ಸಂವತ್ಸರದ ಶ್ರಾವಣ ಭಾದ್ರಪತದವರೆಗೆ ನಿಜಾಮದ್ದವಲಾನವರು ಚೆಂನಪಟ್ಣದ ಬಳಿ ಯಿರುವಾಗ್ಯೆ ಠೀಪೂಸುಲತ್ತಾನರು ಹೋಗಿ ಭೇಟಿಯಾಗಿ ನವಾಬರು ಪಟ್ಣದಿಂದ್ದಾ ಹೊರಟು ಯರಡು ಸೈನ್ಯವೂ ಕೋಯಮುತ್ತೂರು ಮಾರ್ಗವಾಗಿ ಚೆಂಗಮಾವು ಬರುವಾಗ್ಯೆ ಆಗ ಆ ಸುಲತಾನರು ಬರಕ್ಕಿ ಶ್ರೀನಿವಾಸರಾಯರ ಸಹಾ ಹೊರಟು ಆರ್ಕಾಡಶಹರು ಚೆಂನಪಟ್ಣದ ಶಹರಿನಲ್ಲಿ ಮುಂತಾಗಿ ಲುಟಾಯಿಸಲಾಗಿ ಚೆಂನ್ನಪಟ್ಣದಿಂದಾ ಕರ್ನಲ್ ಉಟಿ ಕರ್ನಲ್ ಸಾಬರು ಯೀ ಸಮರ ಯಿಂಗರೇಜಿ ಬಹದರವರ ಕರಡೆ ಫವುಜು ಸುಧಾ ಮಮದಲ್ಲಿ ಖಾನರು ಹೊರಟುಬಂದು ಚೆಂಗ ಮಾವೂ ಬಳಿಗೆ ಹಾಜರಾದರು.

ಸದರಿ ಚೆಂಗಮಾವೂ ಬಳಿ ನಿಜಾಮಲ್ಲಿ ಖಾನರು ಫವುಜು ನವಾಬರ ಫವುಜು ಯರಡು ಪಂಗಡವಾಗಿ ಪರಂಗೀರ ಫವುಜಿನ ಮೇಲೆ ಜಂಗು ಮಾಡುವಲ್ಲಿ ಯಿಂಗ್ರೇಜರ ಫವುಜು ಯರಡು ಟೋಲೆಯಾಗಿ ಜಗಳವಾಗುವಲ್ಲಿ ನವಾಬರು ಹಿಂಮೆಟ್ಟದೆ ನಿಂತ್ತು ಮೊಗಲಾಯಿ ಫವುಜು ಹಿಂದಕ್ಕೆ ಬರ್ಸಿದ್ದರಿಂದ ನಿಜಾಮಲ್ಲಿಖಾನರು ಆನೆ ಕಾಲಿಗೆ ಅಂದೂ ಜಡಾಯಿಸಿ ಜಗಳಕ್ಕೆ ನಿಂತದ್ದ ಕಂಡು ನವಾಬರು ತಿಳಿಯ ಹೇಳಿ ಅವರನ ಹಿಂದಕ್ಕಿರಿಶಿ ತಾವು ಲಡಾಯಿಗೆ ನಿಂತರು.

ಆವಾಗಾ ಪರಂಗೀರ ಫವುಜು ಯರಡು ಟೋಲೆಯಿಂದಲೂ ಗುಂಡಿನ ಸಲಖು ಬಹಳವಾಗಿ ಮೀರ ಫವುಜುಲ್ಲಾಖಾನರು ಬಾಕೀಷಾ ಸಹಾ ಹತರಾಗಿ ಬಹಳ ಭಾರಿ ತೋಪುಗಳಿಗೆ ಕೀಲು ಜಡಾಯಿಸಿ ನವಾಬರ ಫವುಜು ಹಿಂಮೆಟ್ಟಿ ಲಡಾಯಿ ಮಾಡುತ್ತಾ ಬರುವಾಗಾ ಬಹಳವಾಗಿ ಮೋಡಾ ಮಳೆ ಶುರು ಆದ್ದರಿಂದ್ದಾ ತೋಪುಗಳಿಗೆ ಗುಂಡುಗಳ ಹಾಕದೆ.... ತುಂಬಿ ಆಕಾಶಕೆ ನವಾಬರು ಸಲಖುಮಾಡಲಾಗಿ ಮೋಡ ಸರಿದುಹೋಗಿ ಮಳೆ ನಿಂತದ್ದರಿಂದ್ದಾ ಪೂತಂಗೆರೆ ಬಳಿಗೆ ಉಭಯ ದಂಡೂ ಬಂದು ಯಿಳಿಯಿತು.

ಸದರಿ ಪೂತಂಗೆಱಿ ತಾಟೀ ತೋಪಿನಲ್ಲಿ ದಂಡು ಯಿಳಿದು ನಿಜಾಮದ್ದವಲಾ ಖಾನರವರ ಡೇರೇದಲ್ಲಿ ರೂಪಾಯೀ ಚಬುತರೆ ಹಮಾ ಜಿನಸು ನಾಂಣ್ಯ, ಮಿಲಾಯಿಸ್ತ ಮಿಲಾವು ನಜರು ಸಹಾ ನವಾಬರು ಮಾರಿಶಿ ಆನೆ ಕುದುರೆ ಜವಾಹಿರು ಖಿಲ್ಲತ್ತು ವಗ್ಯೆರೆ ಹ್ಯಾರಳವಾಗಿ ತೆಗೆದುಕೊಂಡು ಹೈದರಾಬಾದಿನ ಹಜೀನ ಪೋಷಾಕಿನಿಂದ್ದಾ ಸುಲತಾನರಿಗೆ ಅಲಂಕರಿಶಿ ನಿಜಾಮಲ್ಲಿಖಾನರ ಭೇಟಿಗೆ ಹೋಗಲಾಗಿ ಅವರನ ನವಬತ್ತುಖಾನೆ ಜಿಲ್ಲೆನೆಲ್ಲಾ ನಿಲ್ಲಿಸಿ ಮಿತಜನದಿಂದ ಮಜಲೀಷಿಗೆ ಹೋದಲ್ಲಿ ಸರ್ವ ಜನರು ಯದ್ದು ನಿಂತ್ತು ತಾಜಂಮು ಆಗುವ ವ್ಯಾಳೆಯಲ್ಲಿ ನಿಜಾಮಲ್ಲಿಖಾನರು ಡೇರೇ ವಳಗಿಣಿಂದಾ ಹೊರಟು ಬಂದು ರೂಪಾಯಿ ಚಬೂತ್ತಕಿ ಹಮಾ ಜಿನಸು ನಾಂಣ್ಯ ಮಿಲಾಯಿಸ್ತ ಮಿಲಾಮ ನಜರು ಸಹಾ ನವಾಬರು ಮಾಡಿಶಿ ಆನೆ ಕುದುರೆ ವಗ್ಯೆರ ಹ್ಯಾರಳವಾಗಿ ತೆಗೆದುಕೊಂಡು ಹೈದರಾಬಾದಿನಲ್ಲಿ

ಚಿನ ಪೋಷಾಕಿನಿಂದ್ದ ಸುಲತಾನರಿಗೆ ಅಲಂಕರಿಶಿ ನಿಜಾಮಲ್ಲಿ ಖಾನರ ಭೇಟಿಗೆ ಹೋಗಿ ಅವರನ ನವಬತ್ತುಜಾನೆ ಜಲಿಬೆಲ್ಲಾ ನಿಲ್ಲಿಶಿ ಮಿತಜನದಿಂದಾ ಮಜಲೀಷಿಗೆ ಹೋದಲ್ಲಿ ಸರ್ವಜನರು ಯದ್ದು ನಿಂತು ತಾಜಂ ಆಗುವ ವ್ಯಾಳೆಯಲ್ಲಿ ನಿಜಾಮಲ್ಲಿ ಖಾನರು ಬರಕ್ಕಿ ಶ್ರೀನಿವಾಸರಾಯರಿಗೆ ಸಹಾ ದಸ್ತೆರಾಗಿ ಸುಲತಾನರ ಲಾಲಾ ಮಿಯಾನವರಿಗೆ ಸಹಾ ದ.... ಷ್ನ ಸಹಾ ಹುಕುಂ ಆಗಿ ಬಹುತರ ಆಭರಣಗಳು ಆನೆ ಕುದುರೆಗಳು ವಗೈರೆ ನವಾಬರಿಗೆ ಬಹುತರ ಬಹುಮಾನ ಮಾಡಿ ಹೈದರಲ್ಲಿ ಖಾನ ಬಹದರ ಜಂಗನೆಂದು ಕಿತಾಬು ಯಿನಾಯತಾಗಿ ಸನ್ಮಾನದಿಂದಾ ನವಾಬರು ಬಂದು ತಂಮ್ಮ ಡೇರೇಕೆ ಶೇರಿದರು.

ಅಲ್ಲಿಂದಾ ಕಾವೇರೀಪಟ್ಣದ ಬಳಿಗೆ ಯೀ ವುಭಯ ದಂಡೂ ಬಂದ್ದು ಬತೇರಿಗಳ ಕಟ್ಟಿ ಯುದ್ಧ ಸಂನಾಹರಾಗಿ ಮೊಕಾಬಿಲೆಗೆ ಬಂದು ಯಿಂಗ್ರೇಜಿಬಹದರವರ ಫವುಜಿನ ಸಂಗಡ ಲಡಾಯಾಗುವಲ್ಲಿ ನಿಜಾಮಲ್ಲಿಖಾನರ ಕೈಲಿ ಲಂಚಾ ತಿಂದ್ದು ಪಿತೂರಾಗಿ ನವಾಬರ ದಂಡಿನಲ್ಲಿ ಯಲ್ಲಾ ಚೋರಿಮಾಡಿಸುತ್ತಾಲೂ ಯರಡು ಹೊತ್ತು ತಾನು ಬಂದು ನವಾಬರ ಬಳಿ ಕುಳಿತುಕೊಂಡು ಝೂಟಾ ಮುಷ್ಕರಿ ಮಾತುಗಳಲ್ಲಿ ಹೊತ್ತು ಕಳೆಯುತ್ತ ಮತ್ತೊಂದು ಯೋಚನೆ ಭಾಗಕ್ಕೆ ನವಾಬರಿಗೆ ಫುರಸತ್ತು ಯಿಲ್ಲಂತೆ ಯಿವರ ಕೆಲಸಕ್ಕೆಲ್ಲಾ ಹಿತಶತ್ರುತ್ವ ಮಾಡುತ್ತಾ ಬಂದದ್ದನ್ನು ನವಾಬರು ತಿಳಿದು ರುಕುನುದ್ದವಲಾ ತಂಮ್ಮ ದೇವಡಿ ಬಳಿಗೆ ವಳಕೆ ಸಹ ಬಿಡಲಿಲ್ಲವಾಗಿ ಆತನನ್ನು ಹುಕ್ಕಾ ತರ ಹೇಳಿ ಯಷ್ಟು ಜನಾ ಕಳುಹಿಸಿದಾಗ್ಯೂ ಅರ.... ಹೊರಗೆ ಅಟಕಾಮ ಮಾಡಲಾಗಿ ಡೇರೆಕ್ಕೆ ಹೋಗುತ್ತಾಲೆ ರುಕುನದ್ದವಲಾನವರಿಗೆ ಯೀ ಶುದ್ದಿ ತಿಳಿದು ಅವರು ನಾಖುಷೀಯಿಂದ್ದಾ ನವಾಬರ ಬಳಿಗೆ ಬರುವದೂ ಮೊಖೂಪಾಗುತ್ತಲೆ ಪರಂಗೆರಲ್ಲಿ ನವಾಬರು ಯೇಕವಾಗಿ ಮೊಗಲಾಯಿ ದಂಡು ಲೂಟಿಸುತ್ತಾರೆಂದು ಗೋಪ್ಯದಿಂದಾ ರೊಕನದ್ದವಲಾ ನಿಜಾಮಲ್ಲಿಖಾನರು ಯಿಂನ್ನು ಆ ದಂಡಿನಲ್ಲಿ ಯಿರುವ ದೊಡ್ಡಮನುಷ್ಯರು ಸಹಾ ಪದೇಪದೇ ಕೇಳಪಡುವಂತೆ ವದಂತಿ ಹುಟ್ಟಿಸಲಾಗಿ ಯಿದು ಸುಳ್ಳು ಸುದ್ದಿ ಬಾಯಿದವಾಯಿಯಂದು ಶೋಧಿಸಿ ತಿಳಿಯಲರಿಯದೆ ಗಾಬರಿಯಾಗಿ ಯೇಕಾಯೇಕಿ ಮೊಗಲಾಯಿ ಪಉಜು ಕೂಚಾಗಿ ಮಜಲು ದರ ಮಜಲ್ಲು ಭಾರಮಾಡುತ್ತಾ ಹೈದರಾಬಾದಿಗೆ ಹೋದರಾಗಿ ಮಧ್ಯೆ ಕೆಲವು ದೂರಾ ನವಾಬರ ಕಡೆ ಚಾಬಕ ಸವಾರರು ಬೆಂನಟ್ಟಿ ಶಿಕಿದಷ್ಟು ಸಾಮಾನ್ನು ಕುದುರೆಗಳು ಸಹಾ ಲೂಟಿಶಿ ತೆಗೆದುಕೊಂಡು ಬಂದರು. ಆವಾಗಾ ನಿಜಾಮಲ್ಲಿಖಾನರ ಸಂಗಡ ಕುದುರೆ ೬೦ ಸಾವಿರ ಬಾರು ವಗೈರೆ ಪಾಯಿದಳ ೮೦ ಸಾವಿರ ಸಹಾ ಯಿತ್ತು. ನವಾಬರ ಫವುಜು ಬಾರು ೨೦ ಸಾವಿರ ಕುದುರೆ ೧೦ ಸಾವಿರ ಅಹಷಾಂ ವಗೈರೆ ೧೦ ಸಾವಿರ ಯೀ ಮಟ್ಟಿಗೆ ಯಿತ್ತು. ಮಮದಲ್ಲಿ ಖಾನರ ಸಂಗಡ ಯಿಂಗ್ರಜಿ ಬಹದರವರ ಬಗೆ ಗೊಡಾ ಸೋಜರು ೮೦೦೦ ಯೀ ಅಲೇಮಾನಿ ತುರುಪು ೪೦೦೦ ಕಾಲಾ ಬಾರು ೨೦೦೦೦ ಸಾವಿರ ಸಹ ಜಮಾಯತ್ತು ಯಿತ್ತು.

ಆವಾಗಾ ನವಾಬರು ಕಾವೇರಿ ಪಟ್ಣದ ಬಳಿಯಣ್ಣಿಂದಾ ಹೊರಟು ಗುರುಕೊಂಡೆಯ ಸಾಬರು ಶಖೆ ೧೬೭೯ನೆ ಯೀಶ್ವರ ಸಂವತ್ಸರದ ಅಧಿಕ ಆಶ್ವಿಜ ಬ

೧೧ ಲ್ಲೂ ಕಡಿಪೆ ನವಾಬ ಅಬ್ದುಲ್ ನಬೀ ಖಾನರ.... ಅಬ್ದುಲ್ ಹಮೀರ ಖಾನರು ಮರಾಟೆ ಬಲವಂತರಾಯರ ಜಗಳದಲ್ಲಿ ಮ್ರುತವಾಗಿ ಯಿವರ ಚಿಕ್ಕಪ್ಪಾ ಮೋಹಸೀನ ಖಾನರು ಸಲ್ಲಾಮಾಡಿಕೊಂಡು ಅರ್ಧ ಶೀಮೆಗು ಗುರುಂಕೊಂಡೆ ಭಗವಂತ ತ್ರಿಯಂಬಕ ಯಂಬ ಸರದಾರ ಯಿದ್ದಲ್ಲಿ ಪ್ರಾಕು ಶಕೆ ೧೬೮೫ನೆ ಸ್ವಭಾನು ಸಂವತ್ಸರದಲ್ಲಿ ಶೀರ್ಯದಿಂದ್ದಾ ಮೀರಲ್ಲಿ ರಾಜಾಕಾನರು ಬಂದ್ದು ಕವುಲಿನ ಮೇಲೆ ತಂಮ್ಮ ಠಾಣೆ ಹಾಕಿಯಿದ್ದರಾಗಿ ಶಕೆ ೧೬೮೮ನೆ ವ್ಯಯ ಸಂವತ್ಸರದ ಮಾಗದಲ್ಲಿ ಮೀರಾಸಾಬರು ಮರಾಟೇರ ಕೈಯಲ್ಲಿ ಶಿಕ್ಕಿದ ಬಳಿಕ ಅವರ ಕಡೆಯುವರಾಗಿ ಗುರುಂಕೊಂಡೆಯಲ್ಲಿ ಮೀರ ಸಾಬರು ಯಿದ್ದಕಾರಣಾ ಸದರು ಶಕೆ ೧೬೮೯ನೆ ಸರ್ವಜಿತು ಸಂವತ್ಸರದಲ್ಲೂ ನವಾಬರು ಬಂದ್ದು ಯಿಳಿದ್ದು ಮೀರಾಸಾಬರನ್ನು ಅವರ ಕಡೆಯವರು ಜಮಾಯತ್ತು ಸುದಾ ಸಂಗಡ ಕರದುಕೊಂಡು ಅವರ ಅಂಣನ ಮಗ ಸೈದಸಾಬರನ ಗುರಂಕೋಟೆಯಲ್ಲಿ ಯಿಟ್ಟು ಪುನಹಾ ನವಾಬರು ಬೆಂಗಳೂರು ಕಡೆಗೆ ಬಂದರು.

ಶಕೆ ೧೬೯೦ನೆ ಸರ್ವಧಾರಿ ಸಂವತ್ಸರದಲ್ಲೂ ಪರಂಗೀ ಪವುಜುಮಮದಲ್ಲಿ ಖಾನರು ಸಹಾ ಕಾವೇರಿ ಪಟ್ಣ ಪಾಲುಕೊಡ ರತ್ನಗಿರಿ ಸೂಳಗಿರಿ ಅಂಕುಶಗಿರಿ ಹೊಸೂರು ಸಹಾ ಸಾಧಿಸುತ್ತಾ ಬರುತ್ತಲೂ ಮತ್ತೊಂದು ಟೋಲೆ ಕಣಿವೆ ಕೆಳಗಣ ಶೀಮೆ ಶಾಲ್ಯ ಕರೂರು ವಗ್ಯೆರೆ ಠಾಣೆ ಹಾಕುತ್ತಾಲೂ ನಗರದ ಶೀಮೆ ಕೊಡಿಯಾಲ ಮಂಗಳೂರು ಶೀಮೆಗೆ ಜಹಜುಗಳು ಬಂದು ಠಾಣೆ ಹಾಕಿ ಬಹಳ ಹಂಗಾಮು ಮಾಡಿದರು.

ಆವಾಗ ಪುನೇದಿಂದ್ದಾ ಪೇಷ್ವೆ ಮಾಧವರಾಯರ ಫಉಜು ತಂಮ್ಮ ಮೇಲೆ ಬರುವ ಸುದ್ದಿ ನವಾಬರು ಬ್ಯಾರೆ ಕೇಳಿ ಸಲ್ಲಾದ ವಕಾತಲ್ತು ಬಗ್ಯೆ ಚಂದಾಸಾಬರ ಮಗ ಅಲ್ಲಿ ರಜಾಖಾನರನ್ನು ಅಪ್ಪಾಜೀರಾಯನ ಸಹಾ ಪುನಹಕ್ಕೆ ಕಳುಹಿಶಿ ತಾವು ಧಡೆ ಸವಾರಿ ನಗರದ ಬಳಿಗೆ ಹೋದರು.

ಅವರಿಗೆ ಮೊದಲು ಸರ್ವಜಿತ್ತು ಸಂವತ್ಸರದಲ್ಲಿ ಪರಂಗೆರ ಮ್ಯಾಲೆ ನವಾಬರು ಹೊರಡುವಾಗ್ಯೆ ಪಟ್ಣದ ಶೀಮೆ ದಿವಾನಗಿರಿ ಮಾಡುತ್ತಾ ಯಿದ್ದ ದಿಂಡುಗಲ್ಲೂ ವೆಂಗಟಪತ್ತೈಯ್ಯನವರು ದೈವಾಧೀನವಾಗಿ ಆ ಖಿಜಮತ್ತಿಗೆ ಅವರ ಅಳಿಯ ಚಂನಣ್ಣೈಯ್ಯ ತದನಂತರ ಪಉಜುಲ್ಲಾ ಖಾನರ ತಂಮ್ಮ ಹಪಿಜುಲ್ಲಾ ಕಾನರಿಗೆ ಆಗಿ ಅವರಿಂದ ನಿರ್ವಹಿಸಲಾರದೆ ನಗರದಿಂದ ವೆಂಕಪ್ಪೈಯ್ಯನವರ ಪಟ್ಣಕ್ಕೆ ಕರಶಿ ಕರತರ ತಾಲೊಕು ಶೀಮೆ ಬೊಕಸ ವೆಂಕಟಪತ್ತೈಯ್ಯನವರು ಮೊದಲು ನಗರದಲ್ಲಿ ನವಾಬರು ಯಿದ್ದಾಗ ಲಾಲಾದಾಸ ಅಂಣೈಯ್ಯ ಶಾಸ್ತ್ರಿ ಸಂಗಡ ಕೂಡಿ ನವಾಬರ ಪ್ರಾಣ ತೆಗೆಯಬೇಕೆಂದು ಸರದಾರ ಖಾನರಿಗೆ ಹೇಳಿದಂನ್ನು ಸರದಾರ ಖಾನರ ಮಾರಿಫತ್ತು ನವಾಬರಿಗೆ ತಿಳಿದು ವೆಂಕಟಪತ್ತೈಯ್ಯನ ಐವಜು ಏಜಾಪುರ ತಿಂಮಪ್ಪೈಯ್ಯನ ಯಿಟುಯಿದ್ದಲ್ಲಿ ಯೊತನ ಹ್ಯಾರಳ ಹಣಕಾಸುಗಳ ತಿಂದ ಸಬುಬು ಹಣವೆಲ್ಲ ವೆಂಕಪ್ಪೈಯ್ಯನವರು ವಸೂಲು ಮಾಡಿ ಮತ್ತು ಪಟ್ಣ ಶೀಮೆ ವಿಚರಣೆಯೂ ಮಾಡಿ ಸರಕಾರಕ್ಕೆ ಕಿಫಯಾತ್ತು ಭೊಹುತ್ತರವಾಗಿ

ಮಾಡಿದ್ದರಿಂದಾ ಸರಪರಾಜು ಮಾಡಿ ಆನೆ ಅಂಬಾರಿ ಮುತ್ತಿನ ಹಾರಗಳು ಪ್ರಧಾನರೆಂಬ ಕಿತಾಬು ಸಹಾ ಕೊಟ್ಟು ನೆಲಮಂಗಲದ ಮಜಲಿನಿಂದ್ದಾ ಅವರನ ನಗರಕ್ಕೆ ರವಾನೆ ಮಾಡಿದರಾಗಿ ಹಾಲಿ ನಗರದ ಶೀಮೆ ಘಟ್ಟದ ಕೆಳಗೆ ಪರಂಗೆರು ಹಂಗಾಮು ನಿಮಿ.... ಅಂಬೂರು ಗಡದ ಪ್ರಧಾನರು ಹೋಗಿ ಯಿದ್ದರಾಗಿ ನಗರದಲ್ಲಿ ನವಾಬರು ವಂದ್ದು ದಿನ ಮಾತ್ರ ನಿಂತು ಬೇಕಾದ ಸಂನಾಹವೆಲ್ಲಾ ನಗರದ ಸುಭೇದಾರ ವೆಂಕಟಪತಯ್ಯನವರ ಮಗ ರಮಣ್ಣೈಯ್ಯನವರಿಂದಾ ಸರಬರಾಯಿ ಮಾಡಿಶಿಕೊಂಡು ಹೊರಟು ಯೇಕಾಯೇಕಿ ಖಾರಿಗಳ ದಾಟಿ ಹೋಗಿ ಕೊಡಿಯಾಲದಲ್ಲಿ ಠಾಣೆ ಹಾಕಿ ಅಲ್ಲಿದ್ದಾ ಪರಂಗೀರನೆಲ್ಲಾ ಹೊಡದು ಕೆಲವರ ಕೈಶೆರೆ ಹಿಡಿದುಕೊಂಡು ನಗರಕ್ಕೆ ಬಂದು ಫವುಜು ಖರ್ಚಿನ ಬಗ್ಯೆ ಬಹದರಿ ೨೦೦೦೦೦೦ ವರಹಾ ವೆಂಕಪಯ್ಯನವರ ಕಡೆಯಿಂದ್ದಾ ತೆಗೆದುಕೊಂಡು ಪಚ್ಚಕಡಗ ಶಿರಪೇಷ ತುರಾಯಿ ಸಹಾ ಅವರಿಗೆ ಕೊಟ್ಟು ಅಲ್ಲಿಂದಾ ಬೆಂಗಳೂರು ಬಳಿಗೆ ಬಂದರು.

ಆವಾಗಾ ಬೆಂಗಳೂರಲ್ಲಿ ಶೀಮೆ ದಿವಾನ ಖಿಜಾಮತ್ತಿಗೆ ಅಸದುಲ್ಲಾ ಖಾನರ ನೇಮಕಾಮಾಡಿ ಮಹಲಾತ ಕಚೇರಿ ಮುತ್ಸದ್ದೀರ ಸಹಾ ಬೆಂಗಳೂರಲ್ಲಿ ನಿಲ್ಲಿಶಿ ಮಹಲಾತ ಕಚೇರಿ ಕರಣೀಕು ಕೃಷ್ಣೈಯ್ಯನವರ ಮಾರೀಫತ್ತು ಮಸಲತ್ತು ಮಾಡಿ ಅವರನ ಸಂಗಡ ಕರದುಕೊಂಡು ಧಡೆ ಹೊರಟು ಹೊಸೂರು ಡೆಂಕಣಿಕೋಟೆ ಪ್ರಾಂತ್ಯದಲ್ಲಿ ಯಿಳಿದು ಯಿಂಗರೇಜಿ ಫವುಜಿಗೆ ಕುಮುಕಾಗಿ ಬಂದು ಯಿಳಿದು ಯಿದ್ದ ಮುರಾರಿರಾಯನ ಫವುಜಿನ ಮೇಲೆ ಷಬಕೂನು ಮಾಡಿ ಲುಟಾಯಿಶಿ ೧,೦೦೦ ಕುದುರೆ.... ದಳ ಸರಂಜಾಮು ಸಹಾ ತೆಗೆದುಕೊಂಡು ಫರಂಗೀ ಫವುಜಿನ ಮ್ಯಾಲೆ ಮೊಕಾಬಿಲೆ ನಿಂತ್ತು ಲಡಾಯಿ ಮಾಡಿ ಆ ದಂಡು ಯರಡು ಠೊಲೆಯಾಗಿ ಯುದ್ಧವಾಗೂವಲ್ಲಿ ಯಿಸಮತ್ತರ ಸಂಗಡ ವಳತರಸಲೂ ಬಿಟು ಕರ್ನಲ್ ದರ ಠೊಲ ಮೇಲೆ ಅಂಗೀಜುಮಾಡಿ ಕುದುರೆಗಳ ಚಲಾಯಿಸಿ ತೋಪುಗಳ ಕಸುಕೊಂಡು ಪತ್ತೆಮಾಡಿ ಬೆಂಗಳೂರ ಬಳಿಗೆ ಬಂದರು.

ಅಲ್ಲಿಂದಾ ನವಾಬರು ಹೊರಟು ಗೆಜ್ಜಲಹಟ್ಟಿ ಕಣಿವೆ ಯಿಳಿದು ಯಿರೋಡು ಕರೂರು ಮಧ್ಯೆ ಯಿದ್ದ ಯಿಂಗ್ರೇಜು ಫವುಜಿನ ಮ್ಯಾಲೆ ಯೇಕಾಯೇಕಿ ಹೊಗಿ ಬಿದ್ದು ಆ ಫವುಜನೆಲ್ಲಾ ತರಾಜುಮಾಡಿ ಕಡಿದು ಕರೂರು ಕಾಂಗ್ಯಾ ಶಾಲ್ಯಾ ವಗೈರೆ ಗಡಿಗಳನೆಲ್ಲಾ ಠಾಣೆ ಹಾಕಿ ಪುನಹಾ ಮಾಗಡಿ ಬೆಂಗಳೂರು ಪ್ರಾಂತ್ಯಕ್ಕೆ ಬಂದರು.

ಅವರಿಗೆ ಮಮದಲ್ಲಿಖಾನರು ತಮಗೆ ಕಂಣ್ಣುನೋವು ಬಂತ್ತು ಯಂದ್ದು ಡೆಂಕಣಿಕೋಟೆ ಬಳಿಯಣ ದಂಡಿನಿಂದಾ ಹಿಂತಿರುಗಿ ಚಂನಪಟ್ಟಕ್ಕೆ ಹೋದ ಬಾತಮೀ ಬರುತ್ತಲೆ ನವಾಬರು ಧಡೆಸವಾರಿ ಹೊರಟು ಸಾತಗಡ ಕಣಿವೆ ಯಿಳಿದು ತಿರುಮಲಬೇಡಿ ಮುತ್ಯಾಲಪೇಟ ಘೆರಾಯಿಶಿ ಯಿಳಿದಲ್ಲಿ ಮಮದಲ್ಲಿಖಾನರು ಅಜೀಜಾಗಿ ಖಾಜೀ ಅಶಿಂಖಾನರು ಅಲ್ಲಿ ಜಮಾಖಾನರ ಮುಖಾಂತ್ರ ನವಾಬರ ಸಂಗಡ ಸಲ್ಲಾ ಮಾಡಿಕೊಂಡು ನವಾಬ ಸಾತುಲ್ಲಾಖಾನರ ಕೋಮಿನ ನವಾಯತರನ್ನೆಲ್ಲ ಮೊಕಳೆ ಮಾಡಿ ಬಿಟು 'ಬರಾಬರುವ ಖಿನಾಡಿ ನವಾಬ ಸಾಹೆಬ ಮಷ್ಫಿಕ ಮೆಹರ್ಬಾಂನ್ನು ಖಿರಂ ಫರ್ಮಾಯೆ

ಮೊಖಲಿಸಾ' ಯಂಬದಾಗಿ ವುಭಯತ್ರರೂ ಸಮಾನನಾಗಿ ವಕಣೆ ಬರೆಯುವಂತ್ತೆ ಮೊಕರೂರುಮಾಡಿ ನವಾಬರ ಕಡೆಯಿಂದ್ದ ಅಂಣಾಜೀ ಪಂತರನ ವಕಾಲತ್ತಿನ ಬಗ್ಯೆ ಚಂನಪಟ್ಣದಲ್ಲಿ ನಿಲ್ಲಿಶಿಕೊಂಡು ಸುಧಾಮಧು ಮೊರೆ ನವಾಬರ ಶೀಮೆಯಲ್ಲಿ ನವಾಬರು ತಂಮ್ಮ ಶೀಮೆಯಲ್ಲಿ ತಾವು ಸಹಾ ಯಿರುವಂತ್ತೆಯು ನವಾಬರು ತಾವಾಗೆ ಕೆಣಕಿದಾಗ ಜಗಳವೆ ಹೊರ್ತು ಯಿಂಗ್ರೇಜೆರು ಕಾರ್ಯಭಾಗ ಮಾಡಕೂಡದೆಂದೂ ಸಹಾ ಖಂಡಣೆಯಾಗಿ ತಾವು ಕಟ್ಟಿ ಯಿದಾ ಶೀಮೆನೆಲ್ಲಾ ನವಾಬರಿಗೆ ಬಿಟ್ಟು ಉಡುಗೆರೆ ಉತ್ಸವಗಳು ಕೊಟು ಸಲ್ಲಾ ಆದ್ದರಿಂದ ನವಾಬರು ಹಿಂತಿರುಗಿ ಬೆಂಗಳೂರಿಗೆ ಬಂದರು.

ಶಕೆ ೧೬೯೧ನೆ ವಿರೋಧಿ ಸಂವತ್ಸರದ ಚೈತ್ರದಲ್ಲೂ ಪುನೆದಿಂದಾ ಗುರಂಕೊಂಡೆ ಸುಭೇಕೆ ಸಂನದು ತೆಗೆದುಕೊಂಡು ಮಹಿಮಾದಿ ಶಿಂದ್ಯಾ ಕುದುರೆ ೪೦೦ ಸಹಾ ಬಂದ್ದು ಸುತ್ತಣ ಪಾಳೆಗಾರನೆಲ್ಲಾ ಕೂಡಿಕೊಂಡೂ ಹ್ಯಾರಳ ಸೋಮಾಮಾಡಿಕೊಂಡು ಸಾಬಕು ಶಖೆ ೧೬೭೨ನೆ ೧೬೭೩ನೆ ಪ್ರಮೋದೂತ ಪ್ರಜೋತ್ಪತ್ತ್ಯದಲ್ಲಿ ನಾಜರಜಂಗರು ಹತವಾಗಿ ಅವರ ಐವಜಿ ಹಿದಾಯತ ಮೊಹದ್ದೀನಖಾನರು ಕರಿನೊಲ ಹಿಮ್ಮತ ಬಹದರ ವಗ್ಯೆರೆ ಬಂದು ರಾಚೋಟೀ ಬಳಿ ಯಿಳಿದು ಫವುಜಿನಲ್ಲಿ ಖಾನಾಜಂಗಿಯಾಗಿ ಅನೇಕ ಜನ ಹತರಾದವರಂನ್ನು ವಿಸ್ತಾರವಾಗಿ ಬಾರಿ ಹಳಾ ತೆಗೆದು ಹೆಣಗಳನ್ನೆಲ್ಲಾ ವಂದೇ ಹಳ್ಳಕ್ಕೆ ಹಾಕಿ ಮಂಣುಮುಚ್ಚಿ ದೊಡ್ಡದಾಗಿ ಕಬುರುಕಟ್ಟಿ ಗಂಜಷಹೀದ ಯಂಬದಾಗಿ ಆಕಬರಸ್ಥಾನಕ್ಕೆ ಹೆಸರಿಟ್ಟು ಹೋಗಿ ಯಿದ್ದರಾಗಿ ಆ ಗಂಜಷಹೀದ ಬಳಿ ಮಹಿಮಾಜೀ ಶಿಂಧ್ಯ ಯಿಳಿದು ಹೊಸ್ತಾಗಿ ಮಂದಿ ಕುದುರೆ ಲಾವಣಾ ಬರಿಯುತ್ತಾ ಕಡಪೆ ಅಬ್ದುಲಮಜೀದಖಾನರ ಮಗ ನವಾಬ ಹದೀಮಖಾನರ ಫವುಜು ತಮಗೆ ಸಹಾಯ ಬರುವಂತೆ ಮಧ್ಯಸ್ತಾ ಹಚ್ಚಿಸಿಕೊಂಡು ಗುರುಂಕೊಂಡೆ ಸಾಧಿಸುವ ಯತ್ನದಲ್ಲಿ ಯಿದ್ದನು.

ಯೀ ಶುದ್ದಿ ನವಾಬರು ಕೇಳಿ ಯಿವರು ಫವುಜು ಕಳುಹಿಸ್ತ ವಿವರ ಮೊದಲು ಶಕೆ ೧೬೮೩ನೆ ವಿಷು ಸಂವತ್ಸರದಲ್ಲೂ ನವಾಬರಿಗೆ ಪಟ್ಣ ವಶವಾದಾಗ ಕೆಲವು ಸರದಾರರು ಚಾ.... ಟು ಪಟ್ಣದ ಅರಸುಗಳ ಬಳಿಯಣಿಂದ್ದಾ ಹೊರಟು ಹೋಗೂವಲ್ಲಿ ಮಿರ್ಜಾ ಇಸ್ಮಾಯಿಲ ಹುಸೇನರು ಸೈದ ಯಾಕೂಪ ವಗ್ಯೆರೆರ ನವಾಬರು ಸಮಜಾಯಿಶಿ ತಂಮ್ಮಲ್ಲಿ ನಿಲಿಶಿಕೊಂಡು ಯಿದ್ದರಾಗಿ ಬರಕ್ಕಿ ಶ್ರೀನಿವಾಸರಾಯರು ಮಾತ್ರಾ ಸವಾರರು ಜನ ಸುದಾ ಹೊರಟು ಪುನೆದವರಲ್ಲಿ ಚಾಕರಿಗೆ ಹೋಗುತ್ತೇವೆಂದು ೫೦೦ ಕುದುರೆ ಕರಿಘಟ್ಟದ ಬಳಿ ಯಿಳಿಯಲಾಗಿ ಮಾತಬರ ವಕಾಲತ್ತಿನಿಂದಾ ಬರಕ್ಕಿ ವೆಂಕಟರಾಯರ ಮುಖಾಂತ್ರದಿಂದಾ ಯಿವರ ಮಗ ಶ್ರೀನಿವಾಸರಾಯರಿಗೆ ಬಹುತರ ತಿಳಿಯ ಹೇಳಿಶಿ ತಮ್ಮ ದವಲತ್ತು ಯಿರುವವರೆಗೂ ಮರ್ಯಾದೆಯಿಂದಾ ನಡಸುತ್ತಾ ಸಕಲದರಲ್ಲೂ ಅಂಣತಮಂದಿರ ಮರ್ಯಾದೆಯಲ್ಲಿ ನಡಸುತ್ತಾ ಯಿಥೇವೆಂದೂ ತಾಜೀ ಮುತಕಿವರ ಬಹಳ ಬುಜುರುಗೆಯಿಂದಾ ಮಾಡಿ ಆಯುಧಾ ಮುಟ್ಟಿ ಭಾಷೆ ಕೊಟು ರಾಜೀಮಾಡಿ ತಿಂಗಳು ೧ಕ್ಕೆ ಸಂಬಳಾ ಶ್ರೀನಿವಾಸರಾಯರ ಕುದುರೆ ೧ಕ್ಕೆ ೨೦೦೦ ರೂಪಾಯಿ ಯಿವರ ತಂಮ್ಮ ಚಂದ್ರರಾಯರಿಗೆ ಜಾತ ಧರ್ಮಹಾ ೧೦೦೦ ರೂಪಾಯಿ ಶಿವಾಯಿ ರಿಸಾಲೆ ಕುದುರೆ

೭೦೦ ಯಿದರ ತಲಬು ಯೀ ಮರಿಯಾದೆ ಯಿವರ ತಮ್ಮ ಗೋವಿಂದರಾಯರು ಯಿಂನ್ನು ಯಿವರ ಸ್ವಜನ ಮುಂತಾದವರ ರಾಸು ೧ಕ್ಕೆ ನೂರರಿಂದಾ ಮುಂನೂರು ವರಿಗೂ ಅವರವರ ಲಾಯಖು ಮೇರೆ ನಾಲ್ವತ್ತು ಜನರಿಗೆ ನೇಮಕಾ ವೆಂಕಟರಾಯರಿಗೆ ೨೦೦೦ ರೂಪಾಯಿ ಶಿವಾಯಿ ಅವರಿಗೆ ನಡೆಯುತ್ತಾ ಯಿದ್ದ ಜಹಗೀರು ಗ್ರಾಮಗಳು ಕ್ರಯಗ್ರಾಮಗಳು ವಗೈರೆ ಯಾವತ್ತೂ ಬಹಲು ಯಿಟು ಬಹುತರ ಸಂನ್ಮಾನಾದಿಗಳ ಮಾಡಿಕೊಂಡು ಯಿಟು ಯಿದ್ದ ಕಾರಣ ಸದರಿ ಶ್ರೀನಿವಾಸರಾಯರ ಸಂಗಡ ಸವಾರು ೫೦೦೦ ಬಾರು ೪೦೦೦ ಅಹಷಾಮು ೪೦೦೦ ಮೀರಅಲ್ಲಿರಜಾಖಾನರ ಸಹಾ ಕೊಟ್ಟು ಕಳುಹಿಸಲಾಗಿ ಅವರು ಮಹಿಮಾಜೀ ಶಿಂಧ್ಯಾನ ಮ್ಯಾಲೆ ಬಂದು ಬಿದ್ದು ಶಿಂಧ್ಯಾ ಮಜಕೂರನೂ ಜಂಗಿನಲ್ಲಿ ಮುರಿದು ಫಲಾಯನವಾಗಿ ಕಡಪೆ ಶಹರು ಹೊಕ್ಕು ಅಲ್ಲಿಂದಾ ಹಲೀಮಖಾನರು ದಾಟಿಶಿದ್ದರಿಂದ್ದಾ ರಾತೋರಾತು ವೋಡಿ ಹೋಗಿ ಗುತ್ತಿ ಹೊಕ್ಕು ಅಲ್ಲಿಂದಾ ಪುನೆಕ್ಕೆ ಹೊರಟುಹೋದರು.

ತರುವಾಯ ಶಕೆ ೧೬೯೧ನೆ ವಿರೋಧಿ ಸಂವತ್ಸರದಲ್ಲು ನವಾಬರು ಫಉಜು ಸುದಾ ಹೊರಟು ಶಿದ್ದಾ ಪಟ್ಣದ ಬಳಿಗೆ ಹೋಗಿ ಕಡಪೇದಲ್ಲಿ ಮಖಾನರ ಸಂಗಡ ಪೇಷ್ಕಶಿ ತೆಗೆದುಕೊಂಡು ಬವರ ಜಮಾಖಾನರ ಕರಿಶಿ ಸಮಜಾಯಿಶಿ ಮಾಡಿ ಬಾರು ಕಚೇರಿ ಬಕಷೀಗಿರಿ ಕೊಟು ಸಂಗಡ ಕರದುಕೊಂಡು ಅಲ್ಲಿಂದ ಕನ್ನೋಲು ಕೆಂಚಲೂಗುಡ ವಗೈರೆ ಪೇಷ್ಕಶಿ ತೆಗದುಕೊಂಡು ಫವುಜು ಸಹಾ ಬಳ್ಳಾರಿಗೆ ಹೋಗಿ ಮುತ್ತಿಗೆ ಹಾಕಿದರು.

ಯೀ ವಿರೋಧಿ ಸಂವತ್ಸರದಲ್ಲು ಮಾರ್ಗಶಿರ ಮಾಸದಲ್ಲಿ ಪುನೆದಲ್ಲಿ ಶ್ರೀಮಂತ ಮಾಧವರಾಯರವರು ಯೀ ವರ್ತಮಾನವೆಲ್ಲಾ ಕೇಳಿ ನಂಮ್ಮ ಕಡೆ ಪಾಳೆಗಾರರ ಕೈಲೆಲ್ಲಾ ನವಾಬರು ಖಂಡಣಿ ತೆಗೆದುಕೊಳಕಾರಣವೇನು ಯಿದು ಬದ್ದ ಮಾಮಲೆಯಾಗಿ ಯಿಧೆಯೆಂದು ವಕಾಲತ್ತಿಗೆ ಹೋಗಿ ಯಿದ್ದ ಅಲ್ಲಿ ರಜಾಖಾನರನ ನೀವು ನಿಂಮ್ಮ ನವಾಬರ ಬಳಿಗೆ ಹೊರಟುಹೋಗಿ ನಾವು ಫವುಜು ಸುದಾ ಹೊರಟು ಬರುತ್ತೇವೆ ನಿಂಮ್ಮ ನವಾಬರ ಸಹಸಾ ನೋಡುವಾ ಯಂಬದಾಗಿ ಅಲ್ಲಿರಜಾಖಾನರನ ಹಿಂದಕ್ಕೆ ಕಳುಹಿಸಿ ಮಾಧವರಾಯರು ಫವುಜು ಸುದಾ ನವಾಬರ ಮ್ಯಾಲೆ ಹೊರಟು ಬಂದರು.

ಯೀ ಪೇಶ್ವೆ ಮಾಧವರಾಯರು ಫವುಜು ಸುದಾ ಬರುವಾ ಶುದ್ದಿ ನವಾಬರು ಕೇಳಿ ಬಳಾರಿ ಮುತ್ತಿಗೆ ತೆಗೆದು ಹಿಂತಿರುಗಿ ಬರುವಾಗ್ಯೆ ಬಳಾರಿ ಪಾಳೆಗಾರನು ಸಂಗಡ ಹೋಗಿ ಅವನ ಹೆಂಡತಿ ಧೊರೆತನ ಮಾಡುತ್ತಿದ್ದಳಾಗಿ ಅವಳು ಅರಶಿನ ಕುಂಕುಮ ನವಾಬರಿಗೆ ಕಳುಹಿಸ್ತ ಕಾರಣ ನವಾಬರು ಶಿಟ್ಟಿನಿಂದ್ದಾ ಹಿಂತಿರುಗುವುದಕ್ಕೆ ಪೇಷ್ವೆ ಬರುವ ವದಂತ್ತಿ ಅವರ ಫವುಜು ಕ್ರಿಷ್ಣಾ ನದೀ ದಾಟಿತಾಗಿ ಹಿಂತಿರುಗುವುದಕ್ಕೆ ಯಿಲ್ಲದೆ ವಃಕ್ತ ಪರಮದಾರ ಯಂದ್ದು ಪಟಣಕ್ಕೆ ಹೊರಟು ಬರುವಲ್ಲಿ ಮೊಕಾಂ ಮಾಡುವದಕ್ಕೆ ಯಿಲ್ಲದೆ ಯೀಮಾಂ ಬಕ...... ಯಂಬ ಆನೆಯ ಮ್ಯಾಲೆ ಹಳತೀ ಕರೀ ಬನಾತಿನ ಬಬ್ಬರಿ ಅಂಬಾರಿಯಲ್ಲಿ ನವಾಬರು ಸವಾರ್‍ರಾಗಿ ನದೀಯಲ್ಲಿ ಆನೆ ಯಿಳಿಸುತ್ತಾಲೆ ಫವುಜೆಲ್ಲಾ ಆನೆ ಹಿಂದೆ ಯಿಳಿಯಲಾಗಿ ದೇವರ ಕೃಪೆಯಿಂದ್ದಾ ಮುಂದೆ ಯಿಂನ್ನು ಬಹಳ ಕಾರಣಗಳು

ನವಾಬರಿಂದ ನಡೆಯಿತಕ್ಕ ಕಾರಣವಿದ್ದ ಪ್ರಯುಕ್ತ ನದೀ ನೀರು ಕೊಂಚವಾಗಿ ಅಂಬಾರಿ ಹಿಂದೆ ಫವುಜು ಯಾವತ್ತೂ ಹೊಳೆ ದಾಂಟಿ ಹಾಸನದ ಬಳಿಗೆ ಬಂದು ದಾಖಲಾದರು.

ಸದರಹೂ ವಿರೋಧಿ ಸಂವತ್ಸರದ ಮಾರ್ಗಶಿರ ಪುಷ್ಯದಲ್ಲಿ ಪುನ್ನೆಕ್ಕೆ ಹೋಗಿ ಯಿದ್ದ ಅಲ್ಲಿ ರಜಾಖಾನರು ಬಂದು ಹಾಸನದಲ್ಲಿ ನವಾಬರ ಭೇಟಿ ವ್ಯಾಳೆ ಸುದಾ ಮದಕಾಯಿದೆ ಪ್ರಕಾರ ತರೆಯಾ ಕೊಡುವದರಲ್ಲಿ ಪರಾಕು ಬಂದ ನಿಮಿತ್ಯ ಅವರು ನಾಖುಷೀ ಮಾತುಗಳ ನವಾಬರ ಮುಂದೆ ಆಡಿ ಅಲ್ಲಿಂದ್ದಾ ಪಟ್ಟದ ಪರಿಯಂತ್ರ ಬಂದು ತಂಮ್ಮ ಜಹಗೀರು ನೆಲಮಂಗಲದ ಬಳೀಗೆ ಹೋಗುವದಾಗಿ ಯೋಚಿಸಿ ಬೆಂಗಳೂರಲ್ಲಿ ತಂಮ್ಮ ತಾಯಿ ದೇಹಸ್ಥಿತೀ ನೋಡಿ ಬರುತ್ತೇವೆಂದು ನವಾಬರಿಗೆ ಹೇಳಿಶಿ ಹೊರಟು ನೆಲಮಂಗಲಕ್ಕೆ ಹೋಗಿ ಬೆಂಗಳೂರಿಂದಾ ತಾಯಿಯ ಕರದುಕೊಂಡು ಮರಾಟೀರ ಠಾಣೆಯಿದ್ದ ದೊಡ್ಡಬಳ್ಳಾಪುರಕ್ಕೆ ಹೋಗಿ ಅಲ್ಲಿಂದಾ ದೊಡ್ಡ ಶೀರ್ಯದ ಮ್ಯಾಲೆ ಪುನೆಕ್ಕೆ ಸಾಗಿಹೋದರು.

ಸದರಿ ಮಾರ್ಗಶಿರ ಪುಷ್ಯದಲ್ಲಿ ನಗರ ಸಂಸ್ಥಾನದ ಪ್ರಧಾನ ವೆಂಕಪ್ಪೈಯ್ಯನವರು ಹಾಸನದ ಬಳಿಗೆ ಹಜೂರಿಗೆ ಬಂದು ದಾಖಲಾದರು. ಆ ಹಾಸನ ಮಹಾರಾಜನದುರ್ಗ ಬೇಲೂರು ವಸ್ತಾರೆ ವಗ್ಯೆರೆ ಶೀಮೆ ಗಲುಡುಗಳು ನಾಡಕೂಟ ಶರಾರತ್ತು ಹಳೆ ಪಾಳೆಗಾರನ ಹಜಂಮಾಡಲಾಗಿ ಅಲ್ಲಿನ ಅಮೀಲ ಕರೂರು ನಂಜಪ್ಪೈಯ್ಯನು ಹಜೂರಿಗೆ ಬಂದು ಅರಿಕೆ ಮಾಡಿದ್ದರಿಂದ್ದಾ ವೆಂಕಪ್ಪೈಯ್ಯನವರ ಸಂಗಡ ಕುದುರೆ ೨೦೦೦ ಬಾರು ೨೦೦೦ ಅಹಷಾಂ ೨೦೦೦ ತೋಫು ೬ ಸಹಾ ಕೊಟ್ಟು ರವಾನೆ ಮಾಡಲಾಗಿ ಯಿವರು ಹೋಗಿ ಷರಾರತ್ತಿನ ಜನರನೆಲ್ಲಾ ತಂಬೀ ಮಾಡಿ ತುಂಟರ ಬಹುಜನರನ ಗಲ್ಲುಹಾಕಿ ಬಂದೋಬಸ್ತು ಮಾಡಿ ಪಟ್ಟಣಕ್ಕೆ ನವಾಬರ ಬಳಿಗೆ ಬಂದು ದಾಖಲಾದರು.

ಪುನೆದಿಂದ್ದಾ ಬಂದ ಪೆಷವೆ ಫವುಜು ಪೆನುಗೊಂಡೆ ಗುಡಿಬಂಡೆ ಮಾರ್ಗವಾಗಿ ಬರುವಾಗ್ಯೆ ಬೆಂಗಳೂರಿಂದಾ ಚಿಕ್ಕಬಳ್ಳಾಪುರ ಸಾಧಿಸಬೇಕೆಂದು ಸ್ವಲ್ಪ ಜಮಾಯತ್ತಿನಿಂದ ಶಾಕಯ್ಯ ರಿಸಾಲದಾರ್‍ರ ಸಹಾ ಹೋಗಿ ಮೊರ್ಚೆ ಹಾಕಿ ಯಿದಲ್ಲಿ ಮರಾಟೀರ ಫವುಜು ಯೇಕಾಯೇಕೀ ಬಂದು ಸದರಿ ಜನರನೆಲ್ಲಾ ಕಡಿದು ವೋಡಿಶಿದರಿಂದಾ ಹುಚ್ಚುಘಾಯಗಳ ತಿಂದು ಯಿವರೆಲ್ಲಾ ಬೆಂಗಳೂರಿಗೆ ವೋಡಿಬಂದರು.

ಆವಾಗಾ ಪಟ್ಟಣದ ಕಿಲ್ಲೆದಾರ ಯಿಸಮಾಯಿಲ ಸಾಹೇಬರಿಗೆ ಕೊಟುಯಿದ್ದ ಅವರ ಕುಮುಕಿಗೆ ಕೆಲವು ಜಮೀಯತು ಸುದಾ ಫ್ಯೆಜುಲ್ಲಾ ಖಾನರಿಗೆ ನೇಮಕಮಾಡಿ ನಗರದಲ್ಲಿ ಯಿದ್ದಾ ನವಾಬರ ಹೆಂಗಸರು ಚಿಕ್ಕ ಮಗ ಕರಿಂ ಸಾಬರನ ಸಹಾ ಬೆಂಗಳೂರಿಗೆ ಕಳುಹಿಸಿ ಇಲ್ಲಿ ಯಿಟ್ಟು ನವಾಬರು ಸಾವಂದಿ ಗಿಡದಲ್ಲಿ ಫವುಜು ಸುದಾ ಯಿಳಿದರು.

ಪೇಶ್ವೇರ ಫವುಜು ಕ್ರಿಷ್ಣಗಿರಿ ಕಡೆಗೆ ಹೋಗುತ್ತೆಂದ್ದು ಅವಾಯಿ ಕೇಳಿ ಹಜೂರು ಹುಕುಂ ಪ್ರಕಾರ ಸರದಾರಕಾನರು ಕ್ರಿಷ್ಣಗಿರಿಗೆ ಹೋಗುತ್ತಾಲೆ ವಿಕೃತು ಸಂವತ್ಸರದ ಚೈತ್ರ

ಬಹುಳದಲ್ಲೂ ಮರಾಟೀರ ಫವುಜು ಬೆಂಗಳೂರು ಬಳಿಗೆ ಬಂದು ವಂದು ದಿವಸ ಯಿಳಿದು ಯಿದ್ದು ದೇವರಾಯದುರ್ಗದ ಬಳಿಗೆ ಸಾಗಿಹೋಯಿತು.

ಯಿೂ ಮಧ್ಯೆ ಬೆಂಗಳೂರು ಯಿಬ್ಬರಾಯಿಮ ಸಾಹೆಬರವರ ಮಗ ಮಹಂಮದ ಅಮೀರ ತಂದೆ ಸಂಗಡ ನಾಖುಷಿಯಾಗಿ ಮರಾಟೇರಲ್ಲಿ ಶೇರಿಯಿದ್ದರಾಗಿ ಯಿವ... ಕೆಲವು ಜಮೀಯತು ಸುದಾ ಸಾಬಕು ಸರ್ವಜಿತು ಸಂವತ್ಸರದ ವೈಶಾಖ ಜ್ಯೇಷ್ಠದಲ್ಲಿ ಪಟ್ಣದಿಂದ ಮದ್ದಗಿರಿ ಚಂನರಾಯದುರ್ಗ ಸಾಧಿಸುತ್ತೇವೆಂದು ಪ್ರಧಾನ ವೆಂಕಪ್ಪೈಯ್ಯನವರ ತಮ್ಮ ವೆಂಕಟೇಶೈಯ್ಯನವರು ಹಜೂರಲ್ಲಿ ಅರಿಕೆಮಾಡಿ ಹೋಗಿ ಆ ಯರಡು ಗಡವೂ ಸ್ವಾಧೀನವಾಗದೆ ತುಮಕೂರು ದೇವರಾಯದುರ್ಗ ಮಾಕಳೀದುರ್ಗ ಸಹಾ ತಂಮ್ಮ ಕಡೆ ಮಾಡಿಕೊಂಡು ಮಿಂಚುಕಲ್ಲು ಬೆಟ್ಟದ ಮ್ಯಾಲೆ ಕೋಟೆ ಮನೆ ಕಟ್ಟಿಶಿಕೊಂಡು ಕೆಲವು ಶಿಬಂದಿನು ಯಿಟುಕೊಂಡು ಯಿದ್ದು ಯಿೂ ಅವಾಂತ್ರ ನಿಮಿತ್ಯ ತಂಮ್ಮ ಕುಟುಂಬ ಮಕ್ಕಳಂನ್ನು ಚಿಕ್ಕಪ್ಪಗೌಡನ ಪಾಳೆಪಟ್ಟು ಕೊರಟಗೆರೆಗೆ ಕಳುಹಿಸಿ ಕೊಟು ಗೋಪ್ಯದಿಂದಾ ಯಿದ್ದವರಂನ್ನು ಮರಾಟೀರು ಹಿಡಿದುಕೊಂಡು ಹೋಗಿ ಮದ್ಗಿರಿಯಲ್ಲಿ ಶರೆ ಹಾಕಿ ಯಿದದರಿಂದಾ ಯಿೂ ಮಿಂಚುಕಲ್ಲು ಬಳಿಗೆ ಅಮೀನ ಸಾಬರು ಫವುಜು ಸುದಾ ಬಂದು ಯಿಳಿದರು.

ಆವಾಗಾ ಸದರಹೂ ವೆಂಕಟೇಶಯ್ಯನವರು ಮಿಂಚುಕಲ್ಲು ಬಿಟ್ಟು ದೇವರಾಯ ದುರ್ಗಕ್ಕೆ ಬಂದದ್ದರಿಂದ್ದಾ ಖುದ್ದು ಮಾಧವರಾಯರು ದಿವಸ ಯರಡು ಮೂರು ಲಡಾಯಿ ಆಗಿ ಕಾಲಿನ ಮ್ಯಾಲೆ ಗಡಾ ತೆಗೆದುಕೊಂಡು ಮಿಂಚುಗಲ್ಲಂನ್ನು ತೆಗೆದುಕೊಂಡು ವೆಂಕಟೇಶೈಯ್ಯನವರ ಖೈದುಮಾಡಿ ದೇವರಾಯದುರ್ಗದ ಠಾಣೆ ಬಗ್ಯೆ ತುಬಲ ಸೀ ಜಾಗಾಪಲ್ಲವೆಂದು ಮದ್ದೂ ಗುಂಡೂ ರಸ್ತು ಮುಂತಾದನೆಲ್ಲಾ ಚೆಲ್ಲಿ ಬಿಟ್ಟು ಬೆಟ್ಟದಲ್ಲಿ ಠಾಣೆಯ ಮಾಡದೆ ಖಾಲಿಮಾಡಿ ನಿಜಗಲ್ಲು ಬಳಿಗೆ ದಂಡು ಕೂಚಾಯಿತು.

ಆವಾಗಾ ಹುಜೂರು ಹುಕುಂ ಪ್ರಕಾರ ಸರದಾರ ಖಾನರು ಹೊಂಡಲ ನಾಯಕ ಜಂಶೇರಬಾಯಿ ಸಹಾ ಮೈಜಮಾಯತ್ತಾ ಕ್ರಿಷ್ಣಗಿರಿಯಿಂದಾ ಬೆಂಗಳೂರಿಗೆ ಬರುವಾಗ್ಯೆ ದೇವರಾಯದುರ್ಗಕ್ಕೆ ಮರಾಟೇರ ದಂಡು ಬಂತ್ತಾಗಿ ಅಲ್ಲಿನ ಕುಮುಕಿಗೆ ದಾಖಲಾಗೋ ಅಷ್ಟರಲ್ಲಿ ದುರ್ಗ ಮಜಕೂರು ಪರಾಧೀನವಾಯಿತಾಗಿ ಭೈರವನ ದುರ್ಗದ ಬಳಿಯಿಂದ್ದಾ ರಾತೋರಾತು ಹೊರಟು ಮುತ್ತಿಗೆ ಯಿದ್ದ ನಿಜಗಲ್ಲು ಬೆಟ್ಟಕ್ಕೆ ದಾಖಲಾಗಿ ಹದಿಮೂರು ದಿವಸ ಬಹಳ ಲಡಾಯಾಗಿ ಹತೆಂಟು ಹಲ್ಲಾ ಮುರಿದೂ ೧೨೦೦೦ ಸಾವಿರ ಜನ ಪರಿಯಂತ್ರ ಹೊರಗಣ ಜನ ಹತವಾಗಿ ಶ್ರೀಮಂತ ಮಹಾರಾಜೆ ಶ್ರೀಯವರ ತಂಮ್ಮ ನಾರಾಯಣರಾಯರಿಗೆ ಅಂಗೈಯಲ್ಲಿ ಬಂದೂಕಿನ ಗುಂಡು ತಗಲಿ ಪೇಶ್ವೆ ಫವುಜಿನ ಸರದಾರು ೧೦೦ ನೂರು ಜನ ಪಾಲಖಿಯವರು ಹತೆಂಟು ಸಾವಿರ ಜನ ಸಹಾ ಹತರಾಗಿ ಚಿತ್ರದುರ್ಗದ ಮೆದೆಕೆರೆ ನಾಯ್ಕನ ಹಲ್ಲಾದಿಂದ್ದಾ ನಿಜಗಲ್ಲು ಮಾರ್ಗವೂ ಶಖೆ ೧೬೯೨ನೆ ವಿಕೃತು ಸಂವತ್ಸರದ ವೈಶಾಖಮಾಸದಲ್ಲೂ ಮರಾಟೀರು ತೆಗೆದುಕೊಂಡು ಠಾಣೆಯಿಡದೆ ಗಡಾ ಖಾಲಿ ಯಿಟ್ಟು ಸರದಾರಖಾನ ವಗೈರೇರನೆಲ್ಲಾ ಬೇಡಿ ಹಾಕಿಸಿ

ಸಂಗಡ ತೆಗೆದುಕೊಂಡು ಬಾರು ಅಹಷಾಂ ಜನರನೆಲ್ಲಾ ಮೂಗುಗಳ ಕೊಯಿಶಿ ನಿಜಗಲು ಸ್ತಳದ ಪ್ಯಾದೇರನ ಮಾತ್ರ ಸುಂಮ್ಮನೆ ಬಿಟ್ಟು ಮಾಧವರಾಯರು ದೇಶಕ್ಕೆ ಪ್ರಯಾಣವಾದರು.

ಯೀ ಮಧ್ಯೆ ವಿಕೃತು ಸಂವತ್ಸರದ ಚೈತ್ರ ವಿರೋಧಿ ಸಂವತ್ಸರದ ಫಾಲ್ಗುಣ ಯೀ ಮಧ್ಯೆ ಮರಾಟೆ ಗೋಪಾಲಹರಿ ೨೦,೦೦೦ ಕುದುರೆ ತೆಗೆದುಕೊಂಡೂ ಗರ್ರುಡನಗಿರಿ ಪ್ರಾಂತ್ಯದಲ್ಲಿ ಯಿಳದು ಯಿದ್ದಲ್ಲಿ ಖುದ್ದು ನವಾಬರ ಫವುಜು ಸುದಾ ಹೋಗಿ ಛಪಾ ಬಿದ್ದು ಯಾವತ್ತೂ ಲೂಟಿಶಿ ಬಹುಜನರ ಮೂಗುಗಳ ಕ್ಯೊದು ಫತ್ತೆಮಾಡಿ ಕುಷಾಲ ತೋಫುಗಳು ಸುಖರೆ ಗಡಿಗಡಿಗಳಲ್ಲೂ ಆದ್ದರಿಂದ್ದಾ ಗೋಪಾಲಹರಿ ವೋಡಿ ಬರಲಾಗಿ ಮಾಧವರಾಯರು ಯೀತನ ಮೇಲೆ ಬಹಳ ಶಿಟ್ಟು ಮಾಡಿದರು.

ಸದರಿ ವಿಕೃತು ಸಂವತ್ಸರದ ವೈಶಾಖದಲ್ಲೂ ಶ್ರೀಮಂತ ಮಾಧವರಾಯರಿಗೆ ಕ್ಷಯ ಪಾಂಡುರೋಗ ಬಹಳ ಉಪದ್ರವ ಆದ್ದರಿಂದ್ದ ಕೃಷ್ಣಾತೀರದಲ್ಲೂ ತುಲಾಭಾರ ತೂಗಬೇಕೆಂದ್ದೂ ನಾನಾರಾಯರ ಮಾವ ತ್ರಿಯಂಬಕ ವಿಶ್ವನಾಥರಾಯರನ ೪೦೦೦೦ ಸಾವಿರ ಕುದುರೆ ಸಹಾ ಶ್ರೀರಂಗಪಟ್ಟಣದ ಮೊಹಿಮಿಗೆ ಡಾವಣೆಯಿಟ್ಟು ಶ್ರೀಮಂತರು ಪುನಕೆ ಹೊರಟು ಸಾಗಿ ಹೋದರು.

ಕೃತು ಸಂವತ್ಸರದ ಜ್ಯೇಷ್ಠ ಆರಭ್ಯ ನವಾಬರ ಶೀಮೆ ಆರ್ಕಾಡು ಶೀಮೆ ಮೇಲೆ ಸಹಾ ತ್ರಿಯಂಬಕ ಮಾಮಾನವರು ದೌಡು ಮಾಡುತ್ತಾಯಿದ್ದರು.

ಸದರಿ ವಿಕೃತು ಸಂವತ್ಸರದ ವೈಶಾಖದಲ್ಲೂ ದೇವರಾಯದುರ್ಗಾ ಖಾಲಿ ಯಿರುವದ ಕೇಳಿ ನವಾಬರು ಹರಿಕಾರ ರಂಗಪ್ಪ ನಾಯಕ ಚಿಮಣಾಜಿ ಪರಭು ತಾಜಖಾನ ಬರಕ್ಕ ತಾಲೇಕೆರೆ ತಿಂಮ್ಮನಾಯ್ಕ ಅಹಷಾಂ ಪ್ಯಾದೆ ೧೦೦೦ ಬಾರು ೧೦೦೦ ತಬೇಲೆ ಕುದುರೆ ೫೦೦ ಸಹಾ ಕಳುಹಿಸಲಾಗಿ ಯಿವರೆಲ್ಲಾ ಬಂದು ದೇವರಾಯದುರ್ಗದಲ್ಲಿ ಠಾಣೆ ನಿಂತು ಕೊರಟಗೆರೆ ಮಂಣೆ ಕೋಳಾಲ ವಗ್ಯೆರೆ ಮರಾಟೇರ ಶೀಮೆ ಹಲ್ಲಾಮಾಡಿ ತಾರಾಜು ಮಾಡುತ್ತಾ ಇದ್ದರು. ಯಿವರ ಬಳಿ ಮದ್ದಗಿರಿ ಸ್ಥಳದ ಮಾಲನೂರು ಅಪ್ಪಂಣನೆಂಬುವನು ಬಂದು ಶೇರಿ ಬಹಳ ಪೆಷರತ್ತಾಗಿ ಯಿದ್ದನು.

ಸದರಿ ವಿಕೃತು ಸಂವತ್ಸರದ ಜ್ಯೇಷ್ಠ ಆರಭ್ಯ ತ್ರಿಯಂಬಕ ಮಾಮನವರು ಶೀಮೆ ಸುತ್ತುತ್ತಾ ಗುರಂಗೊಂಡೆಗೆ ಮೊರ್ಚೆ ಹಾಕಿ ಯರಡು ಮೂರು ತಿಂಗಳು ಪರಿಯಂತ್ರ ಲಡಾಯಾಗಿ ಸೈದಸಾಬರನ ಕಾಲಿನ ಮ್ಯಾಲೆ ಯಿಳಿಶಿ ಗಡಾ ಠಾಣೆ ಹಾಕಿ ಬಾಜೀರಾಮ ನಾಮಜಾತ ಯಂಬವನಿಗೆ ಸುಭೆ ಕೊಟು ಯೀ ಮಾಹೆ ಫಾಲ್ಗುಣದವರೆಗೆ ತುಮಕೂರು ಬಳಿಗೆ ಬಂದರು.

ಆವರಿಗೆ ಪುಣೆದಿಂದ್ದಾ ಅಪ್ಪಾ ಬಲವಂತರಾಯರು ೪೦೦೦ ಕುದುರೆ ಸಹಾ ಕುಮುಕು ಬರಲಾಗಿ ತುಮಕೂರು ಬಳಿ ಉಭಯತ್ರರೂ ಭೇಟಿಯಾಗಿ ಮಾಗಡಿ ಗಿಡದಲ್ಲಿ ಯಿಳಿದು ಯಿದ ನವಾಬರ ಫವುಜಿನ ಮ್ಯಾಲೆ ಹೋಗಿ ಆ ಝಾಡಿಯಲ್ಲಿ ಕುದರೆ ಕಾಲಾಡದೆ

ಮೈದಾನ ಮೊಕಾಂ ಮಾಡಲಾಗಿ ನವಾಬರು ಮೇಲುಗೋಟೆ ಬಳಿಗೆ ಹೊರಟಿದ್ದರಿಂದಾ ಅಲ್ಲಿ ಮರಾಟೀರ ಫವುಜು ಬಂದು ಅವರವರಿಗೆ ಮೊಕಾಬಿಲೆಯಾಗಿ ಲಡಾಯಿ ಹತ್ತಿತು.

ಶಖೆ ೧೬೯೪ನೆ ಖರ ಸಂವತ್ಸರದ ಚೈತ್ರದಲ್ಲು ಮೆಲುಗೋಟೆ ಬಳಿ ನವಾಬರು ಯೋಚನೆಮಾಡಿ ಪಟ್ಟಣಕೆ ಹೊರಟು ನಡೆಯುವಲ್ಲಿ ಬಹಿರ ಬ್ಯಾರೆ ಜಂಗಿ ಫಉಜು ಬ್ಯಾರೆ ವಿಂಗಡಿಸದೆ ದರೋಬಸ್ತು ಗುನಗು ಕುದುರೆ ಸವಾರ್ಯ ಆನೆಗಳು ಖಜಾನೆ ವಗೈರೆ ದರೋಬಸ್ತು ಯೇಕಾಮಾಡಿ ಯಿದರ ಸುತ್ತಾ ಬಾರಿನ ಕೋಟೇಕಟ್ಟಿ ತೋಫುಗಳು ಸಹಾ ತೆಗೆದುಕೊಂಡು ರಾತ್ರೆ ಕಾಲದಲ್ಲಿ ಹೊರಟು ಹೋಗುತ್ತಾ ಕತ್ತಲೆಯಲ್ಲಿ ಮಾರ್ಗ ತಪ್ಪಿ ಸಡಗೆಂಟೆ ಸುತ್ತುತ್ತಾಯಿರುವಲ್ಲಿ ಬೆಳಗಾದರಿಂದಾ ಮರಾಟೀ ಫವುಜು ಬಂದು ಘೇರಾಯಿಶಿ ಬಹುಷಾ ಮಧ್ಯಾಂನ ಪರಿಯಂತ್ರವೂ ತೋಫುಗಳು ಬಂದೂಕಗಳು ಬಾಣಗಳಿಂದ ಸಹಾ ಬಹಳ ಯುದ್ಧವಾಗಿ ಮಾಮಾಸಾಬರ ಕಿವಿಗೆ ಬಂದೂಕಿನ ಗುಂಡು ತಗಲಿ ರೋಷದಿಂದಾ ಬಲವಂತರಾಯರು ಮಾಮಾಸಾಬರ ಸಹಾ ಅಂಗೀಜುಮಾಡಿದ್ದರಿಂದ್ದಾ ಬಾಣಗಳ ಪೆಟ್ಟಿನಲ್ಲಿ ನವಾಬರ ಕಡೆ ಮದ್ದಿನ ಪೆಟ್ಟಿಗೆಗಳು ಬಾಣಗಳು ಸಹಾ ಹೊತ್ತಿಕೊಂಡು ಬಾರು ತೊಟಿವಳಗಿನ ಸಾಮಾನು ಜನ ಸಹಾ ಸುಡುತ್ತಾ ಖೈದಿಗೆ ನಿಲ್ಲದೆ ತುಳದಾಟದ ವ್ಯಾಳೆಯಲ್ಲಿ ಪೇಶ್ವೆ ಫವುಜಿನ ಸವಾರ ಕುದುರೆ ಉಡಾಯಿಸಲಾಗಿ ನೀರು ಯಿಲ್ಲದೆ ಧಗೆಗೆಟುಯಿದ ಬಾರಿನ ಜನ ಹಚ್ಚಾಪಿಕ್ಕಾ ಆಗಿ ನವಾಬರ ಫುವುಜು ಮುರಿದು ತೀನ ಡೇರಾ ಆದ ಸಬಬು ನವಾಬರ ಅಂಣ ಶಾಬಾಸಾಬರ ಅಳಿಯ ಲಾಲಾ ಮಿಯಾನವರ ಬಾರ ಮುತ್ಸದ್ದಿ ನಾರಾಯಣರಾವು ತೋಷೆಖಾನೆ ಶ್ರೀನಿವಾಸ ಜೀವಾಜಿ ವಗೈರೆ ಲಡಾಯದಲ್ಲಿ ಹತರಾದರು. ಯೀಶಿನ ಸಾಬ ವಂಟಿ ಕುದುರೆ ಅಲ್ಲಿ ಜಮಾಖಾನರು ಅಬ್ದುಲ್ ಮಹಮದ ಮಿರ್ದೆ ವಗೈರೆ ಕಡಪೆ ಮೀರ ಅಲ್ಲಿ ರಜಾಖಾನರು ಸಹಾ ಫಡಾವು ಶಿಕ್ಕಿ ಹೋದರು. ಬರಕ್ಕಿ ಶ್ರೀನಿವಾಸರಾಯರು ಚಂದೂರಾಯರು ಫವುಜುಲ್ಲಾಖಾನರು ಸಹಾ ಕನಂಬಾಡಿ ಮಾರ್ಗವಾಗಿ ತಂಮಲ್ಲಿ ಸಲತನತು ಸವಾರಿಗಳು ಸಹಾ ಪಟ್ಟಣಕ್ಕೆ ದಾಖಲಾದರು. ಟೀಪು ಸುಲತಾನರು ವೆಂಕಪ್ಪೈಯ್ಯ ಸಹಾ ಮತ್ತು ಕೆಲವು ಸರದಾರರು ಸಹಾ ಪೋಷಾಕೆಲ್ಲ ತೆಗೆದು ಹರಕು ಬಟ್ಟೆಗಳಿಂದಾ ರೂಪು ಬದಲಾಯಿಶಿ ಪಟ್ಟಣಕೆ ಸೇರಿದರು. ನವಾಬರು ಹಂಸರಾಜನೆಂಬ ಕುದುರೆ ಮ್ಯಾಲೆ ಸವಾರಾಗಿ ಸಂಗಡ ಬೈದರ ಗಾಟಿಖಾನ್ ಯಿಪ್ಪತ್ತು ಮೂವತ್ತು ಜನ ಸವಾರು ಸಹಾ ಮರಾಟಿ ನಾಲ್ಕಾರು ಸಾವಿರ ಕುದುರೆ ಬೆಂನ್ನಟ್ಟಿದಾಗ್ಯೂ ಶಿಕ್ಕದೆ ಕುದುರೆಗಳ ಉಡಾಯಿಸಿ ಪಟ್ಟಣದ ಕಾವೇರಿ ನದಿ ಕಿನಾರೆ ಕಾದರಲ್ಲಿ ದರಗಾಕ್ಕೆ ಬಂದು ದಾಖಲಾದರು.

ಕಾದರಲ್ಲಿ ದರಗಾದ ಬಳೀ ರಾತ್ರೆ ೧೨ ಘಳಿಗೆವರಿಗೂ ಯಿದ್ದು ದಂಡಿನ ಜನ ಘಾಯಗಳ ತಿಂದು ಬಂದವರನೆಲ್ಲಾ ಜಮಾಯಿಶಿ ದಿಲಾಸುಮಾಡಿ ಜಖಮುಗಳ ಕಟಿಶಿ ಆ ಬಳಿಕ ಪಟ್ಟಣದ ಕೋಟೆ ವಳಗೆ ಬಂದು ಜಂಗೀ ಸರಕ ಜಾಮನೆಲ್ಲಾ ತಯಾರು ಮಾಡಿಸುತ್ತಾ ಮರಾಟೇರ ದಂಡಿಗೆ ವ್ಯಾಪಾರದ ಜನಗಳ ಕಳುಹಿಸಿ ಅಂಗಡಿಗಳ ಹಾಕಿಶಿ ತಂಮ್ಮ ಫವುಜಿನ ಬಾರು ಬಂಧುಖುಗಳು ಅವರಿಗೆ ಫಡಾಉ ಶಿಕ್ಕಿ ಯಿದ್ದುದನೆಲ್ಲಾ

ವಂದೆರಡು ಮೂರು ರೂಪಾಯಿ ಮ್ಯಾರೆಗೆ ಖರೀದಿಗಳ ಮಾಡಿಶಿ ಅಲ್ಲಲ್ಲಿ ನೆಲದಲ್ಲಿ ಹೂಳಿಸುತ್ತಾ ಮುಂದಣ ಮಜಲಿಗೆ ದಂಡು ಕೂಚಾದರೆ ಕಳಭಂಟರ ಸಂಗಡ ಜನಗಳ ಕಳುಹಿಸಿ ಬಂದೂಖುಗಳನೆಲ್ಲಾ ಪಟಣಕ್ಕೆ ತರಿಸುತ್ತಾ ತಂಮ್ಮ ಖದೀಮ ವೋತಿ ಯಂಬ ಕುದುರೆ ಘಡಾವು ಶಿಕ್ಕಿಹೋದುದಂನ್ನು ಚರವೆದಾರ ವೇಶದಿಂದಾ ಸಾಗಿಸಿಕೊಂಡು ಬಂದ ಭೀಮರಾಯರಿಗೆ ಚಿಂನದ ಬಳೆ ಕೊಟು ನೂರು ರೂಪಾಯಿ ದುರ್ಮಹಾಮಾಡಿ ಖಾಸಾ ಪೋಷಾಕು ಖಿಜಮತ್ತು ಕೊಟು ಯಿರುವಲ್ಲಿ ಮರಾಟೇರ ಘವುಜು ಪಟ್ಣಕ್ಕೆ ಮುತ್ತಿಗೆ ಹಾಕಿ ತೋಫುಗಳು ಬಾಣಗಳು ಮಕರ ಡಿಬ್ಬಿ ಸಹಾ ಯರಡು ತಿಂಗಳು ಪರ್ಯಂತ್ರಾ ಬಹಳವಾಗಿ ಹೊಡದು ವಂದು ದಿವಸ ಕರೆಘಟ್ಟದ ಬಳಿ ಹೊಳೆ ಕಡವೂ ದಾಟಿ ೨೦೦೦೦ ಸಾವಿರ ಕುದುರೆ ಶುಕ್ರವಾರದ ಪ್ಯಾಟೆ ಮ್ಯೆ.... ಗೆ ಬರುತ್ತಲೇ ನವಾಬರು ೨೦೦೦ ಕುದುರೆ ೪೦೦೦ ಸಾವಿರ ಬಾರು ಸಹಾ ತೆಗೆದುಕೊಂಡು ಅವರ ಮೊಕಾಬಿಲೆಗೆ ಹೋಗಿ ಬಹಳ ಲಡಾಯಿಮಾಡಿ ಹಿಂಮೆಟಿಶಿದರಿಂದಾ ಮುತ್ತಿಗೆ ತೆಗೆದು ಗೆಜ್ಜಲಹಟ್ಟಿ ಕಣಿವೆ ಯಿಳಿದು ಕಣಿವೆ ಕೆಳಗಣ ಶೀಮೆ ಸಾಧಿಸುವ ಬಗ್ಯೆ ಮರಾಟೇರ ಘವ್ರಜು ಸಾಗಿ ಹೋಯಿತು.

ಆವಾಗಾ ದೇಶದಿಂದ್ದಾ ಅಕ್ಕಿ ತುಪ್ಪ ಸಕ್ಕರೆ ಗೋಧಿ ಹಿಟ್ಟು ಜವಳೀ ಕೆಲವು ಖಜಾನೆ ಹಣ ಬದರಿಕಾ ೫೦೦೦ ಕುದುರೆ ಸಹಾ ಮರಾಟೇರ ದಂಡಿಗೆ ರಸದು ಬರುವದಂನ್ನು ತಿಳಿದು ಠೀಪು ಸುಲತಾನರು ಶ್ರೀನಿವಾಸರಾವ ಬರಕ್ಕಿ ಸಹಾ ನಾಲ್ಕಾರು ಸಾವಿರ ಕುದುರೆ ತೆಗೆದುಕೊಂಡು ಹೋಗಿ ರಸ್ತು ಹಣ ವಗ್ಯೆರೆ ಯಾವತ್ತ ಲುಟಾಯಿಶಿ ತೆಗೆದುಕೊಂಡು ನಗರಕ್ಕೆ ಹೋಗಿ ಶಿಕ್ಕಿದ ಜಿನಸೆಲ್ಲಾ ಕಡ್ಡಾಯಾ ಹಾಕಿ ಹಣಾಮಾಡಿಕೊಂಡು ಪಟ್ಣಕೆ ಬಂದು ನವಾಬರಿಗೆ ಯೀ ಹಣವಿನಲ್ಲಿ ವಂಚನ ಮಾಡಿದ್ದರಿಂದಾ ಸುಲತಾನರ ಮ್ಯಾಲೆ ಬಹಳ ಶಿಟ್ಟು ಮಾಡಿ ೨೦೦೦೦ ಬಹದರಿ ವರಹಾ ಸುಲತಾನರ ಕೈಯಿಂದ್ದಾ ತೆಗೆದುಕೊಂಡು ಯತ್ತ ರಾಜೀ ಹಾಸಲಾಯಿತು.

ಶಖೆ ೧೬೯೩ನೆ ಖರ ಸಂವತ್ಸರದ ವೈಶಾಖದಲ್ಲು ಶೀಯರ್ಾದಿಂದ್ದಾ ಮಹಿಮಾಜಿಶಿಂಧೆ ಕುದುರೆ ೨೦೦೦ ರೊಹಿಲೆ ೨೦೦೦ ಶಿಬ್ಬಂದಿ ೩೦೦೦ ತೋಫು ೨ ಸಹಾ ಬಂದು ತುಮುಕೂರು ವಳಿತವಾದ ಚೇಳೂರಿಗೆ ಮುತ್ತಿಗೆ ಹಾಕಲಾಗಿ ಗುರಿಕಾರ ವೆಂಕಟಪತ್ಯೆಯ್ಯನವರ ಮಗ ವೆಂಕಟಪ್ಪನವರು ಕೋಟೆಯಲ್ಲಿ ಮುಖ್ಯವಾಗಿ ನಿಂತ್ತು ಹನ್ನೊಂದು ದಿವಸ ಬಹಳ ಲಡಾಯಂನ್ನು ಮಾಡಲಾಗಿ ಆಗಾಗಾ ಚಿಮಣಾಜಿ ಪರಭು ತಾಳಿಕೆರೆ ತಿಂಮ್ಮನಾಯಕ ಸಹಾ ಸವಾರು ೫೦೦ ಪ್ಯಾದೆ ೧೦೦೦ ಸಹಾ ಹೊರಟು ಬರು ಮಧ್ಯೆ ಸರಕಾರದ ಘವುಜು ಫೈಕಿ ಥಪ್ಪೂ ಕಾಕರೆ ಬೆಂಡಾರೆ ಬ್ಯೆದಮ ವಗ್ಯೆರೆ ೨೦೦೦ ಸವಾರರು ಜ್ವತೆ ಗೂಡಿದ್ದರಂದಾ ಖಾಲಿ ಝೂಂಡೆ ಮರಾಟೇರ ಘವುಜಿನ ಹಾಗೆ ಮಾಡಿಕೊಂಡು ಬಂದು ಚೇಳೂರು ಬಳಿಯಣ ಮರಾಟೇರ ಘವುಜಿನ ಮ್ಯಾಲೆ ಥಪ್ಪಿ ಹೊಡದು ಮಹಿಮಾಜಿ ಶಿಂಧ್ಯಾನ ಕೈಶೆರೆ ಹಿಡಿದು ಬ್ಯೆದರ ಸಂಗಡ ಪಟ್ಣಕ್ಕೆ ಕಳುಹಿಸಿ ಘವುಜಿನೆಲ್ಲಾ ವೋಡಿಶಿ ಬಹಳ ಕುದುರೆಗಳ ಹಿಡಿದುಕೊಂಡು ದೇವರಾಯದುರ್ಗಕ್ಕೆ ಚಿಮಣಾಜಿ ವಗ್ಯೆರೆ ಹೊರಟು ಹೋದರು.

ಆವರಿಗೆ ತ್ರಿಯಂಬಕ ಮಾಮಾನವರು ಕಣಿವೆ ಕೆಳಗಿಂದ್ದಾ ಬಂದು ತುರುವೆಕೆರೆ ಪ್ರಾಂತ್ಯದಲ್ಲಿ ಯಿಳಿದು ಯಿದ್ದು ಯೆಕಾಯೆಕಿ ದೇವರಾಯದುರ್ಗಕೆ ಬಂದು ಲಡಾಯಿಮಾಡಿ ದುರ್ಗ ತೆಗೆದುಕೊಂಡು ಮೂಲನೂರು ಅಪ್ಪಂಣ ಲಡಾಯಲ್ಲಿ ಮ್ರುತವಾದ್ದರಿಂದಾ ರಂಗಪ್ಪನಾಯ್ಕ ಚಿಮಣಾಜಿಪಂತ ತಿಂಮ್ಮನಾಯ್ಕ ವಗೈರೇರು ಬೆರಿಹಾಕಿ ಮದ್ದಗಿರಿ ಚಂನರಾಯದುರ್ಗ ನಂದೀ ಗಡಕ್ಕೆ ಸಹಾ ಸಾಗಿಶಿ ದುರ್ಗಾ ಬಲಿಯಾಮಾಡಿದರು.

ಯಿದೆ ಖರ ಸಂವತ್ಸರದ ವೈಶಾಖದಲ್ಲು ಕೊಡಗಿನ ಪಾಳೆಗಾರನ ಬಳಿಗೆ ಪ್ರಧಾನ ವೆಂಕಪ್ಪೈಯ್ಯನವರ ಕಳುಹಿಸಿ ಮಾತುಕತೆ ಆಗಿ ಶೀಮೆಯಿಂದ್ದಾ ಅಕ್ಕಿ ತುಪ್ಪಾ ವಗೈರೆ ರಸ್ತು ಮುಸ್ತೈದು ಮಾಡುವಂತೆ ಸಂಗತೀ ಮಾಡಿಕೊಂಡರು ಕೊಡಗಿನವ... ತ್ರಿಮಾ ಮಾಡಿದರು.

ಸದರಿ ವಿಕ್ರುತು ಸಂವತ್ಸರದಲ್ಲೂ ಪಟ್ಟಣದಲ್ಲೂ ಶ್ರೀರಂಗನಾಥದೇವರ ತೇರು ಬೆಂದು ವುತ್ಸಹ ವಿಗ್ರಹಗಳು ಕರಗಿಹೋದವು.

ಖರ ಸಂವತ್ಸರದ ಕಾರ್ತಿಕ ಮಾರ್ಗಶಿರ ಮಾಸದಲ್ಲೂ ಪ್ರಧಾನ ವೆಂಕಪ್ಪೈಯ್ಯನವರಿಗೆ ಯರಡನೆಯ ಮದುವೆಯಂನ್ನು ಬಹು ವಿಭವದಿಂದ್ದಾ ಮನೆ ಮುಂದೆ ನವಬತ್ತು ಕಳುಹಿಸಿ ವಂದು ದಿವಸ ನವಾಬರು ವೆಂಕಪ್ಪೈಯ್ಯನ ಮನೆಗೆ ಬಂದು ಮದುವೆ ಮಾಡಿಸ್ತರು.

ತರುವಾಯ ಪುನೆಯಲ್ಲಿ ಮಾಧವರಾಯರು ದೈವಾಧೀನರಾಗಿ ಯಿವರ ತಂಮ್ಮ ನಾರಾಯಣರಾಯರಿಗೆ ದವಲತ್ತು ಆದ್ದರಿಂದ್ದಾ ಪುನೆಕ್ಕೆ ಅಪ್ಪಾಜೀ ರಾಮ ವಗೈರೆ ವಕೀಲರನ ಕಳುಹಿಸಿ ಸಲ್ಲಾಮಾಡಿ ಆನಂದರಾಮ ರಸ್ತ್ಯಾನರ ಕುಮುಕಿನಿಂದ್ದಾ ಹರಿವಂತ ಪಡಕ್ಯಾನರು ಬಂದು ಮರಾಟೀರ ದಂಡು ಹಿಂತಿರುಗಿಶಿಕೊಂಡು ಶಕೆ ೧೬೯೪ನೆ ನಂದನ ಸಂವತ್ಸರದ ಜೇಷ್ಠ ಆಷಾಢದಲ್ಲೂ ತ್ರಿಯಂಬಕ ಮಾಮನವರು ಅಪ್ಪಾ ಬಲವಂತರಾಯರು ಮರಾಟೆರ ದಂಡು ಸಹಾ ಪುನೆಕ್ಕೆ ಹಿಂತಿರುಗಿಹೋಯಿತು.

ನವಾಬರಿಗೆ ಶಿಕ್ಕಿಯಿದ್ದ ಮಹಿಮಾಜಿ ಶಿಂಧ್ಯಾ ವಗೈರೆ ಸರದಾರರನ್ನೆಲ್ಲಾ ಬಿಟ್ಟು ಕಳುಹಿಸಿ ಮರಾಟೇರಿಗೆ ಶಿಕ್ಕಿ ಯಿದ್ದ ಮೀರ ಅಲ್ಲಿಖಾನರು ರಂಗಪ್ಪನಾಯ್ಕ ವಗೈರೆರನೆಲ್ಲಾ ಬಿಡಿಶಿ ಕರಶಿಕೊಂಡರು.

ಮೀರ ಅಲ್ಲಿ ರಜಾಖಾನರಿಗೆ ದಿಂಡುಗಲ್ಲು ಜಹಗೀರು ಕೊಟು ಸರದಾರ ಖಾನರು ಯಥಾಪ್ರಕಾರ ಕುಮಂದಾರಿ ಖಿಜಮತ್ತಿನಲ್ಲಿ ಸರಫರಾಜು ಮಾಡಿದರು.

ಸದರಿ ಪಟ್ಟಣದಲ್ಲಿ ಖರ ಸಂವತ್ಸರದಲ್ಲೂ ಚಿಕ್ಕ ಕ್ರಿಷ್ಣರಾಜ ಒಡೆಯರ ಮಗ ನಂಜರಾಜ ಒಡೆಯರು ತೀರಿಹೋದ್ದರಿಂದಾ ಯಿವರ ಮಲತಾಯಿ ಮಗ ಚಾಮರಾಜ ವಡೆಯರವರಿಗೆ ಪಟಾಭಿಷೇಕ ನವಾಬರು ಮಾಡಿಸ್ತರು. ಸದರಿ ನಂದನ ಸಂವತ್ಸರದ ಆಶ್ವೀಜ ಕಾರ್ತಿಕದಲ್ಲೂ ಅಷ್ಟರಲ್ಲಿ ಖಾನರ ಮೇಲೆ ಯತರಾಜಿಯಾಗಿ ಯೀತನ ಅಳಿಯ ಪಾಥ್ಯಾ ಸಾಬರನೂ ಕೊಂದು ಹಾಕಿ ಮಹಲಾತಕಚೇರಿ ದಿವಾನಗಿರಿ ಪ್ರಧಾನ ವೆಂಕಪ್ಪೈಯ್ಯನವರಿಗೆ ನೇಮಕವಾಯಿತು.

ಶೀಮೆ ಕಂದಾಚಾರ ಕಚೇರಿ ಬಕಷೀಗಿರಿ ಕೊತ್ತಗಾಲದ ಕೃಷ್ಣೇ ಅರಶಿನವರ ಮಗ ಲಕ್ಷ್ಮೀಕಾಂತೈಯ್ಯನವರಿಗೆ ನೇಮಕವಾಯಿತು. ಅಸರಲ್ಲಿ ಖಾನರಿಗೂ ಸಹಾ ಯಿದ್ದು ಮಧ್ಯೆ ಮಾಗಡಿ ಅಮುಲು ಕಿಲ್ಲೆ ಕೆಲವು ದಿನ ಲಕ್ಷ್ಮೀಕಾಂತೈಯ್ಯನವರಿಗೆ ಆಗಿ ಆ ಬಳಿಕ ಶಂಖಗಿರಿ ಯೀರೋಡು ಮಾಮಲೆ ಆಯಿತಾಗಿ ಕಂದಾಚಾರದ ಕಚೇರಿ ಬಕಷೀಗಿರಿ ಮಾತ್ರ ಜೈನುಲ್ಲಾಬ್ದೀನರಿಗೆ ಬದಲು ಆಯಿತು.

ಸದರಿ ನಂದನ ಸಂವತ್ಸರದ ಆಶ್ವಿಜ ಕಾರ್ತಿಕದಲ್ಲು ಮೊಕದುಂ ಸಾಬರಂನ್ನು ಫವುಜು ಸುದಾ ಕಳುಹಿಶಿ ಚಿತ್ರದುರ್ಗ ಹರಪನಹಳ್ಳಿ ವಗ್ಯೆರೆ ಪಾಳೆಗಾರಿಂದ್ದಾ ಖಂಡಣೆ ಹಣಾ ನವಾಬರು ತರಿಶಿಕೊಂಡರು.

ಶಖೆ ೧೬೯೫ನೇ ವಿಜಯ ಸಂವತ್ಸರದ ಜೇಷ್ಟ ಆಷಾಡದಲ್ಲು ವೆಂಕಪ್ಪೈಯ್ಯನವರಿಗೆ ಬದಲಾಗಿ ಮಹಲಾತಿ ಕಚೇರಿ ನಿವಾನಗಿರಿ ಸಲಾಮತ ಖಾನರಿಗೆ ಯಿವರ ತಂಮ್ಮ ಮಹಂಮದ ಗೌಸರಿಗೆ ಸಹಾ ನೇಮಕವಾಯಿತು.

ಸದರಿ ವಿಜಯ ಸಂವತ್ಸರದಲ್ಲು ಕಲ್ಲಿಕೋಟೆ ಕಡೆ ನಾಯಕರು ಮಾಪಿಳೆರ ಷರಾರತ್ತಿನಿಂದಾ ಹರಕಾರ ರಂಗಪ್ಪನಾಯ್ಕ ರಾಮಗಿರಿ ಚಾಮರಾಜೆಯ್ಯನ ಸಹಾ ಕಳುಹಿಸಲಾಗಿ ಅವರನ ನಾಯುಮಾರರು ಹೊಡದು ಹಾಕಿದ್ದರಿಂದ್ದಾ ಬರಕ್ಕಿ ಶ್ರೀನಿವಾಸರಾಯರ ಸಂಗಡ ಕೆಲಉ ಫವುಜು ಸಹಾ ಕಳುಹಿಸಲಾಗಿ ಅವರು ಶೀಮೆ ಜನವನೆಂಲ್ಲಾ ತಂಬೀಮಾಡಿ ಬಂದೋಬಸ್ತು ಮಾಡಿ ಕಲ್ಲಿಕೋಟೆಯಲ್ಲಿ ನಿಂತರು.

ಶಖೆ ೧೬೯೬ನೆ ಜಯ ಸಂವತ್ಸರದ ಚ್ಯೆತ್ರಮಾಸದಲ್ಲು ನವಾಬರು ಕೊಡಗಿನ ಮ್ಯಾಲೆ ಮೊಹಿಂ ಹೋಗಿ ಯೀ ಸಂಸ್ಥಾನ ಮಡಿಕೇರಿ ವಟ್ಟೇರಿ ನಾಡು ಬಾಳೆ ನಾಡು ವಗ್ಯೆರೆ ಠಾಣೆ ಹಾಕಿ ಯೀ ಜೇಷ್ಟ ಮಾಸದಲ್ಲು ನವಾಬರು ಪಟ್ಟಣಕ್ಕೆ ಬಂದರು.

ಈ ವೈಶಾಖದಲ್ಲು ಪಟ್ಟದ ದೊಡ ಉಗ್ರಾಣದಲ್ಲಿ ಸಾಬಕಿನಿಂದಾಯಿದ್ದ ಕದೀಮು ಮದ್ದಿನ ಮನೆ ಹತ್ತಿಕೊಂಡು ಬಹುಜನ ಲಯವಾಗಿ ಬಹಳ ಮನೆಗಳು ರಂಗನಾಥ ದೇವರ ದೇವಸ್ಥಾನ ಮುಂತಾಗಿ ಬಿದ್ದು ಭಂಡಿಗಳ ಮ್ಯಾಲೆ ಹೆಣಗಳ ಸಾಗಿಶಿ ಅನಾಹುತವಾದಂನ್ನು ವಂದು ತಿಂಗಳ ವಳಗಾಗಿ ಶ್ರೀರಂಗನಾಥದೇವರ ಗುಡಿ ಮೊದಲಾತ ದರೋಬಸ್ತು ನವಾಬರು ಕಟಿಸ್ತರು.

ಆವರೆಗೆ ಪುನೆದಲ್ಲಿ ಶ್ರೀಮಂತ ನಾರಾಯುಣರಾಯರನ ಯಿವರ ಚಿಕ್ಕಪ್ಪ ರಾಘೋಬಾನವರ ಕೃತ್ತಿಮಾಮಾಡಿ ದೇವಡಿ ಪಹರೆ ಚಮಕಿ ಯಿಂದ್ದಾ ಸರದೀ ಸರದಾರನಿಗೆ ಲಂಚಾಹಾಕಿ ಅವನ ಕ್ಯೆಯಿಂದಾ ಕೊಂದು ಹಾಕಿಶಿ ತಾವೇ ದವಲತ್ತಿಗೆ ಕುಳಿತು ಫವುಜು ಸುದಾ ನವಾಬರ ಮ್ಯಾಲೆ ರಾಜಕಾರ್ಯ ನಿಮತ್ಯ ಹೊರಟು ಬಂದ್ದು ಶುದ್ದಿ ಕೇಳಿದರು. ಜಯ ಸಂವತ್ಸರ ಚ್ಯೆತ್ರದಲ್ಲೂ ಪ್ರಧಾನ ವೆಂಕಪ್ಪೈಯ್ಯನವರಂನ್ನು ಹರೆಕಾರ ನರಸಪ್ಪ ನಾಯಕಂನ ಅಪ್ಪಾಜೀ ರಾಮನ ಸಹಾ ಸಲ್ಲಾಕ್ಕೆ ಕಳುಹಿಸಿಕೊಟರು.

ಯಿವರು ಹೋಗಿ ಸೊಂಡೊರು ಬಳಿ ರಾಘೋಬಾನವರ ಭೇಟಿ ಆದಾಗ್ಯೆ ಅವರಿಗೆ ಪುನೆದಲ್ಲಿ ನಾರಾಯಣರಾಯರ ಹೆಂಡತಿ ಗಂಡು ಮಗನ ಹೆತ್ತದ್ದರಿಂದಾ ಆತನಿಗೆ ಸವಾಯಿ ಮಾಧವರಾಯನೆಂದು ಹೆಸರಿಟ್ಟು ಆತನ ತೊಟ್ಲ ಹಗ್ಗಕ್ಕೆ ಮೊಹರು ಕಟ್ಟಿ ಬಾಳಜಿಪಂತ ನಾನಾಫಡನೀಸನು ದವಲತ್ತು ಬಲಕಾಯಿಶಿ ರಾಘೋಬಾನವರ ಸಂಗಡ ಬಂದು ಯಿದ್ದ ಸರದಾರರನೆಲ್ಲಾ ಪಿತೂರಿಮಾಡಿ ಬರಶಿ ಕಳುಹಿಸಿದ್ದರಿಂದ್ದಾ ಸರದಾರರೆಲ್ಲಾ ಹೇಳದೆ ದಂಡಿನಿಂದ ಹೊರಟುಹೋಗುವುದ ಕಂಡು ರಾಘೋಬಾನವರು ವೆಂಕಪ್ಪೈಯ್ಯ ನವರಿಗೆ ಜವಾಹಿರಿ ಆನೆ ದೇಖೀಲು ಕೊಟ್ಟು ಶೀರ್ಯ ಮದ್ದಗಿರಿ ಚಂನರಾಯದುರ್ಗ ಹೊಸಕೋಟೆ ದೊಡ್ಡಬಳ್ಳಾಪುರ ಯಿದಲ್ಲದೆ ಕ್ರಿಷ್ಣನದೀ ಪರ್ಯಂತ್ರ ಸೀಮೆಯೆಲ್ಲಾ ನವಾಬರಿಗೆ ಸಂನದು ಬರದುಕೊಟ್ಟು ಮುಂದೆ ತಮಗೆ ಪುನೆದ ಮೇಲಣ ರಾಜಕಾರ್ಯಕ್ಕೆ ನವಾಬರು ಸಹಾಯವಾಗಬೇಕೆಂದು ಹೇಳಿ ಕಾಗದ ಪತ್ರ್ರಗಳ ಬರದು ತಂಮ್ಮ ಬಗೆ ಬಾಜಿರಾವು ಭರವೆನವರನ ಯಿವರ ಸಂಗಡ ಕಳುಹಿಸಿ ತಾವೂ ಹಿಂತಿರುಗಿ ಗುತ್ತಿ ಪಂಡರಾಪುರದ ಮಾರ್ಗವಾಗಿ ಬೊಂಬೈಗೆ ಸಾಗಿಹೋದರು.

ಅಲ್ಲಿಂದಾ ಯಿವರೆಲ್ಲಾ ಶೀರ್ಯದ ಬಳಿಗೆ ಬಂದು ಸಂನದು ಕಳಹಿಸ್ತಲ್ಲಿ ಕೋಟೆ ವಳಗಿಂದಾ ಮಹಿಮಾಜಿ ಶಿಂಧ್ಯಾನ ಮಗ ಬಾಪೂಜೀ ಶಿಂಧ್ಯಾ ರಘೋಬಾನವರ ಸಂನದು ಮಂಜೂರು ಮಾಡದೆ ಯಿರುವ ಸುದ್ದಿ ತಿಳಿದು ಪಟ್ಣದಿಂದ್ದಾ ಫವುಜು ಸುದಾ ಠೀಪು ಸುಲತಾನರಂನ್ನು ಸರದಾರಖಾನ ಮಾಹೆ ಮಿರಜಾನ ವಗೈರನ ಕಳುಹಿಸಲಾಗಿ ಯರಡು ಮೂರು ತಿಂಗಳು ಪರಿಯಂತ್ರ ಲಡಾಯಾಗಿ ಶೀರ್ಯ ತೆಗೆದುಕೊಂಡು ಬಾಪೂಜಿ ಶಿಂಧ್ಯಾನ ಪಟ್ಣಕೆ ಕಳುಹಿಸಿ ಮದ್ದಗಿರಿ ಬಳಿಗೆ ಬಂದು ಯರಡು ದಿನದಲ್ಲಿ ಮದ್ದಗಿರಿ ಠಾಣೆಹಾಕಿ ಅಲ್ಲಿದ್ದ ಲಕ್ಷ್ಮಣಪಂತನ ಕೌಲಿನ ಮ್ಯಾಲೆ ಪುನೆಕ್ಕೆ ಕಳುಹಿಸಿ ಅಲ್ಲಿಂದಾ ಚಂನ್ನರಾಯದುರ್ಗಕ್ಕೆ ಬಂದು ಯರಡು ತಿಂಗಳು ಪರಿಯಂತರ ಲಡಾಯಿ ಮಾಡಿ ದುರ್ಗಾ ತೆಗೆದುಕೊಂಡು ಅಲ್ಲಿಂದಾ ಚಿಮಣಾಜಿ ಪಂತನ ಕೌಲಿನ ಮ್ಯಾಲೆ ಪುನೆಕ್ಕೆ ಕಳುಹಿಸಿ ಸುಲತಾನರು ಹೊಸಕೋಟೆ ಬಳಿಗೆ ಬಂದರು.

ಯೀ ಜಯ ಸಂವತ್ಸರದ ಜ್ಯೇಷ್ಠ ಆಷಾಢದಲ್ಲಿ ನವಾಬರು ಪಟ್ಣದಿಂದಾ ಫವುಜು ಸುದಾ ಹೊರಟು ಹೊಸಕೋಟೆಗೆ ಮುತ್ತಿಗೆ ಹಾಕಿ ಕಿಲ್ಲೆ ತೆಗೆದುಕೊಂಡು ಅಲ್ಲಿಂದಾ ಠೀಪೂ ಸುಲತಾನರನು ಗುರುಂಕೊಂಡೆ ಸಾಧಿಸುವಂತೆ ರವಾನೆಮಾಡಿ ಬೆಂಗಳೂರು ಮಾರ್ಗವಾಗಿ ಬಂದು ದೊಡ್ಡಬಳ್ಳಾಪುರ ಠಾಣೆಹಾಕಿ ಮದ್ದಗಿರಿ ಚಂನ್ನರಾಯದುರ್ಗಕೆ ಬಂದು ಸದರಹು ಗಡ ೨ಕ್ಕು ಕಲ್ಲುಗಾರೆ ಕೋಟೆ ಬತೇರಿ ವಗೈರೆ ಕಾಮಗಾರಿ ಬಗ್ಯೆ ಅಪ್ಪಣೆ ಕೊಟ್ಟು ಶೀರ್ಯ ಮದ್ದಗಿರಿ ಚಂನ್ನರಾಯದುರ್ಗ ಯೀ ಮೂರು ಗಡಿ ಮಾಮಿಲೆಯಂನ್ನು ಪ್ರಧಾನ ವೆಂಕಪ್ಪೈಯ್ಯನವರಿಗೆ ನೇಮಕಾ ಮಾಡಿ ಜಯ ಸಂವತ್ಸರದ ಆಶ್ವಿಜದಲ್ಲು ಪಟ್ಣಕ್ಕೆ ನವಾಬರು ದಾಖಲಾದರು.

ಸುಲತಾನರು ಗುರುಂಕೊಂಡೆಗೆ ಹೋಗಿ ಲಡಾಯಿಮಾಡಿ ಅಲ್ಲಿ ಸಾಬಕು ತ್ರಿಯಂಬಕಮಾಮನ ಬಗೆ ಬಾಜಿರಾಮ ನಾಮಜಾತ ಆ ಬಳಿಕ ಮಹೀಪತಿರಾವು ಕಡೆ

ಬಾಬೂರಾಮಾ ಭಾಸ್ಕರನೆಂಬಾತ ಯಿದ್ದಲ್ಲಿ ಆತನ ಕೌಲಿಗೆ ಯಿಳಿಶಿ ಜಯ ಸಂವತ್ಸರದ ಭಾದ್ರಪದ ಬಹುಳದಲ್ಲಿ ಸುಲತಾನರು ಗುರುಂಕೊಂಡೆ ಠಾಣೆ ಹಾಕಿದರು. ಆವಾಗಾ ಹಜೂರಿಂದ್ದಾ ಗುರುಂಕೊಂಡೆ ಸುಭೇದ ಬಗ್ಯೆ ಅಲಾವದ್ದೀನರು ನೇಮಕವಾಗಿ ಬಂದ್ದು ಕೆಲವು ದಿನದ ಮ್ಯಾಲೆ ಕಬೀರಬೇಗರಿಗೆ ಮೊಕರೂರು ಆಗಿ ಹೇವಿಳಂಬಿ ಸಂವತ್ಸರದಲ್ಲು ಮೀರಅಲ್ಲಿ ರೆಜಾಖಾನರಿಗೆ ದಿಂಡುಗಲ್ಲು ತೆಗೆದು ಗುರುಂಕೊಂಡೆ ಜಹಗೀರಾಯಿತು.

ತರುವಾಯ ಶಖೆ ೧೬೯೭ನೆ ಮನ್ಮಥ ಸಂವತ್ಸರದಲ್ಲು ಆದವಾನಿ ಯಿಂದ್ದಾ ಬಸಾಲತ ಜಂಗರ ಕಡೆ ಫವುಜು ಬಂದು ಬಳ್ಳಾರಿಗೆ ಮುತ್ತಿಗೆ ಹಾಕಿ ಯಿರುವ ಶುದ್ದಿ ನವಾಬರು ಕೇಳಿ ಕಾರ್ತಿಕ ಶುದ್ಧದಲ್ಲು ಪಟ್ನದಿಂದಾ ಫವುಜು ಸುದಾ ಹೊರಟು ಧಡೆ ಸವಾರಿ ರತ್ನಗಿರಿ ಬಳಿಯಿಂದ್ದಾ ಯೆಕಾಯೆಕಿ ಹೋಗಿ ಆದವಾನಿ ದಿವಾನ ರಾಜಾ ಬಹದರ ದೇವೀಚಂದ ಕೀರ್ತಿಪಂತಯಂಬವನ ಠಾರುಮಾಡಿ ಯೀತನ ಫವುಜನೆಲ್ಲಾ ಲುಟಾಯಿಶಿ ಯಿವರ ಕಡೆ ನೌಕರಿಯಿದ್ದ ಗೊರಾ ೨೦೦ ಸಹಾ ಫರಾಸೀನ ಮೂಸೆಲಾಲ ಯಂಬುವನು ಬೆಟ್ಟಕ್ಕೆ ಹಿಂದಣ ಪಾರ್ಶದಲ್ಲಿ ಯಿಳಿದು ಯಿದ್ದನಾಗಿ ಆ ಫವುಜಿಗೆ ಘೆರಾಯಿಸಿ ಕೌಲುಮಾಡಿ ಆ ಫವುಜು ಸುದಾ ಸರದಾರ ಮಜಕೂರನು ತಂಮ್ಮಲ್ಲಿ ನೌಕರಿಯಿಟ್ಟುಕೊಂಡು ಆ ರಾತ್ರೆಯೇ ಬಳ್ಳಾರಿ ಪಾಳೆಗಾರ ಹೆಂಗುಸು ಬೆಟ್ಟಾಬಿಟ್ಟು ವೋಡಿಹೋದ್ದರಿಂದಾ ಮೂರು ದಿನ ಬಳ್ಳಾರಿ ಠಾಣೆ ನವಾಬರ ವಶವಾಯಿತು.

ಸದರಹೂ ಬಳ್ಳಾರಿ ಗಡದ ಕಾಮಗಾರಿ ಬಗ್ಯೆ ನೇಮಿಸಿ ಕೆಲವೂ ಜಮಾಯತ್ತು ಸುದಾ ಕೆಂಗೇರಿಕೋಟೆ ಹೈದರ ಬಕಷೀಯಂನ್ನು ಬಳ್ಳಾರಿಯಲ್ಲಿ ಯಿಟ್ಟು ಕುರುಗೋಡು ಬಳಸಿ ಮಂನ್ಮಥ ಸಂವತ್ಸರದ ಕಾರ್ತಿಕಬ ೩೦ ದಿವಸ ಕೆಲವು ಹೊತ್ತು ಸ. ಯಿಂಡುಗಳಾಗಿ ಕುರುಗೋಡು ಠಾಣೆ ನವಾಬರದಾಯಿತು.

ಅಲ್ಲಿಂದಾ ಹೊರಟು ಕೆಂಚನಗುಡ್ಡದ ಪಾಳೆಗಾರನಿಂದ ಪೇಷ್ಕಶಿ ತೆಗೆದುಕೊಂಡು ರಾರಾವಿ ಮಾರ್ಗವಾಗಿ ಆದವಾನೀ ಬಳಿಗೆ ಹೋಗಿ ಮಂಮದಷಾಯಿ ೩೦೦೦೦೦ ವರಹಾ ಬಸಾಲತ ಜಂಗರಿಂದ್ದಾ ಪೇಷ್ಕಶಿ ತೆಗೆದುಕೊಂಡು ಅಲ್ಲಿಂದಾ ಕರ್ನೂಲ ಬಳಿಗೆ ಹೋಗಿ ಮುನವರ ಖಾನರಿಂದ್ದಾ ೩೦೦೦೦೦ ವರಹಾ ಪೇಷ್ಕಶಿ ತೆಗೆದುಕೊಂಡು ಅಲ್ಲಿಂದ್ದಾ ಪ್ಯಾಪರಿಗೆ ಅಗ್ನಿಪ್ರವೇಶಾಮಾಡಿ ಮಂನ್ಮಥ ಸಂವತ್ಸರ ಮಾರ್ಗಶರ ಬಹುಳದಲ್ಲೂ ಗುತ್ತಿ ಬಳಿಗೆ ಬಂದ್ದು ನವಾಬರು ಮುತ್ತಿಗೆ ಹಾಕಿದರು.

ಕೆಂಚನಗುಡ್ಡದ ಬಳಿಯಣಿಂದ್ದಾ ವೆಂಕಪ್ಪೈಯ್ಯನವರನ ಕಳುಹಿಸಿ ಪಾಗೊಂಡೆ ತೆಗೆದುಕೊಂಡರು.

ಗುತ್ತಿ ಕ. ೧೦ ದರವಾಜೆ ಬಳಿ ನವಾಬರ ಮೊರ್ಚೆ ಹೊಸಪ್ಯಾಟೆಯಿಂದ್ದಾ ಗೌತಮೇಶ್ವರನ ಗುಡಿ ಪರಿಯಂತ್ರ ಬೆಟ್ಟದ ಹಿಂಭಾಗಕ್ಕೆಲ್ಲಾ ಚಿತ್ರಕಲ್ಲು ರಾಯದುರ್ಗ ಹರಪನ ಹಳಿ ಕಡಪೆಯವರೂ ಮೊದಲಾಗಿ ಮೊರ್ಚೆಗಳ ಹಾಕಿ ತೋಫುಗಳ ಯೇರಿಶಿ ಗುಂಡು ಹೊಡದು ಯೀ ಪುಷ್ಯ ಬಹುಳದಲ್ಲು ಪಾಯನ ಕಿಲ್ಲೆ ಹಲ್ಲಾಮಾಡಿ ತೆಗೆದುಕೊಂಡು

ತರುವಾಯಾ ಯರಡು ಕಿಲ್ಲೆ ವಕೀಲರು ಬಂದು ಸಲ್ಲಾದ ಮಾತುಕಥೆ ಆದ್ದರಿಂದ್ದಾ ಗುತ್ತಿ ದೇಶಾಯಿ ನರಶಿಂಗರಾಯಾ ಯೀತನ ಹಿರಿಯ ಮಗ ವೋಬಳರಾಯ ಸಹಾ ನವಾಬರ ಬಳಿಗೆ ಬಂದು ಕೂಡಿ ಯರಡನೆಯ ಮಗ ರಾಮರಾಯ ಬೆಟ್ಟದ ಮೇಲೆ ಯಿದ್ದು ಅಲ್ಲಿನ ವರ್ತಮಾನವೆಲ್ಲಾ ಕೆಳಕ್ಕೆ ಕೊಡುತ್ತಾ ಗಡಾದ ಮೇಲೆ ೭೨ ಪಾಕೆದಲ್ಲು ನೀರು ಗೊಟ್ಟಾಗಿ ಆನೆ ಕುದುರೆ ವಂಟೆ ಪಾಯದಳ ಬಹುಜನ ಸೂಳೇರು ಸುದಾ ಕೂಡಿ ೨೦೦೦೦ ಜನರ ಪರಿಯಂತ್ರ ನೀರಿಗೆ ವದ್ದಾಡಿದ ಬಾತಮೀ ತಿಳಿದು ವಕಾಲತ್ತಿಗೆ ಬಂದ ಮುಸಲಮಾನನು ಚಿಕ್ಕ ಪ್ರಾಯದವನಾಗಿ ನವಾಬರ ಬಳಿ ವೂಟದ ವ್ಯಾಳೆಯಲ್ಲಿ ತುಂಗಭದ್ರೆ ಕಾವೇರಿ ನೀರು ಹೆಚ್ಚಾಗಿ ಕುಡಿಯಲಾಗಿ ಪ್ರಸ್ತಾಪದಲ್ಲಿ ಬೆಟ್ಟದ ಮೇಲಣ ನೀರಿಲ್ಲದ ಮಾತು ಅವನ ಬಾಯಿಂದ್ದಾಲು ನವಾಬರು ಕೇಳಿ ವಬ್ಬ ಸಮ.... ರು ಬೆಟ್ಟದಿಂದ್ದಾ ಬಂದು ತಂನ ಕುದುರೆ ತೆಗೆದುಕೊಂಡು ಕ್ರಯದ ಹಣ ಕೊಡದೆ ಮುರಾರಿ ರಾಯ ಜುಲುಮಿಮಾಡಿ ಯಿದ್ದಾನಾಗಿ ನೀವು ಸಲ್ಲಾ ವಪ್ಪದೆ ಮೂರು ದಿನ ಠಾಣೆ ಮಾಡಿದರೆ ಗಡ ಸ್ವಾಧೀನವಾಗುತ್ತೆಂದು ಹೇಳಿ ಬೆಟ್ಟದಿಂದ ತರ್ವಾಯ ತಂನ್ನ ಹಣ ಕೊಡಿಸಬೇಕೆಂದು ಹೇಳಿಕೊಂಡರೆ ಆತಂನ ಸರಫರಾಜುಮಾಡಿ ನವಾಬರು ಸಲ್ಲಾಕ್ಕೆ ವಪ್ಪದ್ದರಿಂದ್ದಾ ಮತ್ತೆ ಯರಡು ದಿವಸಕ್ಕೆ ಯೀ ಮಂನ್ಮಥ ಸಂವತ್ಸರದ ಫಾಲ್ಗುಣ ಬಹುಳದಲ್ಲಿ ಮುರಾರಿರಾಯ ಗಡದಿಂದ್ದಾ ಯಿಳಿದು ಬಂದು ಪಹರೆದಿಂದ್ದಾ ಪಟ್ಟಣಕ್ಕೆ ಹೋದನಾಗಿ ಗುತ್ತಿ ಠಾಣೆ ನವಾಬರ ವಶವಾಗಿ ಸಾವಿರಾರು ಕುದುರೆ ಆನೆಗಳು ಜವಾಹರು ವಗೈರೆ ಬಹಳ ಸಾಮನ್ನು ಕೈವಶವಾಗಿ ಅಲ್ಲಿಂದ್ದಾ ಗೋಸಾಯಿಗಳು ಪೂರ್ಣಗಿರಿ ಗೋಸಾಯಿ ಮನಸಾಗಿರಿ ಗೋಸಾಯಿ ತುಳಜಾಗಿರಿ ಗೋಸಾಯಿ ಹರಿಣಾಗಿರಿ ಗೋಸಾಯಿ ಮುಂತಾದವರಿಗೆ ೨೦೦೦೦೦ ಲಕ್ಷ ವರಹಾ ಮುಗುವಳೀ ಮಾಡಿ ಮತ್ತು ಜನರಿಂದ್ದಾ ಬಹಳ ಹಣ ತೆಗೆದುಕೊಂಡು ಗುತ್ತಿ ಸಭೆಗೆ ಬಚ್ಚಿರಾಯರು ಚಿಕ್ಕಪ್ಪಾ ಬಾಳಾಜೀರಾಯರಿಗೆ ನೇಮಕಮಾಡಿ ರೋಷನಖಾನರಿಗೆ ಕಿಲ್ಲೆದಾರಿ ಕೊಟು ಅಲ್ಲಿನ ಸೂಳೇರನೆಲ್ಲಾ ಪಟ್ಣಕ್ಕೆ ರವಾನೆಮಾಡಿ ದೇಶಾಯಿ ನರಶಿಂಗರಾಯ ಯೀತನ ಮಕ್ಕಳಿಗೆ ಸಹಾ ಭಾರಿ ಧರ್ಮಹಾ ಮಾಡಿ ಸಂಗಡ ಕರದುಕೊಂಡು ಮಡಿಕೆ ಶೀರ್ಯ ಪೆನುಗೊಂಡೆ ಕೊಡಕೊಂಡೆ ತೆಗೆದುಕೊಂಬುವಂತೆ ಚಿತ್ರದುರ್ಗದ ಮೆದೆಕೆರೆನಾಯ್ಕಗೆ ಅಪ್ಪಣೆ ಕೊಟು ನವಾಬರು ಬಂಕಾಪುರದ ಕಡೆ ಸಾಗಿನಡದರು.

ಶಕೆ ೧೬೯೮ನೇ ದುರ್ಮುಖಿ ಸಂವತ್ಸರದ ಚೈತ್ರದಲ್ಲು ಚಿತ್ರಕಲ್ಲು ಮೆದೆಕೆರೆ ನಾಯಕನನ್ನು ಮಡಿಕೆಶೀರ್ಯಕೆ ಬರುವ ಬಗ್ಯೆ ಮುರಾರಿರಾಯನ ಸೋದರ ಅಳಿಯ ಶಿವರಾಮ ಭಾವುಗುತ್ತಿಯಲ್ಲಿ ಯಿದ್ದು ನವಾಬರು ಗುತ್ತಿ ಮ್ಯಾಲೆ ಬರುವ ಸುದ್ದಿ ಕೇಳಿ ನೀಉ ಗಡಾದಲ್ಲಿ ಯಿರುವದು ವಿಹಿತವಲ್ಲಾ ಪುನೆಗೆ ಹೋಗಿ ಕುಮುಕು ತರುವ ಪ್ರಯತ್ನ ಮಾಡತಕ್ಕದ್ದು ಆ ಪರಿಯಂತ್ರಾ ನಾನು ಬೆಟ್ಟದಲ್ಲಿ ಯಿದ್ದು ಲಡಾಯಿ ಮಾಡುತ್ತೇನೆಂದು ಹೇಳಿದ ಮಾತು ಕೇಳದೆ ಗುತ್ತಿಯಲ್ಲಿ ಮುರಾರಿರಾಯಾ ನಿಂತದ್ದರಿಂದಾ ಶಿವರಾಮ

ಬಾಹೂ ತಂನ ಕುಟುಂಬ ಮಕ್ಕಳೂ ಸಹಾ ಮಡಿಕೆಶೀರ್ಯಕ್ಕೆ ಬಂದು ಯಿದ್ದು ಅಲ್ಲಿಂದಾ ಸಂಗಡ ೫೦೦ ಕುದುರೆ ಸಹಾ ಪುನೆದ ಶೀಮೆಗೆ ಹೊರಟು ಹೋದರು.

ನವಾಬರು ದುರ್ಮುಖಿ ಸಂವತ್ಸರದ ವೈಶಾಖ ಜೇಷ್ಟದಲ್ಲಿ ಬಂಕಾಪುರ ತೆಗೆದುಕೊಂಡು ಸವಣೂರು ಡಂಬಳಾ ಶಿರಹಟ್ಟಿ ಹಾರನೂರು ಕಿತ್ತೂರು ವಗೈರೆ ಪಾಳೆಗಾರರಿಂದಾ ಪೇಷ್ಕಶಿ ತೆಗೆದುಕೊಂಡು ಕೊಪ್ಪಳಾ ಬಹದರ ಬಂಡೆಗೆ ಚಂದ್ರಗಡಾ ಬಾದಾಮು ನವಲಗುಂದ ಲಾಲಾಗಡಿ ವಗೈರೆ ಸೊಂಡೂರು ಸಹಾ ಠಾಣೆಗಳ ಹಾಕಿ ಧಾರವಾಡ ಸಾಧಿಸೂವಂತೆ ಶೇಖ ಅಯಾಜೀ ಕಳುಹಿಶಿ ಯೀ ಆಷಾಡ ಮಾಸದಲ್ಲೂ ನವಾಬರು ಪಟ್ನಕೆ ಬಂದು ದಾಖಲಾದರು.

ಸದರಿ ದುರ್ಮುಖಿ ಸಂವತ್ಸರದ ಭಾದ್ರಪತ ಬ ೧೨ ರಲು ಪಟ್ಟಣದಲ್ಲಿ ಬೆಟ್ಟದ ಚಾಮರಾಜ ಒಡೆಯರು ಸ್ವರ್ಗಸ್ತರಾದ್ದರಿಂದ್ದಾ ಕಾರುಗಳಿ ದ್ಯಾಪೈಯ ಅರಶಿನವರ ಮಗ ಚಾಮರಾಜ ವಡೆಯರು ಯಂಬ ಐದು ವರುಷದವರನ ಕರಶಿ ನವಾಬರು ಪಟ್ಟಾಭಿಷೇಕ ಮಾಡಿಸ್ತರು.

ತರುವಾಯ ಕಲ್ಲಿಕೋಟೆಗೆ ಫವುಜುದಾರಿಗೆ ಸರದಾರಖಾನರನ್ನು ಅಮಲಿಗೆ ಕರೂರು ನಂಜಪೈಯಂನ್ನು ಕಳುಹಿಸಿ ಯಿದ್ದರಾಗಿ ಆವಾಗಾ ಬರಕ್ಕಿ ಶ್ರೀನಿವಾಸರಾಯಂನ್ನ ಪಟ್ಣಕ್ಕೆ ಕಲ್ಲಿಕೋಟೆಯಿಂದ್ದಾ ಕರಶಿ ಸಂನ್ಮಾನಾ ಮಾಡಿ ಯಿಟ್ಟುಕೊಂಡು ಕಲ್ಲಿಕೋಟೆಯ ಅಮಲಿಗೆ ಪಾಲಘಾಟ ಕಚೇರಿ ಅಮೀಲ ಅಬ್ದುಲ್‌ಖಾನರಿಗೆ ನೇಮಕಾ ಮಾಡಿಶಿ ಕರೂರು ನಂಜಪೈಯಂನವರಂನ್ನು ಧಾರವಾಡದ ಅಮಲಿಗೆ ನೇಮಕಾ ಮಾಡಿಶಿ ಕಳುಹಿಸ್ತರು.

ಸದರಿ ದುರ್ಮುಖಿ ಸಂವತ್ಸರದಲ್ಲು ಚಿತ್ರಕಲ್ಲು ಮೆದಕೆರೆ ನಾಯಕನ್ನು ಯೋಚನೆ ಮಾಡಿದ ವಿವರ. ಮೊದಲು ನಿಜಗಲ್ಲು ಬೆಟ್ಟಾ ಹಲ್ಲಾ ಮಾಡಿದ್ದರಿಂದ್ದಾಲೂ ಮಡಿಕೆಶೀರ್ಯದಿಂದ್ದಾಲೂ ಶಿವರಾಮ ಭಾವೂ ಚಿತ್ರಕಲ್ಲು ಶೀಮೆಯಲ್ಲಿ ದಾಟಿ ಪುನೆದ ಕಡೆಗೆ ಹೋದ್ದರಿಂದ್ದಾಲೂ ನವಾಬರಿಗೆ ತಂನಲ್ಲಿ ಅಸೂಯಾ ಹುಟಿ ತಂನ ಬಳಿ ವಬ ಅಂಚೆ ಹರಕಾರನ ನೇಮಕಾ ಮಾಡಿ ಯಿಟಲ್ಲಿ ಅವನು ಮಾಡುವ ಶರರತು ಸಹಿಸದೆ ವಡಸಿ ವೈರಡ ಆಕಿದರಿಂದ ತಂನಲ್ಲಿ ನವಾಬರಿಗೆ ಪೂರಾ ದ್ವೇಷಾ ಹುಟ್ಟಿದೆ. ಯಿದಕೆ ತಕ ಕೆಲಸ ಕೊಟು ಸಡಿಸಬೇಕೆಂದು ತಂನ ಕಡೆ ವಕೀಲ ಪುರುಷೋತ್ತಮ ಪಂತನ ಕಳುಹಿಸಿ ಮೊದಲು ಮರಾಟೇರಲ್ಲಿ ಮಾತುಕಥೆ ಮಾಡಿ ಅವರು ಕೂಡಿ ಪಟ್ಣದ ಮ್ಯಾಲೆ ಬರುವಂತೆ ಸಂನಹಾ ಮಾಡಿದ್ದರಿಂದ್ದಾ ನಡೆದ ವಿವರ.

ಹೈದರಾಬಾದು ಕಡೆ ಸರದಾರ ಯಿಬ್ಬರಾಯಮನಾ ಧಂ ಸಾ ೬೦೦೦೦ ಸಾವಿರ ಕುದುರೆ ತೋಫು ೮೦ ಸಹಾ ಬಂದು ಗುತ್ತಿ ತಾಲೊಕ್ಕು ಮುನಿಮಡಗು ರಾತರ್ಲೆ ಲುಟಾಯಿಸ್ತ ಸುದ್ದಿ ಕೇಳಿ ಯೀ ದುರ್ಮುಖಿ ಸಂವತ್ಸರದ ಪಾಲ್ಗುಣ ಬಹುಳದಲ್ಲು ರತ್ನಗಿರಿ ಠಾಣೆ ಹಾಕಿ ಪ್ಯಾಪಲ್ಲಿ ಬಳಿಗೆ ಧಡೆ ಸವಾರಿ ಹೋಗೊವಾಗ್ಯೆ ಯೀ ಧಂಮಕ್ಕಿಗೆ

ಧಂಸಾ ಹಿಂದಕ್ಕೆ ಪರಾರಿ ಆದ್ದರಿಂದಾ ಶಕೆ ೧೬೯೯ನೇ ಹೇವಳಂಬಿ ಸಂವತ್ಸರದ ವೈಶಾಖ ಜೇಷ್ಠದಲ್ಲು ನವಾಬರು ಚಿತ್ರದುರ್ಗ ಮುತ್ತಿಗೆ ಹಾಕಿದರು.

ಚಿತ್ರಕಲ್ಲು ಬಳಿ ಮೂರು ತಿಂಗಳು ಬಹಳ ಲಡಾಯಾಗಿ ಆ ಬಳಿಕಾ ದುರ್ಗೀ ವರಹಾ ೮೦೦೦೦೦ಕ್ಕೆ ತಹಾಬಂದಿ ಮಾಡಿ ಚುಕಾಯಿಶಿ ನಾಯಕ ಮಜಕೂರನ ತಂಮ್ಮ ಪರಶುರಾಮಪ್ಪನು ನವಾಬರ ಸರಕಾರದಲ್ಲಿ ವೋಲು ಯಿರುವಂತ್ತೆ ಮೊಕರೂರು ಆಗಿ ಪರಶುರಾಮಪ್ಪ ಹೊರಗೆ ಬಂದಿದ್ದು ಪುನಹಾ ದುರಾಲೋಚನೆಯಿಂದ್ದಾ ತಂಮ್ಮನ ವಳಕೆ ಕರಶಿಕೊಂಡು ಬಿಗಡಾಯಿಸಲಾಗಿ ಅವರಿಗೆ ಹೊಳಕರ ಹರಿಪಂತ ಪಡಕ್ಯಾ ಮಾನಾಜಿ ಪಾಕಡೆ ಸಹಾ ಹ್ಯಾರಳ ಫವುಜಿನಿಂದಾ ಶಿರಹಟ್ಟಿ ಲಕ್ಷ್ಮೇಶ್ವರ ಬಳಿಗೆ ಪುರುಷೋತ್ತಮ ಪಂತಹ ತಂದದರಿಂದಾ ನವಾಬರ ದಂಡು ಕೂಚುಮಾಡಿ ಅವರ ಮೊಕಾಬಿಲೆಗೆ ಹೋಗಿ ಕೆಲವು ದಿವಸ ಯದುರು ದಂಡು ಯಿಳದು ಮಾನಾಜಿ ಪಾಕ ಡ್ಯಾನಿಗೆ ಲಂಚ ಹಾಕಿದ್ದರಿಂದಾ ಹೋಳಕರ ಹರಿಪಂತರು ಸಹಾ ಪಾಕಡ್ಯಾ ಮಜಕೂರನಾ ಖೈದು ಮಾಡಿ ತೆಗೆದುಕೊಂಡು ಹೊರಟುಹೋದರು.

ನವಾಬರು ಶಿರಹಟ್ಟಿ ಕಡೆ ಹೋಗಿದ್ದ ವ್ಯಾಳೆಯಲ್ಲಿ ಚಿತ್ರಕಲ್‌ನಿಂದ್ದಾ ಮೆದೆಕೆರೆ ನಾಯಕನು ಫವುಜಿನಿಂದಾ ಹೊರಟು ಚಂನಗಿರಿ ಬಸವಾಪಟಣ ಸಂತೆಬಿದನೂರು ವಗೈರೆ ಶೀಮೆ ಕೊಳ್ಳೆ ಮಾಡುವುದಂನ್ನು ನವಾಬರು ಕೇಳಿ ಕೆಲವು ಫವುಜು ಸುದಾ ಠೀಪು ಸುಲತಾನರನ ಚಿತ್ರಕಲ್ಲು ಬಳಿಗೆ ಕಳುಹಿಸಿದರಿಂದಾ ಆ ಫವುಜು ಬರುವ ಸುದ್ದಿ ತಿಳಿದು ನಾಯಕ ಮಜಕೂರನೂ ಚಿತ್ರಕಲ್ಲು ಶೇರಿದನಾಗಿ ಆ ದಿವಸವೆ ಸುಲತಾನರು ಬಂದು ಮುತ್ತಿಗೆ ಯಿಳಿದರು.

ನವಾಬರು ಮೊದಲು ಗುತ್ತಿಗೆ ಚಿತ್ರಕಲ್ಲಿಗ್ಗೆ ಯಿಳಿದು ಯಿದ್ದಾಗಾ ಗಡಿ ಜಾತಾ ಮಂದಿ ಜಡಿಮ್ಯಾಲೆ ಪಾಳೆಗಾರ ಯಿಂಮಡಿ ನಾಯಕ್ಕನ ಮಂದಿ ವಗೈರೆ ೨೦೦೦೦ ಸಾವಿರ ಜನ ಪರಿಯಂತ್ರ ಯೆಕ ದಿಲ್ಲಾಗಿ ಯಿದ್ದು ದುರ್ಗದಲ್ಲಿ ಬಹಳ ಲಡಾಯಿ ಮಾಡಿದರಾಗಿ ನವಾಬರು ಶಿರಹಟ್ಟಿ ಬಳಿಗೆ ಹೋಗಿಯಿದ್ದ ವ್ಯಾಳೆಯಲ್ಲಿ ಗಡಿ ಜಾತ ಮಂದಿಯಲ್ಲಾ ಗಡಿಗಳಿಗೆ ರಜಾರತ್ತು ಹೋಗಿಯಿದ್ದವರು ದುರ್ಗಕ್ಕೆ ವದಗಿ ಬಾರದ್ದರಿಂದ ಜರಮಾಲೆ ಯಿಂಮಡಿ ನಾಯಕ ಮೆದೆಕೆರೆ ನಾಯ್ಕ ತಲೆ ಹೊಯ್ಸಿದ ಸಬಬು ಯಿವನ ಮಕ್ಕಳು ಯರಡು ಜನ ತಂಮ್ಮ ಜಮಾಯತ್ತು ಸುದಾ ನವಾಬರಲ್ಲಿ ರುಜುವಾದ್ದರಿಂದಾಲು ಮತ್ತೋಡು ಪಾಳೆಗಾರ ಹಾಲಪ್ಪ ನಾಯ್ಕನು ಮೆದೆರೆಕೆ ನಾಯ್ಕರಿಗೆ ಅಳಿಯನಾದವಂನ ಚಿತ್ರಕಲ್ಲಲ್ಲಿ ಶೆರೆ ಹಾಕಿದ ಅಲ್ಲಿನ ಜನರೆಲ್ಲಾ ಮರ್ಮಸ್ತರು ನವಾಬರಲ್ಲಿ ಶೇರಿದ್ದರೆಂದ್ದಾಲೂ ದುರ್ಗ ಮಜಕೂರಲ್ಲಿ ಬಲ ಕಡಿಮೆ ಆಗಿ ಕೂಡ್ಲೆ ನವಾಬರು ಬಂದು ದುರ್ಗಕ್ಕೆ ಮುತ್ತಿಗೆ ಯಿಳಿದು ಪುನಹಾ ಯರಡು ಮೂರು ತಿಂಗಳು ಲಡಾಯಾಗಿ ಕೋಟೆಯಲ್ಲಿ ಯಿದ್ದ ಪಠಾಣರ ಸರದಾರ ಅಟಲಖಾನ ಸಲಾಬತಖಾನ ೨೦೦೦ ಪಠಾಣೇರು ಸಹಾ ನವಾಬರಿಗೆ ಫಿತೂರಾಗಿ ಸಫೆಜಂಗಿಗೆ ಹೊರಟಲ್ಲಿ ಮೆದೆಕೆರೆ ನಾಯ್ಕ ಯೀತನ ತಂಮ್ಮ

ಪರಶುರಾಮಪ್ಪ ನಾಯ್ಕನಿಗೆ ಸಹಾ ಬಂದೂಕಿನ ಗುಂಡುಗಳು ತಗಲಿ ಜಖಂ ಬಾರಿಯದ ಸಬಬೂ ಮೇಲು ದುರ್ಗದ ಪಾಲನಾಯ್ಕ ತಮ್ಮಾಜಿ ವೆಗ್ಯೆರೇರೆಲ್ಲಾ ವಗ್ಗಟ್ಟಾಗಿ ದುರ್ಗದ ಠಾಣೆ ನವಾಬರಿಗೆ ಆಗುವ ಮಸಲತ್ತು ಯಿತ್ತು.

ಯೀ ಮಧ್ಯೆ ಮುರಾರಿ ರಾಯರ ಸೋದರ ಅಳಿಯ ಶಿವರಾಮ ಘೋರ್ಪಡೆ ಮಿರ್ಜೆ ಗೋಪಾಲ ಹರಿ ತಂಮ್ಮ ಪಾಂಡುರಂಗ ತಾತ್ಯಾ ವಗೈರೆ ೧೦೦೦೦ ಕುದುರೆ ಸಹಾ ಟೊಲೆ ೧ ತಾಸಾ ಸಾವು ಪರಸುರಾಮ ರಾಮಚಂದ್ರನ್ನು ೧೦೦೦೦ ಸಾವಿರ ಕುದುರೆ ಟೊಲೆ ೧ ಸುದಾ ನವಾಬರ ಮೇಲೆ ಬರುವ ಸುದ್ದಿ ಕೇಳಿ ಮಹಂಮದ್ ಅಸೆ ಕುಮುಂದಾನನ ಸಂಗಡ ಶ್ರೀಪತಿರಾವು ರಿಸಾಲೆ ಸವಾರರು ೩೦೦೦ ಬಾರು ೪೦೦೦ ಅಹಷಾಂ ೪೦೦೦ ಸಹಾ ನವಾಬರ ಕಡೆಯಿಂದಾ ಹೋಗಿ ಸರಶ್ವಿಯಂಬ ಗ್ರಾಮದ ಬಳಿ ಲಡಾಯಾಗಿ ಅಗಾಡಿ ಟೊಲೆ ಬಾಗಡಾ ಬಿದ್ದು ಶಿವರಾಮ ಘೋರ್ಪಡೆ ಪಾಂಡರಂಗ ತಾತ್ಯಾ ಯಿಂನ್ನೂ ನಾಲ್ಕುಜನ ಸರದಾರರು ಸಹಾ ಕುಮುಂದಾರ ಮಜಕೂರನ ಕೈಗೆ ಶಿಕ್ಕಿದ್ದರಿಂದಾ ಹಜೂರು ಹುಕುಂ ಬಮೋಜಮು ಇವರಿಗೆಲ್ಲಾ ಬೇಡಿ ಜಡಾಯಿಸಿ ಪಟ್ಣಕೆ ರವಾನೆ ಮಾಡಿದರು. ಪಿಚಾಡೆ ಯಿದ್ದ ಪರಶುರಾಮ ಭಾವೂ ತನ್ನ ಫವುಜು ಸುದಾ ಹಿಂತಿರುಗಿ ವೋಡಿಹೋದನು.

ಚಿತ್ರಕಲ್ಲಲ್ಲಿ ಮರ್ದುಮಿ ಮಾತಬರ ಬಾಳಪ್ಪ ಲಡಾಯಲ್ಲಿ ಮ್ರುತವಾದ್ದರಿಂದ್ದಾ ಶಖೆ ೧೭೦೦ನೆ ಹೇವಿಳಂಬಿ ಸಂವತ್ಸರದಲ್ಲೂ ಪಾಲ್ಗುಣ ಮಾಸದಲ್ಲಿ ಚಿತ್ರದುರ್ಗಕ್ಕೆ ನವಾಬರು ಠಾಣೆ ಹಾಕಿ ಪಾಳೆಗಾರ ಮೆದೆಕೆರೆ ನಾಯ್ಕ ಯೀತನ ತಂಮ್ಮ ಮಕ್ಕಳು ಕುಟುಂಬ ದೇಖೀಲು ಬಿಕ್ಕಟ್ಟು ಪಹರೆ ಯಿಂದ್ದಾ ಪಟ್ಣಕೆ ರವಾನೆ ಮಾಡಿದರೂ.

ಆವಾಗಾ ಕೆಲವು ಮಾತಿನ ಮನಸ್ತಾಪದಿಂದಾ ಟೀಪು ಸುಲತಾನರ ಮೇಲೆ ಪಹರೆ ಹಾಕಿ ಯಿವರನ ಪಟ್ಣಕೆ ರವಾನೆ ಮಾಡಿ ಯಿವರ ಜಹಗೀರು ಮಳವಳ್ಳಿಯಂನ್ನು ನವಾಬರು ಜೆಪ್ತು ಮಾಡಿಸ್ತರು.

ಮೊದಲು ಸರ್ವಜಿತ್ತು ಸರ್ವದಾರಿ ಆದಿಯಾಗಿ ಅಸದಲಿಖಾನ್ ದರೋಗರು ಬೆಂಗಳೂರಲ್ಲಿ ದಿವಾನಗಿರಿ. ಯಿವರಳಿಯ ಪಾಛಾಸಾಬರು ತೋಷೆಖಾನೆ ಬಕ್ಷಿಗಿರಿ ಮಾಡುತ್ತಾ ಯಿರುವಲ್ಲಿ ವೆಂಕಟರಮಣ್ಯೆಯ್ಯನೆಂಬ ಕಗಡಿ ಮುಸ್ತದಿ ಬಳಿಯ ಗುಮಸ್ತಗಿರಿ ಯಲಿಯಿಂದ ವುರಣ್ಯೆಯನವರು ಚಹಲಕಗಿ ಲೆಕ್ಕದಲ್ಲಿ ವೋಡ್ಯಾಡುತ್ತಾ ಯಿದ್ದ ಸಬಬು ಯಾವದೊಂದು ಮಾತಿಗೂ ಅಸದಲಿಖಾನರು ಪ್ರೀತಿ ಮಾಡುತ್ತಾ ವಿಕೃತಿ ಸಂವತ್ಸರದಲು ಪಟ್ಣದಲು ಅಸದಲಿಖಾನರು ನವಾಬರಿಗೆ ಅರಿಕೆಮಾಡಿ ಅವರಿಗೆ ವೆಂಕಟ ಅವರಿಗೆ ವೆಂಕಟರಮಣ್ಯೆಯ ದೈವದೀನವಾದ ಪ್ರಯುಕ್ತ ಅದೆ ದಪ್ತರ ಮುನಶಿ ಕಿಜ ಮತು ಪೂರ್ಣೈಯನವರೆ ಪ್ರಾಬಲ್ಯವಾಗಿ ಯಿದ್ದದ್ದರಿಂದಲೂ ಜಗಜ್ಜೀವಣರಾಯರ ಮಗ ಗಿರಿಧರರಾಯರಿಗೆ ತೋಷಿಖಾನೆ ಹಿಂದವಿದಪ್ತರದ ಖಿಜ ಮತ್ತು ಯಿದ್ದದ್ದರಿಂದ ಯಿವರ ತಂಮ ಕ್ರಿಷ್ಣರಾಯರು ಹಜೂರಲ್ಲಿ ಪೆಷರತ್ತಾಗಿ ಯಿದ್ದದ್ದರಿಂದಾಲೂ ಚಿತ್ರದುರ್ಗದ ಬಳಿ

ಪೂರಣೈನವರಿಗೆ ಕ್ರಿಷ್ಣರಾಯರಿಗೆ ಸಹಾ ದರ್ಮ ನೂರು ವರಹ ಪ್ರಕಾರ ವುಭಯತ್ರರಿಗು ಚಿಂನದ ತೊಡ ಸಹ ಯಿನಾಯತಾಗಿ ಸರಫರಾಜು ಆಯಿತು.

ಚಿತ್ರಕಲ್ಲು ಮುತಿಗೆಯಲ್ಲಿ ಅಂನದಾನಶೆಟ್ಟಿ ನರಸಶೆಟ್ಟಿ ಸಹ ಸುಲತಾ ನರ ಡೆರೆಕೆ ಹೋಗಿ ಯಿದರೆ ಯಿ ಸುದ್ದಿ ಕೇಳಿ ದರ ಜನ ೧ಕ್ಕೆ ೪೦೦೦ ವರಹಾ ಪ್ರಕಾರ ಗುಂನೆ ಗಾರಿಯಂನ್ನು ಸರಕಾರಕ್ಕೆ ನವಾಬರು ತೆಗೆದುಕೊಂಡರೂ.

ಸದರಹ ಚಿತ್ರದುರ್ಗದ ಪವುಜುದಾರಿ ಮುಲಕಿ ಕಾರುಖಾನೆ ಸಹ ಸರಕಾರದ ಜಿಲೆ ಶೇಖ ಅಯಾಜನಿಗೆ ಮೊಖರು ಅಗಿ ಯೀತನ ಕೈಕೆಳಗೆ ಶಿಮೆ ಬದುಕಿಗೆ ಕಳಿ ನರಸೈಯನೆಂಬ ಆ ಸ್ತಳದವನ ನೇಮಿಶಿ ನವಾಬರು ಫವುಜು ಸುದಾ ಕಡಪೆ ಶಿದ ಪಟಣದ ಮೊಹಿ ಹೊರಟರು.

ಆವರಿಗೆ ಗುತ್ತಿ ಶೀಮೆಗೆ ಮೊದಲು ಯಿಟುಯಿದ ಬಾಲಾಜಿರಾಯ ಮ್ರುತವಾದ ರಿಂದ ದೇಶಾಯಿ ನರಶಿಂಗರಾಯರಿಗೆ ಸುಭೆಯಾ ಕೊಟು ಯಿದಲ್ಲಿ ಯೀತನ ಮಗ ರಾಮರಾಯನು ತಂಜೂರಲಿ ಚಾಕರಿಯಿದ್ದು ಗುತ್ತಿ ಸೂಳೆ ಮುತ್ಯಾಲಸಾನಿ ಯಂಬುವಳನ ಗಂಡು ವೇಷಾ ಹಾಕಿ ಪಟ್ಣದಿಂದಾ ದಾಟಿಸಿಕೊಂಡು ತಾನು ಪರಾರಿಯಾದ ಸಬಬು ಯೀತನ ಅಂಣ ವೋಬಳರಾಯ ತಂಮ ಭಗವಂತರಾಯ ಸಹಾ ಪರಾರಿಯಾಗಿದ್ದ ರಿಂದಲೂ ನರಶಿಂಗರಾಯರ ಸುಭೆಯ ತೆಗೆದು ಪಹರೆದಿಂದ ಪಟ್ಣಕ್ಕೆ ಕರಸುವಲ್ಲಿ ರಾಯದುರ್ಗದ ಶೀಮೆ ನಾಗಸಂದ್ರದ ಬಳಿ ವಿಷ ಕುಡಿದೂ ನರಶಿಂಗರಾಯ ಮ್ರುತವಾದ ರಿಂದ ಗುತ್ತಿ ಶೀಮೆ ಸುಭೆಯ ನಗರದ ಶೀಮೆ ಮುತ್ಸದ್ದಿ ನರಸೈಯಗೆ ಮಕರುರು ಆಯಿತು.

ಶಖೆ ೧೭೦೧ನೆ ವಿಕಾರಿ ಸಂವತ್ಸರದ ಚೈತ್ರದಲ್ಲು ನವಾಬರ ಸವಾರಿ ಕಡಪೆ ಪ್ರಾಂತ್ಯಕ್ಕೆ ಬರುವಾಗ್ಯೆ ಕಡಪೆ ನವಾಬ ಹಲೀಮಖಾನರಿಗೂ ಗುರಂಕೊಂಡೆಯಲ್ಲಿ ಯಿದ್ದ ಮೀರ ಅಲ್ಲಿ ರಜಾಖಾನರಿಗೂ ಬರಕಕ್ಷಿ ಬಿದ್ದಿದ್ದೂ ಲಡಾಯಿ ಯಾಗುವುದನ್ನು ಕೇಳಿ ಯೇಕಾ ಯೇಕಿ ವೂರುಬಳಿ ಯಿಳಿದು ಯಿದ ಕಡಪೆಯವರ ಪವುಜಿಗೆ ನವಾಬರು ಪುರಾಯಿಸ್ತರು.

ಆವಾಗಾ ಕಡಪೆಯಿಂದ್ದಾ ಅಬ್ದುಲ ನಬೀಖಾನರ ಮಗ ಅಬ್ದುಲ ಹುಸೇನಖಾನನೆಂಬವನ ಮಗ ಅಬ್ದುಲ ಸೈದಖಾನನೆಂಬುವನು ಹಲ್ಲಿಮ ಖಾನನಿಗೆ ಚಿಕಪನಾದವನ ಜನ ೧ ಅಬ್ದುಲ್ಲನು ಜೀದಖಾನರಿಗೆ ಕಿರಿ ಹೆಂಡತಿ ಮಗ ಅಬ್ದುಲಖಾನನು ಹಲಿಮಖಾನರಿಗೆ ಮಲದಾಯಿ ಮಗನಾದ ಜನ ೧ ಸಹ ಯಿಬ್ಬರು ಅಂಬಾರಿಗಳ ಮೇಲೆ ಕುಳಿತು ತರಕಶಿ ಕಮಾನಗಳಿಂದ ಬಹಳ ನಾಮೆವಾರು ಲಡಾಯಿ ನೋಡಿ ೧೬೦೨ ಕುದುರೆ ಸಹ ಬಹಳ ಮಾಡಿ ಕೆಲವರು ಹತವಾಗಿ ಕೆಲವರು ಫರಾರಿಯಾಗಿ ಅವರ ಬಕಷಿ ತ್ರಿಯಂಬಕತ್ರಿಗಳು ಮುಂಚಿತ್ತಾಕೆ ಮ್ರುತುವಾಗಿ ಯಿದ್ದು ಯಿವರಿಗೆ ಕುಮುಕು ಬಂದ್ದು ಮಟ್ಲೀವಾರು ವಗೈರೆ ಪಾಳೆಗಾರರು ವದಾರರು ಆ ಮುಂನಾದಿನವೇ ನವಾಬರು

ವಬರೆ.... ಳಿದ್ದರೂ ರೋಷವಾಗಿ ಹೊರಟು ಹೋದ್ದರಿಂದಲೂ ಸದರಿ ಸೈದಖಾನ ಕರಿಮಖಾನ ಸಹ ಜಖುಮುಗಳಾಗಿ ನವಾಬರ ಕೈಗೆ ಶಿಕಿದರು (ಶ್ರೀಗಣಾಧಿಪತಯೆ ನಮಹ)

ಆ ದಿವ್ಸ ರಾತ್ರೆಯಲ್ಲಿ ಕಡಪೆ ಬಳಿ ನವಾಬರು ಘವುಜು ಯಿಳಿದು ಬಾರಿ ಸರಂಜಾಮೆಯಲ್ಲು ಹಿಂದೆ ನಿಂತು ಥಡೆ ಸಾಮರಿ ಹಮರಹ ಹಜರಿಂದರಿದ ಸಂಣ ಬಾವುಟೆ ನವಾಬರು ಮಂಚದ ಮೇಲೆ ಮಲಗಿ ಯಿರುವಲೀ ನಿಶೀ ಸರು ಹೊತ್ತಿನಲ್ಲೀ ಕಡಪೆ ಘವುಜಿನ ಪೈಕಿ ಪಡಲು ಶಿಕ್ಕಿ ಪಹರೆಯಲ್ಲಿ ಯಿದ್ದ ೬೦ ಜನ ಪಠಾಣರು ನಂಗಾ ತಲವಾರಿಂದ ಕನಾತು ಹರಿದು ದೇವಡಿ ವಳಕ್ಕೆ ಹೊಕ್ಕು ಪಹರೆ ಟಲಾಯಿಸುವಾ ಬಾರಿನವರ ಕಡಿದಲ್ಲಿ ಅವರನ್ನು ಯಿಷಾರು ಮಾಡಲಾಗಾ ತಕ್ಷಣವೆ ನವಾಬರು ಯದ್ದು ದೊಡ ತಕಿಯ ಮಂಚದ ಮೇಲೆ ಹಾಕಿ ಶಹಲು ಜೋಡಿ ಹೊದಿಶಿ ದೀಪ ನಂದಿಶಿ ರಾವುಟೆ ಹಗ ಕೊಯಿದು ಹಿಂದಿನಿಂದ ಹೊರಟು ಕನಾತಿನವರು ಸೈತ್ರಿ ಯವರನ ಸಹ ಹೆಬಿಶಿದಲಿ ಅವರು ದೇವಡಿ ವಳಕ್ಕೆ ಬಂದು ಅವರಿಗೆ ಪಲಗು ತಾಕಿಯ ಸುದಾ ಚೂರು ಚೂರು ಆಗಿ ಕಡಿದುಯಿಂದ ಪಟಣದ ಬಲ ಘೆರಾಯಿಶಿ ಹೊಡೆವಲ್ಲಿ ಅವರು ಹೆದರಿ ಆಯುಧಗಳ ನೆಲಕೆ ಹಾಕಿದರಿಂದ ಅವರನೆಲ ಮುಷಕಿ ಕಟ್ಟಿ ಮರುದಿನ ಬೆಳಿಗೆ ಕೈ ಕಾಲುಗಳನ್ನೆಲ್ಲ ಕಥರಿಶಿ ಭೂಗೆ ನೆಲದ ಮರಳಲಿ ಬಿಟರು. ಅಲ್ಲಿಂದ ಶಿದವಟದ ಬಳಿಗೆ ಹೋಗಿ ಕೋಟೆ ಸುತ್ತ ಘವುಜು ಸುತ್ತಿಕೊಂಡೂ ಕೌಲಿಗೆ ಮಾತನಾಡುವ ಸಂನಾಹದಿಂದ ಬರಕ್ಕಿ ಶ್ರೀನಿವಾಸರಾಯರು ಮಟ್ಲೆವಾರು ಅಪ್ಪೆಯ ರಾಜಾ ಸಹಾ ಕೋಟೆ ವಳಗೆ ಹೋಗುತ್ತಾ ಅವರ ಸಂಗಡಲೆ ಗಡಬಡೆಯಾಗಿ ಕೆಲವು ಜಮೀಯತ್ತು ಸುದಾ ಹೊಕ್ಕು ಠಾಣೆ ಬಲಕಾಯಿಶಿ ಮೆಬಾಬಸ್ತು ಅಬಸ್ತು ಅಬ್ದುಲ ಹಲಿಮಖಾನನ ತಂದು ಪಹರೆ ದಾಖಲು ಮಾಡಿ ಪಟಣಕೆ ರವಾನೆ ಮಾಡಿದರು. ಕಡಪೆ ಸಂಸ್ಥಾನವನ್ನು ಮೀರದಲ್ಲಿ ರಜಾಖಾನರಿಗೆ ಜಹಗೀರು ಕೊಟ್ಟು ಕಡಪೆ ಗುರುಂಕೊಂಡೆ ಯರಡು ಸಂಸ್ಥಾನದಲ್ಲಿ ಹುಟುವ ಹಣಕ್ಕು ೬೦೦೦ ಸಾವಿರ ಕೆಲಉ ಪಾಯಿದಳ ಸಹ ನೌಕರಿ ಯಿಟ್ಟು ಹಜರು ಯಿರುವಂತೆ ತಾಕಿತು ಮಾಡಿದರು.

ಸದ (ರಿ) ಅಬ್ದುಲ ನಬಿಖಾನ, ಅಬ್ದುಲ ಮಹಂಮದಖಾನ ಯಿತನ ತಂಮ ಹಲಿಮಖಾನನ ಮಗ ಹಲಿಮಖಾನ ಮುಂತಾಗಿ ಧಮನವಾಗಿ ದೊರೆತನ ಮಾಡಿದರಿಂದ ತರಕಿಯಿಂದ ದವಲತ್ತು ವಾಲ ಹಲಿಮುಖಾನನು ಕಡಿಮ ಬೈರಾಬಾ ದಿವಾನಾ ತಿರುಮಲರಾವು ಯುತಾನಾ ಸ್ವಜನಾ ಸಹ ನಾಲ್ಕು ಜನ ಬ್ರಾಂಹರನ್ನು ಕ್ಷುದ್ರ ಮಾತಿನ ಮೇಲೆ ವಿಚಾರಣೆಯಿಲ್ಲದೆ ಅಂನ್ಯಾಯವಾಗಿ ಪ್ರಾಣಾ ಕೊಂದ ದೋಷದಿಂದ ಬುದಿ ಶೂನ್ಯವಾಗಿ ವ (ಂ) ಬ ಫಕೀರನ ಆಗ್ನಾನುಸಾರ ಬೇತರದೂದಿನಿಂದಾ ಜಂಗಿ ವುಸ್ತವಾರಿ ಮಾಡದೆ ಚದುರಂಗವಾಡುತ ಕೋಟೆ ಬಾಗಿಲು ಮುಚಿಸದೆ, ಗುಂಡು ಹೊಡೆಸದೆ, ಸ್ಮರಣೆತಪಿ ಕುಳಿತು ಯಿದು ನವಾಬರ ಕೈಯಿಗೆ ಶಿಕಿ ದವಲತು ಕಳೆದುಕೊಂಡನು.

ಅಲ್ಲಿಂದ ನವಾಬರ ಫವುಜು ಹೊರಟು ಚಿಕಬಳಬಳಿ ಯಿಳಿದು ಅಮಿಲ ತಿಂಮೆಗವುಡಗೆ ಮುಗುವಳಿ ೪೦೦೦೦ ವರಹ ಶೇಷಗಿರಿ ರಾಯರಿಗೆ ಹತ್ತು ಸಾವಿರ ವರಹ ಮಕರುರು ಹಣ ತೆಗೆದುಕೊಂಡು ಅಮುಲ್ಲು ಪಿತ ಬರ್ರೈಯಗೆ ಕೊಟು ಕಂಗೊಂದಿ ಠಾಣೆ ಹಾಕುವಂತೆ ಬರಕ್ಕಿ ಶ್ರೀನಿವಾಸರಾಯರಿಗೆ ಕೊಟ್ಟು ವಿಕಾರಿ ಸಂವತ್ಸರದ ವೈಶಾಖ ಜೇಷ್ಟದಲ್ಲು ಖಾಸ್ಸವಾರಿ ಪಟ್ಣಕ್ಕೆ ದಾಖಲು ಆಯಿತು.

ವಿಕಾರಿ ಸಂವತ್ಸರದಲ್ಲೂ ಪಟ್ಣದಲ್ಲು ನಡೆದ ವಿವರ. ಪ್ರಾಕು ಮನ್ಮಥ ಸಂವತ್ಸರದಲ್ಲು ಮಹಲತಿ ಕಚೇರಿಯಂನ್ನು ಯರಡು ಮಾಡಿ ಬಾಲಾ ಘಾಟಿ ಕಛೇರಿಯಂನ್ನು ದಿವಾನಗಿರಿ ಅರ್ಕಾಡು ನಜೀಮುದ್ದೀನ ಖಾನರಿಗೂ ದಪ್ತರಗಳ ಕಛೇರಿ ಪುಟ್ಟೈಯ್ಯನ ಜನ ೧ ಅಂಚೆ ತಿಂಮಪ್ಪೈಯ್ಯನ ಅಂಣ ಶಿಂಗೈಯನ ಜನ ೧ ಪೊಂಮಿನ ಶಾಮೈಯ್ಯನ ಜನ ೧ ವೆಂಕಾಬಾವಾಜಿ ಮಗ ಕೇಶವರಾಮ ಜನ ೧ ಸಹಾ ನೇಮಿಶಿ ಪಾಯನ ಘಾಟಿ ಕಚೇರಿಗೆ ದಿವಾನ ಖಿಜಮತ್ತಿಗೆ ಮೀರ ಅಲ್ಲಿ ನಕಿಸಬು ಜನ ೧ ಯಿವರ ತಂಮ್ಮ ಮಹಮದ ಗವುಸ ಜನ ೧ ದಪ್ತರಗಳಿಗೆ ಕಚೇರಿ ಕ್ರಿಷ್ಣೈಯ್ಯ ಜನ ೧ ಸೆ (೦) ದಿ ವ್ಯಾಪಾರ ಜನ ೧ ಮುನಷಿಗಿರಿ ಕದಿಮ ಶಾಮೈಯನ ಜನ ೧ ಸಹ ಮಕರುರು ಮಾಡಿ ಯಿದಲಿ ಶೀಮೆಯಿಂದ ಹಣ ಕಾಸು ತಂರದು ಬರುವುದಿಲ್ಲ. ಅಮೀಲರನೆಲ ಜೋತಿ ಪಾಯಿಮೋಷು ಹೊಡೆಸಿ ಹಣ ತರಿಸೂತ್ತೇನೆಂದು ಬಾಲಾಘಾಟ ದಿವಾನ ನಜೀಮುದ್ದೀನರು ಹಜೂರಲ್ಲಿ ಅರಿಕೆ ಮಾಡಲಾಗಿ ಆಮೀಲ ಖಿಜಮತ್ತು ಮಾಡಿಸ್ತರಿಗೆ ನೋಡಿ ಕೊಟು ಯಿರೂವಲ್ಲಿ ಬರಿದೆ ಅವರನ ಮಾನಾ ಕಳೆಯುವ ಮಾತು ಯಿವನ ಬಾಯಿಂದ್ದಾ ಹೊರಟ ಬಳಿಕಾ ಜನರೇನು ನಿಭಾಯಿಶ್ಯಾರು ಯಂದು ನವಾಬರು ಶಿಟು ಮಾಡಿ ತಕ್ಷಣವೇ ಯರಡು ಕಛೇರಿಯಂನ್ನು ವಂದುಮಾಡಿ ಸದರಿ ಜನರೆಲ್ಲ ಜಯ ಸಂವತ್ಸರದಲ್ಲಿ ಅಂಚೆ ತಿಂಮಪ್ಪೈಯ್ಯನ್ನು ಕಛೇರಿ ಪುಟ್ಟೈಯ್ಯನ ದಫ್ತರ ಸಹಾ ಸಮುಖದ ವೆಂಕಟಶೆಟ್ಟಿಯ ಸಾವಿರ ವರಹಾಕ್ಕೆ ಮುಚ್ಚಳಿಕೆ ಬರಶಿ ೬೦೦೦ ವರಹಾ ಪರಿಯಂತ್ರ ವಸೂಲು ಮಾಡಿ ದೇವಡಿ ಹರಾಬೀಕೋಟೆಯಲ್ಲಿ ಮಹಲಾತಿ ಕಛೇರಿ ತಾಲ್ಲೂಕು ಜಾತ ಅಮುಲು ಪೈಸಲು ಯಲ್ಲಾ ನಂದನ ಸಂವತ್ಸರದ ಆರಬ್ಯಾ ಪೂರ್ಣಯ್ಯನವರ ಚುಕಾಯಿಸುತ್ತ ಯಿರುವರು. ಜೊತೆಗೆ ತಾನು ಸಮ ವೊಲೆಯಾಗಿ ಶೀಮೆ ವಿಚಾರಣೆ ಮಾಡುವಂತೆ ಹಜೂರು ಹುಕುಂ ಮಾಡಿಶಿಕೊಂಡು ಅಂಚೆ ತಿಂಮ್ಮಪ್ಪೈಯ್ಯನು, ವಿಣೇನಾಚಾರು ಮೊದಲಾದ ಬಹು ಜನಗಳಿಗೆ ದಂಡಗಳ ಕಟ್ಟಿಸುತ್ತಾ ಯಿದ್ದ ಕಾರಣಾ ಮಹಿಸೂರು ಹೋಬಳಿ ಅಷ್ಟ ಗ್ರಾಮದ ಶ್ಯಾನುಭಾಗ ಶ್ಯಾಮಯ್ಯನೆಂಬವನ ಕಛೇರಿ ಪುಟ್ಟೈಯ್ಯನ್ನು ಕೈಹಿಡಿದು ಮೊದಲು ತಂನನ ಪಹರೆದಿಂದ್ದ ವಹಿಶಿ ಬಿಡಿಶಿಯಿದ್ದಾ ತೋಷೆಖಾನೆ ಮುಸ್ತಫಲ್ಲಿಖಾನರು ಪೂರ್ಣೈಯ್ಯನವರ ಕುಮುಕಿನಿಂದಾ ಅಂಚೆ ತಿಂಮಪ್ಪೈಯನ ಕುಳ ಯಿವನ ಜನ ಗಡಿಗಳ ಹರಿಕಾರು ಯಿವನ ಅಂಚೆ ಬುದಕು ಸುದಾ ೩೦೦೦೦೦ ವರಹಾಕ್ಕೆ ಮುತ್ಸಳಿಕೆ ಬರಶಿ ಶಾಮೈಯ್ಯನ ವಶ ಮಾಡಿಶಿ ದುರ್ಮುಖಿ ಸಂವತ್ಸರದ ಭಾದ್ರಪದ ಲಾಗಾಯಿತ್ತು ಅಂಚೆ ಗುರಿತನಾ ಮಾಡುತ್ತಾ ಯಿದ್ದು ಶಾಮೈಯ್ಯನು ವಂದು ಕೋಟಿ ವರಹಾ ಸರಕಾರಕ್ಕೆ ಸೀಮೆ ಹಣವಲ್ಲದೆ ವಿಂಗಡವಾಗಿ ಕಿಫಾಯಿತ್ತು

ಮಾಡಿಕೊಡುತ್ತೇನೆಂದು ಮೊದಲೆ ತಂಮ್ಮ ಅಂಣ ಸಾಬಕ್ಕು ನರಸುಂಹಸ್ವಾಮಿ ಗುಡಿ ಶ್ಯಾನುಭೋಗ ರಂಗೈಯ್ಯಗೆ ಕಚೇರಿ ದಫ್ತರ ಮಾಡಿಶಿದಲ್ಲಿ ವಿಕಾರಿ ಸಂವತ್ಸರದ ಆಷಾಡ ಶ್ರಾವಣದಲ್ಲಿ ತಾನು ಬಂದು ಶೀಮೆ ವಿಚಾರಣೆಗೆ ಕುಳಿತನು.

ಮೊದಲು ಜಯ ಸಂವತ್ಸರದಲ್ಲಿ ಅಂಚೆ ತಿಂಮಪ್ಪೈಯ್ಯನ್ನ ಪ್ರಾಬಲ್ಯದಲ್ಲಿ ಕರಾಚೂರಿ ಅರಶಿನವರ ಜಹಗೀರು ಕಳಲೆಯಂನ್ನು ಜಪ್ತಿ ಮಾಡಿಶಿಯಿವರ ಮಹಲ ಖರ್ಚಿಗೆಲ್ಲಾ ತಸದೀಕು ಹುಟಿಶಿ ಹರಕಾರೆ ನರಸಪ್ಪನಾಯ್ಕಗೆ ೪೦೦೦೦ ಸಾವಿರ ವರಹಾ ದಂಡ ಕಟಿಶಿ ಜೀವದಿಂದ್ದಾ ಹೊಡೆದು ಹಾಕಿಶಿ ಯಿವರ ನಾಯ್ಕತನವಂನ್ನು ಹರಕಾರ ಶಾಮೈಯ್ಯಗೆ ಕೊಡಿಶಿ ಯಿದ್ದ ಸಬುಬು ಯೀ ನಾಯ್ಕ ಶಾಮೈಯ್ಯ ಅಂಚೆ ಶ್ಯಾಮೈಯ್ಯನಿಗೆ ಸಹಾ ದುಹಿಯಿದ್ದ ಪ್ರಯುಕ್ತಾ ಅಂಚೆ ಶಾಮೈಯನ್ನು ಯೀ ನಾಯ್ಕ ಶ್ಯಾಮೈಯ್ಯನಿಗೆ ದಂಡಾ ಕಟಿಶಿ ಹೊಡಶಿ ಅತಿ ಹಿಂಸೆ ಮಾಡಿಶಿದನು.

ಚಿತ್ರಕಲ್ಲು ಕಾಮಾಜಿಗೆ ಹರಕಾರೆ ಬರಕೋಗಿರಿ ನೇಮಕವಾಗಿ ವತ್ತುವಳೀ ಪಟ್ಟಿ ವಿಚಾರಣೆ ಬಗ್ಯೆ ಮಹಾಲಾತಿ ಕಚೇರಿಗೆ ಆತನು ಬಂದು ಕುಳಿತನು.

ಸಾಬಕು ಮನ್ಮಥ ಸಂವತ್ಸರದಲ್ಲಿ ಹರಕಾರೆ ನರಸಪ್ಪ ನಾಯ್ಕೆಗೆ ೪೦೦೦೦ ವರಹಾ ದಂಡಾ ಮಾಡಿ ಪೇಟಿನಲ್ಲಿ ಆತನ ಕೊಂದು ಹಾಕಿಶಿ ಅಂಚೆ ತಿಮ್ಮಪೈಯ್ಯನ್ನು ಹರಕಾರ ನರಸಪ್ಪ ನಾಯ್ಕ ಶ್ಯಾಮೈಯ್ಯನಿಗೆ ನರಸಪ್ಪ ನಾಯ್ಕಗೆ ಬಿರೆದಾರಿ ಕೊಡಿಶಿ ಯಿದ್ದನಾಗಿ ಆತನ್ನು ಮಹಾಲಾತಿ ಕಛೇರಿ ವಿಚಾರಣೆಗೆ ಕುಳಿತವನ ಅಂಚೆ ಶ್ಯಾಮೈಯ್ಯ ಪಹರೆ ಹಾಕಿಶಿದನು.

ಬಕ್ಕಸದ ವೆಂಕಟಪತ್ಯೆಯನಿಗೆ ಮಹಲಾತಿ ಕಛೇರಿ ದಪ್ತರವನ್ನು ಅಬ್ದುಲ್ ಮಹಂಮದರಲ್ಲಿ ಅರಿಕೆಮಾಡಿ ನೇಮಕ ಮಾಡಿ ಕೊಟರು.

ಸಾಬಕು ಕೊತ್ತವಾಲು ಮೀರ ಅಲ್ಲಿ ನಕೀಮನ ಮಗ ಮೀರ ಮಹಂಮದ ಸಾದಕರಿಗೆ ಬಾಜಾರದ ಸೂರಶೆಟ್ಟಿ ಅಚ್ಚೈವಜಿ ಕೊತ್ತವಾಲ ಯಿತ್ತಾಗಿ ಯಿಂತಾ ಶಿಫಾರಸ್ಸು ದೊಡಬಳಾಪುರದ ಅಬಸಕು ಅಲ್ಲಿ ಖಾನರ ಮಗಳಂನ್ನು ವಾಸ ಬಹು ಬುದ್ಧಿವಂತ ಸರಕಾರದ ಖೈದ ಖಾಲಾಯಖಿ ದಿವಾನಿ ಖಿಜಮತ್ತು ಯಂದು ಅಬ್ದು ಅಹಂಮದ ಮಿರ್ದೆಹಜೂರಲ್ಲಿ ತಾರಿಫು ಮಾಡಿ ಮಹಲಾತಿ ಕಛೇರಿ ದಿವಾನಗಿರಿ ಮಹಂಮದ ಸಾದಕರಿಗೆ ಮೊಕರೂರು ಆಯಿತ್ತು.

ಯಿವರ ಅತ್ಯೆವಟಿ ಯಿವರ ಭಾವಮ್ಮೈದುನನಾದ ರಾಜಾ ಸಾಹೇಬರಿಗೆ ಕೊತ್ತವಾಲಿ ಮೊಕರಾರು ಆಯಿತು.

ಆವಾಗಾ ಅಂಚೆ ಶ್ಯಾಮೈಯ್ಯನವರು ಬಹಳ ಜಬರಜಸ್ತಿಯಿಂದ್ದಾ ಮಾಡಿದ ಕೆಲಸಗಳ ವಿವರ ಹರಕಾರೆ ನಾಯಕ ಶಾಮೈಯ್ಯನವರಿಗೆ ಮುಗುವಳಿ ಮಾಡಿ ಶ್ಯಾಮೈಯ್ಯನ ತಂಮ್ಮ ಶಿಂಗೈಯ್ಯ ಶೇಷೈಯ್ಯ ವಗೈರೇರನ ಬಹಳ ಹಿಂಸೆ ಮಾಡಿ ಯೀತನ ಬಿರಾದಾರಿ

ಸರಾಫ ಶ್ರೀನಿವಾಸೈಯ್ಯನಿಗೆ ಮಾಡಿಸಲಾಗಿ ನಾಯಕ ಶ್ಯಾಮೈಯ್ಯ ತಂಮಂದಿರು ಸಹಾ ಪಕೀರವೇಷಾ ಹಾಕಿಕೊಂಡು ವೋಡಿಹೋಗಿ ಅಡವಿಯಲ್ಲಿಯಿದ್ದು ಅಲ್ಲಿಂದಾ ಹಜೂರಿಗೆ ಅರ್ಜಿ ಬರದು ಕೌಲು ಘರವಾನೆ ತರಿಶಿಕೊಂಡು ಪುನಹಾ ಬಂದು ತಂಮ್ಮ ಬಿರಾದಾರಿ ಕಾಯಂ ಮಾಡಿಕೊಂಡರು.

ಸಲಾಯತ ಖಾನರಿಗೆ ಮಹಂಮದ ಗೌಸರಿಗೆ ೨೦೦೦೦ ಸಾವಿರ ರೂಪಾಯಿ ಮುಗುವಳಿ ಮಾಡಿ ಹಿಂಸೆ ಮಾಡಿದಲ್ಲಿ ಪೆಟ್ಟಿನಲ್ಲಿ ಸಲಾಯತ ಖಾನರು ಸತ್ತದ್ದರಿಂದಾ ಗೌಸಾಬರಿಗೆ ೨೦೦ ರೂಪಾಯಿ ದರ್ಮ ಹಾಕಿಶಿ ಮೊದಲಿನ ಖಿಜಮಷಿತ್ತೆ ಕಾಯಂ ಆಯಿತು. ಅಂಕುಶಗಿರಿ ರಾಮಾಜಿ ಪಂತರ ಮಗ ಕ್ರಿಷ್ಣರಾಯ ೩೦೦೦ ಸಾವಿರ ಕುದುರೆ ರಿಸಾಲೆ ಭರತಿಮಾಡಿ ತಂನ ತಂಮ ಶ್ರೀಪತಿರಾಯಗೆ ಮಕರುರು ಮಾಡಿಶಿ ಸಿವಮಗೆ ಕಳೆಹೊನೂರು ಸಹಾ ರಿಸಾಲೆಗೆ ಜಹಗಿರು ಮಾಡಿಸಿ ಅಲ್ಲಿನ ಅಮಲ್ಲಿ ತಂನಂಬಿಕರೆಂದು ಸರ್ವೋತ್ತಮರಾಯನ ನೇಮಿಸಿ ತಾನ್ನು ಕೊಪ್ಪಳ ಬಹದರಬಂಡೆ ಗಜೇಂದ್ರ ಗಡದ ಅಮುಲು ಮಾಡುತ್ತಾ ಯಿದ್ದದರಿಂದ ಯೀಕ್ರಿಷ್ಣರಾಯನ ಹಜೂರಿಗೆ ಕರಶಿ ಮೊದಲು ಸೊದೆ ಅಪ್ಪಾಜಿರಾಮನ ಕೂಟಾ ಅಂಕೋಲೆ ಪಂಚಮಹಲು ಅಂಕುಶಗಿರಿ ರಾಮಾಜಿ ಪಂತನ ಅಮುಲು ಯಿದ್ದಾಗಾ ಅವರಿವರಿಗೆ ದ್ವೆಷ ಬಿದ್ದು ಅಂಕೋಲೆ ಬದುಕು ಅಪ್ಪಾಜಿರಾಮನ ಕಡೆ ಆಗಿ ರಾಮಾಜಿ ಪಂತನ ಹಲಾಕು ಮಾಡಿಯಿದ್ದ ದ್ವೆಷದಿಂದ್ದಾ ಯೀ ಕ್ರಿಷ್ಣರಾಯ ಅಂಚೆ ಶಾಮೈಯ್ಯನಲ್ಲಿ ಯೇಕವಾಗಿ ಅಪ್ಪಾಜಿ ರಾಮನ ಮ್ಯಾಲೆ ಸೊದೆ ತಾಲೋಕು ವಗ್ಯೆರೆ ವತ್ತುವಳಿ ಮಾಡಿ ೬೦೦೦೦೦ ಲಕ್ಷ ವರಹಾ ನಿವಣರಿ ಮುಗಾಳಿವಳಿ ಮಢಿಮಶಿದ ಕಲಂ.

ಯೀ ಸೊದೆ ಅಂಕಲೆ ಸೊಷ ಹಲಿಹಳು ಸುಭೆ ಮದಲು ಸಬ್ಬಯಿತ್ತಿ ಆ ಬಳಿಕ ಬೆಂಗಳೂರು ಅಚ್ಚೈಯ ತರುವಯ ಕತಿ ಗೊಪಾಲೈಯ ಗಿರ ಆ ಬಳಿಕ ಅಪಜ್ಜೈಯ್ಯನವರು ತರುವಾಯ ಅದು ದೇವರನು ತದನಂತರ ಗೋಪಾಲರಾಮ ಬಾದು ಸದಾಶಿವರಾಮ ವಗ್ಯೆರು ಮಾಡಿ ಸಾಬಕ್ಕು ಸೊದೆ ಪೂರ್ವದ ದಳವಾಯಿ ವೀರಭದ್ರೈಯ್ಯನವರಂನು ಸೋದೆಯಿಂದಾ ಅಂನದಾನ ಶೆಟ್ರಿ ಮುಖಾಂತ್ರಾ ಕುಂಶಿ ಸವಣೂರು ೬೦೦೦೦ ಸಾವಿರ ವರಹಾವನ್ನು ಆತನ ಕೈಯಿಂದ ಸರಕಾರಕ್ಕೆ ನಜರು ಕೊಡಿಶಿ ಕೊಡೆಖಿಲ್ಲತ್ತಿನಿಂದಾ ಸದರಿ ಸುಭೆ ವೀರಭದ್ರೈಯ್ಯನವರಿಗೆ ನೇಮಕಾ ಮಾಡಿಸ್ತರು. ಯೀತಗೆ ಜಹಗೀರು ಶೀಮೆ ೫೦೦೦ ವರಹಾದ್ದು ಅರಶಿಗೆ ೧೦೦೦ ರೂಪಾಯಿ ಸಂಬಳಾ ದಳವಾಯಿ ಸೊ ನೆಮಕವಾಯಿತು.

ಪ್ರಧಾನ ವೆಂಕಪ್ಪೈಯ್ಯನವರಿಗೆ ಮದ್ದಗಿರಿ ಚಂನರಾಯ ದುರ್ಗ ದೊಡ್ಡ ಶೀರ್ಯ ಪೆನಗೊಂಡೆ ಕೋಡಿಕೊಂಡೆ ಪಾಗೊಂಡೆ ಸಹಾ ಅಮುಲು ಯಿವರ ಹವಾಲಿನಲ್ಲಿ ಮಡಿಕೆ ಶೀರ್ಯದ ಮಾಮಲೆ ಪೂರ್ವಕ್ಕೆ ಮಧ್ವರಾಯ ಕೋನಪ್ಪನವರಲ್ಲಿ ಆರು ಹಣದ ಸಂಬಳಕ್ಕೆ ತಹಶೀಲು ಪ್ಯಾದೆ ಆಗಿಯಿದ್ದ ಶೆರ ಖಾನ ಕರಿನಗೆ ಸಹಾಯಿದ್ದು ಮಧ್ಯೆ ಚಿತ್ರದುರ್ಗಕ್ಕೆ

ನವಾಬರು ಮೊಹಿಂ ಹೊಗುತ್ತಾ ಶೀರ್ಯದ ಬಳಿ ನವಾಬರು ಬರುವಾಗ್ಯೆ ಪ್ರಧಾನರ ತಂಮ್ಮ ವೆಂಕಪ್ಪಯ್ಯನವರ ಅಳಿಯ ರಘುಪತ್ಯೆಯ್ಯನ್ನು ಪ್ರಧಾನರ ಹವಾಲಲ್ಲಿ ಶೀರ್ಯದ ಬದುಕು ಮಾಡುತ್ತ ಯಿದ್ದು ಗರ್ವದಿಂದಾ ನವಾಬರ ಸವಾರಿ ಬರುವಾಗ್ಯೆ ಯಿಸ್ತಕ ಪಾಲು ಬಾರದೆ ಮನೇಯಲ್ಲಿ ಪಟ್ಟಾಭಿಷೇಕಾ ಮಾಡುತ್ತಾ ಯಿದ್ದನಾಗಿ ಹಿಡತರಿಶಿ ಮಾನಭಂಗಾ ಮಾಡಿ ಬಾಡೆ ಅಬ್ಬೊ ಯಂಬ ಗ್ರಹಸ್ತನಿಗೆ ಅಮುಲ ಕೊಟ್ಟುಯಿತ್ತಾಗಿ ಸದರಿ ವಿಕಾರಿ ಸಂವತ್ಸರದ ಶ್ರಾವಣದಲ್ಲಿ ವೆಂಕಪ್ಯೆಯ್ಯನವರನ ಪಟ್ಟಣಕೆ ಕರೆಶಿ ೬೦೦೦೦ ಸಾವಿರ ವರಹಾ ವತ್ತುವಳೀ ಮಾಡಿ ವೆಂಕಪ್ಯೆಯ್ಯನವರನ ಮಾನಭಂಗಾ ಮಾಡಿ ಪಹರೆ ಹಾಕಿ ಅಮುಲುಗಳನ್ನೆಲ್ಲಾ ಬದಲು ಮಾಡಿಸಿ ಪ್ರಧಾನರೆಂಬ ಹೆಸರು ಯೀ ಖಿಜಮುತ್ತಿಗೆ ದರ್ಮಹಾ ೧೦೦೦ ರೂಪಾಯಿ ಸಹಾ ಮೊಕರೂರು ಮಾಡಿಸ್ತರು.

ಪೂರ್ಣ್ಯೆಯ್ಯನವರಿಗೆ ೧೧೧೦೦೦ ವರಹಾ ದಂಡ ಮಾಡಿ ಶೀಮೆಯವರನ್ನೆಲ್ಲಾ ಕೊಂದು ಬಡಿದು ಬಲವಂತದಿಂದಾ ಸುಳ್ಳು ಪಟ್ಟಿ ಮಾಡಿಶಿ ಪ್ರಾಣ ತೆಗೆಯುವ ಯೋಚನೆ ಮಾಡಿದಲ್ಲಿ ಬಚ್ಚೆರಾಯರು ಬರಕ್ಕಿ ಶ್ರೀನಿವಾಸರಾಯರಿಗೆ ಹೇಳಿ ಅವರಿಂದಾ ಹಜೂರಲ್ಲಿ ಹೇಳಿಶಿ ಡಂಗಿಯಿಂದಾ ಬರಿಶಿಕೊಂಡು ಬಡಿಯದಂತೆ ಮೇಲೆ ಜೋಪುದಾಗನ ಹಾಕಿ ಪಹರೆದಲ್ಲಿ ಮಾತ್ರಾ ಯಿರಿಶಿಯಿದ್ದ ಬಳಿಕ ಮುಸ್ತಫ ಅಲ್ಲಿಖಾನರು ಅಂನದಾನ ಶೆಟ್ರ ನರಶೆಟ್ರ ಸಹಾವಹಿಸಿ ಯಿವರು ಯಿವರು ಕೊಡತಕ್ಕ ಹಣಕ್ಕೆ ವರ್ತಕರೆಲ್ಲ ಹವಾಲ್ತೆಯಾಗಿ ಯಿವರನ ಪಹರೆದಿಂದ್ದಾ ಬಿಡಿಶಿ ದಪ್ತರ ಖಾಯಂ ಮಾಡಿಶಿದರು.

ಕೊಯಮತ್ತೂರು ಅಮೀಲ ವೆಂಕಟರಾಯಾ ಧಾರಾಪುರ ಚಕ್ರಗಿರಿ ರಂಗಾಚಾರಿ ನಾಮಕಲ್ಲು ಶ್ಯಾದಮಂಗಲದಧ ಕಾದರ ಸಾಹೆಬರ ಮುಕ್ಯೆಸರ ಅಮುಲುದಾರ ಬಾರಾ ಮಹಲು ನರಸಂಣ್ಯೆಯ್ಯನವರ ಮಗ ಮುಂತ್ತಾಗಿ ಯಿಂನ್ನು ದರೋಬಸ್ತು ತಾಲೊಕಿನ ಅಮೀಲರಿಗೆಲ್ಲ ಭಾರಿ ದಂಡಗಳ ಕಟಿಶಿ ಸುಳುವತ್ತುವಳೀ ಮಾಡಿ ಕೊರಡೆ ಕಿಟಕಿ ದಬ್ಬೆಳಗಳಿಂದಾ ತಿಳಿಯುವದೂ ಪಟ್ಲ ಚಾವಡೀ ತಳಗಣ ಗಿಡಂಗಿಯಲ್ಲಿ ಹಾಕುವದೂ ಅನೆಕಾ ಬಗೆ ದೊಡ ಉಗ್ರಾಣದ ಶ್ಯಾನಭಾಗ ರಾಮಯ್ಯನ ಕಟಿಶಿಯಿಟು ಊಳಿಗದ ಕೊಮಾರ್ಯೆಯ್ಯನವರ ಮಗ ನಂಜ್ಯೆಯ್ಯ ಅರಸಂನ್ನು ಕ್ರಿಷ್ಣರಾಜಪುರದ ಶ್ಯಾನ್ನುಭಾಗರ ಸಹಾ ಪೆಟುಗಳಿಂದ್ದಾಲೆ ಕೊಂದುಹಾಕಿಶಿ ಮೂಗೂರು ದ್ಯಾವರಾಜ್ಯೆಯ್ಯ ಅರಶಿಗೆ ಬರೆಗಳ ಹಾಕಿಶಿ ಯಿಂನ್ನು ಅನೇಕ ವಿಧ ಹಿಂಸೆಗಳೆಲ್ಲಾ ಪಟ್ಟಣದಲ್ಲಿ ಅಂಚೆ ಶ್ಯಾಮಯ್ಯ ಮಾಡಿಸ್ತನೂ.

ಆದ್ದರಿಂದ್ದಾ ಶ್ಯಾಮ್ಯೆಯ್ಯನಿಗೆ ತೊಡೆ ಪದಕ ಮುತ್ತಿನ ಸರ ಪಾಲಕಿಯಿನಾಮು ೫೦೦೦ ವರಹಾ ದರ್ಮಹಾ ೧೦೦೦ ರೂಪಾಯಿ ಸಹ ಸರಫರಾಜು ಆಗಿ ಬುರಾನಬುರಿ ಖಿಲ್ಲತ್ತು ದುಶ್ಯಾಲು ಸಹಾ ಯಿನಾಯತಾಗಿ ಯಿವರ ಅಂಣ ರಂಗ್ಯೆಯ್ಯಗೆ ಕಛೆರಿ ದಪ್ತರಕ್ಕೆ ೩೦ ವರಹಾ ದರ್ಮಹಾ ಯೀತನ ತಂಮ್ಮ ಅಪ್ರಮ್ಯೆಯ್ಯಗೆ ತೊಷೆಖಾನೆ ದಪ್ತರ ಸ್ವಾರು ಬಾರು ಅಹಷಾಂ ವಗರೆ ಅತರಾ ಕಾರುಖಾನೆಗಳಲ್ಲೂ ಯೀತನ ಹವಾಲಿಗೆ ದಪ್ತರಗಳು ಮೊಕರೂರು ಆಗಿ ದಪ್ತರುಗಳು ಸರಫರಾಜು ಆಯಿತ್ತು.

ಶಿವಮೊಗ್ಗೆ ಕ್ರಿಷ್ಣರಾಯರಿಗೆ ಶಿರಪೇಷು ತುರಾಯಿ ಪದಕ ಯಿನಾಮು ೫೦೦೦ ವರಹಾ ದುಶ್ಯಾಲು ಬುರಾನ್ನುಬುರಿ ಖಿಲ್ಲತ್ತು ಸಹಾ ಯಿನಾಯತಾಗಿ ಧಾರವಾಡದ ಅಮೀಲ ನಂಜಪ್ಪೈಯ್ಯ ಮ್ರುತವಾದ್ದರಿಂದ್ದಾ ಅಲ್ಲಿ ಅಮುಲು ಕೃಷ್ಣರಾಯರಿಗೆ ಸರಫರಾಜಾಯಿತು.

ಮೀರ ಮಹಂಮದ ಸಾದಕರಿಗೆ ತೊಡೆ ಪದಕ ಯಿನಾಮು ೩೦೦೦ ವರಹಾ ದರ್ಮಹಾ ೧೦೦೦ ರೂಪಾಯಿ ಪಾಲಕಿ ದುಶ್ಯಾಲು ಬುರಾನ್ನುಬುರಿ ಖಿಲ್ಲತ್ತು ತಮಾಮು ಮುಲಕೆ ಹೈದರ ಬಚೆ ತನೇನೀನಬಾದ ಯಂದು ಪಾದಷಾ ಖುದಾಯಿಸ್ತ ಚಾಕೊನಿ ಮಹೊರು ಸುದಾ ಯಿನಾಯತ್ತು ಆಯಿತು.

ನಗರದಲ್ಲಿ ಮಜ್ಜನಪ್ಪನ್ನು ನವಾಬ ಬಹದರೆ ಗುಣ ನಿಧಾನ ಪೀದವಿ ರಾಜಾರಾಮ ಯಂಬ ಮೊಹರು ಸುದಾ ಸರಫರಾಜಾಗಿ ಯಿದ್ದು ಮ್ರುತವಾದ್ದರಿಂದ್ದಾ ಚಿತ್ರದುರ್ಗಕ್ಕೆ ದವಲತ್ತು ಖಾನನೆಂಬ ಚೇಲೆ ಮೊಕರೂರು ಮಾಡಿ ಕಳುಹಿಸ್ತರು.

ಬಾದಲ್ಲಿ ಸಾಬಕ್ಕು ಪಾಂಡುರಂ ದಾತ್ಯಾ ಶಿವರಾಮ ಭಾಮಾನ ಮಮದಲ್ಲಿ ಕುಮುಂದಾನಗೆ ಗುರುತು ತೊರಿಸ್ತೆನೆಂದು ಶಿರಹಟ್ಟಿ ಭಿಷ್ಟೋಪಂತರಿಗೆ ಅಮುಲು ಯಿವರ ತಂಮ್ಮ ರಾಯರಾಯರಿಗೆ ಹಜೂರಲ್ಲಿ ಕುದುರೆ ರಿಸಾಲೆ ಸಹಾ ಕೊಟುಯಿತ್ತಾಗಿ ಯೀಗಲೂ ಅದೆ ಬಾದಾಮೀ ಅಮುಲು ಕಾಯಂ ಆಗಿ ತೊಡೆ ಯಿನಾಯಿತ್ತು ಆಯಿತ್ತು.

ಬಾರಾಮಹಲು ನರಸಂಣ್ಣೈಯ್ಯ ಮ್ರುತನಾದ್ದರಿಂದ್ದಾ ಯೀತನ ಪೇಷ್ಕಾರಿ ಊರಡಗೆರೆ ಹರಿದಾಸ್ಯೆಯಗೆ ಬಾರಮಹಲು ಅಮುಲು ಮೊಕರೂರು ಆಯಿತು.

ಮಂಣಿನ ಮಗ ಅಳಶಿಂಗ್ರ ಯಂಬವನಿಗೆ ದೇರಸ್ತಾನದ ಚಾವಡಿ ಬದುಕು ಕೊಟ್ಟಿಧರಿಂದ್ದಾ ಅಂನ್ಯಾಯವಾಗಿ ಬಹು ಜನ ಕ್ಷೋಭೆ ಮಾಡಿ ಅವನೂ ಕೆಲವು ಹಣ ಸರಕಾರಕ್ಕೆ ವಸೂಲು ಮಾಡಿದನು.

ನಾಮಕಲ್ಲು ಖಾದರ ಸಾಬನ ಮ್ಯಾಲೆ ೪೦೦೦೦೦ ವರಹಾ ಪಟ್ಟಿ ಮಾಡಿ ಯಿವನ ಮಾವ ನಿಜಾಮದ್ದೀನನ ಜಿಂದಗಿನ ಸಹಾ ೧೦೦೦೦ ವರಹಾಕ್ಕೆ ರಾಜಿಯಾಗಿ ನಿಂತ ಹಣಕ್ಕೆ ಯಿಬ್ಬರಂನೂ ಅಗಾಡಿ ಪಿಚಾಡಿಕಟಿ ಕೊಲ್ಲುತ್ತಾ ಯಿವರ ಮನೆಲಿ ರೂಪುವತಿಯಾದಂತ್ತಾ ಯರಡು ಹೆಣ್ಣು ಹಜೂರಿಗೆ ತರಹೇಳಿ ಮನೆಗೆ ಬಾರು ಕಳುಹಿಸಲಾಗಿ ಖಾದರ ಸಾಬನ ತಮ್ಮನು ನಾಲ್ಕು ಜನ ಖಿಜಮತ್ತು ದಾರರು ಸಹಾ ಅಂಗೀಜುಮಾಡಿ ಮನೆ ಹೆಂಗಸರು ಹುಡುಗನೆಲ್ಲಾ ಕಡದು ಹಾಕಿ ಬಂದ ಬಾರಿನವರಂನ್ನು ಬಹಳ ಜನಾ ಹೊಡದು ಜಖುಮುಗಳು ಆಗಿ ಕೈಗೆ ಶಿಕ್ಕಿದವರ ಆನೆ ಕಾಲಿಗೆ ಕಟ್ಟಿಯಳದರು.

ಬೆಂಗಳೂರು ಯಿಬ್ಬರಾಯಮಸಾಬರ ಮಗ ಮಹಂಮದ ಅಮೀನನ್ನು ಮೊದಲು ಮರಾಟೀರಲ್ಲಿ ಶೇರಿಯಿದ್ದು ಕಾಲಿನ ಮ್ಯಾಲೆ ಬಂದು ಸವಾರಿ ೫೦೦ಕ್ಕೆ ಸಾಲದಾರನಾಗಿ ತುಮುಕೂರು ದೇವರಾಯ ದುರ್ಗ ಕಂದಿಕೆರೆ ಚಿಕ್ಕನಾಯ್ಕನಹಳಿ ಸಹಾ ಜಹಗೀರಾಗಿಯಿದ್ದು ಆ ಬಳಿಕಾ ಹಜೂರಲ್ಲಿ ತಬೆಲಿ ಕಚೆರಿ ಬಕಷಿಯಾಗಿ ಯಿರುತ್ತಾ ವಬ್ಬ ಬಾರಗಿರ ತಬರ

ಶಿಪಾಯಿಯಂನ್ನು ಅತ್ತೈಲು ಪ್ತೈಲು ಬಾಯಿಂದಾ ಆಡಲಾಗಿ ಅವನ್ನು ಕತ್ತಿಯಿಂದಾ ನೆತ್ತಿಮ್ಯಾಲೆ ಬಲಭುಜಕೆ ಬೆಂನ್ನಮೆಲೆ ಸಹಾ ಜಕಿಂ ಹೊಡದದ್ದರಿಂದಾ ಅವಂನ್ನ ಭಾಲೆಗಳಿಂದಾ ಹೊಡದು ಆನೆಕಾಲಿಗೆ ಕಟಿಸ್ತರು.

ಸವಣೂರು ಅಬ್ದುಲ ಅಭೀಮಖಾನರನ ಪಟ್ಟಕೆ ಯಿವರ ಮಗಳಂನ್ನು ನವಾಬರ ಮಹಲಿನಲ್ಲಿ ವಬ್ಬ ಹೆಂಡತಿ ಮಗ ಅಬ್ದುಲ ಕರಿಮ ಕಾನರಿಗೆ ಮದುವೆ ೧ ನವಾಬರ ಹಲು ಪೈಕಿ ವಬ್ಬ ಮಗಳಂನ್ನು ಸವಣೂರು ಅಜೀಮ ಖಾನರ ಮಗ ಅಬ್ದುಲ್ ಖೈದರ ಖಾನ್ ದತಿಲಜಂಗರಿಗೆ ಮದುವೆ ೧ ಶೀಮೆ ಕಂದಾಚಾರ ಕಛೆರಿ ಬಕಷಿ ಜಯ ಸಂವತ್ಸರದಾರಭ್ಯವಾಗಿ ಯಿದ್ದ ಹೊಸಕೋಟೆ ಸ್ತಳದ ಅಫೀಜ ಅಲ್ಲಿಖಾನರಿಗೆ ನವಾಬರು ಮಹಲು ಪೈಕಿ ಮಗಳ ಮದುವೆ ೧ ಯೀಮ್ಯಾರ ಪ್ರಸ್ತಗಳಂನ್ನು ಮಾಡಿ ಸವಣೂರು ತಾಲೊಕು ಅಹಲೆಕಾರರಿಗೆಲ್ಲಾ ಉಭಯ ನವಾಬರು ಜವಾಹಿರಿ ಖಿಲ್ಲತ್ತು ವಗೈರೆ ಕೊಟರು, ಪಟ್ಟದ ಅಹಲೆಕಾರರಿಗೆಲ್ಲಾ ವಂದುದಿವಸವಾದರೂ ಅಕ್ಕಿಬ್ಯಾಳೆ ಸಹಾ ಕೊಡಲಿಲ್ಲ. ಆ ಮದುವೆ ವಡ್ಡೋಲಗದಲ್ಲಿ ಸದರಿ ಜನಗಳಿಗೆ ಪೆಟ್ಟು ಕೊಲೆಯಾದರೂ ತಪ್ಪಲಿಲ್ಲಾ. ಅಂಚೆ ಶ್ಯಾಮೈಯ್ಯ ಪೂರ್ಣಯ ಕ್ರಿಷ್ಣರಾಯ ಮೀರ ಸಾದಕ ಮುಸ್ತಫಾಲ್ಲಿ ಖಾನ ವಗೈರೆ ಕೆಲವರಿಗೆ ಪೋಷಾಕು ಕೊಟ್ಟು ಮಹಾಲಾತೀಯವರಿಗೆ ಮಾತ್ರ ಕೊಡಲಿಲ್ಲಾ.

ಪಾಲಘಾಟ ಕಛೇರಿ ಬದುಕು ಮುರಾದಿಲ್ ಖಾನರಿಗೆ ತಗೈರಾಗಿ ಪಟ್ಟದ ಚಾರಡಿ ಚಿಕ್ಕ ಬಸವಂಣಗೆ ನೇಮಕವಾಯಿತು.

ಬಂಕಾಪುರದ ಶೀಮೆ ಸವಣೂರು ನವಾಬರಿಗೆ ಬಿಟ್ಟು ಜಮೀಯತು ಸವಾರರನ ಭರ್ತಿ ಮಾಡುವಂತೆ ಹೇಳಿ ಬಹಳ ಸಂನ್ಮಾನಾ ಮಾಡಿ ಕಳುಹಿಸಿ ಕೊಟರು.

ಕಡಪೆ ಮೀರ ಅಲ್ಲಿರಜಾಖಾನರ ತಂಗಿ ಮಗ ಠೀಪುಸುಲತಾನರಿಗೆ ವೊದಲೆ ನವಾಬರ ಅಂಣ ಶಾಬಾಸಾಬರ ಅಳಿಯ ಲಾಲಾ ಮೀಯಾನವರ ಮಗಳು ನವಾಬಬೇಗ ಯಂಬ ಹೆಂಣು ೧ ಆರ್ಕಾಡಿಂದ್ದ ಸಬಾಕು ಫುಲಛೇರಿ ಅವಲ್ಯಾದೀಗ ಹೆಂಣು ೧ ಸಹಾ ಮದುವೆಯಾಗಿ ಯಿತ್ತಾಗಿ ಚಿತ್ರದುರ್ಗದ ಮೊಹಿಂಮಿನಲ್ಲಿ ಸುಲತಾನರ ಮ್ಯಾಲೆ ಆಗಿಯಿದ್ದ ಯತರಾಜೀ ಯೀ ಕರಿಂಸಾಬರ ಮದುವೆಯಲ್ಲಿ ಮಾಫಾಯಿತು.

ಕಡಪೆ ನವಾಬ ಅಲ್ಲಮಖಾನರ ತಿತೆರಭಾಯಿ ರಜ್ಜೂಖಾನರ ಮಗಳಂನ್ನು ನವಾಬ ಹೈದರಲ್ಲಿ ಖಾನರು ನಿಕಾ ಮಾಡಿಕೊಂಡರು.

ಕರಾಚೂರಿ ನಂಜರಾಜೈಯ ಅರಸಿನವರು ಅವರಿಗೆ ಕೈಲಾಸ ಯಾತ್ರೆ ಮಾಡಿದರಾಗಿ ಯಿವರ ಕೊಮಾರು ದಳವಾಯಿ ವೀರರಾಜೈಯವರಂನು ಅಬ್ದುಲ ಮಹಮದನ ವಕಾಲತಿನಿಂದ ನವಾಬರು ಶರೆಮನೆಯಿಂದ ಫುನಹಾ ಕರಿಸಿ ಬಹಳ ಸಂನ್ಮಾನಾ ಮಾಡಿ ಮಾತನಾಡೂವಲ್ಲಿ ಅವರು ಕೇವಲ ಅರ್ಜುನವಾಡಿ ಕುಷಾಮತ್ತಿ ಮಾಡದೆ ಪೂರ್ವದೋಪಾದೀಯಲ್ಲಿ ಸಹಜೋಕ್ತಿಯಾಗಿ ಮಾತನಾಡಿದ್ದರಿಂದ್ದಾ ಫುನಹಾ ಮೊದಲಿನಂತೆ ಖೈದು ಮಾಡಿಬಿಟ್ಟರು.

ಸುಂಕಪೊಮ್ಮಿನ ಬದುಕಂನ್ನು ಮಾರಿಕಟ್ಟೆ ಕೃಷ್ಣೈಯಗೆ ತೆಗೆದು ಮೋಂಣನ ಮಗ ಅಳಶಿಂಗ್ರಿಗೆ ಕೊಟು ಕೃಷ್ಣೈನ ಕುಳವಂನ್ನು ಅಳಶಿಂಗ್ರಿ ವಶಕ್ಕೆ ಹಿಡಿದುಕೊಟರು.

ವಿಕಾರಿ ಸಂವತ್ಸರದ ಪಾಲ್ಗುಣದಲ್ಲೂ ದೆವಡಿ ಅತ್ತೈನಾ ಮಹಲಿನಲ್ಲಿ ನವಾಬರು ಮಲಗಿಯಿರುವಾಗಾ ರಾತ್ರೆ ಕಾಲದಲ್ಲಿ ತಾಳ ಪ್ರಯಾಣ ಕರಗೆ ಯದುರಾಗಿ ವಬ್ಬ ಮನುಷ ನಿಂತಲ್ಲಿ ನವಾಬರು ಹೆದರದೆ ಹತ್ಯಾರು ಸುದಾಯದ್ದು ಯದುರು ನಿಲ್ಲಲಾಗಿ ಆ ಪುರುಷನು ೧ ಘಳಿಗೆ ನಿಂತುಯಿದ್ದು ಹಿಂತಿರುಗಿ ಹೋಗಿ ಮರುದಿನ ಅದೇ ಮೈರೆಗೆ ಕೆಂಪು ರೂಪಾಗಿ ಕಾಣಿಶಿ ತೊಷೆ ಖಾನೆ ಬಾಗಿಲು ಮುರಿದು ಹೊರಟು ಹೋದ್ದರಿಂದ್ದಾ ಆ ಮರುದಿನ ನವಾಬರಿಗೆ ದೇಹಕ್ಕೆ ಆಯಾಸವಾಗಿ ನಿವಾಳೀ ದೀಪದ ಸೊಡರುಗಳು ದಳವಾಯರ ಮನೆ ದೇವಡಿ ಮುಂದೆ ಹ್ಯಾರಳವಾಗಿ ತಂದುಯಿಟು ಯಿಂನ್ನು ಶಿರೆಚ್ಚೆಗಳ ಮಾಡಲಾಗಿ ದೇಹಕ್ಕೆ ಲಘುವಾಯಿತು. ಯಿದು ಕಾಲಪುರುಷ ಸಂದರುಶನವೆಂದು ಸರ್ವೆ ಜನರು ಅಂದುಕೊಂಡರು.

ಪಟ್ಣದ ಕಿಲ್ಲೆದಾರ ಯಿಸಮಾಯಿಲ ಸಾಹೆಬರು ಮೊದಲೆ ಮೃತರಾಗಿ ಯಿವರ ಅಂಣ ಸೈದಮೊಕದುಂ ಯಂಬವರಿಗೆ ಕಿಲ್ಲೆ ಆಗಿಯಿದ್ದು ಅವರ ಸರಘರಾಜಿನಿಂದ ಜೀಯಾಖ್ತಿಯಾರಿ ಜನದ ಮ್ಯಾಲೆ ಜುಲಂ ಮಾಡುತ್ತಾ ಕಿಲ್ಲೈಮುನಷಿ ಕ್ರಿಷ್ಣೈಯ್ಯನು ಪೆಟ್ಟಿನಲ್ಲಿ ಬದುಕಿದ್ದು ದುಸ್ತರವಾಗಿ ಯೀ ಪರಿಯಾದೆಲ್ಲಾ ಹಜೂರಲ್ಲಿ ತಿಳಿದು ಯೀತನ ಕಿಲ್ಲೆ ತಗ್ಯೆರು ಮಾಡಿ ಸವಾರ ರಿಸಾಲೆ ನೇಮಕವಾಗಿ ಗುತ್ತಿ ಮುರಾರಿರಾಯನ ಪಾಲಕಚೆರಿ ಪಾಲಖಾನರಿಗೆ ಪಟ್ಣದ ಕಿಲ್ಲೆ ಮೊಕರೂರು ಆಯಿತು.

ಶಕೆ ೧೭೦೨ನೆ ಶಾರ್ವರಿ ಸಂವತ್ಸರದ ಜೆಷ್ಟದಲ್ಲು ಬರಕ್ಕಿ ಶ್ರೀನಿವಾಸ ರಾಯರು ಸ್ವರ್ಗಸ್ತರಾದರು. ಯಿವರ ತಂಮ್ಮ ಚಂದರಾಯರು ವಿಳಂಬಿ ಸಂವತ್ಸರದ ಮಾಗದಲ್ಲಿ ದೈವಾಧೀನರಾದರು.

ತರುವಾಯ ಶಾರ್ವರಿ ಸಂವತ್ಸರದ ಜೇಷ್ಟ ಬಹುಳದಲ್ಲಿ ಸಕಲ ಸಂನಾಹದಿಂದ ನವಾಬರು ಆರ್ಕಾಟ ಮ್ಯಾಲೆ ಮೊಹಿಂ ಹೊರಟು ಮದ್ದೂರು ಚಂನಪಟ್ಣದ ಮಾರ್ಗವಾಗಿ ಚಂನಪಟ್ಣದ ಕೋಟೆ ಕಟುವಂತೆ ಅಪ್ಪಣೆ ಕೊಟು ಬೆಂಗಳೂರಿಗೆ ದಾಖಲಾಗಿ ಅಲ್ಲಿನ ಕಿಲ್ಲೆ ಯಿಬ್ಬರಾಯಮ ಸಾಹೇಬರು ತೀರಿದ ಮ್ಯಾಲೆ ಪಟ್ಣದ ಕದೀಂ ಸರದಾರ ಮಿರ್ಜಾ ಯಿಸ್ಮಾಯಿಲ ಹುಸೇನರಿಗೆ ಅವರ ಅಂತ್ಯದಲ್ಲಿ ಅವರ ಮಗ ಮಿರ್ಜಾ ಹೈದರ ಹುಸೇನರಿಗೆ ಆಗಿಯಿತ್ತಾಗಿ ಅವರಿಗೆ ತೊಡೆ ಕೊಟು ಸರಘರಾಜು ಮಾಡಿ ಸಾಬಕು ಬೆಂಗಳೂರು ಅಮುಲು ಜಾಫರಲ್ಲಿ ಖಾನರಿಗೆ ತೆಗೆದು ಲಂಗಡ ಗುಲಾಮು ರಜಾನಿಗೆ ಮೊಕರೂರು ಆಗಿಯಿದ್ದವಂನ್ನು ಪ್ರೀತಿ ಮಾಡಿ ಆನೆಗೊಂದಿ ಪಾಳೆಗಾರರ ಭೇಟಿ ತೆಗೆದುಕೊಂಡು ಹೊಸೂರು ಮಾರ್ಗವಾಗಿ ಹೊಡೆದುರ್ಗದ ಕಣುವೆ ಯಿಳಿದು ಮಾದಂಡಹಳಿ ಪಾಲುಕೊಡು ಕಾವೇರಿಪಟ್ಣ ಊಡಂಗೆರೆ ರಸ್ತೆಯಿಂದ್ದಾ ಶಿಂಗರಪಟ್ಟೆ ಬಿಳೀ ದಂಡು ಯಿಳೀತು. ಆವರಿಗೆ ಹಾಜರು ಯಿದ್ದ ಘವುಜಿನ ವಿವರ.

೨ ತಬೆಲಿ ಬಾರಗಿರ ಕಛೇರಿ ಕುದುರೆ ೧೩೦೦೦
೧ ಮಹಂಮದ ಅಮೀನ ಕಛೆರಿ
೧ ಮಾಹೆ ಮಿರಜಾ ಖಾನ ಕಛೆರಿ
೨ ಸವಾರ ಕಛೆರಿ ಸವಾರು
೧ ಕುಂಟ ಗುಲಾಮಲ್ಲಿ ಕಛೆರಿ ಶಿದ್ದಿ ಹಿಲಾಲ ಸಾಬಕು ನೌಕರಿ ಕಡಪಾ ೨ಕೆ ಸವಾರು ೧೮೦೦೦
೧ ಬಾರು ಕಛೆರಿ ಬದರ ಜಮಾಖಾನರ ಬಾರು ೬೦೦೦೦ ಪೈಕಿ ಗಡಿ ಜಾಡಿನಲ್ಲಿ ೨೦೦೦ ಜಾತಾಪಾಕಿ ಹಮರಹಾ ೪೦೦೦೦
೧ ಅಹಷಾಂ ಕಛೆರಿ ಪ್ಯಾದೆ ೨೦೦೦೦
೧ ಕಾಮಾಟಿ ಕಛೆರಿ ನಫರು ೬೦೦೦
೧ ಬಾಣದಾರ ಭುಜಂಗರಾವು ನಫರು ೨೦೦೦
೧ ಬೆಳ್ಳಿ ಬಾಲೆ ಕ್ರಿಷ್ಣರಾವು ನಫರು ೨೦೦೦
೧ ಖಲಾಶಿ ಲ ಚ್ಚಿ ದಾ ಮೂವರು ೪೦೦೦ ಗೊಲಂದಾಜ ಚಟೆಗಾರ ವಗೈರೆ
೧ ಮೂಗೆ ಲಾಲ ಫರಾಶೀ ಸಾಗೋರು ೨೦೦೦
೧ ಯಿಂಗರೇಜ ಜಾನಿಗೊರು ೫೦೦
೧ ಸವಣೂರು ಹಕೀಂಖಾನರ ಮಕ್ಕಳು ಜನ ೨ಕೆ ಸವಾರ್ರು ೨೦೦೦
೧ ಕಡಪೆ ಮೀರ ಅಲ್ಲಿ ರಜಾಖಾನರು ಸವಾರಿ ೬೦೦೦ ಬಾರು ೪೦೦೦ ಅಹಷಾಂಮು ೪೦೦೦
೧ ಹಬಶೀರು ೧೦೦೦
೧ ಅರಬಸ್ತಾನಿ ಜೂನಿ ೧೦೦೦
೧ ತೋಫು ೩೦೦ ಗರ್ನಲ್ ಮಕರ ಡಿಬ್ಬಿ ಬಾರುದುಗೊಲಿ ಬೆಷುವಾರು
೧ ಮೊದಿಖಾನೆ ತಾಲೊಕ್ಕು ಪರದೀ ಯತ್ತು ೧೨೦೦೦೦
೧ ಶೀವಮೆ ಕಂದಾಚಾರ ಪ್ಯಾದೆ ೮೦೦೦೦ ಪೈಕಿ ಹಮರಹ ೪೦೦೦೦
೧ ಪಲುಖಾನೆ ಆನೆ ೧೦೦೦
೧ ಸುತರ ಖಾನೆ ವಂಟೆ ೬೦೦೦
೧ ಶಿಪಾಯಿ ಮಹಲುದಾರ ಚೋಪದಾರ ಖಿಜ-ಮತ್ತುಗಾರ ಸರಾಫ ಗೊಲ್ಲ ವಗೈರೆ ಭೋಯಿ ಮಷಾಲತಿ ಮಂಚಾ ವಗೈರೆ ಅಲಾಯಿದಾ
೧ ಅಹಲೆಕಾರ ಪೆಷಾ ಅಲಾಯಿದಾ
೧ ಬಾಜಾರು
೧ ನಸುರುಲ್ಲಾ ಚಉದರಿ
೧ ವಲ್ಲಿ ಮಹಂಮದ ಚವುದರಿ
೧ ದೊಡ್ಡಬಾಜಾರದ ಮುಂನಾಶೆಟಿ
೧ ಮಂಡಿ ಬಾಜಾರದ ಗಂಗಣ್ಣ
೧ ಚಿಕ್ಕ ಬಜಾರದ ರಾಮರಾಯ
೧ ಶಿಪಾಯಿ ಪಾಳೆಗಾರು
೧ ಆನೆಗೊಂದಿ ೧ ಹರಪನಹಳಿ
೧ ಜರಮಲಿ ೧ ಮಟ್ಲೆವಾರು ವಗೈರೆ ಜಮಾಯತ್ತು ಸುದಾ ಸುಮಾರು ೧೫೦೦೦೦
೧ ಬ್ರಾಂಹ್ಮಣ ಹರೆಕಾರು
೧ ಶ್ಯಾಮೈಯ್ಯ ೧ ಸೂರನಾರಣೈ ನ ದಫೆ ನ ದಫೆ
೧ ಹಬಷಿ ತಿರು ೧ ಕನಕಗಿರಿ ಮಲ್ಲೆಯ
೧ ರಾಯದುರ್ಗ ೧ ಹಾವನೂರು
೧ ಶೇಷೈನ ದಫೆ ೧ ಸರಾಫ ಶ್ರೀನಿವಾಸೈಯ್ಯ
೧ ಸದಾಶಿವೈಯ ೧ ವೆಂಕಟಸುಬೈಯ ಯಿನ್ನೂ ಕೆಲವರು ಸಹಾ ಜನಾ ೧೦೦೦

ಜಹಸೂರೆ ಯಿಸಫನ ಮುಲಕ ಹರಿಸಿಂಗು ಜನ ೧೦೦೦ ಯೀ ಮ್ಯಾರೆಗೆ ಹೊರಡುವಾಗ್ಯೆ ಯಿಲಾಯಿತೀಯಲ್ಲಿ ಫರಾಷೀನರಿಗೂ ಯಿಂಗ್ರೇಜರಿಗು ಲಡಾಯಿ ಹತ್ತಿ ಆ ವಿವರ ಬಾತಮೀ ತರಶಿಕೊಂಡು ಫರಾಶೀನರು ಖುಷಿ ಮೇಲೆ ನವಾಬರಿಗೆ ಸಹಾಯವಾಗಿ ಜಹಜುಗಳಿಂದಾ ಫಉಜು ಬರುವಂತ್ತೆ ತಹಾಬಂಧಿ ಮಾಡಿಕೊಂಡೂ ಮರಾಟೀರ ಸಂಗಡಲೂ ಬಾಗಾನಸುದಲ್ಲು ದೋಸ್ತಿ ಮಾಡಿಕೊಂಡು ಅವರಿಗೆ ಕೊಡತಕ್ಕ ಕೆಲವು ಹಣಗಳು ಜವಾಹಿರು ವಗೈರೆ ಕೊಟು ಅಲ್ಲಿನ ವಕೀಲರನ ಸಹಾ ಹರದೊ ಜಾಗಾದಲ್ಲಿ ಯಿಟು ದಿಳ್ಳೀಯಲಿ ವಕಾಲತ್ತಿನ ಬಗ್ಯೆ ನರಶಿಂಹ್ವದಾಸನ ಮಗ ಬಾಲ ಮುಕುಂದ ದಾಸರನ ಕಳುಹಿಸಿ ಯಿಂಗ್ರೆಜ ಬಹದರರ ಸಂಗಡ ಲಡಾಯಿ ಮಾಡುವ ಬಗ್ಯೆ ಮೊದಲು ಮೊರಾಟೇರ ಅನುಮತಿ ಮಾಡಿಕೊಂಡು ಮೊಹಿಂ ಹೊರಟರು.

ಶಾರ್ವರಿ ಸಂವತ್ಸರದ ಆಷಾಡ ಶುದ್ದದಲ್ಲು ಶಿಂಗರಪಟ್ಟಿ ಬಳಿ ಫಉಜಿಗೆ ಹುಕುಂ ಮಾಡಿದ ವಿವರ. ದರೊಬಸ್ತು ಫಉಜು ಖಾಸಾಹಮರಹ ಯಿರುವ ಹಾಗೂ ೨೦೦೦೦ ಕುದುರೆ ಮಾತ್ರ ವಿಂಗಡಿಶಿಕೊಂಡು ಆರ್ಕಾಡು ತಿರಚನಾಪಲ್ಲಿ ಮಧುರಾ ಚಂಗಲಪಟ್ಟು ಮಹಂಮದ ಬಂದರ ಜವಾಹಿರು ಬಂದರ ಮತ್ಸಲಿ ಒಂದರ ನೆಲ್ಲೂರು ಸರ್ವಪಲ್ಲಿ ತಂಜಾವೂರು ಕುಂಭ ಕೋಣಾ ಬಿದನೂರು ಚಂನಪಟಣ ವೇಲೂರು ಫುಲಚೆರಿ ಆದಿಯಾಗಿ ರಾಮೇಶ್ವರದ ಬಾಗಿಲು ಪರಿಯಂತ್ರ ಯಾವತ್ತು ಶೀಮೆ ಯೀ ವಂದೇ ದಿವಸ ಶುಕ್ರವಾರ ಯೇಕ ಮೂಹೂರ್ತದಲ್ಲಿ ಲೂಟಿಶಿ ತರಾಜು ಮಾಡುವಂತ್ತೆ ನೆಮಕಾ ಮಾಡಿಶಿ ಫಉಜು ರವಾನೆ ಮಾಡಿ ಪರಂಗೇರ ಫವುಜು ತಿರುಚನಾ ಪಲ್ಲಿ ಯಿಂದ್ದಾ ಸರಕಾರದ ಶೀಮೆಮೇಲೆ ಬಾರದಂತೆ ತಡೆ ಯಾಗಿ ಕರೂರು ಬಳಿ ತೈನಾತಿ ಯೀಸಲು ಶ್ಯಾಮರಾವು ಮಗ ಬಲವಂತರಾವು ಕುದುರೆ ೫೦೦ ಶಂಖಗಿರಿ ಕಿಲ್ಲೆದಾರ ವುಸುಮಾಲ ಖಾನ ತರಿನಫಡಮತ್ತಿ ಕಿಲ್ಲೆದಾರ ವಗೈರೆ ಜಮಾಯತ್ತು ಸಹಾ ಯಿರುವ ಹಾಗೂ ತಲಚೆರಿ ಕಿಲ್ಲೆಗೆ ಬೆಡಾಹಾಕಿ ತೆಗೆದುಕೊಂಬಂತ್ತೆ ಕಲ್ಲಿಕೋಟೆ ಸರದಾರಖಾನರಿಗೆ ಫರವಾನೆ ಕಳುಹಿಶಿ ಕುಂಭ ಕೋಣದ ಕಡೆ ಕೆಲವು ಫವುಜು ಸುದಾ ಬಾರಾಮಹಲು ಹರಿದಾಸ್ಯೆಯ್ಯನ ಕಳುಹಿಸಿ ನೆಲ್ಲೂರು ಸರ್ವಾಪಲ್ಲಿ ಕಡೆಗೆ ಕೆಲಉ ಫವುಜು ಸುದಾ ಸವಾರ ಕಛೆರಿ ಮುತ್ಸದ್ದಿ ಲಾಲಾಥ ಬಿಲ್ಲೆರಾಮನ ರವಾನೆ ಮಾಡಿ ಗುರಂಕೋಟೆ ಯಿಂದ್ದಾ ಚಿತ್ತೂರು ಮಾರ್ಗವಾಗಿ ಮೀರ ಅಲ್ಲಿ ರಜಾಖಾನರು ಬರುವಂತೆ ಫರವಾನೆ ಬರಶಿ ಕಳುಹಿಸಿ ಚಂಗಮಾವು ಮೊಳೂರು ತಿರುಣಾಮಲೆ ಆರಣಿ ತಿಮರಿ ತೆಗೆದುಕೊಂಡು ಆರ್ಕಾಡಿಗೆ ಮುತ್ತಿಗೆ ಯಿಳಿದರು.

ಈ ಸುದ್ದಿ ಕೇಳಿ ಚಂನಪಟ್ಣದಿಂದ್ದಾ ಮಮದಲ್ಲಿ ಖಾನರು ಪಿಂಣಾಜಿ ಪಂತರು ಹೊಡೆತಕ್ಕೆ ಹಾಕಿದರು. ಚಂನ್ನಪಟ್ಣದಿಂದ್ದಾ ಕರ್ನಲ್ ಮಂಡ್ರೊಲ ಕೆಲವು ಫವುಜು ಸುದಾ ಹೊರಟು ಶಿವಾಯಿ ಬೊಂಬಾಯಿಂದ್ದಾ ಮೈಫಉಜು ಸುದಾ ಹೊರಟು ಕರ್ನಲ್ ಬೆಲಿ ಸುದಾ ಆರ್ಕಾಡಿಗೆ ಕುಮುಕ್ಕು ಬರುವ ಶುದ್ಧಿ ಕೇಳಿ ಅವರ ತಂಬೀ ಬಗ್ಯೆ ಕೆಲಊ ಫವುಜು ಸುದಾ ಟೀಪುಸುಲತಾನರ ಕಳುಹಿಸಲಾಗಿ ಯಿವರನ ಲೆಖ್ಖಿಸದೆ ಬೆಲಿ ದಂಡು ಮುಂದೊತ್ತಿ ಕಂಚೀ ಬಳಿ ಯಿಳಿದಿದ್ದ ಮಂಡ್ರೊಲನ ಫವುಜಿಗೆ ಮಿಲಾಯಿಸುವದಾಗಿ

ಬರುವ ಸುದ್ದಿ ರಾತ್ರೆ ಷುತರ ಸವಾರ ಹಮರಹ ಸುಲತಾನರ ಅರ್ಜಿ ಬರುತ್ತಲೆ ತಕ್ಷಣ ಆರ್ಕಾಡು ಮುತ್ತಿಗೆ ತೆಗದು ಖಾಸಾ ಹೋಗಿ ಬೇಲಿ ದಂಡು ಘೇರಾಯಿಸಿ ಖಾಸಾ ದುರ್ಬಿನಿನಿಂದಾ ನೋಡಿ ಬೇಲಿ ಬಾರು ದುಪಟಿಗಳಿಗೆ ತೊಫುಗಳು ಬಾಂಗಳು ಸುದಾ ಹೊಡದು ಫುಟಿಗಳು ಸುಟು ಸಂಗಡಲೆ ಕುದುರೆಗಳ ಚಲಾಯಿಸಿ ಪರಂಗೇರ ದಂಡು ಹೊಡದು ಮುಳುಗಿಶಿ ಬೆಲಿಯಂನ್ನು ಕೈಶೆರೆ ಹಿಡಿದು ಪಟ್ಣಕೆ ಸಾಗಿಶಿ ಮಂಡ್ರೋಲಿನ ಫವುಜಿನ ಮ್ಯಾಲೆ ತಿರುಗುತ್ತಾಲೆ ಅವನು ಚಂನಪಟ್ಣದ ಮಾರ್ಗ ಹಿಡಿದು ಫರಾರಿ ಆಗಲಾಗಿ ಬೆಂನ್ನಟ್ಟಿ ಬಹಳ ದೂರಾಶಿಕ್ಕಿದ ಸಾಮಾನೆಲ್ಲಾ ಲುಟಾಯಿಶಿ ಹಿಂತಿರುಗಿ ಆರ್ಕಾಟಿಗೆ ಬಂದು ಫುನಹಾ ಮೊರ್ಚೆ ಹಾಕಿದರು.

ಆರ್ಕಾಡು ಬಳಿ ಯರಡು ಮೂರು ತಿಂಗಳು ಬಹಳ ಲಡಾಯಿ ಆಗಿ ನವಾಬರ ಅಳಿಯ ಅಫೀಜಲ್ಲಿ ಖಾನರು ತೊಪಿನ ಗುಂಡಿನಿಂದ್ದಾ ಪಾರಾಗಿ ಶಾರ್ವರಿ ಸಂವತ್ಸರದ ಮಾರ್ಗಶರ ಶು ೨ ಮಂಗಳವಾರ ಆರ್ಕಾಡಂನ್ನು ಹಲ್ಲಾದ ಮ್ಯಾಲೆ ತೆಗೆದುಕೊಂಡು ಸಾಬಕು ಸರ್ವಜಿತ್ತು ಸಂವತ್ಸರದಲ್ಲಿ ನವಾಬರ ಸವಾರಿ ಬಂದಾಗಾ ಆರ್ಕಾಡ ಶಹರು ಲೂಟಿಶಿದ್ದರಿಂದ್ದಾ ಯೀಚೆಗೆ ಅಚ್ಚಂಣ ಪಂಡಿತನೂ ಷಹರು ಸುತ್ತಾ ಜಂಬಿಟ್ಟಿಗೆ ಗಚ್ಚಿನಿಂದಾ ಭಾರಿ ಶಹರು ಪನಾಕಟ್ಟಿ ವೇಲೂರು ದರವಾಜೆ ಮಾಂಗಾದ ದರವಾಜೆ ದಿಳ್ಳಿ ದರವಾಜೆ ರಾಯಜೀ ದರವಾಜೆ ಯೀ ಮ್ಯಾರೆ ಹೆಸರುಗಳ ಯಿಟ್ಟು ಬಹು ಮಜ ಬೂತಾಗಿ ಯಿದ್ದದನ್ನು ರಾಯಜೀ ದರವಾಜೆ ಬಳೀ ಹಲ್ಲಾಮಾಡಿ ತೆಗೆದುಕೊಂಡು ರಾಜಾ ಬಹದರ ಅಚಂಣ ಪಂತರನ್ನು ಮಹಂಮದಲ್ಲಿ ಕುಮುಂದಾರನ್ನು ಕರತಂದು ಬಾಲಾಜೀ ನಗರದ ಬಳಿ ನದೀಕಿನಾರೆ ನವಾಬರ ಭೇಟಿ ಮಾಡಿಸಲಾಗಿ ಕೂಡಲೆ ಶಹರು ಪನೆವಳಿಕ್ಕೆ ಸವಾರಿ ಬಂದು ಸಾತುಲ್ಲಾ ಖಾನರ ದೇವಡೀಯಲ್ಲಿ ಯಿಳಿದು ಶಹರಿನಲ್ಲಿ ಯಿರುವ ವಳಕಿಲ್ಲಿಯಲ್ಲಿ ಶೆರೆಯಿದ್ದ ಅಬ್ದುಲ್ ರಶೀದ ಖಾಂನ್ ದಿವಾನಿ ಅಲಾನಬೆ ಮಾದ ಬಡೆಬಾಯಿ ನಜೀಬಿಖಾನರ ರಾಯಜೀ ಅಂಣಾಜೀ ಪಂತರ ಕಾಲಿನ ಮ್ಯಾಲೆ ಯಿಳಿಶಿ ಚಂನ ಪಟ್ಣಕೆ ರವಾನೆ ಮಾಡಿ ಆರ್ಕಾಡ ಠಾಣೆ ಬಲಿಕಾವು ಮಾಡಿ ದೊಬೀಗಡಾ ಚಂಬಾರಗಡಾ ಕೈಲಾಸಗಡಾ ಸಾತಗಡ ಚೊಳಂಗೆರೆ ಮಹಿಮಂಡಲಾ ತಲಕಾವೇರಿ ಪಾಕ ತಿರುತಾನೂರ ತಿರವಾತುರ ತಿಂಡಿವನ ತಿರಕಾಟ ಫೂತ್ತೂರು ಕಳಸಾಪಾಕ ಚಿದಂಬರ ಮಂನಾರಗುಡಿ ಕರ್ನಾಟಗಡ ಅಂಬೂರಗಡ ಚಂಚಿ ಚೆತ್ತಪಟ್ಟಿ ವಗೈರೆ ಶೀಮೆ ಯಾವತ್ತೂ ಠಾಣೇಗಳ ಹಾಕಿಸುತ್ತಾ ಆರ್ಕಾಡದಲ್ಲಿ ಮೊತ್ತಾಬು ಕಾಯಿದೆ ಮ್ಯಾರೆ ದುತರ್ಫು ಅಂತಸ್ತುಗಳ ಅಂಗಡಿಗಳ ಕಟಿಸುತ್ತ ಆರ್ಕಾಡು ಸುಭೆ ಮೊದಲಿನಂತ್ತೆ ಅಚಂಣ ಪಂತರಿಗೆ ನೇಮಕಾ ಮಾಡಿ ಫೂಲ ೨೦೦೦೦೦ ವರಹಾ ಖಂಡನೆ ಮಾಡಿ ಯೀತನೆ ದರ್ಮಹಾ ೧೦೦೦೦ ವರಹಾ ಅಲಖಾಬು ಮಾಡಿ ಲಾಯಖುಲ್ಲಾ ಯಿನಾಯತವಯ ಹಸಾನ ರಾಜಾ ಬೀರಬಲ್ಲ ಮರವರದ ಮರಹಿ ಫುಟಾಷಂದ ಯಂಬದಾಗಿ ಫರವಾನೆ ಬರೆವ ಖಾಯಿದೆ ಸಹಾ ಮಮದಲ್ಲಿ ಖಾನರು ನಡೆಸುತ್ತಿದ್ದ ಪ್ರಕಾರ ನೇಮಕಾಮಾಡಿ ಸರಫರಾಜು ಮಾಡಿದ್ದರಿಂದ್ದಾ ಯೀತನ ಕಡೆ ಅಮೀಲರು ವೆಂಗಟ ರಂಗೈಯ ನಾಮಲಿಂಗ ರಾಮಾಜೀ ಶ್ರೀನಿವಾಸರಾಯ

ಜೊಗಿ ಪಂತ ವಗೈರು ಬಂದು ಸರಕಾರದಲ್ಲಿ ರುಜುವಾದರು. ಬೆನ್ತೆಯರು ಖಾನಾ ಜಸಂ ನಾಥ ಪಂತಾ ಮೀರ ಅಸುದುಲ್ಲಾಖಾನರ ಮಗ ಸೈದ ಮಹಂಮದ ಖಾನ ವೆಂಕಟೇದಾಸ ವಗೈರೆ ಆರ್ಕಾಡಲ್ಲೆ ಹಸ್ತಗತವಾಗಿ ನಿಂತರು.

ಆವಾಗಾ ಮಹಂಮದಲ್ಲಿ ಖಾನರ ತಂಮ್ಮ ಅಬ್ದುಲ್ ವಹಬ ಖಾನರು ಮಯಬಾಬಸ್ತು ತಂಮ್ಮ ಜಹಗೀರಿ ಚಿತ್ತುರಲ್ಲಿ ಯಿದ್ದ ಕಾರಣಾ ಮೀರ ಅಲ್ಲಿ ರಜಾಖಾನರು ಮಮದಲ್ಲಿ ಕುಮುಂದ್ದಾನರ ಸಹಾ ಹೋಗಿ ಚಿತ್ತೂರು ಠಾಣೆ ಹಾಕಿ ಯಿವರನ ಆರ್ಕಾಡಿಗೆ ಹಿಡಿತಂದು ಪಹರೆ ಹಾಕಿ ಪಟ್ಣಕ್ಕೆ ರವಾನೆ ಮಾಡಿದರು.

ಆ ಬಳಿಕ ಯಿದೆ ಮೀರ ಸಾಬರು ಕುಮುಂದಾರ ಮಜಕೂರನ ಸಹಾ ವೆಲೂರಿಗೆ ಮುತ್ತಿಗೆ ಹಾಕಿ ಯಿರುವಲ್ಲಿ ವಿ(ಲಾ) ಯಿತಿಯಿಂದ ಕರ್ನಲ್ ಕೊಟಯಂ (ಬ) ಯಿಂಗ್ರೆಜಿ ಸರದಾರನು ಭಾರಿ ಫಲುಜಿನಿಂದ್ದಾ ಚಂನಪಟ್ಣಕ್ಕೆ ಜಹಜಿನ ಮ್ಯಾಲೆ ಬರು ವರ್ತಮಾನ ತಿಳಿದು ನವಾಬರು ಆರ್ಕಾಡಿನಿಂದ್ದಾ ಹೊರಟು ಸದರಹೂ ಮುತ್ತಿಗೆ ತೆಗೆದು ವೇಲೂರು ಬಳಿ ಠಾಣೆಯಿದ್ದ ಫವುಜಂನ್ನು ತೆಗೆದುಕೊಂಡು ವೆಲೂರಿಗೆ ರಫ್ತು ಮುಸ್ತೈದೆ ಬಾರದಂತೆ ಸುತ್ತಲೂ ಸವಾರಿ ಬಗ್ಗೆ ಸಯಾಜಿ ಸಾಳಂಕಿ ಸೈದ ಇವರು ಸ ಯರಡು ರಿಸಾಲೆ ಸವಾರಂನ್ನು ಯಿಟು ಅವರಿಗೆ ಆ ಶೀಮೆ ಪಾಳೆಗಾರು ತಂಮಲ್ಲಿ ರುಜುವಾಗಿದ್ದ ಕಾಳಹಸ್ತಿ ಬಂಮ್ಮರಾಜ ಮೊಗರಾಲ ವಗೈರೆ ಜಮೀಯತ್ತು ಸುದಾ ಮಹಂಮದ ಬಂದರದ ಬಳಿಗೆ ಹೊರಟು ಆರ್ಕಾಡ ಕಿಲ್ಲೆದಾರಿ ಅತ್ತಿ ಪಾಷಾಖಾನರಿಗೆ ನೇಮಿಶಿ ಕೆಲವು ಫವುಜು ಸುದಾ ಮೀರಮಹಂಮದ ಸಾದಕರನ ಆರ್ಕಾಡಲ್ಲಿ ಖುದ್ದು ಮೊಖ್ತ್ಯಾರಿ ಕೊಟು ನಿಲ್ಲಿಶಿ ಹೊರಟು ಹೋದರು.

ಶಖೆ ೧೭೦೩ನೆ ಪ್ಲವ ಸಂವತ್ಸರದ ಆಷಾಡ ಮಾಸದಲ್ಲು ಮಹಂಮದ ಬಂದರದ ಬಳಿ ಯಿಂಗ್ರೇಜೀ ಕೂಟದ ಫಲುಜಿಗೂ ನವಾಬರ ಫವುಜಿಗೂ ಬಹಳ ಲಡಾಯಾಗಿ ಫರಂಗಿ ದಂಡು ಮುಳುಗುವ ವ್ಯಾಳೆಯಲ್ಲಿ ತ್ವರ್ಯಪಟ್ಟು ಜಾಹಿರುಮಾಡಿ ಮರಳಿನಲ್ಲಿ ಕುದುರೆಗಳ ಛಲಾಯಿಸಿದರಿಂದ ಕುದುರೆ ಕಾಲು ಶಿಕ್ಕಿಕೊಂಡು ಯದುರಿಗೆ ಬಂದು ನೀರು ಮ್ಯಾಲೆ ಜಹಜುಗಳಿಂದಾ ಸಹಾ ಪರಂಗೆರ ತೊಫು ಬಂದೂಕುಗಳು ಸಲಖಿನಿಂದಾ ಬಹುಜನ ಕುದುರೆಗಳು ಕಡಪೆ ಮೀರ ಅಲ್ಲಿ ರಜಾಖಾನರು ಯಿವರ ಹಿರೀಮಗ ಸವಾರ ಕಛೆರಿ ಬಕಷಿ ಶಿದ್ದಿ ಹಿಲಾಲ ವಗೈರೆ ಹತವಾಗಿ ನವಾಬರ ಪವುಜು ಪೆಟು ತಿಂದು ಕಿನಾರೆ ಯಾದ್ದರಿಂದಾ ಕರ್ನಲ್ ಕೂಟನ್ನು ಪಟ್ಣದ ಫಲುಜಿನ ಮ್ಯಾಲೆ ಬೀಳುವುದಕ್ಕೆ ಶಕ್ತಿ ಸಾಲದೆ ಚಂನಪಟ್ಣದ ಮಾರ್ಗ ಹಿಡಿದು ಹೊರಟು ಹೋದನು.

ಪಟ್ಣದ ಕಿಲ್ಲೆ ಪಾಲಖಾನರ ದುಯಂ ಮಾಡಿ ಶೆಖದಿ ತಾಲ ಚೆರಿಗೆ ಕಿಲ್ಲೆದಾರಿ ಕೊಟು ಕಳುಹಿಸ್ತರು.

ಅವರಿಗೆ ನವಾಬರು ಮುಮದಲ್ಲಿ ಖಾನರ ಶೀಮೆ ಯಾವತ್ತು ಠಾಣೆ ಹಾಕಿ ತೊರೆಯೂರು ಚಿದಂಬರ ವಗೈರೆ ಮುಗುವಳೀ ನಿಗದಿ ಮಾಡುತ್ತ ಯಿರುವಾಗ್ಯೆ ಮುಮದಲ್ಲಿ ಖಾನರಿಗೆ ನಿಂತು ಯಿದ್ದ ಗತಿಗಳ ವಿವರ.

೧ ಚಂನಪಟ್ಣದ ಕಿಲ್ಲೆ	೧ ತಂಜಾವೂರು	೧ ನೆಲ್ಲೂರು ಸರ್ವಾಪಲ್ಲಿ
೧ ಮಧುರೆ	೧ ತಿರಚನಾಪಲ್ಲಿ	೧ ನಸರಕ ಗಡ
೧ ವೇಲೂರು	೧ ವಂದವಾಶಿ	೧ ಜವಾಹಿರ ಬಂದರ
೧ ಚಂಗಲಪಟ್ಟು	೧ ಮಹಂಮದ ಬಂದರ	೧ ಮತ್ಸಲ ಬಂದರ

೧೨ ಯಿಷ್ಟೆ ವಿನಹಾ ಶೀಮೆ ಯಾವತ್ತು ನವಾಬರ ಠಾಣೆ ಆಗಿತ್ತು.

ಆ ಬಳಿಕ ಚಂನಪಟ್ಣದಿಂದಾ ಕೆಲವು ಫವುಜು ಸುದಾ ಕರ್ನಲ್ ಮಕಳೀಸರು ಬರಲಾಗಿ ವಂದವಾಶಿ ಬಳಿ ಲಡಾಯಿ ಆಗಿ ಆ ಫವುಜು ಮುಳುಗಿಶಿ ಮಕಳೀಸರನ ಕೈ ಶೆರೆ ಹಿಡಿದು ಬೆಂಗಳೂರಿಗೆ ರವಾನೆ ಮಾಡಿದರು.

ಸವಾರ ಕಛೆರಿ ಶಿದ್ದಿ ಹಿಲಾಲರ ಅತ್ಯೆವಜಿ ಚಿತ್ರಕಲ್ಲು ಸಲಾಬತ್ತು ಖಾನರಿಗೆ ಬಕಷಿಗಿರಿ ಆಯಿತು.

ಕಂದಾಚಾರ ಕಛೆರಿ ಬಕಷಗಿರಿ ಮೊಖಲಿನ ಅಲ್ಲಿಖಾನರಿಗೆ ಅವಲು ದುಯಂಮಿಗೆ ಮಹಂಮದ ಮಹದೀ ಶೀಯಂಮಿಗೆ ಹೊಂನರ ಹುಸೇನ ವಗೈರೆ ಆರೇಳು ಜನಕ್ಕೆ ಮೊಕರೂರು ಆಯಿತು.

ಮಹಲಾತಿ ಕಛೆರಿಗೆ ಮೀರಸಾದಕರು ಆರ್ಕಾಡಲ್ಲಿ ನಿಂತು ಮಹಂಮದ ಸಾದರು ಮೇಲು ಶೀಮೆ ವಿಚಾರಣೇಗೆ ಗಡಿಗಳ ಮ್ಯಾಲೆ ಹೋಗಿ ಬೊಕ್ಕಸದ ವೆಂಕಟಪತ್ಯೆಯ್ಯ ವಗೈರೆ ಕಣಿವೆ ಕೆಳಗಣ ಶೀಮೆಗೆ ಹೋಗಿ ಅಂಚ್ಜೆ ವಂಗ್ಯೆಯ್ಯ ಪಟ್ಣದಲ್ಲಿ ಮುಸ್ತಾಫಾಲಿ ಖಾನರ ಬಳಿ ಶೀಮೆ ವಿಚಾರಣೆಗೆ ನಿಂತು ಹಜೂರಲ್ಲಿ ಯಾರೂ ಇಲ್ಲದೆ ನಜೀಮುದ್ದಿಖಾನರಿಗೆ ತನ್ಯೆರಾಗಿ ಯಿವರ ಹಿರೀಮಗ ಸೈದ ಬದೀಯುದ್ದಿಖಾನರೆಂಬವರಿಗೆ ಮೊಕರೂರು ಆಗಿ ಕಛೆರಿ ಸುಬ್ಬರಾವು ಜನ ೧ ಪುಟ್ಟೆಯ್ಯನ ಮಗ ೧ ನಂಜ್ಯೆಯ್ಯನ ಜನ ೧ ಚಂನಸಮುದ್ರದ ನಾರಣಪ್ಪನ ಜನ ೧ ಅಂಚ್ಜೆ ರಂಗ್ಯೆಯ್ಯನ ಗುಮಾಸ್ತೆ ವೆಂಕಟರಾವು ಜನ ೧ ಶಿಟಿನ ದ್ಯಾವರ ಮಗ ಪುಟ್ಟೆಯ್ಯನ ಜನ ೧ ಸಹಾಯಿಟುಕೊಂಡು ಅಂಚ್ಜೆ ಶ್ಯಾಮ್ಯೆಯ್ಯನೆ ಯಾವತ್ತೂ ಆಡಳಿತಾ ಮಾಡುತ್ತಾ ಯಿದ್ದನು.

ಪ್ಲವ ಸಂವತ್ಸರದ ಕಾರ್ತಿಕದಲ್ಲು ತಲಚೆರಿ ಮುತ್ತಿಗೆ ಯಿರುವ ಫವುಜಿನ ಮ್ಯಾಲೆ ಫರಂಗೇರ ಜಹಜುಗಳು ಬಂದು ಶಭತೂನು ಮಾಡಿ ಸರದಾರಖಾನರನ ಜಗಳದಲ್ಲಿ ಕೈಶೆರೆ ಹಿಡಿದು ಜಖಮುಗಳ ಪಟ್ಟಿ ಕಟ್ಟಿದಲ್ಲಿ ಆತನು ರೋಷದಿಂದ್ದಾ ಯಿನ್ನುಮ್ಯಾಲೆ ಬದುಕಿ ನವಾಬರಿಗೆ ಮೊಖಾ ತೋರಬಾರದು ಯಂದ್ದು ಘಾಯಗಳ ಕಿತ್ತುಕೊಂಡು

ಪ್ರಾಣತ್ಯಾಗ ಮಾಡಿದ್ದರಿಂದಾ ಆತನ ಹೆಂಡತಿ ಮಕ್ಕಳನ ಪಟ್ಣಕೆ ರವಾನೆಮಾಡಿ ಯಿಂಗ್ರೇಜರು ಕಲ್ಲಿಕೋಟೆ ಠಾಣೆ ಹಾಕಿದರು. ಯೀ ಸುದ್ದಿ ನವಾಬರು ತಿಳಿಯುತ್ತಲೆ ಕೆಲವು ಫವುಜು ಸುದಾ ತಂಮ್ಮ ಭಾವ (ಮೈದ) ಮೈದ ಮಕದುಂ ಅಲ್ಲಿಖಾನರನ ಕಲ್ಲಿಕೋಟೆಗೆ ಕಳುಹಿಸಲಾಗಿ ಯಿವರು ಪಾಲಘಾಟ ಕಛೆರಿ ದಾಟಿ ಆ ಮುಂದೆ ಹೋಗಿ ಕೆಲವು ಶೀಮೆ ಸಾದಿಸುತ್ತ ನಾಯಿಮಾರರ ಹೆಂಣುಗಳ ಲೊಲೊಪ್ಟಿಯಲ್ಲಿ ಯಿದ್ದು ರಾತ್ರಿವ್ಯಾಳೆ ನಾಯರು ಮಾಪಿಳೆರು ಸಹಾ ಷಬತೂನ್ನು ಮಾಡಿ ಹೊಡದು ಖಾನ ಮಜಕೂರಿನ ತೆಲೆಕ್ಕ್ಯೊದು ತೆಗೆದುಕೊಂಡು ಹೋದರು.

ಅಲ್ಲಿಂದಾ ನಾಯರು ಮಾಪಿಳೆರು ಸಹಾ ಗುಂಪಾಗಿ ಪಾಲಘಾಟೀ ಕಛೇರಿ ಬಳಿಗೆ ಶೇರುತ್ತಲೆ ಡೆಂಕಣಿಕೋಟೆ ಶಿದ್ದ ರಾಜೈಯ್ಯನ ಸಾಬಕು ಫರಂಗೇರಲ್ಲಿ ಷಾಮೀಲಾದನೆಂದು ಗಲ್ಲುಹಾಕಿಶಿ ಆ ಬದುಕು ಶೇಕು ಯಿಭರಾಯಮನೆಂಬುವನಿಗೆ ಕೊಟು ಯಿತ್ತಾಗಿ ಆತನ ಮಗ ಆ ಶೇಖು ಯಿಬರಾಯಮನ ಮಗನ್ನು ಕೆಲವು ಜಿಮಿಾಯತ್ತು ಸುದಾ ಪಾಲಗಾಟಿನ ಬಳಿ ಮರ್ದಮೀ ಮಾಡಿ ನಿಂತ್ತು ನಾಯರು ಮಾಪಿಳೆರುನೆಲಲಾ ಹೊಡದು ಹಿಂಮೆಟಿಶಿದರು.

ತಿರುಚನಾಪಲ್ಲಿಯಿಂದ್ದಾ ಕೆಲವೂ ಗೊರಾಬಾರು ಯರಡು ತೋಫು ಸುದಾ ಹೊರಟು ಕರೂರು ಶೀಮೆ ಮ್ಯಾಲೆ ದೌಡು ಬರಲಾಗಿ ಬಲವಂತ ರಾಯನು ಕುದುರೆ ಯಿಂದಾ ಲಾಂಟಿನಲ್ಲಿ ಹೊಕ್ಕು ಬಹುಜನ ಹೊಡದು ಪತ್ತೆಮಾಡಿ ಅಷ್ಟರಲ್ಲೆ ತಂನ ಬಲದ ಕಿವಿಯ ಬಳಿಯಣ ತಲೆಬುರುಡೆ ಕೊರದು ಬಂದೂಖಿನ ಗೋಲಿ ಜಖಂ ಆದ್ದರಿಂದಾ ಘಾಯ ಸೊಕ್ಕಿ ಕಡೂರು ಬಳಿಗೆ ಹೊತ್ತು ತರುವಾಗ್ಯೆ ಪಟ್ಣದಲ್ಲಿ ಆತನ ಹೆಂಡತಿ ದೈವಾಧೀನವಾದಳೆಂಬ ವರ್ತಮಾನ ಬರುತ್ತಾಲೆ ಯೀ ವಿವರವೆಲ್ಲಾ ಹಜೂರಿಗೆ ಅರ್ಜಿ ಬರಿಯಲಾಗಿ ಫುನಹಾ ಆ ಬಲವಂತರಾಯಗೆ ಫರಮಾನೆ ಬಂದ ವಿವರ. ನೀನು ಸರಕಾರದ ಖೈರುಖಾನೆಯಲ್ಲಿ ವಂದಕ್ಕೂ ಚಿಂತೆ ಮಾಡ ಕೆಲಸವಿಲ್ಲಾ. ಸಾಬಕು ಚಿತ್ರ ಕಲ್ಲು ಬಳಿಯಣಿಂದ್ದಾ ಕಲ್ಲಿಕೋಟೆ ಮೊಹಿಂಮ್ಮಿಗೆ ನಿನಗೆ ನಾವು ಅಪ್ಪಣೆ ಕೊಟು ಕಳುಹಿಸಿ ಯಿದ್ದಾಗ ನೀನು ಬಹಿರ ವಂದು ಕಡೆ ಭಾರಿ ಬಳೀಯಲ್ಲಿ ನಿಲ್ಲಿಶಿ ಮಾಪಿಳೇರ ಮ್ಯಾಲೆ ಲಡಾಯಿಗೆ ಹೋದ ವ್ಯಾಳೆಯಲ್ಲಿ ನಾಯರು ಮೊಗದಿಂದಾ ಬಹಿರಿನ ಮೇಲೆ ಬಂದು ಬೀಳುತ್ತಲೆ ನಿಂನ ಹೆಂಡತಿ ಸವಾರಳಾಗಿ ಯರಡು ಕೈಗೂ ಪಟಾ ಯೇರಿಶಿಕೊಂಡು ಹೊರಡಲಾಗಿ ಸಂಗಡ ಕೆಲವ್ರ ಜನರು ಗುಂಪುಕೂಡಿ ಆ ದಿವಸ ನಾಯರನೆಲ್ಲಾ ಹೊಡೆದು ನಿಂನ ಹೆಂಡತಿ ಪತೆಮಾಡಿದ್ದರಿಂದಾ ಆಕೆ ನಂಮ ಮಗಳು ಯಂದು ಖಿಲ್ಲಿತ್ತು ಜವಾಹಿರು ಯಿನಾಮು ವಗೈರೆ ಬಹಳವಾಗಿ ಕೊಟು ಯಿನಾಯತನಾಮಾ ಸುದಾ ಕಳುಹಿಸಿ ಯಿಧೆವೆಯಾಗಿ ಆಕೆ ತೀರಿಹೋದ ಸಂಗತಿ ನಂಮ ಮನಶ್ಶಿಗೆ ಬಹಳ ವ್ಯಾಕುಲವಾಯಿತು. ಆದಾಗ್ಯೂ ದೈವಗತಿಗೆ ಮಾಡತಕ್ಕದ್ದೇನು. ಯೀಗ ನಿಮಗೆ ಜಖಂ ಪಟಿಗೆ ೧೦೦೦ ರೂಪಾಯಿ ನಿಂಮ್ಮ ಮದುವೆ ಬಗ್ಗೆ ೩೦೦೦ ರೂಪಾಯಿ ತೊಡೆಖಿಲತ್ತು ಸಹಾ ಕಳುಹಿಸಿ ಯಿಧೇವೆ. ತೆಗೆದುಕೊಂಡು ಶೀಗ್ರ ಜಖಂ ಚಂನಾಗಿ ವಾಶಿ ಮಾಡಿ ಮದುವೆ ಮಾಡಿಕೊಂಡು

ಆ ವರ್ತಮಾನಾ ನಮಗೆ ಅರ್ಜಿ ಬರೆಯುವದೂ ಯಂದು ಬುದ್ಧಿ ಘರವಾನಾ ಸಾದರಾಯಿತು.

ಯೀ ಮಧ್ಯೆ ಚೆಂನ್ನಪಟ್ಣದಿಂದಾ ಯಿಂಗರೇಜರ ಫವುಜು ನೆಲ್ಲೂರು ಸರ್ವಾಪಲ್ಲಿ ಕಡೆ ಬಂದದ ತಿಳಿದು ಲಾಲಾಧ ಕಿಲ್ಲೆರಾಮಗೆ ಕುಮುಕಾಗಿ ಸುಲತಾನರ ಕಳುಹಿಸಲಾಗಿ ಯಿವರು ಅಲ್ಲಿಗೆ ಹೋದ ಧಮಿಕಿಗೆ ಯಿಂಗ್ರೇಜರ ಫವುಜು ಮೊಕಾಬಿಲೆಗೆ ಬಾರದೆ ಹಿಂತಿರುಗಿ ಹೋಯಿತು.

ಶಖೆ ೧೭೦೩ನೆ ಪ್ಲವ ಸಂವತ್ಸರದ ಮಾರ್ಗಶಿರ ಪುಷ್ಯದಲ್ಲಿ ಆರ್ಕಾಡಲ್ಲಿ ಯಿದ್ದ ಅಚ್ಚಂಣಪಂಡಿತರ ಹೆಂಡತಿ ಮಕ್ಕಳು ವೆಂಕಟದಾಸೈಯ್ಯ ವಗೈರೆ ಸಾಹುಕಾರರು ಆರಣೀ ಪಾಳ್ಯೆಗಾರ ಕೆಲವು ಮುಸಲಮಾನರು ಯಿವರ ಕುಟುಂಬ ಮಕ್ಕಳು ವಗೈರೆ ಬೆಂಗಳೂರಿಗೆ ಪಟ್ಣಕೆ ಸಹಾ ರವಾನೆ ಮಾಡಿದ್ದರಿಂದಾ ಅಚ್ಚಂಣಪಂತರು ದಿಲ್ಲಿರುಯಾಗಿ ದೇಹಕ್ಕೆ ಸ್ವಸ್ತಿವಿಲ್ಲವೆ ಮಲಗಿ ಸದರಿಮಾಸಗಳಲ್ಲಿ ದೈವಾಧೀನವಾದ್ದರಿಂದಾ ಯಿವನ ತಂಮ್ಮನ ಯರಡನೆ ಮಗ ರಂಗನಾಥಪಂತರಿಗೆ ಯಿವರ ತಂದೆ ಹುದ್ದೆ ಯೀತನ.... ರಿಬಗ್ಯೆ ರಾಯಾಜೀ ಸೋದರಳಿಯ ಜಗಂನಾಥ ಜೊಗಿಪಂತ ವಗೈರೆರಿಗೆ ಸಹಾ ಜೋಳಂಗೆರೆ ಬಳಿ ದಂಡು ವಳಗೆ ನವಾಬರು ನೇಮಕಾ ಮಾಡಿಸ್ತರು.

ಸದರಿ ಮೊಹಿಮಿನಲ್ಲಿ ಮಹಂಮದ ಬಂದರದ ಬಳೀ ಲಡಾಯಾದ ದಿವಸ ಸರಕಾರದ ತಬೆಲಿ ಪೈಕಿ ಬಾರರಾಗೀರ ರಾಜ ದಾರಖಾನನೆಂಬವನ್ನು ಜಂಗಿನಲ್ಲಿ ಕುದುರೆ ಪೊನಿಯಾದ ಸಬಬು ದಂಡಿಗೆ ಬಾರದೆ ಚದುರಿ ಹೋಗಿ ಮಾರ್ಗದಲ್ಲಿ ಶಿಕ್ಕಿದ ವಬ್ಬ ಮಾರ್ಗಸ್ತನ ಸುಲಕೊಂಡು ಅವನ ಕೈಲಿಯಿಂದಾ ಶಿಕ್ಕಿದ ಕೆಲವು ದ್ರವ್ಯದಿಂದ್ದಾ ನೂರಾರು ಜನ ಶಿಬಂದಿಯಿಟ್ಟು ಹತೆಂಟು ಹಳಿ ಲೂಟಿಶಿ ಅಲ್ಲಿಯು ಕೆಲವು ಜಮೆಯಾದ ಹಣದಿಂದಾ ಯರಡು ಸಾವಿರದ ಪರಿಯಂತರ ಶಿಬ್ಬಂದಿ ಜಮಾಯಿಶಿ ಸಮುದ್ರದ ದಡಕ್ಕೆ ಹೋಗುವಾಗ್ಯೆ ಅಕಸ್ಮಾತ್ ವರ್ತಕ ಬೆಗಾರಿ ಜಹಜುಗಳು ನಾಲ್ಕು ಮೂರು ದರಿಯಾಕಿನಾರೆಗೆ ಬರುವ ವ್ಯಾಳೆಗೆ ಖಾನಮಜಕೂರನ್ನು ವದಿಗಿ ಜಹಜುಗಳ ಉಟಾಯಿಸಿ ಮುತ್ತು ವಜ್ರ ಪಚ್ಚೆ ವಗೈರೆ ಹದಿನೈದು ಯಿಪ್ಪತ್ತು ಲಕ್ಷ ರೂಪಾಯಿ ಪದಾರ್ಥ ಶಿಕ್ಕಿದ್ದರಿಂದಾ ಅದಂನ್ನು ತಂನ್ನ ಅಹವಾಲೆಲ್ಲಾ ಬರದು ತಲಪಿಸಲಾಗಿ ಅವನಲ್ಲಿ ಬಹಳ ದಯ ಬಂದು ಆತನ ತೈನಾತಿಗೆ ಕೆಲವು ಫವುಜು ನೇಮಕಾಮಾಡಿ ಖಿಲ್ಲತ್ತು ಜವಾಹಿರು ವಗೈರೆ ಕೊಟು ಸರಫರಾಜು ಮಾಡಿದ್ದರಿಂದಾ ರಾಜ ದಾರಖಾನ ಫಉಜುದಾರನೆಂದು ಹೆಸರಾಗಿ ಬಹುಶಾ ರಾಜ ಕಾರ್ಯಗಳ ಅಲ್ಯೆಲ್ಲಿ ಮಾಡುತ್ತಾ ಯಿದ್ದನು.

ಕರ್ನಲ್ ಕೂಟ್ ಚೆಂನಪಟ್ಣದ ಬಳಿಗೆ ವಿಲಾಯಿತಿಯಿಂದ್ದಾ ಬಂದ ಮ್ಯಾಲೆ ಯರಡು ತಿಂಗಳಿಗೆ ವಂದೊಂದಾವರ್ತಿ ಅಕ್ಕಿ ತುಪ್ಪ ಮುಂತಾದ ವಸ್ತು ಬಂಗಾಳಿ ಯಿಂದ್ದಾ ಜಹಜುಗಳ ಮ್ಯಾಲೆ ಚೆಂನಪಟ್ಣಕ್ಕೆ ಬಂದದ್ದಂನು ರಾಯವೆಲೂರು ತಿರುಚನಾಪಲ್ಲಿ ಚೆಂಗಲಪಟು ವಗೈರೆ ಠಾಣೆ ಜಾತಗಳಿಗೆ ಕೆಲಉ ಫಉಜು ಸುದಾ ಮೈದಾನಕ್ಕೆ ಬಾರದೆ

ಗಿಡಮಾರ್ಗದಲ್ಲಿ ಝಾಡೀ ಆಸರೆ ಹಿಡಿದು ಆಗಾಗ್ಯೆ ರಸ್ತು ಹಾಕಿ ಚಂನಪಟ್ಣಕ್ಕೆ ತಿರುಗಿ ಹೋಗುತ್ತಾ ಯಿದ್ದರು.

ಕಾಳಹಸ್ತೀ ಬಂಮರಾಜ ನಾರಣೀರನ ಮೊಗಕಾಲ ಯಜಮಾನ ಯಡ ಬಂಗಾರ ವಗ್ಯೆರೆ ವಗ್ಯೆರೆ ಪಾಳಗಾರರೂ ಮೊದಲು ನವಾಬರಿಗೆ ಬಂದು ರುಜುವಾಗಿ ಮಹಂಮದ ಬಂದರ ಲಡಾಯಿ ಆದಾಗಾ ಬೆಮಾನಿ ಮಾನ ಫರಾರಿಯಾಗಿ ತಂಮ ತಂಮ ಶೀಮೆಗೆ ಹೊದ್ದರಿಂದ್ದಾ ಅಲ್ಯಲ್ಲಿಗೆ ಫಉಜು ಕಳುಹಿಸಿ ಪಾಳೆಗಾರ ಶೀಮೆಗಳು ನವಾಬರು ತಾರಾಜು ಮಾಡಿಸ್ತರು.

ಹಜೂರು ಅಪ್ಪಣೆ ಪ್ರಕಾರ ಆರ್ಕಾಡದಿಂದ್ದಾ ಮೀರಮಹಂಮದ ಸಾದಕರ ಕಳುಹಿಸಲಾಗಿ ಕೆಲಉೂ ಫಉಜು ಸುದಾ ಮಹಲಾತಿ ಕಛೆರಿ ಮುತ್ಸದಿ ಪೊಂಮು ಶ್ಯಾಮ್ಯೆಯ್ಯನವರು ಮೊಗಮಪಾಳ್ಯ ವಗ್ಯೆರೆ ಲೂಟಿಸುತ್ತಾ ಹೆಸರಿಗೆ ಬಂದ್ದು ಕೊಟೆ ಯಿನಾಯಿತಾಯಿತು.

ಮಧ್ಯೆ ಪರಂಗೆರ ಫಉಜು ತಿರಣಾಸೂರಬಳಿಗೆ ಬರುವಾಗ್ಯೆ ಟಿಪೂಸುಲತಾನರ ಫಉಜು ಸುದಾ ಹೊಗಿಶಿ ಕಿಲ್ಲೆಬಾದು ಜಮಾಯಿಶಿ ನಿಂತಾಗ್ಯೂ ಮತ್ತೊಂದು ಬಾಜೂ ತೊಫುಗಳ ಹೊಡದು ಹಲ್ಲಾಮಾಡಿ ಕಿಲ್ಲಾ ಪರಂಗೇರು ತೆಗುದಕೊಂಡರಾಗಿ ಯೀ ಪಂಚಾಯಿತಿ ಹಜೂರಲ್ಲಿ ಆಗುವಾಗಾ ನಾವು ವದಗುವಷ್ಟರಲ್ಲೆ ಅವರು ಬಂದ ದಮಕಿಗೆ ಸ್ವಲ್ಪವು ಪಟಾಡದೆ ಕೋಟೆವಳಗಣವರು ಕಲ್ಲೆ ಕಳದರೆಂದು ಸುಲತಾನರು ಘಬತಿರಾಮ ಸಹಾ ಹೇಳಲಾಗಿ ಯೀ ಕಿಲ್ಲೆ ಅಮುಲುದಾರ ಅಂಚೆ ಗುರಿಕಾರ ಶ್ಯಾಮ್ಯೆಯ್ಯನ ಸೋದರಮಾವ ಬಹದರ ವೆಂಕಟ್ಯೆಯ್ಯ ಯಂಬವನ ಅತ್ಯೆನೂರು ಕೊರಡೆ ಹೊಡಶಿ ನವಾಬರು ಬಹಳ ಯತರಾಜಿ ಮಾಡಿದರು.

ಯೀ ಮಧ್ಯೆ ಚಂನಪಟ್ಣದಿಂದ್ದಾ ವೇಲೂರಿಗೆ ರಷ್ತು ಹಾಕಿ ಹೋಗುವ ಫವುಜು ಚಿತ್ತೂರಿಗೆ ತೊಫುಗಳ ಹೊಡದು ಹಲ್ಲಾಮಾಡಿ ವಳಗೆ ಯಿದ್ದವರನ ಬಿಟುದ್ದರಿಂದ್ದಾ ಕೂಡ್ಲೆ ಅಲ್ಲಿಗೆ ನವಾಬರು ವದಗಿ ಕೋಟೆಯಲ್ಲಿ ಯಿದ್ದ ಮಹಲಾತಿ ಕಛೆರಿ ಕೊಡಲ ಮುತ್ಸದ್ದಿ ರಾಮರಾವು ಮೇಲೂ ಯೀ ಸಮೀಪದಲ್ಲಿ ಫವುಜು ಸುದಾ ಯಿದ್ದ ರಾಜಾವಾರ ಖಾನನಮೇಲೂ ಬಹಳ ಯತರಾಜು ಮಾಡಿದರು.

ಕಡಪೆ ನವಾಬರು ಮೀರ ಅಲ್ಲಿ ರಜಾಖಾನ ಬಹದರವರು ಮ್ರುತವಾದ ಮ್ಯಾಲೆ ಯಿವರ ಫಉಜು ಕಡಪೆ ಗುರುಂಕೊಂಡೆ ರಾಜ್ಯ ಸಹಾ ಅಸಲ ತನತುಯಲ್ಲಾ ಸುಲತಾನರ ಕೂಟವಾದ್ದರಿಂದ್ದಾ ಆ ಶೀಮೆ ಕಾರುಬಾರು ವಾಸರದಲ್ಲಿಖಾನರಿಗೆ ಕೊಟು ಫವುಜು ತಂಮ್ಮ ಬಳೀ ಯಿಟ್ಟುಕೊಂಡು ಸದರಿ ಮೀರ ಸಾಬರ ಸೂರತಚಾದೆ ಮೀರ ಕಮರದ್ದೀಖಾನರ ತಮ್ಮ ಬಳೀ ಸುಲತಾನರು ತರಬೀಯತ್ತು ಮಾಡುತ್ತಾ ಯಿದ್ದರು.

ಸದರಿ ಪ್ಲವ ಸಂವತ್ಸರದ ಕಾರ್ತಿಕ ಮಾರ್ಗಶಿರದಲ್ಲಿ ನವಾಬರು ಆರ್ಕಾಡು ಬಳಿಗೆ ಬಂದು ನೋಡಿ ಶಹರುಪನಾಕೊಟೆನ ಕಲ್ಲು, ತೆಂಗಿನ ಮರ, ತಾಟೀಮರ,

ಹಗ್ಗಗಳಿಂದಾ ಬಿಗಿಶಿ ಯರಡು ಸಾಲು ನೆಡಿಶಿ ಮಧ್ಯೆ ಬಿದಿರುಗಳಲ್ಲಿ ಮರಗಳ ತುಂಬಿಶಿ ಯಿಡಿಶಿ ಲಕ್ಕುಡಿ ಕೋಟೆ ಗೊಲಿಮಾರಿಗೆ ಅಡವಾಗಿ ಕಟಿಸೂವಂತ್ತೆ ಕಟ್ಟುಮಾಡಿಸ್ತರು.

ಯೀ ಮಧ್ಯೆ ನವಾಬರು ಮಾತುಬರರನೆಲ್ಲಾ ಕರೆಶಿ ವಂದು ದಿವಸ ಮಸಲತ್ತು ಮಾಡಿಸುತ್ತಾ ಕೇಳಿದ ವಿವರ. ಯೇನು ಯತ್ನ ಮಾಡಿದಾಗ್ಯೂ ಪರಂಗೇರ ನರಮೀಯನ್ನು ಅಗಲಿಲ್ಲಾ. ಯಿದಕ್ಕೆ ತಕ್ಕ ಯೋಚನೆ ಯೇನು ಮಾಡಬೇಕೆಂದು ಕೇಳಿದಲ್ಲಿ ಅದಕೆ ಸುಲತಾನರು ಜವಾಬು ಕೊಟ ವಿವರ. ಯಿಂಗ್ರೇಜೀರಿಗೆ ದೇವರವರೇ ದಯಮಾಡಿಶಿ ಯಿದ್ದಿತೆಂನಲಾಗಿ ಕಡಮೆ ಕುಳಿತು ಯಿದ ಸರದಾರರ ಮುಖಾನೆಲ್ಲಾ ನೋಡಿ ನವಾಬರು ಅಪ್ಪಣೆ ಕೊಟ ವಿವರ. ನಂಮ್ಮ ಸುಲತಾನರ ಮನೋಗತ ತಾವೂ ಸಮರ್ಥರಾಗಿ ಶತ್ರುಗಳ ತಂಬೀ ಮಾಡುವುದಾಗಿಯೂ ನಾವೂ ಹೆದರಿ ನಾವೀಷ್ಟು ಮಾಡುವುದಾಗಿಯೂ ನಂಮಲ್ಲಿ ನಾವು ಬರ್ದ ಠಪಾಯಿಶಿ ಯಿದಾರಾಗಿ ಯಿದಕೆ ನಾಊ ಮಾಡುವ ಸವಾಲಿಗೆ ಜವಾಬಿಗೆ ಸುಲತಾನರು ನೀವು ಸಹಾ ಹೇಳುವದೆಂದು ತಾವೂ ಹೇಳುವ ವಿವರ. ಚೆಂನಪಟ್ಣದಿಂದಾ ವಬ್ಬ ಕರ್ನಲ್ ಕೆಲಊ ಜಮೀಯತ್ತು ಸುದಾ ಬರುತ್ತಲೆ ನಾಊ ಅಂಗೇಜು ಮಾಡಿ ಅವರನ ಹೊಡದು ಬೇಲ ದಂಡು ಮುಳುಗಿದರು ಕಾರಬಂದ ಫವುಜು ಮುಳುಗಿದ ಮ್ಯಾಲೆ ಮತ್ತೂ ಚೆಂನಪಟ್ಣದಿಂದ್ದಾ ಕರ್ನಲ್‌ರ ಜಮೀಯತ್ತು ಆಗಾಗ್ಯೆ ಬರುತ್ತಾಲೆ ಯಿರುತ್ತೆ. ಹತ್ತೆಂಟು ತಡವೆ ಯೀಮ್ಯಾರೆ ಮುಳುಗಿಸಿದಾಗ್ಯೂ ಆ ಬಳಿಕಾ ಕರ್ನಲ್‌ರ ಜಮೀಯತ್ತು ಸುದಾ ತಡವೆ ತಡವೆಗೂ ಬರುತ್ತೆ. ಯಿವರನೆಲ್ಲಾ ಹೊಡೆದು ಚೆಂನಪಟ್ಣ ಹಸ್ತಗತವಾಯಿತೆ ಬಂಗಾಳ ಬಂಬಾಯಿ ನಿಂದ್ದಾ ಬದಸ್ತೂರು ಬರುತ್ತಲೇ ಯಿರುತ್ತೆ. ಅವರನೆಲ್ಲಾ ಹೊಡದು ಬಂಬಾಯಿ ಬಂಗಾಳೆ ನಂಮ್ಮ ಠಾಣೆ ಆದಲ್ಲಿ ಮತ್ತು ತಡವೆ ತಡವೆಗೂ ವಿಲಾಯಿತಿಯಿಂದಲೂ ಅವರ ಫವುಜು ಸರದಾರು ಸಹಾ ಜಹಜುಗಳಿಂದಾ ಬರುತ್ತಾ ಯಿರುವದಲ್ಲದೆ ಸವಿಯುವುದೆಯಿಲ್ಲಾ. ಯಿಷ್ಟೊಂದು ಲಡಾಯಿಗಳ ಮಾಡೂವಲ್ಲಿ ದೈವಗತಿಯಿಂದ್ದಾ ಹುಳುಕು ಗುಂಡು ತಗುಲಿ ನಾನೇನಾದರೂ ದಾರಿ ಹಿಡಿದರೆ ಶ್ರೀರಂಗಪಟ್ಣದಿಂದ್ದಾ ಪುನಹಾ ಫವುಜು ಸುದಾ ಬರ(ತ)ಕ್ಕಂಥಾ ಮರ್ದಮೀ ಮನುಷ್ಯನಾದವ ಯಿನೊಬ್ಬ ಸುಲತಾನರ ತಂದೆ ಯಿಧಾನೋ ನಂನಲ್ಲಿ ಅಡಕವೊ ಜವಾಬು ಕೊಡೀ ಯಂಬದಾಗಿ ಕೇಳಿದಲ್ಲಿ ಯಲ್ಲರೂ ಯದ್ದು ನಿಂತ್ತು ತಕಶೀರು ಮಾಫ ಮಾಡಬೇಕೆಂದ್ದು ಅರಿಕೆ ಮಾಡಲಾಗಿ ಪುನಹಾ ನವಾಬರು ಹೇಳಿದ ವಿವರ. ಯಿಂಗ್ರೇಜೀರಿಗೂ ನರಮೀ ಮಾಡಬೆಕಾದರೆ ಯಿವರ ಯೀಲಾಯಿತಿಯಲ್ಲಿ ಪರಾಶೀನರಿಗೂ ಯಿಂಗ್ರೇಜರಿಗೂ ಭಾರಿ ಲಡಾಯಿ ತಂದುಹಾಕಿ ಯಿದ್ದಾನ್ನು ಕಂದಾರ ವಗೈರೆರನ ಕಲ್ಲೀಕತ್ತಾ ಬಂಗಾಳೆಮ್ಯಾಲೆ ಲಡಾಯಿಗೆ ಹತ್ತಿಸಿ ಮರಾಟೀರನ ಬೊಂಬಾಯಿ ಸೊದೆ ಲಡಾಯಿಗೆ ಕಂಮ್ಮಿಶಿ ಭಾರಿ ಜಮೀಯತ್ತಿನಿಂದಾ ಕೆಲವು ಫರಾಷೀನರನು ಖುಷೀಮ್ಯಾಲೆ ನಮಗೆ ಕುಮುಕೀ ಆಗಿ ಯಿಳಿಶಿಕೊಂಡೂ ಸದರಿ ಟಾ ಮೀಯಿಲಾಯತ್ತು ವಗೈರೆ ವಂದು ಕುಮುಕ್ಕು ವಂದಕ್ಕೆ ಬಾರದಂತೆ ಅಲ್ಲಲ್ಲಿ ಭಾರಿ ಕಲಹಗಳ ಹೆಚ್ಚಿಶಿ ಕುಷ್ಕಿ ಮೇಲಣ ಶೀಮೆಗಳನೆಲ್ಲಾ ತರಾಜು ಮಾಡಿವಂದು ಕಿಲ್ಲೆದಲ್ಲೂ ರಸ್ತುಯಿಲ್ಲದಂತೆ

ಮುಷ್ಕೀಲಮಾಡಿ ಬಾಯಿ ಬಿಡಿಶಿ ನಂಮ ಫವುಜಿಗೆ ಜಾಯಾ ಯಿಲ್ಲದಂತೆ ಶತ್ರು ನಾಶನವಾಗಿ ಯೀ ರಾಜ್ಯ ಹಸ್ತಗತವಾಗುವಂತೆ ಯಿಷ್ಟರ ಯೋಚನೆ ಬುದ್ಧಿ ಸೂಕ್ಷ್ಮ ನಮ್ಮ ಮಗನಿಗೆ ಯಿಲ್ಲದೆ ಹೋಯಿತು. ಯೀತನ ಅವಿವೇಕಾ ಕಾಲಾರಭ್ಯ ವಂದೇ ರೀತಿ ಆಯಿತಲ್ಲದೆ ಕೆಲವೂ ದಿನಕ್ಕಾದರೂ ವಿವೇಕ ಬಾರದೆ ಹೋಯಿತು. ನೀನೆ ಜೊರಖುದ್ದು ಪಸಂದಿ ತೋರುತ್ತೆ. ಅಂದೇಶ ಮೂರು ವಸ್ತುಉ ಯೀತನಲ್ಲಿ ನಿಂತು ಯಿಥೆ ಯಂದು ಮಗನ ಮ್ಯಾಲೆ ಶಿಟು ಮಾಡಿ ಆವಾಗಾ ಅಪ್ಪಾಜೀ ರಾಮನ ಕರದು ಯೀ ಫರಂಗೇರ ತಂಬಿ ಬಗ್ಯೆ ೫೦,೦೦೦ ಸಾವಿರ ಸವಾರರನ ಯಿಂನ್ನು ಹೆಚ್ಚಾಗಿ ಭಾರಿ ಶರಾಗಳಿಂದಾ ಜಮಾಯಿಶಿಕೊಂಡು ಬರುವದೆಂದು ಯೀತ ಕೇಳಿದಷ್ಟು ಹಣಾ ಕೊಡುವವೆಂದು ಧಾರವಾಡ, ಕೊಪ್ಪಳ, ಗಜೇಂದ್ರಗಡಾ, ಬಾದಾಮಿ ವಗೈರೆ ಕಡೆಗೆ ಫರವಾನೆ ಬರಶಿಕೊಟು ಕಳುಹಿಸಲಾಗಿ ಅಪ್ಪಾಜೀರಾಮನು ಚೌಪೀಲು ಹಾಳು ಅಮೀನುಗಡದ ಪ್ರಾಂತ್ಯದಲ್ಲಿ ನಿಂತು ನವಾಬರು ಪರಲೋಕಯಾತ್ರೆ ಮಾಡುವ ವ್ಯಾಳೆಗೆ ಆರೇಳು ಸಾವಿರ ಕುದುರೆ ಜಮಾಯಿಶಿ ಕಳುಹಿಸ್ತನು.

ಮಧ್ಯೆ ವಂದು ತಡವೆ ನವಾಬರ ಚಿಕ್ಕ ಮಗ ಅಬ್ದುಲ್ ಕರೀಂ ಅಲ್ಲಿ ಖಾನ ಬಹದರವರ ಸಂಗಡ ಕೆಲವು ಫವುಜ ಲಾಲಾ ಥಬಿಲ್ಲೆರಾಮ ಹರಿಕಾರೆ ನಾಯಕ ಶ್ಯಾಮೈಯ್ಯ ವಗೈರೆರನ ಕೊಟು ಕಳುಹಿಸಲಾಗಿ ಯಿವರು ಚಂನ ಪಟ್ಟದ ಬಳಿ ಮುತ್ಯಾಲ ಪ್ಯಾಟೆ ಲುಟಾಯಿಸೊವಾಗ್ಯೆ ಕೋಟೆ ವಳಗಣವರು ಬೆಫಾವಾಗಿ ವೂರಬಾಗಿಲು ತೆಗೆದು ಯಿದ್ದದರಿಂದ್ದಾ ಜೀಬೀ ವಳಗೆ ಸವಾರರು ಹೊಕ್ಕಾಗ್ಯೂ ಯಚ್ಚರವಿಲ್ಲದೆ ಯಿದ್ದರಾಗಿ ಕೊಟೆವಳಗೆ ಹೋಗದೆ ಲೂಟಿ ಆಸೆಗೆ ಸರಕಾರದ ಕೆಲಸ ಖಲಲುಮಾಡಿ ಬಂದರೆಂದು ಪೆರಮಕಲ್ಲಿನ ಬಳಿಯಣ ಮಜಲಿನಲ್ಲಿ ತಂಮ್ಮ ಮಗ ಕರಿಂಸಾಬರಮೇಲೂ ಲಾಲಾಥಬಿಲ್ಲೆ ರಾಮ ಹರಿಕಾರ ನಾಯಕ ಶ್ಯಾಮೈಯ್ಯನಮೇಲೆ ಸಹಾ ಬಹಳ ಯತರಾಜಿ ಮಾಡಿ ನವಾಬರು ಸಚೀಡಿ ಮಾಡಿಸ್ತರು.

ಶಖೆ ೧೭೦೪ನೆ ಶುಭಕೃತು ಸಂವತ್ಸರದ ಚೈತ್ರ ಬಹುಳದಲ್ಲು ಪೆರಮಗಲ್ಲು ನಸರತ್ತುಗಡಾ ತೆಗೆದುಕೊಂಡರು. ಆ ಜಂಗಿನಲ್ಲಿ ದಲೆದಿಲಖಾನರಿಗೆ ಬಂದೂಕಿನ ಜಖಂ ಆಯಿತು. ಯೀ ಪ್ಲವ ಸಂವತ್ಸರದ ಪಾಲ್ಗುಣದಲ್ಲು ಮೀರ ಮಹಮದ ಸಾದಕರ ಯೋಚನೆ ಮಾಡಿ ಅಂಥೆ ಶ್ಯಾಮೈಯ್ಯನು ಹಜೂರಲ್ಲಿ ನಿಂತು ಶೀಮೆ ಆಡಳಿತವೆಲ್ಲಾ ಮಾಡುತ್ತಾ ಹಿಕಮತ್ತಿನಿಂದ್ದಾ ಆರ್ಕಾಡ ತೈನಾತಿಗೆ ಹಜೂರಲ್ಲು ತಾರೀಫುಮಾಡಿ ತಂಮ್ಮನ ನೇಮಿಶಿ ಹುಕುಂ ಪ್ರಕಾರಾ ಆರ್ಕಾಡು ಶಹರುಪನಾದ ಕಿಲ್ಲೆ ಹೊರಭಾಗ ಬುರುಜಗಳ ತಳಗೆ ಆಗಿಶಿ ಮದ್ದಿನ ಬುದ್ದಿ ನಿಗಾ ಯಿಟುಬತ್ತಿ ಕೊಟು ಕೋಟೆನೆಲ್ಲಾ ಉಡಾಯಿಶಿ ದಬ್ಬಿಶಿ ಶಹರು ಖಾಲಿ ಮಾಡಿ ಮೀರಸಾಬರು (ಕಥೆ)ರಿ ಸುದಾ ಸೈನ್ಯಕ್ಕೆ ಬಂದು ದಾಖಲಾದರು.

ಯಿೊ ಕೋಟೆ ತಳ್ಳುವುದಕ್ಕೆ ಮೊದಲು ಲಕಡಿಕೋಟೆ ಕಟ್ಟಿದಾಗ ಚಂನ ಪಟ್ಟದಿಂದಾ ಫರಂಗೆರ ಫಉಜು ಆರ್ಕಾಡು ಮ್ಯಾಲೆ ಬರುತ್ತೆಯಂಬ ಅವಾಯಿ ಆದ್ದರಿಂದ್ದಾ ಕುಮುಕೀ

ಬಗ್ಯೆ ಹಜೂರಿಂದ್ದಾ ಆನೆಗೊಂದಿ ಕನಕಗಿರಿ ರಾಯದುರ್ಗದ ಮಂದಿ ಪಾಳಗಾರರನ ಸಹಾ ಕಳುಹಿಸಿ ಯಿದರಾಗಿ ಆ ಪೈಕಿ ಕನಕಗಿರಿ ರಂಗಪ್ಪನಾಯ್ಕನ ಮಕ್ಕಳು ವಗ್ಯೆರೆ ಜಮೀಯತ್ತು ಸುದಾ ಬಂದು ಸೈನ್ಯಕ್ಕೆ ದಾಖಲಾದರು.

ಸದರಿ ಪೆರಮಕಲ್ಲು ಮಜಲಿನಲ್ಲಿ ಶೀಮೆ ಕಂದಾಚಾರದ ಬಕಷಗಿರಿ ಖಿಜ ಮತ್ತು ಮೀರ ಮಹಮದ ಸಾದಕರಿಗೆ ಮೊಕರೂರು ಆಗಿ ಯಿವರ ಬತಿರೆ ಬಾಯಿ ಮೀರ ಹಸನಲ್ಲಿ ಯಿ (ಮರಿ) ತಾಯಿ ಸಹಾ ವೇಲೂರಿಂದ್ದಾ ಮೀರ ಸಾಬರ ಬಳಿಗೆ ಬರಲಾಗಿ ಯೀ ಹಸನಲ್ಲಿಗೆ ೧೦೦ ರೂಥರ್ಮಹಾ ಆಗಿ ಕಂದಾಚಾರದ ಕಚೇರಿಯಲ್ಲಿ ಬಕಷಿಗಿರಿ ಆಯಿತಾಗಿ ಅತವಣೆ ಕಂದಾಚಾರ ಯರಡು ವಿಚಾರಣೆಯು ಮೀರಸಾಬರೆ ಮಾಡುತ್ತಾ ಬಹು ಪ್ರಾಬಲ್ಯವಾಗಿ ಆರಣಿ ಕಾರಖಾನೆ ಮೇಲೂ ಹುಕುಮತ್ತು ಚಲಾಯಿಸುತ್ತಾ ಯಿದ್ದರು.

ಯೀಶುಭಕೃತು ಸಂವತ್ಸರದ ವೈಶಾಖ ಬಹುಳದಲ್ಲು ಚಂನಪಟ್ಟಣದಿಂದ ಕರ್ನಲ್ ಜನ ೨ ಮೈ ಫವುಜು ಹೊರಟು ಯರಡು ಟೋಳೆ ಮಾಡಿಕೊಂಡು ಭಾರಿ ಠೊಲೆ ೧ಕ್ಕೆ ಗೊಡಾ ೪೦೦೦ ಅಲೆಮಾನಿ ತುರುಪು ೨೦೦೦ ಬಾರು ೧೨೦೦೦ ತೋಫು ೧೨ ಚಟೆಗಾರ ವಗ್ಯೆರೆ ೨೦೦೦ ಯೆಕೂನ್ನು ೨೦,೦೦೦ ಕೆಟೊಲೊ ಸಂಣ ಟೊಲೆ ೧ಕ್ಕೆ ಗೊರಾ ೧೦೦೦ ಬಾರು ೩೦೦೦ ತೊಫು ೨ ಸುದಾ ಕಂಚಿ ಮಾರ್ಗವಾಗಿ ಕೊಳಂಗೆರೆ ಬಳಿಗೆ ಬಂದ್ದು ಯಿಳಿದು ಅಲ್ಲಿಂದ್ದಾ ಮರುದಿನ ವಿಂಗಡಿಶಿ ಕೂಂಡು ಅಕ್ಕಿ ತುಪ್ಪಾ ನಾನ್ನು ವಗ್ಯೆರೆ ವಸ್ತು ಸಾಗಿಶಿಕೊಂಡು ವೇಲೂರಿಗೆ ಸಂಣ ಟೊಲೆ ಹೊರಟು ಹೋಯಿತು. ಭಾರಿ ಠೊಲೆ ಆರ್ಕಾಡು ತಿಪುರು ಮಾರ್ಗವಾಗಿ ಆರಣೀ ಬಳಿಗೆ ಹೊರಟು ಹೋಯಿತು.

ಆವರಿಗೆ ನವಾಬರ ಫವುಜು ಪೆರೆಮಕಲಿಂದ ವಂದು ಮಜಲು ಮುಂದಕ್ಕೆ ಹೋಗಿ ಯಿಳದು ಯಿದಲಿ ಮದ್ಯಾಂನದ ವೆಳೆಯಲಿ ಯೆಕಾಯೆಕಿ ಯಿಬ್ಬರು ಷುತರ ಸಾವಾರು ಬಂದು ಏಂತಮವಾ ವರ್ತಮಾನಾ ಹೇಳುವುದು ಆಕ್ಷ(ಣ)ವೆ ಆರಣಿ ಕಿಲೆದಾರ ಭುಜಂಗರಾಉ ಸಿಂಧ್ಯನ ಯಸಾರಿಗೆ ಯರಡು ಪರವಾನೆ ಸಾದರಗಿ ಅನಕರಿ ಫೌಜು ಸುದಾ ನಾವು ಬಂದು ವದಗುತೇವೆ. ಆ ಪರಿಯಂತ್ರ ನೀನು ಹೆದರದೆ ಫರಂಗೆರ ಸಂಗಡ ಲಡಯಿಮಾಡುವದೆಂದು ನೆಮಿಸಿ ನಾಕು ಜನಷುತರ ನವರೆರ ದೌಡಾಯಿಸಿ ಬಹಿರನೆಲ್ಲವ ವಿಂಗಡಿಸಿ ತೊಷೆಖಾನೆ ಕ್ರಿಷ್ಣರಾಯರ ತ್ಯೆನಾತಿ ಮಧಿಕಾಜನ್ನೆ ಸುಸದ ಪುಲಚೆರಿಗೆ ನಾಕು ಕೊಸಿನಲಿ ಯಿರುವಳಾದರು ಬಳಿಗೆ ರಾವಾನೆ ಮಾಡಿ ಅಕ್ಷಣದಲಿ ನವಾಬರು ಚಡೆ ಸವಾರಿ ಹೊರಟು ಪ(ಉ)ಜು ವಿ(೦)ಗಡಿಸಿದ ವಿವರ. ಪಾಳೆಗಾರರ ಗುಂಪುಯವರಿದು ಟೆಳೆ ಪಾರಷಿನ ಮುಸಿಲ. ಮಹಾಮದು ಕುಮದಾರನ ಬಾರುಸದ ಟೆಲೆ ೧ದು ಸುಲತಾನರ ಟೆಲೆವಂದು ಬಾರಿ ಪ(ವು)ಜು ವಂದು ಬಾರಿ ಪೌಜು ಸುದ ಕಾಸರಿಟೆ ೧ದು ಸಾಹಾ ವಾರಣಿ ಬಳಿ ಇರುವ ಯಿಂಗರೆಜರ ಪೌಜಿನ ಮೇಲೆ ನಾ ಮ ಶಂಧಿರದಾಲ್ಲು ನಾಲ್ಕು ಪೌಜು ಹೊಗಿ ಮೇಲೆ ಬೀಳುವಂತೆ ಮಕರುರು ಮಡಿ ಬಹುಜಲದಿ ನಿಂದ ಸಾವಾರಿ ಸಾಗಿ ಹೋಯಿತು.

ಯಾವ ದಿವಸ ನವಾಬರಿಗೆ ಶುಧಿಬಂದು ಆರಣಿಗೆ ಹೊರಟರೊ ಅಧಿವಸ ವುದಯವಾದ ಆರುಗಳಿಗೆ ವ್ಯಾಳೆಗೆ ಯಿಂಗ್ರಜಿರ ಫೌಜು ಆರಣಿಗೆ ದಾಖಲಾಗಿ ಚೊಳಂಗೆರೆ ಬಳಿಯನಿಂದಾ ನಾಲ್ಕು ಗಾವದಾ ಯರಡು ಮಜಲಿಗೆ ಬಂದ್ದು ಆರಣಿ ಕೋಟೆ ಯದುರಿಗೆ ದಮದಮೆ ಕಟಿಗೊಂಡು ಕೊಟೆಯಿಂದ್ದಾ ಯಷ್ಟು ಗುಂಡು ಹೊಡದಾಗ್ಯೂ ಗಣನೆ ಮಾಡಿದೆ ಆ ರಾತ್ರಿಗೆ ದಮದ ಮ್ಯಾಲೆ ತೊಫುಗಳ ಯೇರಿಶಿ ಮರುದಿವಸ ಅರುಣೋದಯಕ್ಕೆ ಯರಡು ಘಳಿಗ್ಯೆ ಯಿರವಾಗ್ಯೆ ಕೊಟೆಗೆ ತೊಫಿನ ಗುಂಡುಗಳಂನ್ನು ಷುರು ಮಾಡಿದರಾಗಿ ಅಷ್ಟಕೆ ಆರು ಘಳಿಗೆ ಮುಂಚಿತಾಗೆ ಖಾತರ ಜಮೆ ಫರವಾನೆ ಕಿಲ್ಲೆದಾರಿಗೆ ಕಾಲಾಡಿ ವಂಟೆಯವರು ತಂದು ಕೊಡಲಾಗಿ ಅರಣೋದಯ ಸಮಯಕ್ಕೆ ವಂದು ದಿಕ್ಕಿನಲ್ಲಿ ಸುಲತಾನರ ಸವಾರಿ ಬಂದಿದ್ದ ಕಂಡು ಯಿಂಗ್ರೇಜೇರು ತಂಮ್ಮ ಫವುಜುಮೂರು ಟೋಲೆ ಮಾಡಿ ಜಗಳವಾಗೂವಲ್ಲಿ ಪಾಳೆಗಾರರ ಜಮೀಯತ್ತು ಮತ್ತೆರಡು ಘಳಿಗ್ಯೆ ಕಾಣೇಪಡುತ್ತಾಲೆ ಯಿಂಗ್ರೇಜೇರು ನಾಲ್ಕು ಟೋಲೆ ಮಾಡಿ ಲಡಾಯಿಗೆ ಷರುಮಾಡೊ ಅಷ್ಟರಲ್ಲಿ ವುದಯವಾದ ಯಂಟನೆ ಘಳಿಗ್ಯೆ ಮತೊಂದು ದಿಕ್ಕಿನಲ್ಲಿ ಭಾರಿ ಸರ್ದ ಯದ್ದು ಖಾಸವಾರಿ ಬಾರಿ ಫಉಜು ದಿಖಾವಾದ್ದ ಕಂಡು ಯಿಂಗ್ರಜರು ಘಾಬರಿಯಾಗಿ ತಂಮ್ಮ ನಾಲ್ಕು ಟೋಲೆಯಂನ್ನು ಯೆಕ ಗುಂಪು ಮಾಡಿಕೊಳುವಷ್ಟರಲ್ಲೆ ಫುರಸತ್ತು ಕೊಡದೆ ಯೇಕದಂ ಕುದುರೆಗಳ ಚಲಾಯಶಿ ಲಾಂಟಿನ ವಳಗೆ ಹೊಕ್ಕು ಸಲಖಿಗೆ ಅವಕಾಶವಿಲ್ಲದ ಹಾಗೆ ಫಉಜನೆಲ್ಲಾ ಹೊಡದು ಕತ್ತಲೆ ಲಂಬ ಮಾಡಲಾಗಿ ಯಿಂಗ್ರೇಜೇರಲ್ಲಿ ತಾಖತ್ತು ತಪ್ಪಿ ಮುರಿದು ವೇಲೂರು ಮಾರ್ಗ ಹಿಡಿದು ಫರಾರಿಯಾದವರನೆಲ್ಲಾ ಬೆನಂಟಿ ಕಡಿದು ಜಖುಮುಗಳಿಂದ ೨,೦೦೦ ಗೊರಾ ಕೈಶೆರೆ ಹಿಡದು ಬೇಡಿಗಳ ಹಾಕಿ ಬಾಲಾಘಾಟಿಗೆ ರವಾನೆ ಮಾಡಿ ತೊಂಬತ್ತು ಘಳಿಗೆ ವ್ಯಾಳೆ ಯೊಳುಗಾವುದಾ ದೌಡು ಬಂದ ಶ್ರಮವೆಲ್ಲಾ ವಂದು ಝಾವಾ ಆರಣಿ ಬಳಿ ಮೊಕಾಂಮಾಡಿ ಧಗೆ ಆರಿಶಿಕೊಂಡು ತಂಪು ವ್ಯಾಳೆಯಲ್ಲಿ ಖಾಸವಾರಿ ಕೊಟೆವಳಗೆ ಬಂದು ನೋಡಿ ಆರಣೀ ಸ್ಥಳೀಕರಾದ ಜನರು ಫರಂಗೀರಿಗೆ ಶುದ್ದಿ ಕೊಟರೆಂಬ ಶಿಟ್ಟಿನಿಂದಾ ಅವರನೆಲ್ಲಾ ಬೆಂಗಳೂರು ಪ್ರಾಂತ್ಯಕ್ಕೆ ಸಾಗಿಶಿ ಬಿಡೂವಂತ್ತೆ ತಾಕೀತು ಮಾಡಿ ನವಾಬರ ಫಉಜು ಆರಣಿ ೧ ನಾವುದಲ್ಲಿ ಯಿರುವ ದೊಬೀಗಡಾ ಚಂಬೂರಗಡದ ಬಳಿಗೆ ಬಂದು ಯಿಳಿಯಿತು.

ಯೀಮಧ್ಯೆ ಕುಂಭಕೋಣದ ಕಡೆಯಿಂದ್ದ ಹರಿದಾಸ್ಯೆಯ್ಯನ ಫಉಜಿಗೆ ಉಟಾಯಿಸಬೇಕೆಂದು ಚಂನಪಟ್ಣದಿಂದಾ ಯಿಂಗ್ರೇಜೇರ ಫವುಜು ಸುದಾ ಬಂದದ್ದು ತಿಳಿದು ಸುಲತಾನರಂನ್ನು ಕೆಲವು ಫವುಜು ಸುದಾ ನವಾಬರು ಕಳುಹಿಸಿದರಿಂದಾ ಯಿವರು ಅಲ್ಲಿಗೆ ಹೊಗುವ ಧಮಕಿಗೆ ಅವರ ಫಉಜು ಹಿಂತಿರುಗಿ ಹೊದ ಬಳಿಕ ಆ ಶೀಮೆ ವಿಚಾರಣೆಯಂನ್ನು ಸುಲತಾನರು ಸ್ವಲ್ಪ ಪ್ರಾರಂಭಿಸಲಾಗಿ ಆ ವಿವರ ಹರಿದಾಸಯ್ಯಾ ಅರ್ಜಿ ಗುಜರಾಯಿಸಿದ್ದರಿಂದಾ ಸುಲತಾನರನ ಹಿಂದಕೆ ಕರಶಿಕೊಂಡು ಬಳಿಕ ಅದೇ ಜಿದ್ದು ಹರಿದಾಸ್ಯೆಯ್ಯನವರ ಮ್ಯಾಲೆ ಸುಲತಾನರಿಗೆ ಮನಶ್ಯಿನಲ್ಲಿ ನಿಂತಿತು.

ಯೀ ಮಧ್ಯೆ ಮತ್ಸ್ಯಲಿ ಬಂದರ ತಂಜಾವೂರು ಕಡೆ ಫವುಜು ಸುದಾ ಲಾಲಾಥ ಬಿಲ್ಲೆರಾಮ ಹೋಗಿ ಯಿದ್ದು ಅಲ್ಲಿ ಕುಂಫಣಿ ಫಉಜಿನ ಸಂಗಡ ಲಡಾಯಿ ಭಾರಿಯಾಗಿ ಬಿದ್ದದ್ದರಿಂದ್ದಾ ಸುಲತಾನರನ ಕುಮುಕು ಕಳುಹಿಸಿ ಪತ್ತೆ ಮಾಡಿಸ್ತಿರು. ಅಲ್ಲಿ ಥ ಬಿಲ್ಲೆರಾಮ ಯಿದ್ದ ಪ್ರಭಾವನೊಡಿ ಅವನ ಮ್ಯಾಲೆ ಸುಲತಾನರಿಗೆ ವಿಡವಾದ ಹುಟಿತು.

ಸದರಿ ಆರಣೀ ಬಳಿಯಿಂದ್ದಾ ಯಿಂಗ್ರೆಜೆರು ಬಹಳ ಹತವಾಗಿ ತೊಫಗಳ ಸಹಾ ಕಳೆದುಕೊಂಡು ಸಾವಿರಾರು ಜನ ಬಾರು ೩೦೦ ಜನ ಗೊರಾಯೀಮಟ್ಟಿಗೆ ಜಖಿಮುಗಳಿಂದ್ದಾ ತೀನತೇರು ಆಗಿ ವೇಲೂರಿಗೆ ಶೇರಿದರು. ವೇಲೂರಲ್ಲಿ ಯಿದ್ದ ಕರ್ನಲ್ ಲಾಂಗರ ಯಂಬ ಫರಂಗಿ ಮಹಂಮದ ಮುರಾದನೆಂಬ ಮುಸಲಮಾನ ಸಹಾ ಯೀ ಜನರಿಗೆ ಜಖಿಂ ಪಟಿ ಕಟಿಶಿ ನಿಗೇವಾನೀ ಮಾಡಿಸ್ತಿರು.

ಆವರಿಗೆ ಬಾರಾಮಹಲ ಹರಿದಾಸೈಯ್ಯನು ತಂಜಾವೂರು ಶೀಮೆ ಯಾವತ್ತು ಲೂಟಿಸುತ್ತಾ ಫಉಜು ಸುದಾ ಕುಂಭಕೋಣದಲ್ಲಿ ನಿಂತ್ತು ಬಹುಜನರಿಗೆ ದಾರುಣಾ ಮಾಡಿ ದಂಡಗಳ ಕಟ್ಟಿ ಮಿತಿಯಿಲ್ಲದ ಹಣಗಳ ಸಂಪಾದನೆ ಮಾಡಿ ಸರಕಾರದ ಫವುಜು ಖರ್ಚು ಅಲ್ಲದೆ ಕೋಟಿ ವರಹ ಪರಿಯಂತ್ರ ತಂನ ಸ್ವಂತಕ್ಕೆ ಸಂಪಾದಿಶಿಕೊಂಡೂ ಅನೇಕ ಜನ ಬ್ರಾಂಹರನ ಆದಿಯಾಗಿ ದಂಡಾ ಕೊಟಂತ್ಥಾವರಂನ್ನಾ ಮುಂದೆ ಯೀ ಶುಧಿ ಹೊರಗೆ ಬರಬಾರದೆಂದ್ದು ರಾತ್ರೆ ಕಾಲದಲ್ಲಿ ಹಿಡಿತರಿಶಿ ಕೊರಳುಗಳ ಮುರಿಶಿ ಹಾಳು ಬಾವಿಗಳಿಗೆ ಹಾಕಿಸಲಾಗಿ ಅವರವರ ಮನೆ ಹೆಂಗಸರು ಹುಡುಗರು ಬಹುಜನ ಬಾವಿಗಳಲ್ಲಿ ಬಿದ್ದು ಸತ್ತು ಬ್ರಂಹಹತ್ಯಾ ಸ್ತ್ರೀಹತ್ಯಾ ಶಿಶುಹತ್ಯಗಳು ಅನೇಕವಾಗಿ ಯಿಹಪರ ಸಾಧನೆಯು ಖಾವಂದರಿಗೆ ಉಧ್ಭಯವಾಗದಂತ್ತಾ ದುರ್ಮಾರ್ಗ ವಿದ್ಯಗಳ ಬಹಳವಾಗಿ ಮಾಡಿದನೂ.

ಸದರಿ ವಳದಾವೂರು ಬಳಿಗೆ ಬಹಿರು ತೆಗೆದುಕೊಂಡು ತೊಷಿಖಾನೆ ಕ್ರಿಷ್ಣರಾಯರು ಹೋಗಿ ಯಿಳಿದು ಯಿದಲ್ಲಿ ಯೀ ಬಾತಮೀ ತಿಳಿದು ಚಂನಪಟ್ಣದಲ್ಲಿ ಯಿದ್ದ ಯಿಂಗ್ರೆಜ ಫಉಜು ಈ ಬಹಿರು ಲೂಟಿಹೊಗುವ ಬಗ್ಯೆ ಹೊರಟು ಬರಲಾಗಿ ಯೀ ಶುದ್ದಿ ದೊಬೀಗಡದ ಬಳಿಯಿದ್ದ ನವಾಬರಿಗೆ ತಿಳಿದು ತಕ್ಷಣವೆ ಸಾರಣಿ ಸವಾರನ ಫರವಾನೆ ಸಹಾ ಮಾಡಿಸಲಾಗಿ ಕ್ರಿಷ್ಣರಾಯರು ರಾತ್ರೆ ೨೦ ಘಳಿಗೆ ವ್ಯಾಳೆ ವಳೆದಾವೂರು ಬಳಿಯಣಾ ಹೊಳೆಮಜಲಿನಿಂದ್ದಾ ಕೂಚಾಗಿ ಬಹಿರು ಸಹಾ ವಂದು ರಾತ್ರೆ ವಂದು ಬಳೀ ಮಕಾಂ ಮಾಡದೆ ವೋಡುತ್ತಲೆ ಬಹಿರು ಸುದಾ ಚಂಜೀ ಚೆಡಪೆಟ್ಟು ಆರಣೀ ಮಾರ್ಗವಾಗಿ ದೊಡ ದಂಡಿಗೆ ಶುಭಕ್ರುತು ಸಂವತ್ಸರದ ಜೆಷ್ಟ ಮಾಸದಲ್ಲು ಬಹಿರು ಸುದಾ ದಾಖಲಾದರು.

ಸದರಿ ಯೀ ಜೇಷ್ಟ ಶುದ್ದದಲ್ಲು ಚಂನಪಟ್ಣದಿಂದ್ದಾ ಕರ್ನಲ್ ಜನ ೨ ವಕಾಲತ್ತಿಗೆ ಬಂದ್ದು ದಂಡಿನ ಚೋರ ಪಹರೆ ಬಳಿಗೆ ಬರುತ್ತಲೆ ಅವರನ ಅಲ್ಲೆ ಅಟಕಾಯಿಶಿ ಹಜೂರಿಗೆ ವರ್ತಮಾನಾ ಕೊಡಲಾಗಿ ಆ ದಿವಸ ಮೂರನೆ ಝಾವದಲ್ಲಿ ಸ್ವಾದಬಾರ ಅಹಷಾಂ ಯಾವತ್ತು ದೇವಡಿ ಬಳೀ ಕರಶಿ ಕವಾಯತ್ತು ಆಗು ವ್ಯಾಳೆಯಲ್ಲಿ ಸದರ ಹೂ ವಕೀಲ ಜನ ೨ರಂನ್ನು ಬಿಚ್ಚ ಕತ್ತಿ ಪಹರೇದಿಂದ್ದಾ ಹಜೂರಿಗೆ ಕರಸಲಾಗಿ ನವಬತುಕಾನೆ

ಬಳಿಯಣಿಂದ್ದಾಲೆ ಯಿಬ್ಬರು ಕುದುರೆಗಳ ಯಿಳದು ಟೋಪಿಗಳ ತೆಗೆದು ಕಂಕಳಲೀ ಯಿಟ್ಟು ಕೊಂಡು ಖಾಸಾ ರೂಬು ರೂಬು ಬಂದು ತಸ. ಮಾಡಿ ನಿಂತ್ತುಕೊಂಡಲ್ಲಿ ಯಾಕೆ ಬಂದರು ಕೇಳಿ ಯಂದು ನವಾಬರು ಅಬ್ದುಲ್ ಮಹಂಮದ ಮಿರ್ದೇಗೆ ಹೇಳಲಾಗಿ ಆತ ಕೇಳಿದ್ದರಿಂದ್ದಾ ಅವರಿಬ್ಬರು ಅರಿಕೆ ಮಾಡಿಕೊಂಡ ವಿವರ. ನಾವು ಸಲ್ಲಾದ ನಿಮಿತ್ಯ ನಂಮ್ಮ ಲಾಟಸಾಹೆಬರ ನವಾಬ ಅಲ್ಲಿ ಮಹಂಮದ ಖಾನ್ ವಾಲಾಜಾನವರ ಅಪ್ಪಣೆ ಮ್ಯಾರೆಗೆ ಬಂದು ಯಿಥೇವಾಗಿ ನಂಮ್ಮ ಸವಾಲು ವಿವರ. ಕರ್ನಾಟಕ ಗಡ ಸಾತಗಡ ವಗೈರೆ ಹತ್ತು ಲಕ್ಷ ವರಹಾದ ಶೀಮೆ ನಿಮಗೆ ಬಿಟುಕೊಡುತ್ತೇವೆಂಬ ಕಲಂ ೧. ನಿಂಮ್ಮ ದಂಡಿನ ಖರ್ಚಿಗೆ ನಾವು ಕೊಡುತ್ತೇವೆಂಬ ಕಲಂ ೧. ನಿಂಮ್ಮ ಮ್ಯಾಲೆ ಕೆಲಸ ಬಿದ್ದರೆ ನಿಮಗೆ ನವು ಕುಮುಕು ಆಗುತ್ತೇವೆ. ಆವಾಗಾ ನಂಮ್ಮ ದಂಡಿನ ಖರ್ಚು ನೀವು ಕೊಡತಕ್ಕದಕ್ಕೆ ಕೆಲಸವಿಲ್ಲ. ಮುಂದೆ ನೀಊ ನಾವೂ ಅಂನ್ಯೊನ್ಯವಾಗಿಯಿರಬೇಕ್ಕು. ಯೀ ಮ್ಯಾರೆಗೆ ನವಾಬರು ಮಹಮದ ಅಲ್ಲಿ ಖಾನ್ ಆಸೀಫು ದವಲಾ ಬಹದರವರ ಹೆಸರಲ್ಲೂ, ನಮ್ಮ ಲಾಟ ಸಾಹೇಬರ ಹೆಸರಲ್ಲು ವಿಲಾಯಿತೀ ಯಿಂದಾ ನಮ್ಮ ಯಿಂಗ್ರೇಜ ಬಹದರ ಕಿಂಗು ಪಾದುಷಾಹಾರ ಹೆಸರಲ್ಲು ಸಹ ನಿಮಗೆ ಕರಾರು ನಾಮೆಗಳ ತಂದುಕೊಡುತ್ತೇವೆ. ನೀವೂ ಬದಸ್ತೂರು ಬರಶಿ ಕೊಡಬೇಕು. ಮುಂದೆ ನಾವು ಅಂನ್ಯೊನ್ಯವಾಗಿ ಪರಾಷೀನರ ಸಂಗಡ ನಿಊ ನಾಊ ದೋಸ್ತಿ ಯಿಡ ಕೆಲಸವಿಲ್ಲಾ, ಯಂದೂ ಹೇಳಿ ಕೊಂಡಲ್ಲಿ ಯೀ ಬಗ್ಯೆ ನವಾಬರು ಅಪ್ಪಣೆ ಕೊಟ ವಿವರ. ಪೂರ್ವದಲ್ಲಿ ನಂಮ್ಮ ಅರಸು ಕರಾಚೂರಿ ನಂಜರಾಜೆ ಅರಶಿನವರ ಹೆಸರಿಗೆ ವಕೀಲರ ಕಳುಹಿಶಿ ಆಣೆ ಭಾಷೆ ಮಾಡಿ ಕರಶಿ ಪರಷೀನರ ಫವುಜು ಹುಸೇನು ದೊಸ್ತು ಖಾನರನ ಸಹಾ ನಂಮ್ಮ ಅರಶಿನವರು ಮುಳುಗಿಶಿ ಅನೇಕ ದ್ರೌವ್ಯಾ ಫಊಜು ಖರ್ಚು ನಮ್ಮಿಂದಾ ಆಗಿ ಕೆಲಊ ಹಣ ನಂಮ್ಮ ಅರಸುಗಳ ಕೈಲಿ ಕಡವೂ ತೆಗೆದುಕೊಂಡು ಆ ಬಳಿಕ ಕರಾರಿಗೆ ತಪ್ಪಿ ತಿರುಚನಾಪಲ್ಲಿ ನಮಿಗೆ ಕೊಡದೆ ಮುಟ್ಟಿ ಮುರ್ದಾಯಿ ನಿಂಮ್ಮ ಮಮದಲ್ಲಿ ಖಾನರು ಮಾಡಿ ಯಿದಾರಾಗಿ ಯೀಗ ನಿಮಗೂ ನಮಿಗೂ ಸಲ್ಲಾ ಆಗಬೇಕಾದರೆ ನೀವು ನಡದು ಕೊಳ್ಳತಕ್ಕ ಕಲಮುಗಳ ವಿವರ. ಸಾಬಕು ಕರಾರಿನ ಮ್ಯಾರೆಗೆ ತಿರುಚನಾ ಪಲ್ಲಿ ಕಿಲ್ಲೆ ಆ ಶೀಮೆ ಸಹಾ ನಮಗೆ ಬಿಟು ಕೊಡತ್ಕ ಕಲಂ ೧. ಆವಾಗು ನಂಮ್ಮ ದಂಡಿನ ಖರ್ಚಿಗೆ ಮುಟ್ಟಿ ಯಿರುವ ಹಣ ಯೀವರಿಗು ಅದರ ಬಡ್ಡಿ ಸಹಾ ಲೆಕ್ಕಾಚಾರದ ಮ್ಯಾರೆಗೆ ನಮಗೆ ಕೊಡತಕ್ಕ ಕಲಂ ೧. ನಂಮ್ಮ ಅರಸುಗಳ ಕೈಲಿ ನೀಊ ಕಡಾ ತೆಗೆದುಕೊಂಡು ಯಿರುವ ಹಣ ಅದರ ಬಡ್ಡಿ ಸಹಾ ಕೊಡತ್ಕ ಕಲಂ. ಯೀ ತಡವೆ ನಾಊ ಮೊಹಿಂ ಬಂದದಕೆ ನಮಗೆ ಯೀ ವೇಲೂರು ಶೀಮೆ ಕಿಲ್ಲೆ ಸಹಾ ಬಿಟ್ಟುಕೊಡತ್ಕ ಕಲಂ. ಯೀ ದಫಾ ನಮ್ಮ ಮೊಹಿಮು ದಂಡಿನ ಖರ್ಚು ಕೊಡತ್ಕ ಕಲಂ ೧. ಯೀವರಿಗೆ ನಾಊ ಠಾಣೆ ಹಾಕಿಯಿರುವ ಕಿಲ್ಲೆಗಳು ಸಹಾ ನಮ್ಮದೇ ವಿನಹಾ ನಿಮಗೆ ಬಿಟ್ಟು ಕೊಡತ್ಕದಿಲ್ಲ ಕಲಂ ೧. ಅಂತು ಯೀ ಈ ಆರು ಕಲಮು ನೀಊ ನಡಶಿ ಕೊಟರೆ ನಿಮಗು ನಮಗೂ ದೋಸ್ತಿಯೆ ವಿನಹಾ ಬರಿದೆ ಸಲ್ಲಾ ಆಗತ್ಕದಿಲ್ಲಾ ವೆಂದು ಜವಾಬು ಹೇಳಿ ಅವರಿಬ್ಬರಂನ್ನು ಪಟ್ಟಣಕ್ಕೆ ರವಾನೆ ಮಾಡಿದರು.

ಯೀ ಶುಭಕೃತು ಸಂವತ್ಸರದ ಆಷಾಡ ಶುದ್ದದಲ್ಲು ಗುಂಡುಊರು ದ್ಯಾವಂಣ ಪಟ್ಣದ ಬಳಿ ಕೆಲಊ ಯಿಂಗ್ರೇಜೇರ ಘಉಜು ಕೂಡಿ ಜಮೆ ಆಗುವದಾಗಿಯೂ ನೀರ ಮೇಲೆ ಫರಾಶೀನರ ಸಹಾ ಬಾತಮೀ ಬಂದ ಕಾರಣಾ ಧೊಭೀಗಡದ ಬಳಿಯಣಿಂದ್ದಾ ಬಹಿರು ವಿಂಗಡಿಶಿ ಶಿಂಗರಪಟ್ಟಿ ಕಣಿವೆ ಬಳಿಗೆ ರವಾನೇ ಮಾಡಿ ಗುಂಡ್ಲೂರು ದೆವಂಣಪಟ್ಣದ ಬಳಿಗೆ ನವಾಬರು ಘಉಜು ಸುದಾ ಕೂಚುಮಾಡಿ ಸಾಗಿಹೊದರು.

ಸದರಿ ದೊಬೀಗಡದ ಮಜಲಿನಲ್ಲಿ ಮಟ್ಲೆವಾರು ಅಪ್ಪೈಯ್ಯ ರಾಜಾ ರೋಗದಿಂದ್ದಾ ಮ್ರುತವಾಗಿ ಯೀತನ ಚಕ್ರಪ್ಪ ನಾಯ್ಕ ತಂಮ್ಮ ಜಮೀಯತ್ತು ಸಂಸ್ಥಾನ ಸಹಾ ನಿರ್ವಹಿಶಿಕೊಂಡು ಹಜೂರಲ್ಲಿ ಯಿದ್ದು ಅರಶಿನ ಮಗ ವೆಂಕಟ ರಾಮರಾಜನಿಗೆ ಪಟ್ಟಿ ಕಟ್ಟಿಸ್ತರು.

ಸದರಿ ಶುಭಕ್ರತು ಸಂವತ್ಸರದ ಬಾದ್ರಪತದವರಿಗೆ ಕಲ್ಲಿಕೋಟೆ ಕಡೆಗೆ ಹೊಗಿ ಯಿದ್ದ ಮಕದುಂ ಅಲ್ಲಿಖಾನರು ಮೃತವಾಗಿ ನಾಯಿರು ಮಾಪಿಳೆರ ಅವಾಂತ್ರಾ ಬಹಳವಾದ್ದರಿಂದ್ದಾ ಅಲ್ಲಿ ಕೆಲವು ಯಿಂಗ್ರೆಜೀ ಘಉಜ ಸಹಾ ಕೂಡಿ ಪಾಲಘಾಟಿ ಕಛೆರಿ ಸಮೀಪಕ್ಕೆ ಬಂದು ಯಿರುವ ಶುದ್ದಿ ಕೇಳಿ ಟೀಪು ಸುಲತಾನರ ಸಂಗಡ ಭಾರಿ ಜಮೀಯತ್ತು ಕೆಲಊ ತೊಫು ಸುದಾ ಕಲ್ಲಿಕೋಟೆ ಮೊಹಿಮಿಗೆ ರವಾನೆ ಮಾಡಿದ್ದರಿಂದ್ದಾ ಯಿವರು ಹೋಗಿ ಅಲ್ಲಿ ಕೂಡಿಯಿದ್ದ ಅರಿವರ್ಗದವರ ಸಂಗಡ ನಿತ್ಯದಲ್ಲು ಲಡಾಯಿ ಮಾಡಿ ಹಿಂಮೆಟ್ಟಿಸುತ್ತಾ ಆ ಶೀಮೆಗಳ ಠಾಣೆ ಹಾಕಿ ಸುತ್ತಾ ಕಲ್ಲಿಕೊಟೆ ಸಮೀಪ ಪರಿಯಂತ್ರ ಫೋಂಚಾಯಿಸ್ತರು.

ಸದರ ಹೂ ಶಕೆ ೧೭೦೪ನೆ ಶುಭಕ್ರುತು ಸಂವತ್ಸರದ ಕಾರ್ತಿಕ ಬಹುಳದಲ್ಲು ನವಾಬರಿಗೆ ಬೆಂನಮ್ಯಾಲೆ ಬೆಂನ್ನು ಫಣೆ ಅರಸು ಹುಂಣು ಯದ್ದು ಬಹಳ ವುಪದ್ರವಾಗಿ ಕೇವಲಾ ನಿಸ್ತೂಕವಾದ್ದರಿಂದ್ದಾ ನವಾಬರು ಮ್ರುತವಾದರೆಂದು ದಂಡಿನಲ್ಲಿ ಫುಕಾರಾಗಿ ಜನರು ಆ ವರ್ತಮಾನಾ ತಿಳಿದು ನವಾಬರು ಹೊರಗೆ ಬಂದು ಮಸಲಂದಿನ ಮ್ಯಾಲೆ ಕುಳಿತು ಘಉಜು ಸರದಾರಂನ್ನು ಕರಶಿ ಸಲಾಂ ಮುಜರೆ ತೆಗೆದುಕೊಂಡು ರೋಜು ಭಟವಾಡೆಗೆ ಹುಕುಂ ಕೊಟು ಕೆಟ್ಟ ಶುದ್ದಿ ಹುಟಿಶಿದ್ದ ನಾಲ್ಕು ಜನ ಹರಕಾರಂನ್ನು ಹಿಡಿ ತರಿಶಿ ಯಿಬ್ಬರಂನ್ನು ಆನೆ ಕಾಲಿಗೆ ಕಟಿಶಿ ಯಳಶಿ ಮತ್ತೆ ಯಿಬ್ಬರನ ತೊಫಿನ ಬಾಯಿಗೆ ಕಟಿಶಿ ಉಡಾಯಿಶಿ ದಾಬುಹಾಕಿ ಯದ್ದು ವಳಗೆ ಹೊದರು.

ಆ ಬಳಿಕ ಅಲ್ಲಿಂದ್ದಾ ಕೂಚುಮಾಡಿ ಚೆಂನಪಟ್ಣದ ಮುಖವಾಗಿ ವಂದು ಮಜಲು ಹೋಗಿ ಯಿಳಿದರು.

ಶಖೆ ೧೭೦೪ನೆ ಶುಭಕ್ರುತು ಸಂವತ್ಸರದ ಮಾರ್ಗಿಶರ ಶುದ್ಧ ಸ್ತಿರವಾರದ ಮಧ್ಯಾಂನದಲ್ಲೂ ದಂಡಿನಲ್ಲಿ ಮಖ್ತೆಸರಾಗಿ ಯಿದ್ದ ಅಬ್ದುಲ್ ಮಹಂಮದ ಮಿರ್ದೆ ಜನ

೧ ಮೀರ ಮಹಂಮದ ಸಾದಕರ ಜನ ೧ ತೊಷೆ ಖಾನೆ ಕ್ರಿಷ್ಣರಾಯರ ಜನ ೧ ಪೂರ್ಣೈಯ್ಯನವರ ಜನ ೧ ಅಂಚೆ ಗುರಿಕಾರ ಶ್ಯಾಮೈಯ್ಯನ ಜನ ೧ ಸಹಾ ಯೀ ಆೈದು ಜನವಂನ್ನು ದೇವಡಿವಳಗೆ ಕರಶಿ ನವಾಬರು ಹೇಳಿದ ವಿವರ. ಯಿಂನ್ನು ಮ್ಯಾಲೆ ನಂಮ್ಮ ಶರೀರ ನಿಲ್ಲುವದು ಯಿಲ್ಲ, ಶ್ರಮ ಬಹಳವಾಯಿತು. ಮುಂದೆ ದವಲತ್ತು ಮಾಡಬೇಕಾದರೆ ಠೀಪು ಸುಲತಾನರೆ ವಿನಹಾ ಕರಿಂ ಸಾಬರಿಗೆ ಅಷ್ಟರ ನಿರ್ವಾಹ ವಿಲ್ಲಾವಾಗಿ ನೀಊ ಯೀ ಸ್ಥಳಾ ಬಿಡದೆ ಯೀ ಶುದ್ದಿ ಹೊರಗೆ ಹುಟಿಸದೆ ಅತಿ ಜರೂರಾಗಿ ಬರದು ಸುಲತಾನರ ಕರಶಿಕೊಂಡು ಅವರಿಗೆ ದವಲತ್ತು ಮಾಡಿ ಅವರ ಬಳಿ ನೀವೆಲ್ಲರೂ ಜೀವನ ಮಾಡುವದೆಂದ್ದು ಅಪ್ಪಣೆ ಕೊಟ್ಟು ಆವಾಗಾ ನವಾಬರು ದೈವಾಧೀನವಾದರು.

ಸದರ ಹೂ ಆೈದು ಜನರೂ ಯೋಚಿಸಿ ತಕ್ಷಣವೆ ಸುಲತಾನರಿಗೆ ತಮ್ಮ ಹೆಸರಿನಿಂದ್ದಾ ಅರ್ಜಿ ಬರದು ಘುತರಸರನ್ನು ತೊಡಿಶಿ ನವಾಬರ ಲಾಶಾ ತೊಳೆಶಿ ಸಂಧೂಕದಲ್ಲಿ ಅಲಬಿರು ಮುಂತಾಗಿ ತುಂಬಿ ಅದರಲ್ಲಿ ಯೀ ಶರೀರ ಯಿಟು ಸಂಧೂಕಾ ಮೊಹರು ಮಾಡಿ ೫೦೦ ಸವಾರು ೧೦೦೦ ಬಾರು ಸಹಾ ಬದರಿಕೆ ಕೊಟು ಮೊದಲು ಕೋಲಾರದ ಬಳಿ ನವಾಬರ ತಂದೆ ತಾಯಿ ಅಂಣ ವಗ್ಯೆರೆ ಗುಂಮಿಗವಾಗಿ ಯಿರುವ ಬಳಿಯಲ್ಲೆ ನವಾಬರು ಮಾಡಿಸಿಯಿದ್ದರಾಗಿ ಅಲ್ಲಿಗೆ ತೆಗೆದುಕೊಂಡು ಹೊಗಿ ಯೀ ಪೆಟಿಗೆ ಯಿಟುಕೊಂಡು ಯಿದ್ದು ಮುಂದೆ ಯಿಲ್ಲಿಂದಾ ಅಪ್ಪಣೆ ಬಂದ ಮೆರೆ ನಡೆದು ಕೊಂಬುವದೂ ಯಂದು ಹೇಳಿ ಕಳುಹಿಶಿಬಿಟು ಯೀ ಶುದ್ದಿ ದಂಡಿನಲ್ಲಿ ಪ್ರಕಟವಾಗದಂತ್ತೆಯು ದಂಡಿನ ಹೊರಕೆ ವಬ್ಬರಾದರೂ ಹೊಗದಂತ್ತೆಯು ನಿತ್ಯದಲ್ಲು ಸುದಾ ಮದಬ ಮೊಜೀಬು ವರದಿ ಖಾಸಾ ಮಲಗುವ ತನಾತಿನ ಸಮೀಪದಲ್ಲಿ ಆಗುತ್ತಲೂ ಹುಕುಂ ಹುಕುಂ ತಾವು ಆೈದು ಜನವೆ ಹೊಗಿ ಬರುತ್ತಾ ಫಲಾನೆ ಕೆಲಸಕ್ಕೆ ಯೀ ಪ್ರಕಾರಾ ಹುಕುಂ ಆಯಿತು ಯಂದು ಹುಕುಂ ಚಲಾಯಿಸುತ್ತಾಲೂ ಫಉಜಿಗೆ ರೋಜು ಭಟವಾಡೆ ಮಾಡಿಸುತ್ತಲೂ ಸರಕಾರ ಖೈದು ಖಾಯಿನಂಪುರ ಹಲಾಲ ಯಿಂದ್ದಾ ಯಿದ್ದರು. ಆ ವ್ಯಾಳೆಯಲ್ಲಿ ಬಾರಗಿರ ಕಛೆರಿ ಬಕಷೀ ಮಹಂಮದ ಅಮೀನನು ಪಿತೂರು ಮಾಡಿ ಚಿಂನಪಟ್ಟಣಕೆ ಕಾಗದಾ ಬರದು ಯಿದ್ದನೆಂದು ಮಹಂಮದ ಅಮೀನಗೆ ಬೇಡಿ ಜಡಾಯಿಶಿ ಸಾವಂದೀ ಗಡಕ್ಕೆ ರವಾನೆ ಮಾಡಿದರು. ನವಾಬರಿಗೆ ಕುಮುಕು ಬಂದು ಯಿದ್ದ ಫರಾ ಷೀರ ಸರದಾರ ಬಳಿಗೆ ಹೋಗಿ ತನಗೆ ದವಲತ್ತು ಕೊಡಿಸ್ತರೆ ಆರು ಆಣೆ ಪ್ರಕಾರ ಶೀಮೆ ಕೊಡುತ್ತೇನೆಂದ್ದು ಹೇಳಿದ್ದರಿಂದ್ದಾ ಅಬ್ದು ಮಹಂಮದ ಮುಂತಾದವರು ಅಮೀನ್ನು ಸಾಬಂನ್ನ ಖೈದುಮಾಡಿ ಸಾವಂದೀ ದುರ್ಗಕ್ಕೆ ಸಾಗಿಸ್ತರು.

ಆಬ್ದೇಸ್ಮಿನ್ ಶುಭಕೃತ್ತ್ವಧಾ (ದ) ಮುಷಗತೇ ತಂನ್ಮಾರ್ಗಶೀರ್ಷೇವರೇ
ಶುದ್ದೇಪಕ್ಷವರೇ ತ್ರಿತೀಯ ದಿವಸೇ ಮಂದಾಭಿದೇ ವಾಸರೇ
ವಿಕ್ರಾಂತ್ಯಾ ವಸುಧಾಂ ವಿಧಾಯತು ವಶಂ ಶಕ್ತ್ಯಾ ವಿಜೇತುಂ ದಿವಂ
ಶ್ರೀ ಹೈದರ ಬಹದರ ನವಾಬರು ಮಹಿರಾಟ್ ಮಾಧ್ಯಂ ದಿನೇ ಪ್ರಸ್ಥಿತಃ ॥ ೧ ॥

ಆಗ್ಮ್ಯಾಯದ್ವಿಲಯೇಷು ಸರ್ವವಸುಧಾಂ ಶಾಸತ್ಯಮೋಘಾಕ್ರಿಯಾ
ಧತ್ತೇಯದ್ವಿಲಯ ಸ್ಥ(ಲಂ) ಲೀಂ ಬಹುಮತೀಂ ತತ್ಸಾರ್ವಭೌಮೋಚಿತಾಂ
ಯ (ಲ್ಲೋ) ಲ್ಲೋಕಾಂತರ ಸಂಗತಿಃ ಶ್ರುತಿಗತಿಃ ಪುತ್ರರ್ಥಿ ವಿಧ್ವಂ (ಸೀಂ) ನಿ
ತ್ಯೋಣ್ಯಾಂ ತಾದೃಶ ಹೈದರ ಕ್ಷಿತಿಪತಿ (ಃ) ಲೋಕೋತ್ತರೋ ಗೀಯತೆ ॥೨॥

ಸುಧಾ ಮಧು ಪ್ರಕಾರ ಖಾಸಾ ಢೇರೆ ಸಮೀಪ ಯಡದ ಭಾಗದಲ್ಲಿ ಕರಿಂಸಾಬರು ತಂಮ ಡೇರೆದಲ್ಲಿಯಿರುತ್ತಾ ಯಿದ್ದರು.

ಯೀ ಶುಭಕೃತ ಸಂವತ್ಸರದಲ್ಲಿ ಅಪ್ಪಾಜಿ ರಾಮನ ಶಿಪಾರಶಿನಿಂದ್ದಾ ಪಟ್ಣದಿಂದ್ದಾ ಪಹರೆ ಬಿಡಶಿ ಪ್ರಧಾನ ವೆಂಕಪ್ಪೈಯನವರನ ದಂಡಿಗೆ ಕರಶಿ ಯಿದರಾಗಿ ಅವರು ಯೀ ಕಾರ್ತೀಕ ಶುದ್ಧದಲ್ಲಿ ಬಹುಮೂತ್ರ ರೋಗದಿಂದ್ದಾ ದಂಡಿನಲ್ಲಿ ಮೃತವಾದರು.

ನವಾಬರು ಮೃತರಾದ ಶುದ್ದಿ ಪಟ್ಣಕೆ ಬಂದಾಗ್ಯೆ ದೇವಡಿ ವಳಗಣಿಂದ್ದಾ ಹೆಂಗಸರು ವಡದ ಬಳೆ ತುಂಡು ೩ ಕೆ ಹೇರು ಹೊರಗೆ ಬಂದು ಬಿತ್ತು.

ಅಂತು ವಟ್ಟಿಗೆ ಪಟ್ಣದ ತಾಲೊಕಿಗೆ ಕ್ರಿಷ್ಣಾತೀರ ಪರಿಯಂತ್ರ ನವಾಬರು ಆಳುತ್ತಾ ಯಿದ್ದ ಶೀಮೆ ಬೇರೀಜು ೧೧೦೦೦೦೦೦ ವಂದು ಕೋಟಿಯ ಹತ್ತು ಲಕ್ಷ ವರಹಾ. ಯಿಷ್ಟಕ್ಕೆ ಅರಸುಗಳ ದಿವಸದಲ್ಲಿ ಯಿದ್ದ ಬೇರೀಜು ೪೦೦೦೦೦೦. ಯೀಚಿಗೆ ನವಾಬರು ಕಟ್ಟಿದ ಶೀಮೆ ಬೇರೀಜು ೩೦೦೦೦೦೦.

ಯಿದಲ್ಲದೆ ಪಾಳೆಗಾರಿಂದ್ದಾ ಪೇಷ್ಕಶಿಹಣ ೨೦೦೦೦೦೦ ಯಿಪ್ಪತ್ತು ಲಕ್ಷ ವರಹಾ ಪರಿಯಂತ್ರಾ ಬರುತ್ತಾಯಿತ್ತು. ೧೦೦೦೦೦೦೦ ಆರ್ಕಾಡು ವಗೈರೆ ಠಾಣೆ ಹಾಕಿ ಯಿದ್ದ ಶೀಮೆ ಬೇರೀಜು ಕಂದಾಯವಂದು ಕೋಟಿ ವರಹಾ. ಉಭಯಂ ರಾಮೇಶ್ವರದ ಲಾಗಿನಿಂದಾ ಸುತ್ತಲೂ ಕಲ್ಲಿಕೋಟೆ ಸಮುದ್ರ ಕೊಡಿಯಾಲ ಕ್ರಿಷ್ಣಾನದಿ ಗದ್ದುವಾಲಾ ನೆಲ್ಲೂರು ಸರ್ವಾಪಲ್ಲಿ ಮೈಲಾಪುರ ಚೆಂನಪಟ್ಣದ ಸಮೀಪಾ ಪುನಹಾ ರಾಮೇಶ್ವರದವರಿಗೂ ಮಧ್ಯ ರಾಜ್ಯ ಬೇರೀಜು ಕಂಠೀರಾಯಿ ೨೧೦೦೦೦೦೦ ಯರಡು ಕೋಟಿಯು ಹತ್ತು ಲಕ್ಷ ವರಹಾದ ರಾಜ್ಯಾ ಆಳುತ್ತಾ ಶ್ರೀರಂಗಪಟ್ಣಕ್ಕೆ ಸುತ್ತ ನಾಲ್ವತ್ತು ಗಾವದ ಧೊರೆತನದಿಂದಾ ಮಂಡಲಾಧಿಪತಿ ಅಂನಿಶಿಕೊಂಡು ಮಹಾಸಾಂಬ್ರಾಜ್ಯಪದವಿ ಆಳುತ್ತಾ ಯಿದ್ದರು.

ಸದರಿ ದ್ರವ್ಯವಲ್ಲದೆ ರಾಜ್ಯದಲ್ಲಿ ಪೂರ್ವಕ್ಕೆ ಭೂಸ್ಥಾಪಿತವಾಗಿ ಯಿದ್ದ ದ್ರೌವ್ಯ ವರುಷ ೧ಕ್ಕೆ ೫೦೦೦೦೦ ಲಕ್ಷದಿಂದ್ದಾ ೨೦೦೦೦೦೦ ವರಹಾದವರಿಗೂ ಹಣಶಿಕ್ಕಿ ತೋಷೆಖಾನೆಗೆ ಬರುತ್ತಾ ಯಿತ್ತು. ವಂದೊಂದು ವರುಷ ಹತ್ತು ಯಿಪ್ಪತ್ತು ಲಕ್ಷ ವರಹಾ ಶಿಕ್ಕುತ್ತಾ ಯಿತ್ತು.

ಯೀ ಧೊರೆತನದಲ್ಲಿ ನಡೆಯುತ್ತಾಯಿದ್ದ ಚರಿತ್ರೆಗಳ ವಿವರ : ಪಟ್ಣದ ಉಭಯ ಕಾವೇರಿ ಮಧ್ಯೆ ಯರಡು ಶ್ರುಂಗಾರ ತೋಟ ಹೊಸ್ತಾಗಿ ನಿರ್ಮಿಶಿ ಲಾಲಬಾಗ ದರಿಯಾದವಲತ್ತು ಬಾಗೂ ಯಂದೂ ಹೆಸರಿಟ್ಟು ದಿಳೀ ಲಾಹೋರಾ ಮುಲಕಾನಾ ರುಂಮೂ ಅಬ್ದಾಲಾ ಕಾಬುಲ್ ಕಂದಾರ ಕಿಷಮೀರ ವಗೈರೆ ಕಡೆ ಯಿಂದ್ದಾ ಹಾಲು ಮೊಸರು ಮಜ್ಜಿಗೆ ಯಳನೀರು ಸಕ್ಕರೆ ಮುಂತ್ತಾದ್ದರಿಂದ್ದಲೆ ಪೋಷಿಶಿ ಫಲವಾಗತಕ್ಕ ವಿಚಿತ್ರದ ಫಲಪುಷ್ಪಗಳ ಸೊಸಿಗಳನ್ನು ತರಿಸುತ್ತಾ ಅದೇ ಮೇರೆಯಲ್ಲಿಯೂ ಮಾಡಿಸುತ್ತಾ ಸದರಿ ದೇಶಗಳ ವಿಚಿತ್ರ ಕಾಠೆಗಾರರನ ಕರಶಿ ಯೀ ಯರಡು ತೋಟದಲ್ಲೂ ಸೊನೆರು ದುಫೆರಿ ಕೆಲಸಗಳ ಮಹಲ ಕಟಿಶಿ ಜನಾನೀಯಿಂದ್ದಾ ಆಗಾಗ್ಯೆ ಹೋಗಿ ಸಕಲ ವಿನೋದಗಳು ಅಲ್ಲಿ ನಡೆಸುತ್ತಾ ಯಿದ್ದರು.

ಸದರಿ ದೇಶಗಳು ಮತ್ತು ಚೀನ ಗುಜರ ಅರಬಸ್ತಾನ ಕ್ಷಾಮ ಮಸರ ಕಚ್ಚೆಷ್ಟೈಗೂ ಅಧಿ ವಗೈರೆ ದೇಶಗಳಿಂದ್ದಾ ಹಮಾಂಕೋಮಿನಲ್ಲೂ ಅತಿ ಸುಂದರವಾದ ಹೆಂಣುಗಳನ್ನು ಬಹಳ ದ್ರೌವ್ಯಗಳ ವ್ರಯಮಾಡಿ ತರಶಿ ಮಹಲಿನಲ್ಲಿ ಮುಖ್ಯ ಸ್ತ್ರೀಯರೆ ೭೦೦ ಜನ.

ಯಿವರ ಪರಿಚರಿಯಕ್ಕೆ ಜನ ೧ಕ್ಕೆ ಅೈದು ಜನ ೧೦ ಹತ್ತು ಜನದ ಮ್ಯೇರೆಗೆ ಯುಕ್ತವರಿತು ನೇಮಿಶಿ ದಿವ್ಯಾಭರಣಗಳು ಅಪೂರ್ವ ವಸ್ತ್ರಗಳು ಸಹಾ ಯಿವರಿಗೆಲ್ಲಾ ವಿಂಗಡಿಶಿಕೊಟ್ಟು ಯೀ ಪೈಕಿ ಕಲವರನ ವಿಂಗಡಿಸಿ ಭರತ ಶಾಸ್ತ್ರಾಭ್ಯಾಸ ನಾಟಕ ಶಾಲೆ ಕುಪ್ಪೈಯನವರ ತಂದೆ ಸಹಾಯಿಟು ಕಲಿಶಿ ಯಿವರೆಗೆಲ್ಲಾ ದಫಗಳ ವಿಂಗಡಿಶಿ ಹದಿನೈದು ದಿವಸಕ್ಕೆ ವಂದಾವರ್ತಿ ತಾವೂ ಜನಾನೀಯರಲ್ಲಿ ಹೋಗಿ ಹಗಲಿರುಳು ತಪ್ಪದೆ ಗೋಷೇದಲ್ಲೂ ಯಿರುತ್ತಾ ದಿನಕ್ಕೆ ಉದಯದಲ್ಲಿ ಮಾತ್ರಾ ನಾಲ್ಕು ಘಳಿಗೆ ಶೀತಾ ಸರೋವರದ ತೋಟದ ದಿವಾನಖಾನೆಯಲ್ಲಿ ಬಂದ್ದು ವರದಿ ಸರದಿ ಕಾರುಬಾರು ಮಾಡಿ ಮಿತಂತೆ ಜನಾನೀಯರಲ್ಲಿ ಚಟಕಣಿ ಹೆಂಗಸರು ಮುಂತ್ತಾಗಿ ವಳಗೆ ಕರಶಿ ಪಟ್ಣದ ಶಹರಿನಲ್ಲಿ ಖರೀದು ಪುರೋಖುಂ ಸ್ನೇಹ ಜಗಳ ಆಟ ಪಾಟ ಮೊದಲಾದ ಏನೇನು ವಿಚಿತ್ರ ನಡೆಯುವುದುಂಟೋ ಅದೆಲ್ಲಾ ಸಕಲ ಹೆಂಗಸರನ್ನು ಕೂಡಿಶಿ ನಡಸುತ್ತಾ ಸಕಲ ಮೃಗಜಾತಿಗಳು ಪಕ್ಷಿಗಳು ತಮಾಶೆ ವಿಚಿತ್ರ ಆಹಾರಗಳು ಜಲಕ್ರೀಡೆ ನಿದ್ರಭೋಜನ ಉಯ್ಯಾಲೆಯಂನ್ನು ತಂಮ್ಮ ತಂಮ್ಮ ಮನೋವಿಲಾಸ ಯಿದ್ದದನ್ನೆಲ್ಲಾ ದಳವಾಯಿ ದೇವರಾಜೈಯ್ಯನವರು ಕಟ್ಟಿಸ್ತ ಶೀತಾ ಸರೋವರದ ಕೊಳಯಿ ತೋಟ ಯೀ ದಿವಾನಖಾನೆ ಯೀ ಸುತ್ತಣ ತೋಟಗಳಲ್ಲಿ ಸಹಾ ಯಂಟೆಂಟು ದಿವಸ ತಪ್ಪದೆ ಯಿರುತ್ತಾ ನಿತ್ಯದಲ್ಲು ಬೆಳ್ಳಿಕಡಾಯಿಗೆ ಪಂನೀರು ಪಚ್ಚಕರ್ಪೂರ ಸಹಾ ಹಾಕಿ ಮಚ್ಚರದಾನಿಗಳ ಅದ್ದಿಶಿ ನಿತ್ಯದಲ್ಲೂ ಹತೆಂಟು ಕಡೆ ಹಾಶಿಗೆಗಳು ಸುತ್ತಾ ಕಟಿಸುತ್ತಾ ತಾಊ ಯೀತೋಟದಲ್ಲಿ ಯಿರುವ ವ್ಯಾಳೆಯಲ್ಲಿ ಊರು ಹೆಂಗಸರು ಯಾರು ನೀರಿಗೆ ಬಂದಾಗ್ಯೂ ಅವರು ತಮಾಸಿ ನೋಡಿ ಹೋಗೂವಲ್ಲಿ ರೂಪಾಯಿಗಳ ಬೈರಾತ್ತು ಮಾಡಿಸುತ್ತಾ ಯಿಂದ್ರ ವಿಭವ ಕ್ರಿಷ್ಣಲೀಲೆಯಲ್ಲಿ ಲೇಶ ನ್ಯೂನವಿಲ್ಲದಂತ್ತೆ ಸಾಂಬ್ರಾಜ್ಯ ಅನುಭವಾ ಮಾಡಿದರು. ಸದರಿ ತೋಟಗಳು ಮಹಲು ಪ್ರಕಾರ ಬೆಂಗಳೂರಲ್ಲು ಮಾಡಿಸ್ತರು.

ಪಟ್ಣದ ಉಭಯ ಕಾವೇರಿ ಮಧ್ಯದಲ್ಲಿ ನೂತನವಾದ ಪ್ಯಾಟೆ ಕಟಿಶಿ ಷಹರು ಗಂಜಾಮೂ ಯೆಂದು ಹೆಸರಿಟ್ಟರು.

ಹದಿನೈದು ದಿವಸ ಯಿಪ್ಪತ್ತು ದಿವಸಕ್ಕೆ ವಂದಾವರ್ತಿ ದೇವಡಿಮುಂದೆ ಯೇಳು ಆಳು ವುದ್ದಾ ದೊಡ್ಡ ದೊಡ್ಡ ಕವರಗಳ ನೆಡಿಶಿ ಥಪ್ಪದ ಶಣಬಿನ ಹಗ್ಗಗಳ ಬಲೆಗಳದು ಹೇರಿ ಸಡ್ಲವಾಗಿ ಕವರುಗಳಿಗೆ ಜೋಡಿಶಿ ಸುತ್ತಾ ಯೀ ತರದ ಗೂಟಗಳ ನೆಡಿಶಿ ಬಲೆಗೆ ಹಗ್ಗಗಳಿಂದ್ದಾ ಕಟ್ಟಿಶಿ ದಕ್ಷಿಣ ದಿಕ್ಕಿನ ಬಲೆಗೆ ಅಲ್ಯಲ್ಲಿ ಬೋನುಗಳ ನಿಲ್ಲಿಶಿ ಬಲೆ ನಡುವೆ ದೊಡ್ಡ ಮಂಚಿಗೆ ಹಾಕಿಶಿ ಮಂಚಿಗೆ ಕೆಳಗೆ ಕೆಲಊ ಬೋನುಗಳ ಯಿಡಿಶಿ ಗಿಡದೋಪಾದಿಯಲ್ಲಿ ಹಶೀ ಕೊಂಬೆಗಳ ತರಿಶಿ ನೆಡಿಶಿ ರಂಜಣಿಗೆಗಳಲ್ಲಿ ನೀರು ಮದ್ಯ ಸಹಾ ತುಂಬಿಶಿ ಮೇಕೆಗಳು, ನಾಯಿಗಳು; ಕತ್ತೆಗಳು ಸಹಾ ಕೆಲಊ ಬಲೆಯಲ್ಲಿ ಬಿಡಿಶಿ ಮಂಚಿಗೆಗಳ ಮ್ಯಾಲಕ್ಕೆ ಹಗ್ಗಗಳ ಯಳದು ಹಿಂಣೆಂದ್ದಾ ಭೋನಿನಲ್ಲಿ ಹತಿಸ್ತರೆ ಚುಕ್ಕೆ ಹುಲಿ ಪಟಾಯತ್ ಹುಲಿ ಕರಡಿ ಕಾಡಹಂದಿ ಸಹಾ ಹತ್ತೆಂಟು ಹೊರಟು ಬಲೆಯಲ್ಲಿ

ಸುತ್ತುವಾಗಾ ಹಬ್ಬಶೆರಿಗೆ ಬಾದಿಹತ್ತಿ ದಗಲೆಗಳ ತೊಡಿಶಿ ಬಾಯಿ ಮೂಗೂ ಕಂಣು ಮಾತ್ರಾ ಸಂಣ ರಂದ್ರಗಳ ಬಿಟ್ಟು ನೂಲು ಹಗ್ಗದ ಕುಣಿಕೆಗಳಿಂದ್ದಾ ಅಪಾದಮಸ್ತಕವೂ ಜಖಮು ಆಗದಂತ್ತೆ ದಗಲಿಗಳ ಕೈಗಳಲ್ಲಿ ತುಂಡುಗೋಲುಗಳ ಕೊಟ್ಟು ಯೀ ಜಾನವಾರಗಳ ಸಂಗಡ ಜಗಳಕ್ಕೆ ಬಿಡಿಶಿ ಕೆಲವರು ಹುಲಿಹೊಡೆಯುತ್ತೇವೆಂದು ಬಂದವರಿಗೆ ಕತ್ತಿ ಕಠಾರಿ ಗುರಾಣಿ ಸಹಾ ಕೊಟ್ಟು ದಟಿ ಚಲ್ಲಣ ಚೊಗೆ ಟೋಪಿಯಿಂದ್ದಾ ಬಲೆಯಲ್ಲಿ ನಿಲ್ಲಿಶಿ ಖಾಸಾ ಕೈ ಬಂಧೂಕಿ ಗೋಲಿ ಮಾರಿಕೆಯಲ್ಲಿ ನಿಲ್ಲಿಶಿ ಹುಲಿ ಆ ಜವಾನರ ಮ್ಯಾಲೆ ಬಂದು ಬೀಳುತ್ತಲೆ ಅವನೇ ಮರ್ದುಮೀಯಿಂದ್ದಾ ಕೆಲವರು ಹುಲಿ ಹೊಡೆದು ಹಾಕುತ್ತಾ ಯಿದ್ದರು. ಕೆಲವರು ಹುಲಿ ಜವಾನ ಸಹಾ ಕಟಿಕೊಂಡು ಕತ್ತಳಮೇಲಾಗಿ ಹೊರಳೂವಲ್ಲಿ ಮನುಷ್ಯಗೆ ಹುಲಿಪೆಟು ಸಂಧಿಸುವಷ್ಟರಲ್ಲಿ ಖಾಸಾನವರು ತಂಮ್ಮ ಕೈ ಬಂಧೂಕದ ಯಿಂದ್ದಾ ಮಹಲು ಮೇಲಣಿಂದ್ದಾ ಬಂಧೂಕ ಚಲಾಯಿಸುತ್ತಲೆ ಮನುಷ್ಯಗೆ ತಪ್ಪಿ ಹುಲಿವಂದೇ ಗುಂಡಿನಲ್ಲಿ ಠಾರಾಗುತ್ತಾ ವಂದು ದಿನವಾದರೂ ಗುರಿತಪ್ಪದೆ ಜವಾನಗೆ ತಾಕದೆ ಅನೇಕ ಹುಲಿ ಯೀಮ್ಯಾರೆ ಸತ್ತು ಹೋದವು. ಆ ಬಳಿಕಾ ಅಸ್ತಮಾನವಾದ ಕೂಡ್ಲೆ ಬಲೆ ವಂದು ಕಡೆ ಬಿಚ್ಚಿ ವಳಕ್ಕೆ ಆನೆಗಳ ಬಿಟ್ಟು ಸತ್ತ ಹುಲಿಗಳ ತುಳಿಸುತ್ತಾ ಸಂಗಡಲೆ ಆತಷಬಾಜೀ ಕರ್ನಾಟಕ ಹಿಂದೂಸ್ತಾನಿ ದುತರಫೆ ನಾಚರಂಗುಗಳ ಮಾಡಿಸುತ್ತಾ ಬಲೆಸುತ್ತಾ ಬೆಳ್ಳಿಬಾಲೆಯವರು ಅವರ ಹಿಂದೆ ನೂರು ಜನಾ ದೇವಡಿಯೆದುರು ಕಚೇರಿಗಳ ಮಾಳಿಗೆಗಳ ಮ್ಯಾಲೆ ಸಾರೋಡು ಕಟ್ಟಿಸಿ ತಮಾಸೆ ನೋಡುವ ವೂರು ಹೆಂಗಸರುಗಳೆಲ್ಲಾ ಅಲ್ಲಿ ನಿಂತ್ತು ನೋಡುತ್ತಾ ಮಾತಬರು ಅಹಲೆಕಾರ ಶೆಫಾಯಿ ಶೆಫಾಜನರು ಥೊರೆ ಸಮೀಪದಲ್ಲಿ ಮಹಲುಮ್ಯಾಲೆ ಕುಳಿತು ನೋಡುತ್ತಲೆ ಹೊರ ಪಂಜಾಬಿ ನಿಂದ್ದಾ ಕಾರೆಗಾರರು ಬಂದು ತಯಾರು ಮಾಡಿದ ತಖ್ತು ಜಾನೇದಲ್ಲಿ ನವಾಬರು ಕುಳಿತು ಸದರಿ ಹುಲಿ ಹೊಡದಾಗಲೂ ತಖ್ತಿಗೆ ನಿಷತ್ತು ಬರಕಾಷಿನಲ್ಲಿ ಸಹಾ ತೊಡಕೊಂಡೆ ಪಟದಾಳ್ಳ ಬಾಜ ತುತ್ತೂರಿ ಯರಡು ವಿಚಿತ್ರವಾಗಿ ಆಗುತ್ತಾ ಮಹಾಪದವೀ ಅನುಭವಿಸ್ತರು.

ಸಾಬಕು ಶೀಮೆ ಶ್ಯಾನುಭಾಗ ಶಿರಸ್ತೆದಾರ ಮುಗುವಳೀ ತೆರುವ ಕಾಣಿಕೆ ಚಾವಡಿ ಸುಳು ತಪ್ಪು ಹಾಕಿ ಜನರಿಂದ್ದಾ ಹಣಾ ತೆಗೆದುಕೊಳ್ಳುತ್ತಿದ್ದ ಮಾರುಕಟೆಯಿರುಳು ತಪ್ಪಿನ ತೆರಿಗೆ ಶೀಮೆ ದನಗಳಿಗೆ ಬಾಲಗಳ ಯಣಿಕೆ ಮೇರೆ ತೆರುವ ಹಣದ ಬಾಲ ತೆರಿಗೆ ಸಹಾ ಮೊಖೂಪ ಮಾಡಿದರು. ಶೀಮೆ ಅಗ್ರಹಾರ ಮಾನ್ಯ ಪುರವರ್ಗ ವಗ್ಯೆರೆ ಯಿನಾಮಿಗೆ ಅರೆವಾಶಿ ಅರ್ಧ ಮಾಂನ್ಯ ನಡದು ಬಾಕಿ ಅರ್ಧ ಸರಕಾರಕ್ಕೆ ಪೂರ್ವದಲ್ಲಿ ಕೆಲಉ ದಿನ ವಸೂಲು ಆಗುತ್ತಾ ಯಿತೆಂದು ಕೇಳಿ ನವಾಬರು ಕೆಲವು ದಿನ ಅದೆ ಮ್ಯಾರೆಗೆ ನೇಮಿಶಿಯಿದ್ದು ಪುನಹಾ ಆ ಕಲಮು ಮೊಖೂಪು ಮಾಡಿಶಿ ಸರ್ವಮಾನ್ಯತೆ ಅಪ್ಪಣೆಕೊಟರು. ದೇವಮಾಂನ್ಯ ಭಟಮಾಂನ್ಯ ಅಗ್ರಹಾರ ಪುರವರ್ಗ ಪಕೀರ ಜೋಗಿದಾಸ ವಗ್ಯೆರೆ ಮಾನ್ಯವೆಲ್ಲಾ ನಿರುಪಾದಿತವಾಗಿ ಪೂರ್ವಪ್ರಕಾರ ನಡೀತು.

ಪಟ್ಣದ ಸುತ್ತು ಕಾವೇರೀ ನದೀ ಮಧ್ಯೆ ಕಲ್ಲು ಕೆಲಸ್ತ ರೆಗನೀಕೋಟೆ ಬೆಂಗಳೂರು

ನವಾಬರ ಸವಾರಿ ಹೊರಡುವ ವಿವರ

ರಾತ್ರಿ ೨೦ ಘಳಿಗೆ ಆಗುತ್ತಲೆ ದಂಡು ಮೊದಲು ಕೂಚು ನಗಾರಿ ಆಗುವುದು. ಆವಾಗಾ ಪೆಷ್ಕಾನೆ ಮುಂದಣ ಮಜಲಿಗೆ ಸಾಗುವದೂ. ಪೆಷ್ಕಾನೆಯೇನೆಂದರೆ ಖಾಸಾ ಅಡಿಗೆ ಸಾಮಾನು ಹಾಕಿಶಿ ತೆರೆಗಳು ಸಹಾ ಯರಡು ಜೊತೆ ಯಿರುವದರಲ್ಲಿ ಆ ದಿವಸ ಹಾಕಿಯಿದ್ದ ಢೇರೆ ಪರಾಷೆ ವಗ್ಯೆರೆ ವಿನಹಾ ಅಮಾನತ್ತು ಯಿದ್ದ ಮತ್ತೊಂದು ಜೊತೆ ಸಾಮಾನು ಸಂಗಡಾ ಬಾರು ಕುದುರೆ ೪೦೦೦ ಸಹಾ ಹೊರಟು ಮುಂದಿನಾ ದಿನಾ ಹರೆಕಾರರು ಜಹಸೊದೆ ಸ್ಥಳ ನೋಡಿ ಬಂದಿರುವ ಬಳಿ ಹಸಿರು ಜಂಗಾಲಿ ಖಾಸಾ ದೊಡ್ಡ ಢೇರೆ ಹಾಕಿ ಮೇಲೆ ೨ ಚಿನದ ಕಳಶಾ ಯಿಟು ಆ ಢೇರೆ ವಳಗೆ ಮತ್ತೊಂದು ಬಿಳಿ ಢೇರೆ ರೇಷಮೆ ಹಗ್ಗಗಳಿಂದಾ ಉಡಾಯಿಶಿ ಮುತ್ತರದೆ ಢೇರೆ ಕೆಳಗೆ ಮಧ್ಯೆ ಭೂಮಿ ಮ್ಯಾಲೆ ಮೊಳಕಾಲು ಉದ್ದ ಜಗಲಿ ಮಾಡಿ ಭಾರಿ ಜಮುಖಾನೆ ಫರಾಷ ಮಾಡಿ ಖಾಸಾ ಕೂಡುವ ಬಳಿ ಮಲಗುವ ಬಳಿ ಸಹಾ ಬೆಳಿ ಚಿಂನದ ಮಂಟಪಗಳು ಜರದೋಜೀ ಮಖಮಲ್ಲು ಫರಾಷು ಬಿದಸ್ತೂರು ಪರದೇಶಗಳ ತಿಲಾನುಕಾರು ಚಪ್ಪರ ಮಂಚಗಳ ಸುತ್ತಾ ಭಾರಿಕೋಟೆ ಮೇರೆ ಕಟಿಶಿ ಜನಾನೀ ಢೇರೆ ರಾಉಟಿ ಪಾರ್ಶಕ್ಕೆ ಬಬ್ಬರ್ಚಿಖಾನೆ ಬಾದೊ ಕಿನಾರೆ ದೂರವಾಗಿ ಪಾಯಿ ಖಾನೆಗಳು ಯೀದೊಡ್ಡ ಕನತ್ತು ಸುತ್ತು ಬಾರು ಜನಕ್ಕೆ ಕುಂದಟೆಗಳೂ ದೇವಡಿ ಬಾಗಿಲು ಮುಂದೆ ದೊಡ ದೊಡ ರಾಹುಟೀ ದಾರುಲ್ ನಿಷಾ ದೇವಡಿಗೆ ಮುಂದ್ದೆ ಯಡಬಲದಲ್ಲಿ ಸಾಲಾಗಿ ದೊಡ ಚಾಂದನಿ ರಾಹುಟೀ ದಾರುಲ್‌ನಿಷಾ ದೇವಡಿಗೆ ಮುಂದ್ದೆ ಯಡಬಲದಲ್ಲಿ ಸಾಲಾಗಿ ದೊಡ ದೊಡ ತಂಬುಗಳು ನಿಲ್ಲಿಶಿ ಕಛೇರಿಗಳು. ಯಿದರ ಆಚೆ ದೇವಡಿ ಯದುರಾಗಿ ನವಬತ್ತಖಾನೆ. ದೇವಡೀ ಮುಂದ್ದೆ ಯರಡು ಬಾದು ಪಟಾಪಟಿ ಝಾಂಡೆ ನಿಲ್ಲಿಶಿ ದೇವಡಿ ಹಿಂದೆ ತೋಷೆಖಾನೆ ಡೇರೆಗಳು ಆ ಹಿಂದೆ ಬ್ರಂಹ್ಮಪುರ ಝಾಂಡೆ ನಿಲ್ಲಿಶಿ ನಾಮದೋಪಾದಿ ಬಳಿದು ಕೆಂನಿಂದಾ ನಿಲ್ಲಿಶಿ ಆ ಹಿಂದೆ ಫಿಲುಖಾನೆ ಷುತರಖಾನೆ ಚಿಕ್ಕ ಬಾಜಾರು ಮೋದಿಖಾನೆ ಸಹಾ ಆಗಿ ದೇವಡೀ ಮುಂದೆ ನವಬತ್ತು ಖಾನೆ ಆಚೆಗೆ ದುದರ್ಮ ದೊಡ್ಡ ಬಾಜಾರು ಯಿದರ ಆಜೂಬಾಜೂ ನಸರುಲ್ಲಾವಲ್ಲೀ ಮಂಮದ ಬಾಜೂರು ವಗ್ಯೆರೆ ಬಾಜಾರುಗಳು ಯೀಟಾದ ಯಡದಕಡೆ ಕಾರುವಾನ ಕುದುರೆ ಬಾಜಾರದ ಮುಂದೆ ತೋಫುಗಳು ತೋಪಿನ ಮುಂದೆ ಸವಾರರು ದೇವಡಿ ರಸ್ತೆ ರಾಸುದಸ್ತೆ ಥಪ್ಪಿನಲ್ಲಿ ಷಾಗಿರ್ದ ಪೆಷಾಯೀ ಫಉಜಿನ ಸುತ್ತು ಯಡಬಿಡದಂತ್ತೆ ಕುಂದಟೇಗಳ ಹಾಕಿ ಬುಮೊಜೀಬು ಕಿಲ್ಲೆ ಅಹಷಾಮು ಬಾರು ಯಿದರ ಸುತ್ತಾ ಕಂದಾಚಾರ ಯೀ ಸುತ್ತಾ ತಲಾರೆ ಕುದುರೆ ಕಾಯುತಾ ಅಚಿಗೆ ದಂಡು ಸುತ್ತು ಪಾಳೆಗಾರು ಸುಲತಾನರ ಪಉಜುಗಳೂ ಬುರುಜುಗಳೋಪಾದಿಯಲ್ಲಿ ಬ್ಯಾರೆ ಬ್ಯಾರೆ ಬ್ಯಾಯಿಳಿದು ಅದರ ಆಚೆ ಸುತ್ತಲು ಅರೆಹರಿದಾರಿ ಬಿಟ್ಟು ಪುನಃ ತಲಾರೆ ಕುದುರೆ ಪಹರೆ ನಿಂತ್ತು ಫಉಜಿನಲ್ಲಿ ರಿಸಾಲೆಗೊಟ್ಟು ವಗ್ಯೆರೆ ಯಿಷಾರೆ ತಿಳಿಯುವ ನಿಮಿತ್ಯಾ ಜಿನಸಾವರಿ ಝಾಂಡೆಗಳ ನೆಟ್ಟು ಸದರಿ ಮೇರೆಗೆಲ್ಲಾ ಲಯಸ್ಸು ಮಾಡುತ್ತಾಯಿದ್ದರು.

ಯರಡನೆ ಕೂಚು ಬೆಳಗಾಗುವುದಕ್ಕೆ ನಾಲ್ಕು ಘಳಿಗೆ ಮುಂಚಿತವಾಗಿ ಕೂಚಿನ ನಗಾರಿ ಆಗಿ ಆವಾಗಾ ಚೋಪದಾರು ಡಲಾಯಿತರು ಜಹಸೊದರು ಸಹಾಬಂದು ಗುಡಾರಗಳನೆಲ್ಲಾ ಕೆಡಉತ್ತಾ ಮಲಗಿದ್ದವರನೆಲ್ಲಾ ಹೊಡದು ಯಬ್ಬಿಸುವದ್ದರಿಂದ್ದಾ ಜನರು ಯಾವತ್ತು ತುರುಬರವಾಗಿಯದ್ದು ಅಡಿಗೆ ಮಾಡಿ ಅಂನಾ ತಿಂದ್ದು ಹೊರಡುತ್ತಾ ಸದರಿ ವ್ಯಾಳೆ ದಾರಭ್ಯ ವುದಯವಾದ ಆರು ಘಳಿಗೆವರಿಗೂ ಲಾಮುಕಟ್ಟಿ ಮುಂದಣ ಮಜಲಿಗೆ ಘವುಜು ಸಾಗುತ್ತಾ ಅಲ್ಲಿ ತಂಮ್ಮ ತಂಮ್ಮ ಪುಸಲನ ಝಾಂಡೆಗಳ ಗುರುತಿನ ಮೇಲೆ ಗುಡಾರಗಳ ಹಾಕಿ ಉಳದು ಕೊಳ್ಳುತ್ತಾ ಯಿದ್ದರು.

ಮೂರನೆ ಕೂಚು ಬೆಳಗಾದ ಝಾವ ಹೊತ್ತಿಗೆ ನಗಾರಿ ಆಗುವಾಗ್ಯೆ ಖಾಸಾ ಯದ್ದು ಹಮಾಮು ಮಾಡಿ ಭೋಜನಾ ತೀರಿಶಿಕೊಂಡು ಪವನಗಜ ಯಿಮಾಮು ಬಕಷೀಯೆಂಬ ಆನೆಗಳ ಮ್ಯಾಲೆ ಹಳದೀ ಬನಾತು ಅದರ ಮ್ಯಾಲೆ ಕರಿಬನಾತಿನ ಬುಬ್ಬರಿ ಅಂಬಾರಿಯಲ್ಲಿ ಕುಳಿತು ಹಿಂದೆ ಖವಾಶಿನಲ್ಲಿ ಹೂಮಾಮಗಡಿ ಮೊರ್ಚಾಲ್ ಜವಾಹಿರಿ ಚಿಂನದ ಹಿಡಿ ಮೊರ್ಚಾಲ್ ಆಗುತ್ತಾ ಖಾಸೆರು ವಜ್ರದ ಮೊಂಚಿ, ಪಚ್ಚೆಹಾರ, ಮುತ್ತಿನಹಾರ, ಹಮಾಜಿ ನಸು ರತ್ನಗಳ ತುರೆಗಳು ದೊಡದುತ್ತರಿ ಹಮಾಂ ಬುಟ್ಟೆದಾರಿ, ಜಾಮಾ ವಗ್ಯೆರೆ ದೊಡವೆಂಟಿ ಕುಸುಂಬಾ ನಾಸರುವಾಗಿ ಚಿಂನದ ಹುವ್ವಿನ ಪೈತಾಣಿ ವಗ್ಯೆರೆ ೧೨೦ ನೂರು ಇಪ್ಪತ್ತು ಮೊಳದ ಮುಂಡಾಸು ಜವಾಹಿರು ಬಾಜೂ ಬಂದ್ದು ಯೀ ಉಂಗುರಗಳು ಸಹಾ ಶೃಂಗಾರವಾಗಿ ಆನೆ ತಲೆಮ್ಯಾಲೆ ಡಾಲ ಕರವಾರು ಕಟ್ಟಿ ಸವಾರಿ ಹೊರಡೂವಾಗ್ಯೆ ಆನೆ ಹಿಂದಕ್ಕೆಂಪುಕುಡುತೆ ಕೆಂಪು ಸಂಯಿಟಿ ಆ ಹಿಂದೆ ಹೆಸರು ಕುದುರೆ ಹಸರು ಸಂಯೀಟಿ ಖಾಸಾ ಬರುದಾರು ಅವರ ಹಿಂದೆ ಹಸುರು ಕೆಂಪು ಬನಾತು ಬೆಳ್ಳಿ ಅಂಬಾರಿಗಳಲ್ಲಿ ಸಹಾ ಮೊದಾತ್ತ ಜನರ ಸವಾರಿ ಆ ಹಿಂದೆ ಅಲಿನಪತಿನ ಆನೆ ಮೊಹೆ ಮರತಬ ಅಲ್ಲಿಂದ ಸುತ್ತಗಟ್ಟಿ ಕುದುರೆ ಸವಾರರು ಸಹಾ ಬರುತ್ತಾ ಖಾಸಹ ಆನೆ ಮುಂಭಾಗದಲ್ಲಿ ಬೆಳಿ ಚಿನ ರತ್ನ ಮುಂತಾದ ಜೀನುಪಟತರಗಳು ವಗಯರೆ ಹುಂಮತ ಆಗಿ ಮುತ್ತುಗಳು ಪೋಣಿಸಿದ ಕುದುರೆಗಳು ಮಖಮಲ್ಲು ದಾಮಾಸು ವಗಯರೆಮೆರೆ ಜರದೂಜಿ ತರಹದಾರಿ ಕೆಲಸಗಳ ಮಾಡಿದ ಜಿನಪೊಷು ಮಡುತಕು ವಗಯರೆ ಸ್ರುಂಗರಿಶಿರೆ ಸಮಾನಿ ಬಾಗಡೊರುಗಳಿಂದ್ದಾ ಹಾಸು ೧ಕ್ಕೆ ಆರು ಸಾವಿರದಿಂದ್ದಾ ಹದಿನಾಲ್ಕು ಸಾವಿರ ರೂಪಾಯಿವರಿಗೂ ಖರೀದಿ ತೆಗೆದು ಹಮಾರಂಗಿನ ಕಚ್ಚಿ, ತುರುಕಿ, ಮೊನ ಕಾಟಿಪಾಡ, ಗುಜರಾತ ಯಿರಕ ಅರಬ್ಬಿ ವಗ್ಯೆರೆ ಬಹುಬಾರು ರಾಸುಗಳು ದರರಾಸು ರೊಜಿನಾ ಹುರುಳಿ ಕಡಲೆ ಉದ್ದು ಹೆಸರು ಯಿಟ್ಟು ಗೋಧೀ ಹಿಟ್ಟು ಬಾದಾಮೂ ಹುರಿಗಡ್ಲೆ ಸಕ್ಕರೆ ತುಪ್ಪಾ ಬೆಂಣೆ ಹಾಲು ಮಸಾಲೆ ಸುದಾ ನಾಲ್ವತ್ತು ಶೇರು ದಾಣೀ ಖುರಾಕಿ ಬಾಬತ್ತು ಸವಾರಿ ಕುದುರೆ ೨೦೦ ಜೆಖೆಬಿನಲ್ಲಿ ಬರುತ್ತಾ ಮೋತಿ ನವರತ್ನ ಪಂಚರತ್ನ ಹರಿಸರಾಜ ವಗ್ಯೆರೆ ಸುಜಾತ ಕುದುರೆಗಳು ಅದರಿಂದಾ ಮುಂದೆ ಅಲಿಗೋಜು ಯೀ ಮುಂದೆ ಜರತಾರಿ ಕೆಂಪು ದಮಾಸು ಪಟಗಳು ಸಹಾ ಬಾಣಗಾರು ಜನ ೧೦೦ ಯೀ ಮುಂದೆ ಮಾತಬರು ಚೋಪದಾರು ಗೊಟಕಸ್ತು ಹರಿಕಾರ ನಾಯಕರು ಸಹಾ

ಕುದುರೆ ಸವಾರಾಗಿ ಯೀ ಚೋಪದಾರ ಕೈಯಲ್ಲಿ ಬೆಳ್ಳಿ ಚಿಂನದ ಆನೆಗಳು ಸಹಾ ಬರುವದೂ ಯೀ ಮುಂದೆ ಹಿಂದೂ ಯಿಸಲಾಮು ಬಟಂಗಿ ಚೋಪದಾರ ಮಹಲುದಾರ ಚಿಲೆಬುದಾರ ಯೀ ಮುಂದೆ ಸುತ್ತ ಸವಾರು ೪೦೦೦ ಜರಿ ಪಟಕಾ ಭಾರಿ ಆನೆ ೧ ಯೀ ಮುಂದೆ ಬನಾತುರೇಷಂ ಶ್ರುಂಗಾರದಿಂದ್ದಾ ಯಿಂನ್ನೂರು ಮುಂನ್ನೂರು ಕಾಲಾಡಿ ವಂಟೆ ಸಹಾ ಸವಾರರು ಸದರಿ ಖಾಸೆರು ಆನೆ ಬಳಿಯಣಿಂದ್ದಾ ರಸ್ತೆ ದಾಸ್ತು ದಸ್ತೆ ಥಪ್ಪ ೨೦೦೦ ಬೆಳ್ಳಿಕಟ್ಟಿನ ಬಾಳೆಯವರು ಕೆಲಉ ಬಾಳೆಗಳಿಗೆ ಕೆಂಪು ಹಸುರು ಬನಾತಿನ ಮೇಲೆ, ಬೆಳ್ಳಿ ತಗಡು ಸುತ್ತಿದ ಮುಂಕುಣೀ ಸುತ್ತಿನ ಬಾಳೆಯವರು ಯಿವರ ಬಾಜು ಹೊರಭಾಗಕ್ಕೆ ಬಾರು ಲಾಮು ಅವರ ಹೊರ ಭಾಗಕ್ಕೆ ಕುದುರೆ ಸವಾರು ೧೦೦೦ ಸಹಾ ಯೀ ಮ್ಯಾರೆಗೆ ಖಾಸವಾರಿ ಬಂದ್ದೂ ಖಾಸ ಜಂಗಾಲ ಡೆರೆಕ್ಕೆ ದಾಖಲಾಗುತ್ತಲೆ ಖಾಸಾ ಡೇರೆ ಸುತ್ತಾ ಕಿಲ್ಲೆದೋಪಾದಿ ಹಾಕಿಯಿರುವ ಕುಂದಟೆಗಳಲ್ಲಿ ಯರಡು ಸುತ್ತಿನಲ್ಲು ಬಾರು ಬಾಳೆ ಸಹಾಕೊತು ಕಟ್ಟಿ ನಿಲ್ಲುವಖಾಯಿದೆ.

ಬಾರಿನ ಜನಕ್ಕೆ ಖಾಯಿದೆ ಕೆಂಪು ಕುಡತೆ ಜನ ೨೦ ವರುಷದಿಂದ್ದಾ ಮೂವತ್ತು ವರುಷದ ವರಿಗು ಮಜಬೂತ ಬೆನಾ ಹಮಾತಾಂಮಿನಲ್ಲೂ ಅವಲ್ ಹಸರು ಕುಡತೆ ೩೦ ರಿಂದ್ದಾ ನಾಲ್ವತ್ತು ವರುಷದವರಿಗೂ ದಯಂ ೪೦ ತ್ತರಿಂದ್ದಾ ಐವತ್ತರಿಂದಾ ೫೫ ಅರುವತ್ತರವರಿಗೆ ಮಜಬೂತ ಜನ ಕಂಬನಾತು ಕುಡತೆ ಚಹರಂ ಯೀ ಜನಕ್ಕೆಲ್ಲಾ ಕಬ್ಬಿಣದ ಪಟ್ಟಿ ಮೆಲೆ ವಂದೇ ಜಿನಸಾಗಿ ಕರಿ ಮುಂಡಾಸು ಮೈಸನೇನ್ನು ಡಬಾತೋಟಿ ಗುಡಗಿ ಜನ ೭ಕ್ಕೆ ಪಹರೆ ೧ಕ್ಕೆ ಹವಾಲದಾರಿ ಜನ ೧ ಯೀ ಮ್ಯಾರೆ ಹದಿನೈದು ಪಹರೆಕ್ಕೆ ರಿಸಾಲದಾರ ಜನ ೧ ವರದಿ ೧ ನಯನವಾದ ಸಂಜೀ ಬಾಜ ಯೀಮ್ಯಾರೆ ಹತ್ತು ರಿಸಾಲೆಗ ಕುಮುಂದಾರ ೧ ಮುತ್ಸದಿ ೧ ತೋಪು ೨ ಆನೆ ೧ ಯಾ ಪ್ರಕಾರ ಖಾಯಿದೆ ಮೊಕರೂರು ಯಿದರಮ್ಯಾಲೆ ೨೦೦೦ ಸಾವಿರ ಜನ ಬಾರಿಗೆ ಕುಮುಂದಾರ ೧ ಸಹಾ ಸರದಾರ ಖಾನ ಮಮದಲ್ಲೀ ಕುಮುಂದಾರ ಅಲ್ಲೀ ಅರಬ ಶೇಖ ಅನಸರ ನಂದಾಜೀ ವಗೈರೆ ಬಹಳ ಜನ ನೌಕರಿ ಯಿದ್ದರು.

ಕುದುರೆ ಸವಾರರಿಗೆ ಖಾಯಿದೆ ಮೊಖಮಲ್ ಟೋಪಿ ಮ್ಯಾಲೆ ಕಬ್ಬಿಣದ ಪಟ್ಟಿಗಳ ಮದಾಯಿಶಿ ಹಣೆ ಮೇಲಕ್ಕೆ ಉಕ್ಕಿನ ಚಂದ್ರವಂಕಿ ಉಭಯ ಪಾರ್ಶ್ವ ಹಿಂಭಾಗಕ್ಕೆ ಸಹಾ ಅಂಗೈ ಅಗಲ ಮೊಳ ಉದ್ದ ಅಸ್ತಿನೀ ಮಜಬೂತಾದ ಕಶೆ ೩ ಸಹಾ ಟೋಪಿ ೧ ಮೊಳ ಉಥ ಕಿರೀಟದೋಪಾದೀ ೧ ಕೆಂಪು ಕಿನಕಾಪು ಹತ್ತಿ ಹಾಕಿದ ಅಗಲಾನೆ ತೋಳು ಮೊಳಕೈ ತಳಗೆ ತೋತಿ ನೇತಾಡೂವ ಪಟ್ಟೆಕುಚ್ಚುಗಳ ಬಾಬತ್ತು ಚಿಲತೆ ೧ ಷರಾಮಾಷಕ್ಕು ಕರೆ ಕಿನಕಾಪು ಮೊಂಬೈದಾರ ಪಾಯಿಜಾಮಾ ೧ ಬೆಂನ್ನು ಮ್ಯಾಲೆ ಕಮಾನ್ನು ತರಕಷು ಹೊದೆ ಸೊಂಟದಲ್ಲಿ ದವಾಲೀ ತರುವಾರು ಕೈಲಿ ಭಾಳೆ ಸೊಂಟದಲ್ಲಿ ಕಠಾರಿ ಬಾಕು ಕುದುರೆ ಮುಂಬಾಗ ಯರೆಡು ಕಡೆಗೂ ಪಿಸ್ತೂಲು ೨ ಕುದುರೆಗೆ ಕೆಂಪ್ರ ಬನಾತು ಅಹರಿದಾರ ಮೊಖಪಟ್ಟಾ ಬದಸ್ತೂರಿ ದುಮತಿ ಕಾಚಾ ಸಫೆದ ಜೇರ ಬಂದ್ದು ದೊಢ ಬೋಗೀರು ಜೀನು ಫಿರಂಗನ ಗಜ ಸಂಣ ರಕ್ಕೆಗಳ ಮ್ಯಾಲೆ ನಾಲ್ಕು ಕಡೆಗೂ ವಂದ್ದೊಂದು ಪೊದೆ

ಮೂರು ಉಧಾನೆ ಕೆಂಪು ಬನಾತಿನ ಕಶೆಗಳು ಕೆಲವರ ಕೈಯಲ್ಲಿ ಕರೋಲುಗಳು ಕೆಲವರ ಕೈಯಲ್ಲಿ ಬಾಳೆಗಳು ಯೀ ಮ್ಯಾರೆ ಶತ್ರು ಭೀಕರವಾಗಿ ಕುದುರೆ ಫಉಜು ಅಯಸ್ಸು ಯಿರುತ್ತಾಯಿತ್ತು. ಯಿವರಿಗೆ ತಲಬು ದರಮಾಸು ದರಮಹ ಮೂವತ್ತು ರೂಪಾಯಿ. ಹತ್ತು ರಾಶಿಗೆ ವಂದುಯಂಮ್ಮತ್ತಿ ಯಾಜಿ ಬಾರಗೀರರಿಗೆ ಶರಾ ರೂಪಾಯಿ ೨೦ ಯೀ ಮ್ಯಾರೆ ಸಲುವದಕ್ಕೆ ಜಹಗೀರು ನಗದಿ ಸುದಾ ದಸಮಾಹೆ ಯಿದದ್ದು ವಜಾ ಹಾಕಿ ಆಖೈರು ಸಾಲ ಲೆಖ್ಖಾನೋಡಿ ಕರಾರು ಬಾಕಿ ಹಣಕ್ಕೆ ಸದರಿ ಜಿನಸು ಯಾವತ್ತು ಸರಕಾರದಲ್ಲೆ ತಯಾರು ಮಾಡಿಶಿ ಜನರ ತಲಬು ಬಾಕಿಗೆ ಕಟ್ಟಿ ಕೊಡುತ್ತಾ ನಾನೂರು ಕುದುರೆವರಿಗೂ ರಿಸಾಲದಾರಿ ಖಿಜಮತ್ತಿನ ಮೇಲೆ ಸುಬ್ಬರಾಊ ಘೋರ್ಪಡೆ ಸುಬ್ಬರಾಊಘಾಟಕೀ ಸೈದವಾಸಲ ಯಿದರಸ ಸಯ್ಯಾಜೀ ಸಾಳಂಕಿ ನಬೀಚಿಕ ಕನಿರಾಮ ಸುತರ ಶಿಂಗೂ ಬಲವಂತರಾಊ ಚಂದ್ರರಾಊ ಬರಕ್ಕಿ ದಲೆಲದಿಲ್ಲಾಖಾನ್ ಯಬಿಶಖಾನ್ ವಂಟಿ ಕುದುರೆಶ್ರೀಪತಿರಾವು ಮದ್ದುಖಾನಾ ಗಾಜೀಕಾನ ವಗೈರು ಯಾಖಿಫ ಹಿಂರಧಾಂಗಲ ಹಿರುವೇವಡ ಮಂನ್ನಾ ಚವುದರಿ. ಯಿರಚವುದರಿ ಝುಟಂಗಾ ಖಾತರಾ ಸುಬ್ಬರಾವು ಮೊಹ ಶ್ಯಾಪಿರಷಾ ರಾಜೇಷಾ ಮಹಮದ ಹುಸೇನ್ನು ೧ ಛತ್ರ ಶಿಂಗೂ ಫತ್ರೋಜಿ ಮಾಂಡೆ ರಣಜಿತಶಿಂಗೂ ಶೇಖಚೊಂಡೆ ಮಹಂನುದ ಜಾಪರ ಶಿವಾಜೀ ಘೋರ್ಪಡ ಉಂಮಾಜಿ ರಾಮಚಂದ್ರ ಖಾತಜತಖಾನ್ ಬಿಲೋಜೀ ಅಜಮತಖಾನ್ ಮಯಾಣಿ ಮಹಂಮದ ಮಲಿಕ ಸೈದಯಾಶೀನ ಗಂಗಾರಾಮ ನೂರಲ್ಲಾಪ್ಸರಖಾನಾ ಭುಜಂಗರಾವು ವಾಗ್ಮೊಡೆ ಮಲ್ಲಾರಾವು ಚಿಹೋಳ್ಕರ ಚಿಮಣಾಜೀ ಪರಖೋ ವಗೈರೆ ಬಹುಜನ ಜಮಾದಾರು ಸರಕಾರದ ನೌಕರಿಯಲ್ಲಿ ಯಿದ್ದರು.

ಮಸಕತ್ತದಲ್ಲಿ ಸಹಾ ಯಿಂನ್ನು ಬಹು ಕಡೆ ಕೋಟಿಗಳಯಿಟ್ಟು ಹಮಾಜಿನಸು ವ್ಯಾಪಾರ ಮಾಡಿಸುತ್ತಾ ರೂಮೂವರಿಗೂ ವಕೀಲರ ಯಿಟ್ಟು ಹರರೋಜು ಸಕಲ ಸಂಸ್ಥಾನಗಳ ಬಾತಮೀ ತರಿಶಿಕೊಳ್ಳುತ್ತಿದ್ದರು.

ಶೇರು ಕೊಳಗ ಖಿಂಡುಗಾ ಮುದ್ರೆ ಕೊಲು ವುಂಗುರ ಸಹಾ ಪಟ್ಟಣದ ಶೀಮೆಯಲ್ಲೆಲ್ಲಾ ಮೊದಲಿನ ಚಿಕ್ಕದೇವರಾಜ ಒಡೆಯರ ಖಾಯಿದೆಮೇರೆ ನಡಸುತ್ತಾ ಹೊಸ್ತಾಗಿ ಕಟ್ಟಿದ ಶೀಮೆಯಲ್ಲೆಲ್ಲಾ ಆಯಾಯಾ ರಿವಾಜು ನಡಸುತ್ತಾ ನಗರದ ಶೀಮೆಯಲ್ಲಿ ಮಾತ್ರ ಹೈದರ ಮುಹೈದರಿ ವರಹಾ ಜಾರಿ ಮಾಡಿದರು.

ಪಟ್ಟಣದ ಕರ್ತರಿಗೆ ಚಿಕ್ಕಕೃಷ್ಣರಾಜ ವಡೆಯರು ಜೀವಂತರಾಗಿ ಯಿರುವ ಪರಿಯಂತ್ರ ೩,೦೦೦೦೦ ವರಹಾದ ಶೀಮೆ ನಡಸುತ್ತಾ ಯಿದ್ದರು. ಅನಂತರ ಅವರ ಮಕ್ಕಳು ಪಟ್ಟಿ ೨ ಹಾಲಿ ಚಾಮರಾಜ ವಡೆಯರು ಪಟ ೧ ಯೀ ಮೂರಕ್ಕೂ ನವಾಬರು ಸಂದು ಹೋಗುವ ಪರಿಯಂತಲೂ ಯಳವಂದೂರು, ಹುಲ್ಲಳ್ಳಿ ಮಂಗಲ ಮೂಗೂರು ವಗೈರೆ ಆಮೀಲ ಬಹಲ ಬರತರ್ಫು ಮಾತಾ ನವಾಬರಲ್ಲಿ ಆಗುತ್ತಾ ಹಣ ಕಾಸು ಕರ್ತ್ತರ ಮನೆ ಖರ್ಚಿಗೆ ಸಲುತ್ತಾ ೧೦೦೦೦೦ ವರಹಾದ ಶೀಮೆ ಯಿದಲ್ಲದೆ ದೊಡ ಉಗ್ರಾಣ ಚಿಕ್ಕ

ಉಗ್ರಾಣ ಪೊಂಮಿನ ಚಾವಡಿ ಬೆಂಣೆ ಚಾವಡಿ ಹುಲ್ಲುಮೆದೆ ಯಮ್ಮೆ ಹಸುವಿನ ಕರೊ ಹಟ್ಟಿಗಳು ಪಟ್ಣ ಮೈಸೂರು ಹೊಬಳಿ-ಅಷ್ಟಗ್ರಾಮಗಳ ಮೇಲೆ ಸಹಾ ಕರ್ತರ ಮನೆ ಪಾರುಪತ್ಯಗಾರ ವೀರತ್ಯೆನ ಚೀಟಿನಮೇಲೆ ಕೇಳಿದ ಜಿನಸು ಕೊಡುವಂತ್ತೆ ತಾಕೀತಿ ನವಶಾತ್ರೆ ವಾಲಗ ಪ್ರಥಮ ಕೊನೆ ಯರಡು ದಿವಸ ಕರ್ತರಲ್ಲೂ ತಂಮ್ಮಲ್ಲೂ ಮಿಕ್ಕಿನ ದಿನಗಳು ಸದರಿ ೩ ಜನಊ ನವಾಬರಲ್ಲಿ ಬರುತ್ತಾಲೆ ಯದ್ದು ನಿಂತು ಸಮಹಾಶಿಗೆ ಯದುರಾಗಿ ಕುಳಿರಿಶಿ ಆಗಾಗ್ಯೆ ಹಂಣು ಹೂಊ ಜವಾಹಿರು ಕಾವಡೆ ಸಹಾ ಕಳುಹಿಸುತ್ತಾ ನಿತ್ಯದಾನ ವಗ್ಯೆರೆ ಅವರ ಪೂರ್ವದ ರಿವಾಜು ಮ್ಯಾರೆಗೆ ಯುಕ್ತವರಿತು ಮಾಡಿಸುತ್ತಾ ಮರ್ಯಾದೆಯಿಂದ್ದಾ ಯಿಟ್ಟುಕೊಂಡು ಯಿದ್ದರು.

ಕರಾಚೂರಿ ನಂಜರಾಜೆ ಅರಶಿನವರು ಜೀವಂತರಾಗಿ ಯಿರೂವರಿಗೂ ಕಳಲೆ ತಾಲೊಕು ವಗ್ಯೆರೆ ೬೦ ವರಹಾದ ಶೀಮೆ ಅವರ ಮಹಲು ಖರ್ಚಿಗೆ (ಬಿ) ಟ್ಟು ಸದರಿ ಮೆರೆಗೆ ದೊಡ ಉಗ್ರಾಣ ವಗ್ಯೆರೆ ಬೇಕಾದ ಜಿನಶಿಗು ಹುಕುಮತ್ತು ಬಹವಿಟ್ಟು ಆಗಾಗ್ಯೆ ಹಂಣು ಹುಊ ವಗ್ಯೆರೆ ಕಳುಹಿಸುತ್ತಾ ಕದಾಚಿತು ತಾವು ಅವರವರ ಬಳಿಗೆ ಹೋಗಿ ಬರುತ್ತಾ ಅವರ ಕೊಮಾರ ಮದುವೆ ಮಾಡಬೇಕೆಂದು ನವಾಬರು ತಿಳಿದಾಗ್ಯೂ ವಪ್ಪಿಕೊಂಡು ಸುಂಮ್ಮನೆ ಯಿರುತ್ತಾ ಅವರ ಕಾಗದ ಪತ್ರಗಳು ಮಾತ್ರ ಹೊರಗೆ ಸಾಗದಂತೆ ಮುಷ್ತಕಿ ಪಹರೆ ಯಿಟ್ಟು ಮರ್ಯಾದೆಯಿಂದ ಯಿದ್ದು ಅವರು ಕೈಲಾಸಯಾತ್ರೆ ಮಾಡಿದ ಬಳಿಕ ಕಳಲೆ ವಗ್ಯೆರೆ ಜಪ್ತುಮಾಡಿ ಅವರ ಮಹಲು ಖರ್ಚಿಗೆ ಜಯ ಸಂವತ್ಸರದಲ್ಲೂ ತಸದೀಕು ಮೊಕರೂರು ಮಾಡಿ ಪಟ್ಣದಲ್ಲೆ ನಗದು ಜಿನಸು ಸಹಾ ಸಲೂವಂತ್ತೆ ನೇಮಕಾ ಮಾಡಿಸ್ತರು.

ಸಾಬಕು ದಿಂಡಗಲ್ಲಲ್ಲು ನವಾಬರು ಯಿದ್ದಾಗ್ಯೆ ಸವಾರಿ ಹೋಗಿ ಬರುತ್ತಾ ವಂಟಿ ಕುದುರೇಲಿ ಬರುವಾಗಾ ಮದನಂಮ್ಮನೆಂಬ ಕೊರಚರ ಖೂಬುಸೂರತ್ತು ಹೆಂಗಸೂ ಗಂಡಗೆ ಹಿಟ್ಟುಕೊಂಡು ಹೊಗುವಳ ಕಂಡು ಆ ಹಿಟ್ಟ ತನಗೆ ಯಿಡಹೇಳಿ ಕೇಳಿ ಕೇಳಿದಲ್ಲಿ ತಂನ್ನ ಗಂಡನ ಪಾಲು ಅಂನಾ ಕೇಳುವುದಕ್ಕೆ ನೀನು ಗಂಡನೆಯಂದ್ದು ಆಕೆಯು ಕೇಳಲಾಗಿ ನೀನು ವಪ್ಪಿದರೆ ಹಾಗೆ ಆಗಲಿ ಯಂದ್ದ ಪ್ರಯುಕ್ತ ಆಕೆ ವಪ್ಪಿ ಯೀತನ ಮಹಲು ದಾಖಲಾದ್ದರಿಂದ್ದಾ ಮದೀನಬೇಗಂ ಯಂದು ಹೆಸರಿಟ್ಟು ಮಹಲಿನಲ್ಲಿ ಆಕೆ ಹುಕುಮತ್ತು ಆಖ್ಯೆರುವರಿಗೂ ಬಹಳವಾಗ ನಡಿಯುತ್ತಾಯಿತ್ತು. ಕತ್ತಿ ಛಾಯಾ, ಗುಂಡಿನ ಪೆಟ್ಟು ಶೂನ್ಯಾದಿಗಳು ಮುಂತ್ತಾದ ಯಾವುದೂ ಕೆಂದದ್ದಂತ್ತೆ ಬಹಳ ಕ್ರಿಯೆಗಳು ಮದ್ದು ಮಂತ್ರಗಳು ಸಹಾ ಆಕೆಯಿಂದ್ದಾ ಬಹು ಊರಟೆ ತಿಳಿದು ಅತಿ ಪ್ರೇಮದಿಂದ್ದಾ ಯಿಟುಕೊಡು ಯಿದ್ದರು.

ಚಿಕಮಗ ಕುರಿಂ ಸಾಬರ ತಾಯಿ ಚಿಕಂದಿನಲ್ಲಿ ಹೊದರಿಂದಾ ಟಿಪು ಸುಲತಾನರ ವಾಲಿದಾ ಸಾಬರು ಯೀ ಮಂದಿನ ಭೇಗಂ ಸಹಾ ಆರ್‍ಯೆಕೆ ಮಾಡಿದರು.

ಸಬಕು ಗರುಕೊಡೆ ಜಹಾಗಿರದಾರ ಮೀರಕುತ್ತುಬುದ್ದಿನರಿಗೆ ಮಲಿಕ ಆಸಲಂ ಖಾನ ಬಾಹದರ ನಾದನಿ ಮಗಳ ಮದುವೆ ಆಗಿ ಯಿದ್ದು ಯಾ ಕುತುಬುದ್ದೀನರ ತಂಮ್ಮ

ಮೀರ ಅಲ್ಲೀ ರಜಾ ಖಾನರು ಆರ್ಕಾಡಲ್ಲಿ ಯಿದ್ದಾಗ ನಾಜರ ಜಂಗ ದಂಡು ಬದಲ್ಲಿ ಹೈದರಲ್ಲಿ ಕಾನರಿಗೆ ಯಿಮರಲ್ಲಿ ರಜಾಖಾನರ ತಂಗೀ ಪಾತಿಮಾ ಬೇಗಂ ಯಂಬ ಹೆಂಗೂಸು ಸೈಯದ ಜಮಹಾಮದಖಾನರ ತಾಯಿ ಸುದ್ಯ ಸಂದಿದ ಆಸ ವಿಂಬಾನ ಬಹಾದರ ವರೆನ ಮಡಗಿ ಮದುವೆ ಮಾಡಿಸ್ತರು.

ತತ್ಪೂರ್ವದಲ್ಲಿ (ಸಾ) ದಾತ್ತ ಮೊಕದುಂ ಅಲ್ಲಿ ಕಾನರು ಯಿಸುಮ ಯಿಲ ಖಾನರು ತಂಗಿ ಹೈದರಲ್ಲಿ ಕಾನರಿಗೆ ಮದುವೆ ಆಗಿಯಿದ್ದು ಕಾಲು ಕುಂಟುಬಿದ್ದು ಆಕೆ ಮನೆ ಶೇರಿ ಯಿದಳು.

ವಿಕಾರಿ ಸಂವತ್ಸರದಲ್ಲಿ ಕಡಪೆ ರಜ್ಜೂಖಾನರ ಮಗಳಂನ್ನು ನಾವಾಬ ಹೈದರಲ್ಲಿ ಖಾನರು ನಿಕಾಮಾಡಿಕೊಂಡು ಬಕಷೀ ಜಹಂ ಯಂದು ಹೆಸರಿಟ್ಟರು.

ನವಾಬ ಹೈದರಲ್ಲಿ ಖಾನರಿಗೆ ಹುಟ್ಟುವಳೀ ಹುಟುತ್ತಾ ಬಂದ ಹೆಂಣು ಮಕ್ಕಳನೆಲ್ಲಾ ಸಂಹ್ವಾರವೆ ಮಾಡುತ್ತಾ ಯಿದ್ದರಾಗಿ ಮದೀನಾ ಬೇಗಂ ಹೊಟೆಲಿ ಹುಟಿದ ಹೆಂಣು ಮಕ್ಕಳು ಜನ ೨ ಮತ್ತೊಂದು ಸುತ್ತಾ ಜಾದಿ ೧ ಸಹಾ ಜನ ೩. ಉಳಿದ ಪೈಕಿ ಕಂದಾಚಾರ ಬಕರೋ ಷಾಫೀಜಲ್ಲಿ ಖಾನರಿಗೆ ಕೊಟ್ಟ ಹೆಂಣು ೧ ಬಾಕೀ ಮದೀರಿ ಬೇಗಂ ಬಾಬತ್ತು ಜನ ೨ ಕೆ ವಿವರ. ಶೀರ್ಯದ ದಿಲಾವರ ಖಾನರ ಅಂಣ ದಿಲ್ಲಾ ದಿಲಾವರ ಖಾನರ ಮಗ ದಲೀಲ ದಿಲ್ ಖಾನರ ತಂಮ್ಮ ನೂರುಲ್ಲಾಪ್ಸರು ಖಾನರಿಗೆ ಕೊಟ್ಟ ಪಾಪಾಬೀಬಿ ೧ ಸವಣೂರು ನವಾಬ ಹಕೀಂ ಖಾನರ ಮಗ ಅಬ್ದುಲ್ ಖೈರುಖಾದಲೇಲ ಜಂಗರಿಗೆ ಕೊಟ ಸುಲತಾನಬೆಗಂ ಜನ ೧ ಸಹಾ ಯೀಮ್ಯಾರೆ ಮೂರು ಜನ ಮದುವೆ ಆಯಿತು.

ನವಾಬರ ಅಂಣ ಶಾಬಾ ಸಾಬರ ಮಕ್ಕಳು
೧ ಖಾಸೆಲಾಲಿಮಿಯಾ ನವರಿಗೆ ಕೊಟ್ಟು ಯಿದ್ದ ಹೆಂಣು ೧
೧ ಮದ್ದಗಿರಿ ಸೈದ ಯಾಶೀನಗೆ ಕೊಟ್ಟು ಯಿದ್ದ ಹೆಂಣು ಖರ್ಚಿ ಬಾಬತ್ತು.
೧ ತರಜೀತ ಅಲ್ಲೀ ಖಾನರಿಗೆ ಕೊಟುಯಿದ್ದ ಖರ್ಚಿಬಾಬತ್ತು ಹೆಂಣು ಜನಾ
೧ ಮೊಗಲಾಯಿ ಹೆಂಗಶಿನಬಗೆ ಹೆಂಣು ಮಗಳು ಶಾಪೇಪತ್ತೆಸಾಬ ಯಂಬಾಕೆ ಜನ ೧

ಯೀ ಶ್ಯಾಬಾ ಸಾಬರ ಯಿಂನೊಂದು ಹೆಂಣು ಮಗಳು ಅಲ್ಲದೆ ಗಂಡು ಮಗ ಬಾದೂ ಮೀಯಾ ಸ್ವಲ್ಪ ಪೈತ್ಯಗಾರನ ಹಗಾಗಿ ಪಟ್ಣದಲ್ಲಿ ನರಶಿಂಹ ಸ್ವಾಮೀಗುಡೀ ಬಳಿ ವಂದು ಮನೆಯಲ್ಲಿ ಚಿಕ್ಕ ಪುರದ ಅರಸು ಮಕ್ಕಳು ಜೊತೆಗಾಗಿ ಯಿದ್ದವರು ಜ್ವತೆಯಲ್ಲಿ ಯಿದ್ದು ನಿತ್ಯಾ ಖಾನಕಾವಡೆ ವಗೈರೆ ಹಜೂರಿಂದ್ದಾ ಯಿದ್ದು ವಿಳಂಬ ವಿಕಾರಿ ಸಂವತ್ಸರದವರಿಗೂ ಯಿದ್ದನು.

ಯೀ ಧೊರೆತನದಲ್ಲಿ ಯುಕ್ತಿ ಚಾತುರ್ಯಾ ನಿರಾಲಸ್ಯ ದರ್ಪ ಹುಷಾರು ಅಗ್ನೆ ಪ್ರಗ್ನೆ ಪರಾಕ್ರಮಾ ತರದೂದು ಬಾತಾಮೀ, ಪವುಜು ಬಂದೀ, ದ್ರೌವ್ಯ ಸಂಪಾದನೆ, ವಿಚಕ್ಷಣೆ, ದೇಹಬಲಾ ಜನರ ಪುಸಲಾಯಿಸುವುದು, ತ್ಯಾಗ ಭೋಗ ಶಿವಾಯಿತನಾ,

ಅಂಗೇಜು, ಹೆಸರುವಾಶಿ ಆರ್ಜಿ ತಾಫೆ, ಅದೃಷ್ಟ ಬಲಾ, ಧೈರ್ಯ, ಖ್ಯಾತಿ, ದೇವ ಬ್ರಾಂಹ್ಮರ ದ್ವೇಷ ರಹಿತ ರಾಜದ್ರೋಹ, ಮುಂತ್ತಾಗಿ ಯಾವದರಲ್ಲೂ ಯಾವದೇಶಾಧಿಪತಿಗಳೂ ಹಿಂದಕ್ಕೂ ಮುಂದಕ್ಕೂ ಸಹಾ ಯಿಂಥಾ ಪುರುಷ ಯಾವುದರಲ್ಲಿಯೂ ನ್ಯೂನತೆ ಯಿಲ್ಲದ್ದರಿಂದ್ದಾ ಯಿಂಥ್ಥಾ ಪುರುಷ ಯೀತನ ಸಮಾನಕ್ಕೆ ಯಿಂನ್ನೊಬ್ಬ ಯಿದ್ದದ್ದು ಯಿರುವದೂ ಮುಂದೆ ಆಗುವದೂ ಸಹಾ ಸುಳೂ. ಯೀತನೆ ಸಕಲ ಗುಣಾಭಿರಾಮ ಪುರುಷನೆಂಬುವದೂ ಸತ್ಯಾ. ಶುದ್ಧಾ ಯೇನಂದರೆ ಯೀತನಲ್ಲಿ ಸಕಲ ಗುಣಗಳೂ ಯಿರುವದರಲ್ಲಿ ಹಾಲಲ್ಲಿ ವಿಷ ಬೆರೆದಂತ್ತೆ ಯಿದ್ದ ದುರ್ಗುಣಗಳ ವಿವರ. ರೂಪುವತ್ತಿ ಹೆಂಣುಗಳು ಯಲ್ಲಿ ಯಿದ್ದರೂ ಬಲವಂತ್ತದಿಂದ್ದಾ ಹಿಡಿತರಿಶಿ ಮಹಲಿಗೆ ಹಾಕಿಕೊಂಬ ಖಲಂ ೧ ನಿಷ್ಕಾರಣ ವಬ್ಬರ ಮ್ಯಾಲೆ ವಬ್ಬರು ಡಾವೆ ಯಿಂದ್ದಾ ಚಾಡಿ ಹೇಳಿದಲ್ಲಿ ವಿಚಾರಿಸದೆ ವಬ್ಬರ ವಶನೆ ವಬ್ಬರ ಹಿಡಿದು ಕೊಟು ಅತಿ ದಾರುಣದಿಂದ್ದಾ ಜೀವ ಹಿಂಸೆ ಮಾಡಿಶಿ ರುಂಮಾಜರ ಕೈಯಿಂದ್ದಾ ಜನರ ಪ್ರಾಣಗಳ ತೆಗೆಸುವ ಕಲಂ ೧. ನಂಬಿದ ಜನ ನೌಕರ ಪೆಷಾರೆ ಆಗಲಿ ಯಿತರ ಸಂಸ್ಥಾನೀಕರೇ ಆಗಲಿ ಅವರಿಗೆ ಕೊಟ ಭಾಷೆ ತಪ್ಪಿ ಲಯಾ ಹೊಂದಿಸುವ ಕಲಂ ೧. ಯೀ ಮೂರು ಕಲಂ ದುರ್ಬುದ್ಧಿ ಯಿಲ್ಲಿದಿದ್ದರೆ ಯಿಂಥಾ ಸತ್ಪುರುಷನೆ ಪ್ರಪಂಚದಲ್ಲಿ ಯಿಲ್ಲಾ. ಸಾವಿರ ಚಿತ್ತಾರ ವಂದು ಮಶೀ ನುಂಗಿದೋಪಾದೀಯಲ್ಲಿ ದವಲತ್ತು ಶಾಶ್ವಿತವಾಗದೆ ಹೋಯಿತು.

ಕ್ರೋಧಿ ಸಂವತ್ಸರದ ಆಷಾಡ ಶ್ದು ೧೧ ಮಂಗಳವಾರ ಸೂರ್ಯೋದಯವಾದ ಐದು ಘಳಿಗೆ ಹೈದರನಾಮಾ ಬಕ್ಯೆರೆ ಸಂಪೂರ್ನವಾಯಿತು.

ಪರಧನ ಪರದಾರ ಪ್ರಸುತ್ತಾಶೇಷಕೃತ್ಯಾನ್
ನಿಜಕೃತ ಕವಿತಾಭಿರ್ಲೋಕ ಮಾಪೂರಯಂತಿ
ಅರಿಚಿತಪರ ದೋಷಾಜ್ಞಾನ ಪೀಯೂಷ ಪೂರ್ಣ
ಕರ ಕೃತಮಪರಾಧಂ ಕ್ಷಂತು ಮರ್ಹಂತಿ ಸಂತಃ

ಕಾಲ್ ಬಾಹದರವರ ಯಿನಾಯತ ನಾ ಮೆಲಿ । ಕೆಪಟಂನ್ ಮಾ
ವಿನಿರ ಮುಖವಚನದಿಂದ । ನಿಮಗೆ ತಿಳೀಪಟ್ಟು ಯಿಧೀತಷ್ಟೆ
ಯಂಬದಾಗಿಯೂ ಲಶ್ಕರು ಮಂಜರಾಬಾದು ಸರಹದಿನಲ್ಲಿದೆ
ಶ್ರೀರಂಗಪಟಣವಂನ್ನು ಕುಂಪನೀ ಠಾಣ್ಯ ಹಾಕಿಕೊಂಡ ಲೈದು
ದಿವಸ್ತ ಮೇಲೆ ನಿಂಮ್ಮ ಕಡೆಯಿಂದ ಯೀಶ್ವರೈಯನೆಂಬ ಮೊಕಸ್ತ
ಜಮಿಯತ್ತು ತೆಗೆದುಕೊಂಡು ಮಹಾರಾಜನ ದುರ್ಗದ ತಾ
ಲ್ಲುಗೆ ಬಂದು । ಹದಿನೆಳು ಗ್ರಾಮದ ಹೆಂಗಸರು ಮಕ್ಕಳೂ ದನ
ಕರು ದವಸ ದಾಂನ್ಯ ಚಿಂನ್ ಬೆಳ್ಳಿ ಕಂಚು ತಾಂಬ್ರ ಮುಂತ್ತಾದ ಜಿಂ
ದಗಿ ಲುಟಾಯಿಶಿಕೊಂಡು ಹೋದರು ಆ ಬಗ್ಯೆ ಯೀಗ ವಂದು ಪಟ್ಟಿ
ಬರದು ಕಳುಹಿಸಿ ಯಿದೇ ಅದ್ರಲ್ಲಿ ಬರದ ಮೇರೆ ತಾಮಸಾ ಮಾ
ಡದೇ ಜಲದು ಕಳುಹಿಸುವದು ಯಂಬದಾಗಿ ಬರದ ಬಗ್ಗೆ ಬಂ
ಗಾಳದ ಗವರನರ ಜನರಾಲ್ ಲಾರ್ಡ್ ಮಾರನಿಂಗಟಂನ್ ಸಾಹೆ
ಬಹದರವರು ಯೀ ಲಡಾಯಿ ಪ್ರಾರಂಭಿಸುವಾಗ್ಯೆ ನಮಗೆ
ಬರಶಿ ಕಳುಹಿದ ಕಾಗದಲ್ಲಿ । ಟಿಪುಸುಲ್ತಾನರಿಗೂ ಯಿಂ
ಗ್ರೇಜ ಸರಕಾರಕ್ಕೂ । ಲಡಾಯ ಪ್ರಾರಂಭವಾಗುತ್ತದೇ ಯೀ ಬಗ್ಯೆ
ಬೊಂಬಾಯಿ ಸಾರಾ ಲಶ್ಕರು ತೆಗೆದುಕೊಂಡು ಜನರಾಲ್ ಯಿ
ಷ್ಟೋಲ್ ಸಾಹೆಬಹದರವರು ತಂಮ್ಮ ರಾಜ್ಯಕ್ಕೆ ಬರುತ್ತಾರೇ
ಯೀ ಜನರಾಲ್ ಸಾಹೆಬರು ಹೇಳಿದ ಪ್ರಕಾರಕ್ಕೆ ತಂಮಿಂದ
ಸಕಾಯ ಸಂಪತ್ತು ಮಾಡಬೆಕ್ಕು । ಅವರು ಹೇಳಿದಾಗ್ಯೆ ನಿಂ
ಮಿಂದ ಆಗುವಷ್ಟು ಲಡಾಯ್ಯ ಮಾಡಬೆಕ್ಕು ಕಪಿತ್ತಾಂನ್
ಮಾವಿನಿ ಸಾಹೆಬರಂನ್ನು ಯಿಂಗ್ರೇಜಿ ಸರಕಾರದ ವಕೀಲ ರಾ
ಗಿ । ತಂಮ್ಮ ಬಳಿ ಮಡಗುತ್ತದೆ । ಸರಕಾರದ ಕೆಲಸಕ್ಕೆ ಯಿವ
ರು ಹೇಳಿದ ಮೇರೆ ತಾಉ ಕಬೂಲು ಆಗಬೇಕೆಂತ್ತ ಬರದು ಕ
ಳುಹಿದ್ದರು । ಯಿದೇ ಮೇರೆ ಬೊಂಬಾಯಿ ಗವರನರ ಸಾಹೆ
ಬಹದರು ನಮಗೆ ಬರಶಿ ಕಳುಹಿಶಿದ್ರು ಮಲೆವಾರಿ ಕಮೀ
ಶಂನ್ ಸಾಹೆಬರು ಬರಶಿ ಕಳುಹಿಶಿ ಯಿದರು ಯಿದೇ ಮೇರೆ ಬೊಂ
ಬಾಯಿ ಲಶ್ಕರಂನ್ನು ತೆಗೆದುಕ್ಕೊಂಡು ನಂಮ್ಮ ಶೀಮೆಗೆ ಜನರಾಲ್
ಯಿಷ್ಟೋಲ್ ಸಾಹೆಬರು ಜನರಾಲ್ ಹಾಟ್ಲಿ ಸಾಹೆಬರು ಸಹಾ
ಬಂದರು ನಂಮ್ಮಿಂದ ಆಗತಕ್ಕ ಕಂಪನೀ ಚಾಕ್ರಿ ತೆಗೆದುಕೊಳು
ವದಕ್ಕೆ ಯಿಂಗ್ರೇಜಿ ಸರಕಾರದ ವಕೀಲರಾಗಿ ಕಪಿತ್ತಾಂನ್ ಮಾವಿ
ನೀ ಸಾಹೇಬರು ಬಂದರು ಯಿವರು ಮೂವರು ಹೇಳಿದ ಪ್ರಕರ

ಕ್ಕೆ ಲೇಶಾಂಶ ಹೆಚ್ಚು ಕಡಮೆ ಯಿಲ್ಲದೆ ನಾಉ ದಂಡಿನ ಹಮರಹಾ
ಯಿದ್ದುಕೊಂಡು ಕಂಪನಿ ಚಾಕ್ರಿ ಮಾಡುತ್ತಿದೆಉ ಹೀಗಿರುತ್ತಿದಲ್ಲಿ
ಕಾಳಾಯುಕ್ತಿ ಸಂ । ಪಾಲ್ಗುಣ ಶು ೧ ಬುದವಾರ ದಿವಸ ಟೀಪು ಸು
ಲುತಾನರು ದಂಡು ತೆಗೆದುಕೊಂಡು ಬಂದು ನಂಮ್ಮ ಶೀಮೆ ವಳಿತ
ವಾದ ಶಿದ್ದೇಶ್ವರನ ಗಧಿಗೆ ಬಳಿ ಯಿಂಗ್ರೇಜಿ ದಂಡಿನ ಸಂಗಡ ಜ
ಗಳ ಮಾಡಿದನು ಯೀ ದಿವಸ ಜನರಾಲ್ ಯಿಷ್ಟೋಲ್ ಸಾಹೆ
ಬರು ಹಾಟ್ಲಿ ಸಾಹೆಬರು ಕಂಪನಿ ವಕೀಲ್ ಕಪಿತ್ತಾಂನ್ ಮಾವಿನಿ ಸಾಬರು
ಸಹಾ ಯೀ ಮೂವ್ವರೂ ನಂಮ್ಮ ಸಂಗಡ । ಮೊಕರೂರು ಮಾಡಿದ್ದು ಟೀ
ಪು ಸುಲುತ್ತಾನರಿಗೂ ನಮಗೂ ಸಲ್ಲಾ ಬಿಡಗಾಯಿಸ್ತು ಯಿಂನ್ನು ನ
ನುಗೂ ಟೀಪು ಸುಲುತಾನಗೂ ಲಡಾಯ ಶುರು ಆಗುತ್ತದೆ ತಾ
ಉ ನಾಕಾ ಕಡೆಯಿಂದ ಟೀಪು ಮೇಲೆ ಲಡಾಯ ಶುರು ಮಾಡಿದರೆ
ಟೀಪೂನು ಬೇಜಾರಾಗುತ್ತಾನೆ ತಾವು ಲಡಾಯ ಶುರು ಮಾಡಬೇ
ಕೆಂಬದಾಗಿ ಪಾಲ್ಗುಣ ಶು ೧ ದಿವಸ ನಮಗೆ ಮೊಕರೂರು ಮಾಡಿದ್ರು
ಅದಕ್ಕೆ ನಾಉ ಜವಾಬು ಹೇಳಿದ್ದು ತಂಮ್ಮ ದಂಡು ಶಿದ್ದಾಪುರದ
ಮಾರ್ಗ ವಂದನ್ನೆ ಕಾಯಂ ಮಾಡಿ ಯಿಳುಕೊಂಡು ಯಿದೆ ಶಿದ್ದಾ
ಪುರದಲ್ಲಿ ಹೇರಳ ರಸ್ತು ಯಿದೆ ಅಂಮ್ಮತ್ತಿಯಲ್ಲು ಹೇರಳ ರಸ್ತು
ಯಿದೆ ವೀರರಾಜೇಂದ್ರ ಪ್ಯಾಟೇಲಿ ಯಿಂಗ್ರೇಜಿ ಸರಕಾರದ ಮೊ
ದೀ ಕಾನಿಯಲ್ಲು ಬಹಳ ರಸ್ತುಯಿದೆ ನಾಉ ಯಿಂಗ್ರೇಜಿ ಸರಕಾರದ
ದಂಡಿನ ಉದ್ದಿಶ್ಯ ಕೂಡಿಶಿದಂತ್ತ ಸಾಮಾನು ಹೇರಳ ಯಿದೆ ನಾಉ
ಅಲ್ಲಿ ಮೋದಿಕಾನಿಲಿ ಕೂಡಿಶಿರುವಂತ್ತಾ ನಾಲುವತ್ತು ಸಾವಿರ ಬಟ್ಟಿ
ಅಕ್ಕಿ ಬಿದಯಿದೆ ಯಿಂಗ್ರೆಜಿ ಸರಕಾರದ ಸೋಜರು ಸಿಪಾಯಿ
ಕರೀ ಶಿಪಾಯಿ ಸಹಾ ಬಹಳ ಕಾಯಿಲೆ ಆಗಿ ಅಜಾರೀ ಬಿದಂತ್ತವರು
ನಾನೂರು ಅಯಿನೂರು ಜನತನಕರೂ ಅಲ್ಲಿದಾರೆ ಹೆಗ್ಗಳದಲ್ಲಿ
ಯಿಂಗ್ರೆಜ ಮೋದಿಕಾನಿವಳಗೆ ಬಹಳ ರಸ್ತು ಯಿದೆ ಯಿದ್ರ ಮೇಲೆ
ತಂಮ್ಮ ದಂಡಿನ ಸಾಮಾನ್ನೂ ನಂಮ್ಮ ತಾಲ್ಲುಕಿನಲ್ಲಿ ಬಹಳ ಯಿ
ದೆ ತಾಉ ಯೀ ಶಿಧಾಪುರದ ವಂದು ಮಾರ್ಗ ಬಂದೂ
ಬಸ್ತು ಮಾಡಿ ಯಿದೀರಿ ಉಳಿಕ್ಕೆ ಅನಂತ ಮಾರ್ಗವಿದೆ ಅದ್ರಲ್ಲಿ
ಟೀಪು ಯೇನಾದ್ರೂ ಮೋಸದಿಂದ ಬಂದು ನಂಮ ಶೀಮೆ ವಳಗೆ
ನುಗ್ಗಿ ತಂಮ್ಮ ದಂಡಿಗೆ ದಗಾ ಮಾಡ್ಯಾನು ಹಾಗಲ್ಲದಿದ್ದರೆ ರಸ್ತು
ಲುಟಾಯಿಸ್ಯಾನು ನಂಮ್ಮ ಶೀಮೆಗೆ ಕರಾಜು ಮಾಡ್ಯಾನ್ನು ಯೀ ಮೇ
ರೆ ಮಾಡಿದರೆ ಯೀ ಅಪಕೀರ್ತಿ ನಂ ಮೇಲೆ ಬಂದೀತ್ತು ಯಿದಕಾರಣ ನಂ
ಮ್ಮ ಶೀಮೆ ಚಉಸುತ್ತು ಸರಹದ್ದಿನ ನಾಕಾಕಡೆ ಮಾರ್ಗಕ್ಕೂ ಪಾರಾ

ಚಲುಕ ಬಗ್ಯ ಮಂದಿ ಯಿಡಬೆಕ್ಕು ನಾಲು ಬೊಂಬಾಯಿ ದಂಡಿನ ಹ
ಕಾಮಾಟಿ ಮಾಡಬೆಕ್ಕು । ದಂಡಿಗೆ ಹಮರಹಾ ತಂಮ್ಮ ಬಳಿ ಯಿದ್ದುಕೊಂಡು
ರಸ್ತು ತಂದು ಹಾಕಬೆಕ್ಕು । ನಂಮ್ಮ ಕಡೆ ಅಂಗಡಿ ಬಾಜಾರಾ ಹಾಕಬೆ
ಕ್ಕು ಯೆರಡು ಮೂರು ಸಾವಿರ ಯೆತ್ತಿನ ಮೇಲೆ ಅಕ್ಕಿ ಹೇರಿಕೊಂಡು ದಂ
ಡಿನ ಸಂಗಡ ತಿರುಗಬೆಕ್ಕು ಲಡಾಯದಲ್ಲಿ ಬಿದಂತ್ತ ಜಕಮಿ ಜ
ನ ಹೊರಬೆಕ್ಕು ಸತ್ತ ಹೆಣ ಹೂಳಿ ವಪ್ಪಾ ಮಾಡಬೆಕ್ಕು । ನಂಮ್ಮ ಕಡೆ ಜ
ನ ಕಳುಹಿ ನಾನಾ ಕಡೆ ಬಾತುಮೆ ಸಮಾಚಾರ ತರಿಶಿ ಕೊಡಬೆಕ್ಕು ಯಿಂ
ಗ್ರೆಜಿ ಮೋದಿಕಾನಿಯಲ್ಲಿ ಯಲ್ಲಿದೆಯೋ ಅದಕ್ಕೆಲ್ಲಾ ಮರಮುಟ್ಟು ತಂ
ದು ಮನೆ ಕಟ್ಟಬೆಕ್ಕು ಮೋದಿಕಾನಿಗೆ ಹುಲ್ಲು ಹೊರಬೆಕ್ಕು । ಯಾವತ್ತು
ಮಲೆವಾರಿ ರಾಜ್ಯದಲ್ಲಿರುವಂತ್ತವರು ಯಾವತ್ತೂ ಅರಸುಗಳೂ
ಯಿಂಗ್ರೆಜ ಸರಕಾರದಿಂದ ತಂದು ಹೆಗ್ಗಳದ ಗಟದ ಕೆಳಗೆ
ಕಲ್ಲು ಹೊಳೆ ಬಳಿ ಹಾಕಿದಂತ್ತ ರಸ್ತು ಯಾವತಂನ್ನು ನಾಲು ವಟ್ಟಾ
ರೆ ಗಟದ ಮೇಲಕ್ಕೆ ಹೊತ್ತು ಹೆಗ್ಗಳದ ಮೋದೀಕಾನಿಗೆ ಸುರೀಬೆಕ್ಕು । ಮ
ಲೆಯಾಳದ ಅರಸುಗಳು ಕಲ್ಲು ಹೊಳೆಗೆ ತಂದು ಹಾಕಿದ ಯಿಂಗ್ರೆ
ಜಿ ಸರಕಾರದ ಸಾಮಾನಂನ್ನು ಮಾಪಿಳ್ಳೇರು ಬಂದು ಲುಟಾಯಿಶಿ
ಕೊಂಡು ಹೋದಕ್ಕೆ ಯಿಂನ್ನು ಆ ಸಾಮಾನ್ನು ಲುಟಾಯಿಸುವುದಕ್ಕೆ ಬರು
ವಂತ್ತ ತುಂಟರಿಗೆ ತಂಬಿಷ ಲುಟಾಯಿಸುವುದಕ್ಕೆ ಮಂದಿ ಯಿಡ
ಬೇಕಂತ ತಾವು ಹೇಳಿದಕ್ಕೆ ಅಲ್ಲಿ ಬೇರೆ ಯಿಂನೂರು ಮುಂನೂರು ಮಂ
ದಿ ಯಿಟದೆ ಯಿದಲ್ಲದೆ ದಂಡಿಗೆ ಯಿದ್ದ ಯೆತ್ತು ಜಮಾಯಿಶಿ ತಂ
ದು ಕೊಡಬೇಕ್ಕು । ಯಿದ್ರ ಸಾಮಾನು ಕಲುದಿ ಗೋಣಿ ಸಹಾ ಜಮಾಯಿ
ಶಿ ಕೊಡಬೆಕ್ಕು । ಜಕಮಿ ಅಜಾರಿ ಜನ ಯಿರುವದಕ್ಕೆ ಮನೆ ಕಟ್ಟಬೇ
ಕ್ಕು । ಹುಲ್ಲು ಹೊದಿಸಬೇಕ್ಕು । ಅವರಿಗೆ ಬೇಕಾದ ಸಾಮಾನು ತಂದ ವ
ದಗಿಶಿ ಕೊಡಬೆಕ್ಕು । ಯಿಂಗ್ರೇಜ ಸರಕಾರದ ನತಾರೆ ಕಾಯಿಲೆ ಯೆ
ತ್ತು ಆರೈಕೆ ಮಾಡುವ ಬಗ್ಯೆ ನಂಮ್ಮ ವಶಕ್ಕೆ ಕೊಟಿದಕ್ಕೆ ಬದಲು ತಾಜಾ
ಯೆತ್ತು । ಸಾಮಾನು ಸುದ್ದು ಕೊಡಬೇಕ್ಕು ಕಾಯಿಲೆ ಯೆತ್ತುಗಳಿಗೆ
ಹುಲ್ಲು ಸೊಪ್ಪು ತಂದು ಹಾಕಿ ಆರೈಕೆ ಮಾಡಬೇಕ್ಕು ಯಿದಲ್ಲದೆ
ಯಿಂನ್ನು ಚಿಲ್ಲರೆ ಚಾಕ್ರಿ ಹೇಳಿದಂತಾದ್ದು ಮಾಡಿಕ್ಕೊಂಡು ನಾಲು
ದಂಡಿನಲ್ಲಿ । ಹಾಜರು ಯಿರಬೇಕ್ಕು । ಯಿಷ್ಟು ಚಾಕ್ರಿ ಮಾಡುದಕ್ಕೆ
ನಮಗೆ ತಾಉ ಹುಕುಂ ಕೊಟಿದ್ದೀರಿ ಯಿಷ್ಟು ಚಾಕ್ರಿ ನಾಲು ಮಾಡು
ವದೇ ನಮಗೆ ಬಹಳ ಭಾರಿ ಆಗಿ ಯಿದೆ ಯಿದಲ್ಲದೆ ಕೋಟೆ ಅ
ರಸು ಟಿಪು ಸಕಾಯಕ್ಕೆ ತಂಮ್ಮ ಶೀಮೆ ಕುಟ್ಟತ್ತ ಮಾರ್ಗವಾಗಿ
ಬರುತ್ತಾನೆ ಬ ಆವಾಜು ಯಿದೆ ಅಲ್ಲಿಗೆ ಮಂದಿ ಯಿಡಬೇಕೆಂತ್ತ

ತಾಲು ಹೇಳಿದರಿಂದಾ ಅಲ್ಲಿ ಬೇರೆ ಮಂದಿ ಯಿಟ್ಟದೆ । ಕ್ರಿಷ್ಣಪ್ಪ ನಾ
ಯಕನು ಮಂಜಬಾದ ಕಡೆಯಿಂದ ದಂಡು ತೆಗೆದುಕೊಂಡು
ನಿಂಮ್ಮ ಶೀಮೆ ವಳಗೆ ಬರುತ್ತಾನೆಂಬ ಅವಾಜು ಯಿದೆ ಮಂದಿ ಯಿಡ
ಬೇಕೆಂತ್ತಾ ಹೇಳಿದರಿಂದಾ ಅದಕ್ಕೆ ಯಡುನಾಡ ಮಾರ್ಗದಲ್ಲಿ । ಬೇರೆ ಮಂ
ದಿ ಯಿಟ್ಟದೆ ಯೀಗ ನಾಲು ಲಡಾಯಕ್ಕೆ ಬೇರೆ ಮಂದಿ ಕಳುಹಬೇ
ಕೆಂದರೆ ಯೀ ಚಾಕ್ರಿ ಹ್ಯಾಗೆ ನಿರ್ವಾಹವಾದೀತ್ತು ಯಂಬದಾಗಿ ನಾಲು
ಜನರಾಲ್ ಯಿಷ್ಟೋಲ್ ಸಾಹೇಬರಿಗೆ ಹಾಟ್ಲಿ ಸಾಹೇಬರಿಗೆ ಕಪಿತ್ತಾಂನ್
ಮಾವಿನಿ ಸಾಹೇಬರಿಗೆ ಸಹಾ ಜವಾಬು ಹೇಳಿದೆಲು ಆಗ ನಾಲು ಕಬೂ
ಲು ಆಗಲಿಲ್ಲಾ । ಆ ಬಳಿಕ ಯರಡು ಮೂರು ದಿವಸ್ತ ಮೇಲೆ ಅರಕಲ್
ಗೋಡಲ್ಲಿ ಸೂರ ಯಂಬ ಬಾಂಮ್ಮಣ ಯೀಗ ಅಮಲು ಮಾಡಿಕೊಂ
ಡಿದ್ದಾನಲ್ಲ ಆತನು ಟಿಪು ಸುಲುತಾನರ ಕೂಡೆ ಶಹಬಾಸು ತ್ತೆಗ
ದುಕೊಳ್ಳಬೇಕೆಂಬದಾಗಿ ಅರಕಲಗೊಡ್ಡು ಬಸವಾಪಟಣ ಕೊಣನೂ
ರು ಯೀ ಮೂರೂ ಶೀಮೆ ಜನ ತ್ತೆಗದುಕ್ಕೊಂಡು ಬಂದು ನಂಮ್ಮ ಶೀಮೆ
ಸರಹದ್ದು ವಳನುಗ್ಗಿ ತೊರೆನೂರು ಹೆಬ್ಬಾಲೆ ಶಿರಂಗಾಲ ಮುಂತ್ತಾದ
ಗ್ರಾಮದ ರೈಹಿತರ ಸರ್ವಸ್ವವಂನ್ನು ಲೂಟಿಶಿ ಅಲ್ಲಿದ್ದ ರೈತರ ಕ
ಡಿದು ಕೈಗೆ ಶಿಕ್ಕಿದಂತ್ತ ಆ ಗ್ರಾಮದ ಗಉಡ ಗಂಡಾದ ಜನ ಸಹಾ
ಕೈಕಾಲು ಕಟ್ಟಿ ಹೊಳೆಗೆ ಯೆತ್ತಿ ಹಾಕಿ ಆ ಗ್ರಾಮದ ಮನೆಮಾರಿಗೆಲ್ಲಾ ಬೆಂ
ಕಿ ಹಾಕಿ ಸುಟ್ಟು ಆ ರೈತರ ಹೆಂಗಸರು ಮಕ್ಕಳು ಯಾವತ್ತಂನ್ನು ಹಿಡು
ಕೊಂಡು ಹೋದರು ಯೀ ಗ್ರಾಮದವರು ಯಿಂಗ್ರೆಜ ದಂಡಲ್ಲಿ ಚಾಕ್ರಿ ಮಾ
ಡಿಕೊಂಡಿದಂತ್ತಾ ಜನಉೂ ಸಮಾಚಾರ ಕೇಳಿದರಿಂದಾ ಯೀ ಮೇರೆ
ತಂಮ್ಮ ಮನೆ ಬದುಕುಬಾಳು ಸರ್ವಸ್ವಊ ಲೂಟಿಶಿಕ್ಕೊಂಡು ಮನೆಮಾ
ರಿಗೆಲ್ಲ ಬೆಂಕಿ ಹಾಕಿ ಸುಟ್ಟು ರೈತರ ಕಡುದು ಕೈಗೆ ಶಿಕ್ಕಿದವರ ಕೈ
ಕಾಲು ಕಟ್ಟಿ ಹೊಳೆಗೆ ಯೆತ್ತಿ ಹಾಕಿ ಹೆಂಗಸರು ಮಕ್ಕಳಂನ್ನು ಹಿಡುಕೊಂ
ಡು ಹೋದರು ಯಂಬದಾಗಿಉೂ ರೈತರು ಬಂದು ನಂಮ್ಮ ಬಳಿ ದುಕ್ಕ ಹೇ
ಳಿದಲ್ಲಿ ವಳೆದು ಯೀ ದಂಡಿಗೆಲ್ಲಾ ಕಾವಂದರಾಗಿ ಜನರಾಲ್ ಸಾಬ್ರು
ಯಿದ್ದಾರಲ್ಲ ಅವರ ಬಳಿಗೆ ನೀವೇ ಹೋಗಿ ಹೇಳಿಕೊಳ್ಳಿ ನಉ ಯೆನ ಮಾ
ಡಬೇಕೆಂಬದಾಗಿ ನಾಲು ಆ ರೈತರಂನ್ನು ಕಳುಹಿಸ್ತೆಲು ಅವರು ಹೋಗಿ ಕಪಿ
ತ್ತಾಂನ್ ಬೆಡನ್ ಸಾಹೆಬರಿಗೆ ಹೇಳಿದಲ್ಲಿ ಅವರು ಯೀ ರೈತರಂನ್ನು ಕರ
ಕೊಂಡು ಜನರಾಲ್ ಯಿಷ್ಟೋಲ್ ಸಾಹೆಬರು ಜನರಲ್ ಹಾಟ್ಲಿ ಸಾಹೆ
ಬರ ಬಳಿಗೆ ಬಂದ್ದು ಯೀ ರೈತರ ದುಕ್ಕ ಹೇಳಿದಲ್ಲಿ ಕಪಿತ್ತಾಂನ್ ಮಾವಿನಿ ಸಾ
ಬರು ನಂಮ್ಮ ತಂಬಿಗೆ ಬಂದು ಯೀ ರೈತರ ದುಕ್ಕವೇನು ಯಂಬದಾಗಿ ಕೆ
ಳಿದಲ್ಲಿ ನಾಲು ಮಾವಿನಿ ಸಾಬರಂನ್ನು ಕರಕೊಂಡು ಜನರಾಲ್ ಹಾಟ್ಲಿ

ಸಾಹೇಬರ ತಂಬಿಗ ಹೋದೆಉ ಅಷ್ಟರಲ್ಲಿ ಜನರಾಲ್ ಯಿಷ್ಟೋಲ್ ಸಾ
ಹೇಬರು ಬಂದರು ಆ ಬಳಿಕ ಜನರಾಲ್ ಯಿಷ್ಟೋಲ್ ಸಾಹೇಬರು ಜನ
ರಾಲ್ ಹಾಟ್ಲಿ ಸಾಹೇಬರು ಕಪಿತ್ತಾಂನ್ ಮಾವಿನಿ ಸಾಹೇಬರು ಮೂವರು
ಕೂಡಿ ಯೀ ಪೂರ್ವೊತ್ತರವೇನು ಯಂಬದಾಗಿ ಕೇಳಿದಲ್ಲಿ ಟೀಪು ತಾ
ಲ್ಕುನ ಜನ ಬಂದು ಯೀ ಮೇರೆ ದುಕ್ಕ ಕೊಟ್ಟರು ಯಂತ್ತ ನಾಉ ಹೇಳಿ
ದಕ್ಕೆ ಶಿಧೇಶ್ವರನ ಗಧಿಗೆಲಿ ಟಿಪುಗೂ ನಮಗೂ ಲಡಾಯವಾ
ದಾಗ್ಯೆ ಸಲ್ಲಾ ಮುರಿತ್ತು ನೀಉ ಟೀಪು ಜನಕ್ಕೆ ದುಕ್ಕ ಕೊಡಿ ಯಂದ್ರೆ
ನೀಉ ಕೇಳಲಿಲ್ಲ ಯೀಗಲೂ ಮೇರೆ ಆಯಿತ್ತು ಯಿಂನಾದ್ರೂ ಚಿಂತ್ತೆಯಿಲ್ಲ
ನೀಉ ಟೀಪು ತಾಲ್ಕುನ ಜನಕ್ಕೆ ಯಂನಾದರೂ ದುಕ್ಕ ಕೊಡದಿದರೆ
ಯಿಂನೂ ನಿಂಮ ಶೀಮೆಗೆ ಯೀ ಪ್ರಕರ ದುಕ್ಕ ಕೊಟ್ಟು ಕರಾಬು ಮಾಡುತ್ತಾ
ರೆ ಯಿಂನ್ನು ನೀಉ ಸುಂಮನೆ ಯಿದ್ದರೆ ನಿಂಮ್ಮ ಮಾನವೇನಾಯಿತ್ತು ಆಬ್ರು
ಯೆನಾಯಿತ್ತು ಯಂಬದಾಗಿ ಹೇಳಿದರಿಂದ ಯೀ ಮೂವರು ಸಾಬರು
ಹೇಳಿದ ಮಾತ್ತಿಗೆ ನಾಉ ಲಾಚಾರಾಗಿ ವಪ್ಪಿಕ್ಕೊಂಡು ನಂಮ್ಮ ಶೀಮೆ ಚ
ಉಸುತ್ತು ಸರಹಧಿನ ಪಾರಾ ಚಉಕಿಗೂ ಯಿಂಗ್ರೇಜ ದಂಡಿನ ಚಾಕ್ರಿ
ಗೂ ಅರೆವಾಶಿ ಜನಯಿಟ್ಟು ಅರೆವಾಶಿ ಜನ ವಿಂಗಡಿಶಿ ತ್ತೆಗದು ಯೀ
ಜನ ಯರಡು ತುಕ್ಕಮಾಡಿ ವಂದು ತುಕ್ಕಡಿಗೆ ಕರಣಿಕ ಸುಬ್ಬೈನ
ಗೊತ್ತುಮಾಡಿ ಕೊಡೆಯಾಲ ತಾಲ್ಕುನಲ್ಲಿ ಸಾದ್ರಿ ಮೀರಮಹಂಮ್ಮದ
ಲ್ಲಿ ಮುಂತ್ತಾದವರು ಪಉಜು ಕಟ್ಟಿಕ್ಕೊಂಡು ಯಿದ್ದಾಧರಲ್ಲ ಅವ
ರಿಗೆ ಹೊಡದು ಅಲ್ಲಿರು ಕಿಲ್ಲೆಗಳಂನ್ನು ತೆಗೆದುಕ್ಕೊಂಡು ಟೀಪು ಸು
ಲುತ್ತಾನರ ಕಡೆ ಜನಕ್ಕೆ ಸಾವಕಾಶ ಕೊಡದೆ ಶೀಮೆ ಬಂದುಬಸ್ತು
ಮಾಡಿ ಅಲ್ಲಿ ಶಿಕ್ಕಿದ ರಸ್ತು ಯಿಂಗ್ರೇಜ ದಂಡಿಗೆ ಸಾಗಿಸು ಯಂಬದಾ
ಗಿ ನಾಉ ಹೇಳಿ ಕಳುಹಿಸ್ತೆಉ ಮತ್ತೊಂದು ತ್ತುಡಿಗೆ ಯೀಶ್ವರೈನ ಗೊ
ತ್ತುಮಾಡಿ ಹೆಗ್ಗಡದೇವನಕೋಟೆ ತಾಲ್ಕುನ ಶೀಮೆ ಮೇಲೆ ಕಳುಹಿಸ್ತೆಉ ಆ ಶೀ
ಮೆ ಮೇಲೆ ಹೋದಲ್ಲಿ ಅಲ್ಲಿ ಕೆಉ ಜಗಳವಾಗಿ ನಂಮ್ಮ ಕಡೆ ಮಂದಿಗೂ ಲುಕ್ಸಾ
ನು ಆಗಿ ಕೆಉ ದಉಡು ಮಾಡಿಕೊಡು ಪುನಶ್ಚ ಕರಡಿಗೋಡಲ್ಲಿ ಬೊಂ
ಬಾಯಿ ದಂಡು ಯಿಳುದಲ್ಲಿಗೆ ಬಂದರು ಯೀ ಮಂದಿಗೆ ಗೊಂತಾಗಿದ್ದ
ಯೀಶ್ವರೈಯ್ಯನ ಆ ಮಂದಿನ ಸಹಾ ನಿಮಗೆ ಯೇನೆಲ್ಲಾ ಶಿಕ್ಕಿತ್ತು ಯಂ
ತ್ತ ನಾಉ ಕೇಳಿದಲ್ಲಿ ಟೀಪುಗೂ ಯಿಂಗ್ರೇಜ ದಂಡಿಗೂ ಶಿದೇಶ್ವರನ ಗ
ಧಿಗೆ ಬಳಿ ಆದ ಲಡಾಯದ ಅವಾಜು ಕೇಳಿ ರೈತರು ತಂಮ್ಮ ದನಕ
ರು ಬದುಕುಬಾಳು ಯಲ್ಲ ದೂರ ಸಾಗಿಶಿದ್ದಾರೆ ಚಿಂನ್ನ ಬೆಳ್ಳಿ ಯಿ
ದ್ದದಂನ್ನು ನೆಲಮರೆ ಮಾಡಿಕೊಂಡಿದ್ದಾರೆ ನಾವು ಹೋದಲ್ಲಿ ನಮಗೇ
ನೂ ಶಿಕ್ಕಲಿಲ್ಲ ಸ್ವಲ್ಪ ಯೆತ್ತು ದನಕರು ಕುರಿ ಆಡು ಶಿಕ್ಕಿತ್ತು ಯಂತ್ತ ತಂ

ದು ತೋರಿಸ್ತರು ಆ ಯೆತ್ತು ಕುರಿ ಆಡು ಸಹಾ ನಿಂಮ್ಮ ಯಿಂಗ್ರೇಜ ಸ
ರಕಾರಕ್ಕೆ ನಾಉ ಕೊಟ್ಟೆಉ ಅಷ್ಟರಲ್ಲಿ ಜನರಾಲ್ ಳ್ವಾಯಿಂನ್ ಸಾ
ಹೆಬರು ಮದುರಾಜು ದಂಡು ತ್ತೆಗದುಕೊಂಡು ಪಿರಿಪಟಣಕ್ಕೆ ಬಂ
ದರು ಆ ಮಾರನೆ ದಿನ ನಾಉ ಪಿರಿಪಟಣಕ್ಕೆ ಹೋಗಿ ಆ ಜನರಲ್
ಳ್ವಾಯಿಂನ್ ಸಾಹೇಬರ ಮಿಲಾಕತ್ತು ತೆಗೆದುಕೊಂಡಲ್ಲಿ ಅವರು ನ
ಮಗೆ ಬಹಳ ಆಬ್ರು ಕೊಟ್ಟು ಬಲು ಸರಫರಾಜು ಮಾಡಿದರು
ಅಷ್ಠರಲ್ಲಿ ಬೊಂಬಾಯಿ ದಂಡಿಗೂ ಪಿರಿಪಟಣದಲ್ಲಿಉದ
ದಂಡಿಗೂ ಮಧ್ಯೆ ಟೀಪು ಕುದ್ರೆ ಬಂದು ಮಾರ್ಗ ಕಟ್ಟಿದರಿಂದ
ಜನರಾಲ್ ಳ್ವಾಯಿಂನ್ ಸಾಬರ ದಂಡಿಗೂ ಟೀಪು ದಂಡಿಗೂ ಸ್ವ
ಲ್ಪ ಜಗಳಾನು ಆಯಿತ್ತು । ಹೀಗಿರುವಲ್ಲಿ ಬೊಂಬಾಯಿ ದಂಡಿನ
ಲ್ಲು ಜನರಾಲ್ ಯಿಷ್ಟೋಲ್ ಸಾಹೇಬರು ನಾಉ ಪಿರಿಯಪಟಣಕ್ಕೆ ಬಂ
ದ ಸಮಾಚಾರ ಕೇಳಿ ಬಹಳ ಕರಕರೆಯಲ್ಲಿ ಯಿದ್ದರು ನಾಉ ಪು
ನಶ್ಚ ಬರುವಾಗ್ಗೆ ಟೀಪು ಕುದ್ರೆಯು ಮಾರ್ಗ ಕಟ್ಟಿದೆಯಂತ್ತ ಜ
ನರಾಲ್ ಳ್ವಾಯಿಂನ್ ಸಾಹೇಬರು ಕೆಲು ಕುದ್ರೆ ಪಉಜಂನ್ನು ಕೂ
ಡಿಶಿ ನಂಮ್ಮಂನ್ನು ಬಹಳ ಮಾನದಿಂದ ಬೊಂಬಾಯಿ ದಂಡಿಗೆ
ತಲಪಿಸ್ತರು ನಾಉ ಬಂದದಂನು ಕಂಡು ಜನರಾಲ್ ಯಿಷ್ಟೋಲ್
ಸಾಹೇಬಹದರವರು ಬಹಳ ಸಂತೋಷಪಟ್ಟು ನೀಉ ಯೀ ಪ್ರಕಾರ
ನಮಗೆ ಹೇಳದೆ ಸ್ವಲ್ಪ ಮಂದಿ ತೆಕೊದುಕ್ಕೊಂಡು ಪಿರಿಪಟಣಕ್ಕೆ
ಹೋದಿರಿ ಮಧ್ಯೆ ಮಾರ್ಗಕ್ಕೆ ಟೀಪು ಕುದ್ರೆ ಬಂದು ಯಿತ್ತಂತ್ತೆ ತಾಉ
ಅವರ ಕೈಗೆ ಶಿಕ್ಕಿದಿರೋ ಯೇನೋ ಯಂಬದಾಗಿ ನಾಉ ಬಹಳ ಪಿ
ಕಿರಿನಲ್ಲಿ ಯಿದ್ದೆಉ ತಾಉ ಕ್ಷೇಮದಲ್ಲಿ ಬಂದದರಿಂದ ನಮಗೆ ಬಲು
ಸಂತೋಶವಾಯಿತ್ತು ಯಂತ್ತ ಹೇಳಿ ಮತ್ತೆ ಹುಕುಂ ಕೊಟರು । ನಾಳೆ
ದಿನ ಬೊಂಬಾಯಿ ದಂಡು ಕೂಚಾಗುತ್ತದೆ ಜನರಾಲ್ ಳ್ವಾಯಿಂನ್
ಸಾಹೇಬರು ಚಡಿ ಪವುಜು ತ್ತೆಗೆದುಕೊಂಡು ಬಂದರು । ತಾಉ
ಕೂಡಿಶಿರು ರಸ್ತಿಗೆ ಬೇಕಾದ ಯೆತ್ತು ಮೊರ್ಚೆ ಸಾಮಾನು ಸಾಗ್ಸಿದಕ್ಕೆ
ಬೇಕಾದ ಆಳು ಸಹ ತೆಗೆದುಕ್ಕೊಂಡು ಬರಲಿಲ್ಲ ಈ ಬಗ್ಯೆ ಯೀ
ಗ ತಾಉ ಮಾಡಿಶಿರೂ ಮೊರ್ಚೆ ಸಾಮಾನಂನ್ನು ಪಟಣಕ್ಕೆ ತಾಉ ಸಾ
ಗಿಶಿ ಕೊಡಬೇಕು ಯಂತ್ತ ನಮಗೆ ಹೇಳಿದರು ಅದಕ್ಕೆ ನಾಉ ವಳ್ಳೇ
ದು ಯೀವತ್ತು ರಾತ್ರಿ ನಂಮ್ಮ ಕಡೆ ಜನ ಶಿಕ್ಕಿದಷ್ಟು ಕೂಡಿಶಿ ನಂಮ್ಮ ಕ
ಡೆ ಜನ ನಾಉ ಸಹಾ ಮೊರ್ಚೆ ಸಾಮಾನು ಹೊತ್ತು ಅಲಬತ್ತ ಪಟಣಕ್ಕೆ
ಸಾಗಿಶಿ ಕೊಟೆಉ ಯಂತ್ತ ನಾಉ ಕಬೂಲು ಆಗಿಕ್ಕೊಂಡು ಆ ದಿನ ನಂ
ಮ್ಮ ಬಳಿ ಯಿದಂತ್ತ ಜನ ಯಾವತಂನ್ನು ಮೊರ್ಚೆ ಸಾಮಾನು ಹೊತ್ತು ತ

ರುವದಕ್ಕ ಕಳುಹಿಶಿ ಶಿದ್ದೇಶ್ವರನ ಗದ್ದಿಗ್ಯೆ ವಂದು ಗಾಉದದಲ್ಲಿ
ಕರಡಿಗೋಡು ಮಾಳದಲ್ಲಿದ್ದ ಮೋರ್ಚೆ ಸಾಮಾನು ಯಾವತ್ತಂನ್ನು
ಆ ದಿನ ರಾತಾರಾತ್ರಿಯೆ ಶಿದ್ದೇಶ್ವರನ ಗದ್ದಿಗ್ಯೆ ತರಿಶಿ ಹಾಕಿ ಬೆಳಿ
ಗ್ಯೆ ಬೊಂಬಾಯಿ ದಂಡು ಕೂಚಾಗುವಾಗ್ಯೆ ಜನರಾಲ್ ಯಿಷ್ಟೋಲ್ ಸಾ
ಹೆಬರ ಸಂಗಡ ಯೀ ಮೋರ್ಚೆ ಸಾಮಾನು ಯರಡು ಸಾವಿರ ಜನದ
ಮೇಲೆ ಸಾಗಿಶಿಕ್ಕೊಂಡು ನಾಉ ನಂಮ್ಮ ಜನ ಸಹಾ ದಂಡಿನ ಕೂಡ ಬರು
ತ್ತೇವೆಂತ ತಯಾರಾಗಿ ಹೊರಟಲ್ಲಿ । ಜನರಾಲ್ ಯಿಷ್ಟೋಲ್ ಸಾಹೇಬರು
ನೋಡಿ ನೀಉ ಬಹಳ ಕಂಪನಿ ಚಾಕ್ರಿಗೆ ಕಷ್ಟ ಮಾಡಿದೀರಿ ಯೀಗಲೂ ಯೀ ಮೇ
ರೆ ನಿಮಗೆ ಬಹಳ ಮಿಹನತ್ತು ಆಗುತ್ತದೆ ಯಂತ್ತ ಬಹಳ ಬಗೇಲಿ ನಮ
ಗೆ ಹೇಳಿ ಯೀಗ ಯೀ ಮೋರ್ಚೆ ಸಾಮಾನಿನಿಂದೇನೂ ಜರೂರು ಯಿಲ್ಲ ಯೀ ದಂ
ಡು ಪಟ್ಟಣಕ್ಕೆ ತಲಪಿದ ಬಳಿಕ ಯಿಂನು ಹತ್ತು ಹದಿನೈದು ದಿವಸ್ತಲ್ಲಿ ತಾ
ಉ ಯಿಂಗ್ರೆಜ ಸರಕಾರ ದಂಡಿಗೆ ಜಮಾಯಿಶಿರೂ ರಸ್ತ ಸಾಗಿಶಿಕೊಂಡು
ಬರು ಬಗ್ಯೆ ಅರುವತ್ತು ಯೆಪತ್ತು ಸಾವಿರ ಯೆತ್ತು ತೆಗೆದುಕ್ಕೊಂಡು ಕೆಲೂ
ದಂಡು ನಿಂಮ್ಮ ಶೀಮೆಗೆ ಬಂದೀತು ಆವಾಗ್ಯೆ ಯೀ ಮೋರ್ಚೆ ಸಾಮಾನಿಗೆ
ಬೇಕಾದ ಆಳು ಬರುತ್ತದೆ ಆಗ್ಯೆ ವಂದೇ ಸರ್ತಿ ಯೀ ಮೋರ್ಚೆ ಸಾಮಾನು
ರಸ್ತು ಹಿಂದಕ್ಕೆ ಸಾಗಿಶಿಕೊಂಡು ಹೋಗುತ್ತದೆ ಯೀಗ ಯೀ ಮೋರ್ಚೆ ಸಾಮಾನು ಯಾ
ವತ್ತು ಹಿಂದಕ್ಕೆ ಸಾಗಿಶಿ ಶಿದ್ದಾಪುರದಲ್ಲಿ ಜೋಪಾನವಾಗಿ ಮಡಗಿಸಬೇ
ಕು ತಾಉ ಪಟ್ಟಣಕ್ಕೆ ಯಿಗ ಬಂದರೆ ಯಿಂನ್ನು ಹದಿನೈದು ದಿವಸ್ತ
ಲ್ಲಿ ನಿಂಮ್ಮ ಶೀಮೆಯಿಂದ ರಸ್ತು ಸಾಗಿಶಿಕೊಂಡು ಹೋಗು ಬಗ್ಯೆ ಯೆತ್ತು
ಸಾಗಿಶಿಕೊಂಡು ದಂಡು ಬರುತ್ತದೆ ನೀಉ ದಂಡಿನ ಸಂಗಡ ಬಂದರೆ
ಯಿಲ್ಲಿ ಭಾರೀ ಕೆಲಸವಿದೆ ನೀಉ ಹಿಂತಿರುಗಿ ಹೋಗಿ ದಂಡಿಗೆ ಯಿರೂ ರ
ಸ್ತು ಸಾಮಾನ್ನು ಜಮಾಯಿಸಬೇಕೆಂತ್ತ ಹೇಳಿದರಿಂದ ನಾಉ ಪಿರಿಪಟ್ಟ
ಣ ಸಮೀಪ ಪರಿಯಂತ್ರ ಹೋಗಿ ಜನರಾಲ್ ಸಾಹೇಬರ ಅಪ್ಪಣೆ ತ್ತೆ
ಗದುಕ್ಕೊಂಡು ಪುನಶ್ಚ ಬರುವಾಗ್ಯೆ ನಾಉ ದಂಡಿನ ಸಂಗಡ ರಸ್ತು ಸಾ
ಗಿಶಿಕ್ಕೊಂಡು ತಿರುಗುತ್ತ ಯಿದ್ದ ನಂಮ್ಮದು ಯರಡು ಸಾವಿರ ಯತ್ತು
ಅದರ ಕಉದಿ ಗೋಣಿ ಹೇರಿದಂತ್ತ ಅಕ್ಕಿ ಮುಂತ್ತಾಗಿ ಲ್ಕೆ ವಪ್ಪಿಶಿಕೊಟ್ಟು
ಹಿಂದಕ್ಕೆ ಬಂದೆಉ ಬೊಂಬಾಯಿ ದಂಡು ಹೋಗಿ ಪಿರಿಯಪಟ್ಟಣದಲ್ಲು
ಯಿಳುದಿದ್ದ ದಂಡಿಗೆ ಕೂಡಿ ಉಭಯ ದಂಡು ಮುಂದೆ ಪಟ್ಟಣಕ್ಕೆ
ಕೂಚಾಗಿ ಹೋಯಿತ್ತು । ನಾಉ ವೀರರಾಜೇಂದ್ರ ಪ್ಯಾಟೆಗೆ ಬರುವಾಗ್ಯೆ
ಮೋರ್ಚೆ ಸಾಮಾನು ಯಾವತ್ತು ಹಿಂದಕ್ಕೆ ಶಿದ್ದಾಪುರದ ಬಳಿಗೆ ಸಾಗ್ಸಿ
ಜೋಪಾನವಾಗಿ ಮಡಗಿಶಿ ಗುಂಡುಪಟ್ಟಣದಿಂದ ಶಿದ್ದಾಪುರ ಪರಿಯಂ
ತ್ರ ದಾರಿ ಮಾರ್ಗದಲ್ಲಿ ಬಿಟ್ಟು ಹೋದಂತ್ತ ಯಿಂಗ್ರೆಜ ದಂಡಿನ ಸಾ

ಮಾನು ಸರಂಜಾಮು ಕಾಯಿಲೆ ಯೆತ್ತುಗಳು ಕಾಯಿಲೆ ಅಜಾರಿ ಜನ ಮುಂತಾಗಿ ಯಾವತ್ತು ವೀರರಾಜೇಂದ್ರ ಪ್ಯಾಟಿಗೆ ಹೊತ್ತುಕೊಂಡು ಬಂದು ಹಾಕಿ ಆ ಅಜಾರಿ ಕಾಯಿಲೆ ಜನ ಯಿರುವದಕ್ಕೆ ಬೇಕಾದ ಮನೆ ಮಾರು ದುರಸ್ತು ಮಾಡಿಶಿ ಅವರಿಗೆ ಬೇಕಾದ ಸಾಮಾನು ಯಲ್ಲ ವದಗಿಶಿ ಕೊಟ್ಟು ಯಿಂನ್ನು ಯಂಟು ಹತ್ತು ದಿವಸ್ತಲ್ಲಿ ಯಿಲ್ಲಿಂದ ರಸ್ತು ಸಾಗಿಶಿಕೊಂಡು ಹೋಗುದಕ್ಕೆ ಅರುವತ್ತು ಯಪತ್ತು ಸಾವಿರ ಯೆತ್ತು ಸಾಗ್ಸಿಕೊಂಡು ಯಿಂಗ್ರೆಜ ದಂಡು ಬರುತ್ತದೆ ಅದು ಬಂದ ಹೊತ್ತಿಗೆ ಕೊಡತಕ್ಕ ರಸ್ತು ಕಡಮೆ ಆದರೆ ನಾಉ ಆಡಿದಂತ್ತ ಮಾತಿಗೆ ತಪಾದತ್ತಾಗಿ ನಂಮ್ಮ ಆಬ್ರುವಿಗೆ ಸಾಲದೆ ಬಂದೀತ್ತು ಯಂಬದರಿಂದಾ ರಸ್ತು ತರಿಶಿ ಜಮಾಯಿಸುವಂತ್ತ ಫಿಕಿರೀನಿಂದಲೇ ನಾಉ ವೀರರಾಜೇಂದ್ರ ಪೇಟೆಲಿದ್ದೆಉ ಹೀಗಿರುವಲ್ಲಿ । ಟೀಪು ತಾಲ್ಲುಕಿನವರು ಬಂದ್ದು ದುಕ್ಕ ಕೊಟ ತೊರೆನೂರು ಹೆಬ್ಬಾಲೆ ಶಿರಂಗಾಲ ಮುಂತ್ತಾದ ಗ್ರಾಮದ ರೈತರು ಬಂದು ತಂಮ್ಮ ಕುಟ್ಟುಂಬ ಮಕ್ಕಳು ಆದಿಯಾಗು ಸರ್ವಸ್ವವಂನ್ನು ಲೂಟಿಸಿಕ್ಕೊಂಡು ಹೋದರು ನಾಉ ಕೆಟ್ಟೆಉ ನಂಮ್ಮ ವಡವೆ ಹೋದಕ್ಕೆ ಬದಲು ಜವಾಬು ತೆಗೆದುಕೊಳುದಕ್ಕೆ ಅಗಣೆ ಆಪಬೇಕೆಂತ್ತ ಬಹಳ ಕರಕರೆ ಮಾಡಿ ದುಕ್ಕ ಹೇಳಿಕೊಂಡದರಿಂದ ಯೀ ರೈತರಿಗೆ ದುಕ್ಕ ಕೊಟ್ಟ ಕೊಣನೂರು ಅರಕಲಗೂಡು ಬಸವಾಪಟಣ ತಾಲ್ಲುಕಿನವರಿಗೆ ದುಕ್ಕ ಕೊಟ್ಟು ಯಿವರ ವಡವೆ ಹೋದಕ್ಕೆ ಯೇನಾದ್ರೂ ಬದಲು ಜವಾಬು ಯೀವರಿಗೂ ಶಿಕ್ಕುವಂತೆ ಮಾಡಿ ಯೀ ರೈತರ ಮನಸು ಸಂತೋಷಪಡಿಶಿ ಸಮದಾಯಿಸು ಯಂಬದಾಗಿ ನಂಮ್ಮ ಬಳಿ ಯಿದ್ದ ಯೀಶ್ವರೈಯ್ಯ ಅವನ ತೈನಾತ್ತಿ ಮಾಡಿಶಿ ಯಿದ್ದ ವಂದು ಕ್ಕಡಿ ಜನಕ್ಕೆ ಸಹಾ ನಾಉ ಹುಕ್ಕುಂ ಕೊಟ್ಟು ಕೊಡಿಶಿ ಕಳುಹಿ ನಾಉ ವೀರಾಜೇಂದ್ರ ಪ್ಯಾಟೆಯಲ್ಲ್ಯೆ ರಸ್ತು ಜಮಾಯಿಸುತ್ತ ಯೇಳೆಂಟು ದಿನ ಯಿರುತ್ತಿದಲ್ಲಿ ಮೋದೀಕಾನಿಗೆ ಬರುವಂತ್ತ ನಿಧಾನವಾದ್ದರಿಂದಾ ನಾಉ ಮಡಿಕರಿಗೆ ಹೋಗಿ ರಸ್ತುನ ಸಾಗಿಸುತ್ತೇವೆಂಬದಾಗಿ । ನಾಉ ಕಪಿತ್ತಾಂನ್ ಮಾವಿನಿ ಸಾಬರ ಕೇಳಿಕ್ಕೊಂಡು ಮಡಿಕೆರಿಗೆ ಹೋಗಿ ಯಿಂದು ನಾಳೆಯಲ್ಲಿ ಯಿಲ್ಲಿಂದ ರಸ್ತು ಸಾಗಿಸಿಕ್ಕೊಂಡು ಹೋಗುವದಕ್ಕೆ ಅರುವತ್ತು ಯಪ್ಪತ್ತು ಸಾವಿರ ಯೆತ್ತು ಬರುತ್ತದೆ ಯೀ ಯೆತ್ತಿಗೆಲ್ಲಾ ರಸ್ತು ಯಾವ ಪ್ರಕಾರವಾದರೂ ಪ್ರಾಣ ಪ್ರಯತ್ನ ಮಾಡಿ ಜಮಾಯಿಸಬೇಕ್ಕು ಯಿಲ್ಲದಿದರೆ ನಾಉ ಆಡಿದ ಮಾತಿಗೆ ತಪಾವತ್ತು ಆಗಿ ನಂಮ್ಮ ಮಾನಕ್ಕೆ ಸಾಲದೇ ಬಂದೀತ್ತು ಯಂಬದಾಗಿ ನಾಉ ಮಹಾದೇವನಂನ್ನೆ ಗ್ನ್ಯಾಪಕ ಮಾಡಿಕ್ಕೊಂಡು ದಿವಾರಾತ್ರಿಯಲ್ಲು ಯಿಂಗ್ರೆಜ ಸರಕಾರ ಚಾಕ್ರಿಯಂನ್ನೆ ಮಾಡಿಕ್ಕೊಂಡು ಮಡಿಕೆರೀಲಿರುತ್ತಿದೆಉ ಅಷ್ಟರಲ್ಲಿ ಅರಕಲಗೂಡ ಕಡೆಗೆ

ನಾಲು ಕಳುಹಿದ ಯೀಶ್ವರ್‍ಯಯನು ಮಂದಿ ತ್ತೆಗದುಕ್ಕೊಂಡು ಹೋದಲ್ಲಿ
ಬಸವಾಪಟಣದ ಕೋಟೆಯವರು ನಂಮ್ಮ ಮಂದಿ ಮೇಲೆ ಗುಂಡು ಯಿ
ಟ್ಟು ಜಗಳಾ ಮಾಡಿದಲ್ಲಿ । ನಂಮ್ಮ ಜನಕ್ಕೆ ಅಪಾಯ ಬಂತ್ತು ಆ
ಗ ನಂಮ್ಮ ಮಂದಿಯೂ ಬಸವಾಪಟಣದ ಕೋಟೆಗೆ ಹಲ್ಲಾ ಹತ್ತಿ
ಆ ಕೋಟೆ ತೆಗೆದುಕೊಂಡಲ್ಲಿ ಆ ಕಡೆ ಜನಕ್ಕೂ ಅಪಾಯವಾಯಿತ್ತು
ಯಿವರ ವಡವೆ ಹೋದಕ್ಕೆ ಬದಲು ಜವಾಬು ಆ ಕೋಟೆಲಿ ಅಲ್ಪ ಸ್ವಲ್ಪ
ಯಿದದಂನ್ನು ಲೂಟಿ ಮಾಡಿಕೊಂಡರಂತ್ತೆ ಹೆಂಡರು ಮಕ್ಕಳು ಹೋ
ದಂತ್ತ ರೈತರು ಹತ್ತು ಅಯಿವತ್ತು ಹೆಂಣಂನ್ನು ಹಿಡುಕೊಂಡು ಬಂದ
ರಂತ್ತೆ ಆಗ್ಯೆ ಬಸವಾಪಟಣದ ಸುತ್ತ ಅರುಗಿನ ಸ್ವಲ್ಪ ಶೀಮೆ
ನು ಲೂಟಿ ಮಾಡಿದರಂತ್ತೆ ಅಷ್ಟರಲ್ಲಿ ಗಡಿ ಸರಹಧಿನ ಶೀಮೆಯ
ವರು ಕಉಲಿಗೆ ನಂಮ್ಮ ಕಡೆ ಯೀಶ್ವರ್‍ಯೆಯನ ಬಳಿಗೆ ಬಂದದ
ರಿಂದ ಆ ಬಸವಾಪಟಣದ ಕೋಟೆ ಹಲ್ಲಾ ಮಾಡಿ ತೆಗೆದುಕೊಳ್ಳು ಪ
ರಿಯಂತ್ರ ಸ್ವಲ್ಪ ಲೂಟಿ ಆದು ಹೊರ್‍ತು ಆ ಬಳಿಕ ಯಲ್ಲು
ಶೀಮೆ ಲೂಟಿಸದೆ ಕಉಲಿಗೆ ಬಂದಂತ್ತಾವರಿಗೆ ಕಉಲು ನಂಬಿ
ಗೆ ಕೊಟ್ಟುದಿಲ್ಲ ಬರವಸ ಹೇಳಿ ಟೀಪು ಕಡೆ ಜನರಿಂದ ವಂದು
ದುಕ್ಕ ತಟ್ಟುದಕ್ಕೆ ಬಿಡದೆ ಬಂದೂಬಸ್ತು ಮಾಡಿಕೊಂಡು ಯೀಶ್ವರ
ಯ್ಯ ಹೀಗೆ ಯಿರುತ್ತಿದ್ದ ಯೀ ಕಡೆ ಕೊಡೆಯಾಲ ತಾಲ್ಕುಗೆ ಕರಣಿಕ
ಸುಬ್ಬೈನ ಸಂಗಡ ಕಳುಹಿದ ಮಂದಿ ಕೂಡೆ ಕುಂಬಳೆ ತಾಲ್ಕುನ ಮಾ
ಪಿಳೆರು ಜಗಳಾ ಮಾಡಿದರಿಂದ ಅಲ್ಲಿ ಜಗಳವಾದ ಬಳಿ ಸ್ವಲ್ಪ
ಶಿಕ್ಕಿದ ಲೂಟಿ ಮಾಡಿದ್ರು ಯಂಬದಾಗಿ ನಾಲು ಕೇಳಿದೆಉ ಆ ಬಳಿ
ಕ ನಾಲು ಮನಶಿನಲ್ಲಿ ವಿಚಾರಿಶಿ ಟೀಪುನಂನ್ನು ಯಿಂಗ್ರೆಜ ಸ
ರಕಾರದಿಂದ ನಿಗ್ರಹಿಶಿದಾಗ್ಯೂ ಯೀ ಮಂಗಲೂರ ತಾಲ್ಕು ಶೀಮೆ ಯಿಂ
ಗ್ರೆಜ ಸರಕಾರದಾಗುತ್ತದೆ ಯಿಲ್ಲದಿದರೂ ಯೇನಾಬಗೆ ಹ
ರ ಹುನ್ನರಿಂದಲಾದ್ರೂ ಯೀ ಕೊಡೆಯಾಲ ತಾಲ್ಕು ಶೀಮೆಯಂನ್ನು ಯಿಂ
ಗ್ರೆಜ ಸರಕಾರ ತಾಲ್ಕು ಮಾಡಿಕೊಳದೆ ಬಿಡಲಿಕ್ಕಿಲ್ಲ ಯಂದು ನಂ
ಮ್ಮನಶಿಗೆ ನಿಶ್ಚಯವಾಗಿ ತೋರಿದರಿಂದ ಸುಂಮ್ಮನೆ ಲೂಟಿ ಲಬಾ
ಡು ಮಾಡಿ ಶೀಮೆ ಹೈರಾನು ಮಾಡಿದರೆ ನಾಳೆ ಯೀ ಶೀಮೆ ಯಿಂಗ್ರೆ
ಜ ಸರಕಾರದಾದರೆ ಯೀ ಲುಕ್ಸಾನ್ನು ಯಿಂಗ್ರೆಜ ಸರಕಾರದಿದೆ
ಯಂಬದರಿಂದ ಕೊಡಯಾಲ ತಾಲ್ಕು ತುಳುರಾಜ್ಯ ಶೀಮೆಯಂನ್ನು
ಮತ್ತೆ ದುಕ್ಕ ಕೊಡದೆ ಕವಲು ಕರಾರು ಮಾಡಿ ಟೀಪು ಕಡೆ ಹೊರ
ಬಿದಿರು ತುಂಟರಿಂದ ವಂದು ದುಕ್ಕ ತಟದಂತ್ತೆ ಶೀಮೆಯಂನು ಬಂ
ದೋಬಸ್ತು ಮಾಡಿ ನಂಮ್ಮ ಅಸ್ತಕಿನಲ್ಲಿಡುವಂತ್ತೆ ನಾಲು ತಾಕಿತ್ತಿ ಮಾ

ಡಿಸ್ತೆಉ ಅದೇ ಮೇರೆ ನಂಮ್ಮ ಮಂದಿಯೂ ಶೀಮೆ ಕಉಲು ಕರಾರು ಮಾಡುತ್ತಿದಲ್ಲಿ ಬೆಳಾರಿ ಕೋಟೆಯವರು ನಂಮ್ಮ ಮಂದಿ ಮೇಲೆ ಗುಂಡು ಯಿಟ್ಟು ಜಗಳ ಮಾಡಿದರಿಂದ ಆ ಬೆಳ್ಳಾರಿ ಕೋಟೆಗೆ ಹಲ್ಲಾ ಹತ್ತಿ ನಂಮ್ಮ ಮಂದಿ ತೆಗೆದುಕೊಂಡರು ಆಗ ನಂಮ್ಮ ಜನಕ್ಕೂ ಅಪಾಯ ಬಂತ್ತು ಆ ಕಡೆ ಜನಕ್ಕೂ ಅಪಾಯವಾಗಿ ಅಲ್ಲಿದ್ದೂದಂನ್ನು ಸ್ವಲ್ಪ ಲೂಟಿ ಮಾಡಿದರು ಮೂಡಕೊಡೆಯಾಲದ ಕೋಟೆಯವರು ಯಿದೇ ಮೇರೆ ನಂಮ್ಮ ಮಂದಿ ಮೇಲೆ ಸ್ವಲ್ಪ ಜಗಳಾ ಮಾಡಿ ಕಉಲಿಗೆ ಯಿಳುದಲ್ಲಿ ಆ ಕೋಟೆ ಜನಕ್ಕೆ ಲೂಟಿ ಮಾಡದೆ ದುಕ್ಕ ಕೊಡದೆ ಅವರಂನ್ನು ಬಿಟ್ಟು ಕೊಟಿತ್ತು । ಯೀ ಪ್ರಕರ ಮಂಗಲೂರ ತಾಲ್ಕು ಶೀಮೆಯಂನ್ನು ಕೊಡಿಯಾಲ ದಾಜಿಗೆ ಬಾರಕೂರು ಬಗ್ವಾಡಿ ತನಕಾ ಕಉಲು ಕರಾರು ಮಾಡಿ ಕಉಲಿಗೆ ಬಂದಂತ್ತ ಶೀಮೆಲೆ ಆಲ್ಲ್ಯೆಲ್ಲಿ ಟಾಂಣ್ಯ ಯಿಟ್ಟು ಬಂದೂಬಸ್ತು ಮಾಡುವಾಗ್ಯೆ ವೀರಗಂಬದ ಬಳಿಯಲ್ಲು ನಂಮ್ಮ ಕಡೆ ಮಂದಿ ಟಾಂಣ್ಯಯದಲ್ಲಿ ಯೀ ವೀರಗಂಬದಲ್ಲಿ ಸ್ವಲ್ಪ ಮಂದಿ ಯಿಟ್ಟು ಉಳಿಕೆ ಜನವೆಲ್ಲ ಮುಂದೆ ಶೀಮೆ ಬಂದೂಬಸ್ತಿಗೆ ಹೋಗಿದೆ ಯೀಗ ಮಂದಿ ತೆಗೆದುಕೊಂಡು ಬಂದರೆ ಈ ಜನ ಹೊಡೆಯಬಹುದು ಯಂತ್ತ ನಂಮ್ಮ ಕಡೆ ಕಉಲಿಗೆ ಬಂದಿದಂತ್ತ ಆ ಶೀಮೆಯವರು ಫಿತೂರು ಮಾಡಿ ಸಾದ್ರಿಗೆ ಹೇಳಿ ಕಳುಹಿದರಿಂದ ಆ ಸಾದ್ರಿಯು ಕೆಲೂಬಾರು ಮಾಪಿಳೆರಿಂದ ಮೂರು ನಾಲ್ಕು ಸಾವಿರ ಮಂದಿ ಕಟ್ಟಿಕೊಂಡು ವೀರಗಂಬದ ಬಳಿ ಟಾಂಣ್ಯ ಯಿದ ನಮ್ಮ ಮುಂದೆ ಬಂದು ಗೆರಾಯಿಶಿದರಿಂದ ತಾಉ ಯಿರುವದು ಸ್ವಲ್ಪ ಜನ ಸಾದ್ರಿ ಬಹಳ ಮಂದಿ ಕಟ್ಟಿಕ್ಕೊಂಡು ಬಂದಿದಾನೆ ಯಿಂನ್ನು ಅವನಾಗಿ ನಂಮೇಲೆ ಬೀಳುವದರಿಂದ ನಾವೇ ಮುಂದಾಗಿ ಬೀಳುವ ಯಂಬದಾಗಿ ಮನಸು ಬಾಮಾಡಿ ನಂಮ್ಮ ಮಂದಿಯು ಸಾದ್ರಿ ಮೇಲೆ ಬಿದಲ್ಲಿ ನಂಮ್ಮ ಕಡೆಯ ಪತ್ತು ಜನಕ್ಕೆ ಅಪಾಯವಾಯಿತ್ತು ಆ ಬಳಿಕ ನಂಮ್ಮ ಮಂದಿಯೂ ಮೇಲೆ ಬಿದ್ದು ಕಡುದಲ್ಲಿ ಸಾದ್ರಿ ಕಡೆ ನಾನೂರು ಐನೂರು ಜನ ಟಾರಾಗಿ ಹೋಯಿತ್ತು ಉಳಿಕೆ ಜನ ಸಾದ್ರಿ ಸಹಾ ವೋಡಿ ಹೋದ್ರು ಆವಾಗ್ಯೆ ಸಾದ್ರಿ ಹತ್ತು ಪಾಲಕಿ ಕುದುರೆ ವಬ ಸರದಾರ ಕ್ಷತ್ರಿ ಕ್ರಿಷ್ಣ್ಣರಾಉ ಯಂಬವ ಸಹಾ ಶಿಕ್ಕಿದರಿಂದ ಆ ಕ್ಷತ್ರಿ ಕ್ರಿಷ್ಣ್ಣ ರಾಉ ಯಂಬವ ನಂನ್ನು ನಮ್ಮ ಬಳಿಗೆ ಕಳುಹಿದ್ರು ನಾಉ ಕಪಿತ್ತಾಂನ್ ಮಾವಿನಿ ಸಾಬರ ಬಳಿಗೆ ಕಳುಹಿಸ್ತೆಉ ಯೀ ಲಡಾಯದಲ್ಲಿ ಶಿಕ್ಕಿದಂತಾದಂನ್ನು ಲೂಟಿ ಮಾಡಿದರಂತ್ತೆ ಯಿದೇ ಮೇರೆ ಬಂಟವಾಲದಲ್ಲಿ । ನಂಮ್ಮ ಕಡೆ ಮಂದಿ ಸ್ವಲ್ಪ ಟಾಂಣ್ಯ ಯಿದಲ್ಲಿ ಅಸಬ ಯಂಬರನು ನಾನೂರು ಅಯಿ

ನೂರು ಮಂದಿ ತ್ತಗೆದುಕೊಂಡು ಬಂದು ಬಿದಲ್ಲಿ ಬಂಟವಾಲದ ಹೊ
ಳೆ ಆಚೆಯ ನಂಮ್ಮ ಮಂದಿ ಸ್ವಲ್ಪ ಟಾಂಣ್ಯ ಯಿತ್ತು ಆ ಮಂದಿಗೆ ಬಂ
ಟವಾಲದಲ್ಲಿದ ನಂಮ್ಮ ಕಡೆ ಜನ ಶುಧಿ ಕೊಟಲ್ಲಿ ಯೀ ಜನಲು ಹೋ
ಗಿ ಕೂಡಿಕೊಂಡು ಆ ಅಸಬನ ಮೇಲೆ ಜಗಳ ಕೊಟಲ್ಲಿ ನಮ್ಮ ಕಡೆ ಯಂ
ಟು ಹತ್ತು ಜನಕ್ಕೆ ಅಪಾಯ ಬಂತ್ತು ಆ ಕಡೆಗೂ ೫೦ ಅರುವತ್ತು ಜನ
ಬಿದ್ದು ಹೋಯಿತ್ತು ಅಸಬನು ತಂನ್ನ ಮಂದಿ ಸಹ ವೋಡಿ ಹೋದರು ಲ
ಡಾಯವಾದ ಬಳಿ ಶಿಕ್ಕಿದಂನ್ನು ಲೂಟಿ ಮಾಡಿಕೊಂಡರಂತ್ತೆ ಯಿದ
ಲ್ಲದೆ ಉದ್ಯಾವರ ಯಂಬವಲ್ಲಿ ಯಿದೇ ಮೇರೆ ನಂಮ್ಮ ಕಡೆದು ಅೈನೂ
ರು ಜನ ಕೊಡಗರು ಟಾಂಣ್ಯಯಿದಲ್ಲಿ ಆ ಉದ್ಯಾವರದ ಮಾಪಿಳೆ
ರು ಪಿತೂರಿ ಮಾಡಿ ವಳಗೆ ಸಾದ್ರಿಗೆ ಹೇಳಿ ಕಳುಹಿದಲ್ಲಿ । ಅವನು
ತಂನ್ನ ಕಡೆ ಕೆಲು ಬಾರು ಕರ್ನಾಟಕ ಜನ ಮೀರಮುಹಂಮದಲ್ಲಿ ಕಡೆ
ಅೈನೂರು ಕಂದಾಚಾರ ಜನ ಮುನಾಂಕೊಲನ ಕಡೆ ನಾಯುಮಾ
ರ್‍ರು ಉದ್ಯಾವರದ ಮಾಪಿಳೆರು ಸಹಾ ಯರಡು ಮೂರು ಸಾವಿರ ಜ
ನ ಕಟ್ಟಿಕೊಂಡು ಬಂದು ನಂಮ್ಮ ಮಂದಿ ಮೇಲೆ ಬಿದಲ್ಲಿ ಅಲ್ಲಿ ಬಹಳ
ಜಗಳವಾಗಿ ಅವರ ಕಡೆ ಜನಕ್ಕೆ ಪೆಟ್ಟಾದರಿಂದ ನಂಮ್ಮ ಮಂದಿಯೂ
ಮೇಲೆ ಬಿದ್ದಲ್ಲಿ ಅವರು ನಿಲ್ಲಲಾರದೆ ವೋಡಿಹೋಗಿ ವಂದು ಮಶೀದಿ
ಹೊಕ್ಕೊಂಡು ಆ ಆಶ್ರಮದಿಂದ ನಂಮ್ಮ ಮಂದಿ ಮೇಲೆ ಗುಂಡು ಯಿಟ್ಟು
ಹೇರಳ ಜಗಳಾ ಮಾಡಿದಲ್ಲಿ ನಂಮ್ಮ ಕಡೇದು ೫೦ ಅರುವತ್ತು ಜನ
ಬಿದ್ದು ಹೋಯಿತ್ತು ಆವಾಗ ಆ ಮಶೀಧಿಗೆ ನಂಮ್ಮ ಮಂದಿಯು ಬೆಂ
ಕಿ ಹಾಕಿ ಮೇಲೆ ಬಿದ್ದು ಜಗಳವಾದಲ್ಲಿ ಅವರ ಕಡೇದು ಯೇಳುನೂರು
ಯಂಟನೂರು ಜನ ಪರಿಯಂತ್ರ ಟಾರಾಗಿ ಉಳಿಕ್ಕೆ ಜನ ಸಾದ್ರಿ ಸ
ಹ ವೋಡಿ ಹೋದರು ಯೀ ಮೇರೆ ಲಡಾಯವಾದಲ್ಲಿ ಅಲ್ಲಿ ಶಿಕ್ಕಿದಂನ್ನು
ಸ್ವಲ್ಪ ಲೂಟಿ ಮಾಡಿದ್ದು ಹೊರ್ತು ಮತ್ತೆ ಯಲ್ಲ್ಯ ಶೀಮೆ ಲೂಟಿಸದೆ ಆ
ಕಡೆ ಮಂಗಲೂರು ತಾಲ್ಕು ಕೊಡೆಯಾಲದ ಆಚಿಗೆ ಬಾರುಕೂರು ಬ
ಗ್ವಾಡಿ ಪರಿಯಂತ್ರಕ್ಕೆ ಯೀ ಕಡೆ ಹೊಸಂಗಡಿ ಗಟ್ಟದ ಪರಿಯಂ
ತ್ರಕ್ಕೆ ತುಳುರಾಜ್ಯ ಶೀಮೆಯಂನ್ನು ಕವಲು ಮಾಡಿ ಟೀಪು ಕಡೆ ಜನ
ದಿಂದ ವಂದು ದುಕ್ಕ ತಟದಂತ್ತೆ ಬಂದೂಬಸ್ತು ಮಾಡಿ ಅಲ್ಲ್ಯೆಲೇ
ಟಾಂಣ್ಯ ಮಡಗಿ ನಂಮ್ಯ ಅಸ್ತಕಿನಲ್ಲು ಯಿಟ್ಟಿದೇಉ ಹೀಗೇ ಯಿರು
ತ್ತಿದಲ್ಲಿ ನಾಉ ಮಡಿಕೇರಿಲಿ ಯಿರುವಾಗ್ಯೆ ಚೈತ್ರ ಬ ೩೦ ಶನಿವಾರ
ದಿದ ಪಟಣದಲ್ಲಿ ಪಿರಂಗಿ ಅವಾಜು ಬಂದಾಯಿತ್ತು ಮತ್ತೆ ಯಂಟ್ಟು
ದಿನ ಪರಿಯಂತ್ರ ಪಟಣ ಸಮಾಚಾರ ಯೇನೂ ಬರಲಿಲ್ಲ । ಅದರಿಂದ
ಯೀ ಪ್ರಕರ ಪಟಣದಲ್ಲಿ ಫಿರಂಗಿ ಅವಾಜು ನಿಂತಿತ್ತು ಯೇನು ಆಯಿ

ತೋ ಯಂಬದಾಗಿ ನಾಉ ಮನಶಿನಲ್ಲಿ ವಿಚಾರಿಶಿಕೊಂಡು ಯಿದಲ್ಲಿ ಅ
ಷ್ಟರ ವಳಗೆ ಟೀಪು ಸುಲತಾನರ ತಾಲ್ಲುಕಿನ ಜನರು ಫುಕಾರು
ಹುಟಿಶಿದೂ ಟೀಪು ಸುಲತಾನರು ತಂಮ್ಮ ಹೆಂಡರು ಮಕ್ಕಳು
ಬೊಕ್ಕಸ ಬಂಡಾರ ಯಾವತ್ತು ಬೆಂಚನಕಲ್ಲು ದುರ್ಗಕ್ಕೆ ಸಾಗಿಶಿ ಪಟ
ಣದ ವಳಗೆಲ್ಲ ಮದ್ದು ಹೂಳಿಬಿಟ್ಟು ತಂನ್ನ ಭಾರಿ ದಂಡು ತ್ತೆಗದು
ಕೊಂಡು । ಟೀಪು ಸುಲುತಾನನು । ಪಟಣದ ಹೊರಗೆ ಯಿದ್ದನ್ನು
ಯಿಂಗ್ರೆಜ ಲಶ್ಕರು ಪಟಣ ಹಲ್ಲ ಹತ್ತಿ ಕೋಟೆ ವಳಗೆ ಹೋಗುವದು
ಆ ಕೋಟೆ ವಳಗೆ ಹೂಳಿದಂತ್ತ ಮದ್ದಿಗೆ ಬೆಂಕಿ ಹಾಕ್ಕಿ ಪಟಣದ ಕೋ
ಟೆ ಅದ್ರ ವಳಗೆ ಹೋದ ಯಿಂಗ್ರೆಜ ಲಶ್ಕರು ಸಹಾ ಹಾರಿಶಿಬಿಟ್ಟು ಟೀ
ಪು ಸುಲುತಾನನು ಬೆಂಚನಕಲ್ಲು ಕಡೆ ಹೋದ ಯಂಬದಾಗಿ ಸಮಾಚಾರ
ಜನರು ಹೇಳುವಂತ್ತದು ನಾಉ ಕೇಳಿದೆಉ ಆಗ ನಂಮ್ಮಮನಶಿಗೆ ಬಹ
ಳ ಕರಕರೆ ದಿಲ್ಲಿರು ಆಗಿ ಮಹಾದೇವನು ಯಿಂಗ್ರೆಜ ಸರಕಾರಕ್ಕೆ ಯೀ
ಮೇರೆ ಕೊಡಬಾರದು । ಯೀಗ ಟೀಪು ದಂತ್ತ ಸಮಾಚಾರ ಸುಳ್ಳು ಆ
ಗಿ ಯಿಂಗ್ರೆಜ ಸರಕಾರಕ್ಕೆ ಜಯವಾಗಿ ಕ್ಷೇಮವಾಗಿದು ನಿಮಾನಕ್ಷಯ
ವಾಗುವಂತ್ತೆ ಶಿವನು ದಯಮಾಡಬೇಕೆಂಬದಾಗಿ ನಾಉ ಯರಡು ಹೊ
ತ್ತು ಕೈವಡ್ಡಿ ಮಹಾದೇವನಿಗೆ ಬೇಡಿಕೊಳುತ್ತ ಬಹಳ ಫಿಕಿರಿನಿಂದ
ಯಿದ್ದೆಉ ಅಷ್ಟುಹೊತ್ತಿಗೆ ಪಟಣ ಹೋದ ಯಂಟನೆ ದಿನ ಕಪಿತ್ತಾನ್
ಮಾವಿನಿ ಸಾಹೇಬರು ವೈಶಾಕ ಶು ೭ ಶನಿವಾರ ದಿವಸ ನಮಗೆ ಬರ
ಶಿ ಕಳುಹಿದ ಕಾಗದಲ್ಲಿ । ಯಿಂದಿಗೆ ಯಂಟನೆ ದಿನ ಚೈತ್ರ ಬ ೩೦ ಶನಿ
ವಾರ ದಿವಸ ಶ್ರೀರಂಗಪಟಣ ಹಲ್ಲಾ ಮಾಡಿ ತೆಗೆದುಕೊಂಡರು ಹಲ್ಲಾ
ಮಾಡುವ ವೇಳ್ಯಕ್ಕೆ ಟೀಪು ತೀರಿಹೋದ ಆತನ ಹೆಂಗಸರು ಮಕ್ಕಳು ಯಲ್ಲ
ನಂಮ್ಮ ಕೈಗೆ ಶಿಕ್ಕಿದರು ಯೀ ಜನರಾಲ್ ಸಾಬ್ರು ಬೊಂಬಾಯಿ ಫಉ
ಜು ಯೀ ಕಡೆ ಬರುತ್ತದೆ ಅದರಿಂದ ಬಹಳ ಕಾರ್ಯ ಯಿರುತ್ತದೆ ನೀಉ
ಶೀಗ್ರಾ ಬರಬೆಕ್ಕು । ತಾಉ ಬಂದ ಮೇಲೆ ಯಲ್ಲ ತಿಳೀಲಾದಿತ್ತು ಯಂಬದಾಗಿ ಕ
ಪಿತ್ತಾಂನ್ ಮಾವಿನಿ ಸಾಬ್ರು ಪಟಣ ಹೋದ ೮ನೆ ಶನಿವಾರದ ದಿನ ಬರ
ದ ಕಾಗದ ಆದಿತ್ಯವರ ದಿನ ನಮಗೆ ಬಂದು ಮುಟ್ಟಿತ್ತು ಅಂದಿಗೆ ಪಟ
ಣ ಹೋಗಿ ವಂಬತ್ತು ದಿನವಾಗಿತ್ತು ಆ ಕಾಗದ ನಾಉ ವೋದಿಶಿ ಕೇಳಿದರಿಂ
ದ ನಂಮನಶಿನ ಕರಕರೆ ಫಿಕಿರು ಯಾವತ್ತೂ ಹೋಗಿ ನಮಗೆ ಬಹಳ
ಸಂತೋಷವಾಯಿತ್ತು ಆ ಕಾಗದ್ದ ನಕಲು ಯೀಗ ನಿಂಮ್ಮಲ್ಲಿಗೆ ಕಳುಹಿಶಿದೇವೆ ।
ಯೀ ಕಾಗದ ಬಂದು ಮುಟ್ಟಿದ ಮಾರನೆ ಸೋಮವಾರ ದಿನ ನಾಉ ಹೊ
ರಟು ವೀರರಾಜೇಂದ್ರ ಪ್ಯಾಟೆಗೆ ಬಂದಲ್ಲಿ ಕಪಿತ್ತಾಂನ್ ಮಾವಿನಿ ಸಾಹೆ
ಬರು ಹೇಳಿದ ವಿವರಾ ಯಿಂದಿಗೆ ಹೋದ ಹತ್ತನೆ ದಿನ ಚೈತ್ರ ಬ ೩೦ ಶನಿ

ವಾರ ಯಿಂಗ್ರಜ ಲಶ್ಕರು ಪಟಣ ಹಲ್ಲ ಮಾಡಿ ತೆಗೆದುಕೊಂಡರು ಯಿನ್ನು ಆ ಶೀಮೆಯೆಲ್ಲ ಯಿಂಗ್ರೆಜ ಸರಕಾರದಾಯಿತ್ತು ನೀಉ ಯಿನ್ನು ಲಡಾಯ ಮೊಕುಪು ಮಾಡಿ ಆ ನಿಂಮ್ಮ ಅಸಕ್ತಿನಲ್ಲಿಟಿರು ಶೀಮೆನೆಲ್ಲ ಕಂಪನಿ ಸರಕಾರಕ್ಕೆ ಬಿಟ್ಟು ನಿಂಮ್ಮ ಶೀಮೆಗೆ ಪ್ರಾಕು ಯಿಂಗ್ರೆಜ ಸರಕಾರದ ಯಿಂಜನೆರು ಯಿಂಮೀಟಂನ್ ಸಾಬರು ಬಂದು ಗಡಿಕಲ್ಲು ಹಾಕಿ ತಮೀ ಶಿಲಾ ಲು ಬರದುಕ್ಕೊಂಡು ಹೋದ ಗಡಿ ಬಂದ ಹಾಗೆ ನಿಂಮ್ಮ ಶೀಮೆ ನೀಉ ಬಂದು ಬಸ್ತು ಮಾಡಿಶಿಕೊಳ್ಳಬೇಕೆಂತ್ತ ಹೇಳಿದರಿಂದ ನಾಉ ಕಉಲು ಮಾಡಿದಂ ತ್ತ ಶೀಮೆಲಿ ಮಡಗಿರು ಟಾಣ್ಯ ತೆಗೆಶಿಬಿಟ್ಟರೆ ಟೀಪು ಕಡೆ ಯಿದ್ದ ತುಂ ಟರು ಶೀಮೆಗೆ ದುಕ್ಕ ಕೊಟ್ಟಾರಲ್ಲಯಂತ ಹೇಳಿದಕ್ಕೆ ಬೊಂಬಾಯಿ ಲ ಶ್ಕರು ಬರುತ್ತದೆ ಆ ಪರಿಯಂತ್ರ ಯೀಗಿನ ಮೇರೆ ತಂಮ್ಮ ಅಸ್ತಕಿನಲ್ಲಿಟ್ಟಿ ರಬೆಕ್ಕು । ಬೊಂಬಾಯಿ ಲಶ್ಕರು ಬಂದಮೇಲೆ ಹುಕುಂ ಪ್ರಕರ ನಡೆಬಹುದು ಯಂಬದಾಗಿ ಕಪಿತ್ತಾಂನ್ ಮಾವಿನಿ ಸಾಬ್ರು ಹೇಳಿದರಿಂದ ಆಕ್ಷಣ ಯಿದೆ ವಿವರವಾಗಿ ಯೀಶ್ವರ್‍ಯೆಗೆ ನಾಉ ಬರದು ಕಳುಹಿದಲ್ಲಿ ಅವನು ದುರ್ಗ ಶೀಮೆ ಪ್ರಾಂತ್ಯದಲ್ಲಿದ್ದನು ಅವನಿಗೆ ನಾಉ ಸೋಮವಾರ ಬರದ ಕಾಗದ ಬುಧವರ ದಿವಸ ಹೋಗಿ ಮುಟ್ಟಿತ್ತು ಅದಕ್ಕೆ ಯೀಶ್ವರ್‍ಯೆಯನು ನಮು ಗೆ ಬರಕೊಂಡ ಕಾಗದಲ್ಲಿ । ಬಸವಾಪಟಣದ ಕೋಟೆ ಹಲ್ಲಾ ಮಾಡಿ ನಂಮ್ಮ ಮಂ ದಿ ತೆಗೆದುಕೊಳು ಪರಿಯಂತ್ರ ಸ್ವಲ್ಪ ಲೂಟಿ ಆದು ಆಯಿತ್ತು ಆಮೇಲೆ ಯ ಲ್ಲ್ಯ ಶೀಮೆ ಲೂಟಿ ಮಾಡದೆ ಯೀ ಗಡಿ ಸರಹದಿನ ಶೀಮೆಯವರಿ ಗೆ ಕಉಲು ನಂಬಿಗೆ ಕೊಟ್ಟು ಯಿಟ್ಟುಯಿದೇನೆ ಯಿನ್ನು ಮುಂದು ಲೂಟಿ ಲಬಾಡು ಮಾಡದೆ ಅಪಣೆ ಪ್ರಕರ ನಡಕೊಳ್ಳುತ್ತೇನೆಂತ್ತ ನಮಗೆ ಬರಕೊಂಡು ಯಿದ್ದ ಯಿದೇ ವಿವರವಾಗಿ ಪಟಣಹೋದ ಹತ್ತನೆ ದಿನ ಸೋಮುವಾರ ಬರದ ಕಾಗದವಂನ್ನು ಮಂಗಲೂರು ತಾಲ್ಲುಗೆ ಹೋಗಿ ಯಿ ದ್ದ ನಂಮ್ಮ ಕಡೆ ಮಂದಿಗೆ ಕಳುಹಿಸ್ತಲ್ಲಿ ಆ ಕಾಗದಉ ಯರಡು ದಿವಸ ಕ್ಕೆ ಮುಟ್ಟುವಲ್ಲಿಗೆ ಮುಟಿತ್ತು ಮೂರು ದಿವಸಕ್ಕೆ ಮುಟ್ಟುವಲ್ಲಿಗೆ ಮುಟಿತ್ತು ನಾಲ್ಕು ಅಯಿದು ದಿನಕ್ಕೆ ಮುಟ್ಟುವಂತ್ತಾ ಬಳಿಗೆ ಮುಟಿತ್ತು ಕೊಡಯಾಲದ ಆಚೆಗೆ ಬಾರಕೂರು ಬಗ್ವಾದಿ ಪರಿಯಂತ್ರ ಶೀಮೆ ಸಾದಿಶಿ ಟಾಣ್ಯ ಯಿ ದ್ದು ನಂಮ್ಮ ಕಡೆ ಜನಕ್ಕೆ ಯೇಳೆಂಟು ದಿವಸಕ್ಕೆ ಮುಟ್ಟುವಂತಾ ಬಳಿಗೂ ಮುಟಿತ್ತು ಯೀ ಮೇರೆಯಲಿ ಕಂಪನಿ ವಕೀಲರಾಗಿ ಯಿದ್ದ ಕಪಿತ್ತಾಂನ್ ಮಾವಿನಿ ಸಾಹೆಬರು ಹೇಳಿದ ಮೇರೆ ನಾಉ ನಂಮ್ಮ ಜನಕ್ಕೆ ತಾಕಿತ್ತು ಬರ ಶಿ ಕಳುಹಿದ ಕಾಗದ ಮುಟ್ಟಿದ ಮೇಲೆ ನಂಮ್ಮ ಕಡೆ ಜನ ಯೇನಾದ್ರೂ ಶೀಮೆ ಲೂಟಿ ಲಬಾಡು ಮಾಡಿಯಿಲ್ಲ । ಹೀಗಿರುವಾಗ್ಯೆ ಪಟಣದಿಂದಾ ಪುನಶ್ಚ ಬೊಂಬಾಯಿ ದಂಡು ತೆಗೆದುಕ್ಕೊಂಡು ಜನರಾಲ್ ಯಿಷ್ಟೋಲ್

ಸಾಬ್ರು ಹಾಟ್ಲಿ ಸಾಬ್ರು ಸಹ ನಂಮ್ಮ ಶೀಮೆಗಾಗಿ ಬಂದರು ನಾಉ ಹೋ
ಗಿ ಜನರಾಲ್ ಸಾಬರ ಮಿಲಾಕತ್ತು ಆದಲ್ಲಿ ಬಹಳ ಸಂತೋಷಪಟ್ಟು ನೀ
ಉ ಬಹಳ ಕಂಪನಿ ಕೆಲಸಕ್ಕೆ ಮಿಹನತ್ತು ಮಾಡಿದಿರಿ ಅದೇ ಮೇರೆ ಸ
ರಕಾರದ ಕೆಲಸಉ ಬಲು ಸುಲಭದಲ್ಲಿ ಪತ್ತೆ ಆಯಿತ್ತು ಯಂಬ
ದಾಗಿ ಹೇಳಿದರು ಅದ ಕೇಳಿ ನಂಮ್ಮ ದುಸಮಾನನು ದೂರವಾ
ದ ಯಿಂಗ್ರೇಜ ಸರಕಾರಕ್ಕೆ ನಂಮ್ಮ ಅಪೇಕ್ಷೆ ಪ್ರಕಾರ ಅನಂತ ದೇಶಕೋ
ಶ ಅೈಶ್ವರ್ಯ ಸರಕಾರ ತಾಬೆ ಆಯಿತ್ತು ನಮ್ಮ ಶೀಮೆ ಸುತ್ತ
ಲು ಯಿಂಗ್ರೇಜ ಸರಕಾರದ ರಾಜ್ಯವಾಯಿತ್ತು । ನಾಉ ಯಿಂನ್ನು ನಮ
ಗೆ ಕುಶಿ ಬಂದಲ್ಲಿ ಸ್ವಾರಿ ಶಿಕಾರಿ ಮಾಡಿಕೊಂಡು ಯಿಂಗ್ರೇಜ ಸರದಾ
ರರ ಮಂದಿಗೆ ದೋಸ್ತಿಲಿ ಯಿದೆಉ ಯಂಬದರಿಂದ ಅವರು ಹೇಳಿ
ದ್ದು ಕೇಳಿ ನಮಗೂ ಬಹಳ ಸಂತೋಷವಾಯಿತ್ತು ಆವಾಗ ಜನರಾಲ್
ಸಾಹೆಬರು ಹೇಳಿದ್ದು ನಾಉ ಕಂಣೂರಿಗೆ ಸಾಗಿ ಹೋಗುತ್ತೇವೆ ಯೀ ದಂಡಿ
ನ ಅಜಾರಿಜನ ಸಾಗಿಶಿ ಕೊಡಬೇಕೆಂತ್ತ ಹೇಳಿದರಿಂದಾ ಅದಕ್ಕೂ ಕಬೂಲು
ಆಗಿ ಅಜಾರಿ ಕಾಯಿಲೆ ಜನ ಸಾಮಾನು ಸರಂಜಾಮು ಮುಂತ್ತಾಗಿ
ನಾಉ ನಂಮ್ಮ ಜನ ಸಹಾ ಹೊತ್ತು ಕಂಣೂರಿಗೆ ಜನರಾಲ್ ಸಾಹೆಬರ
ಸಂಗಡ ನಾವೇ ಹೋಗಿ ತಲಪಿಸ್ತೆಉ ಆ ಬಳಿಕ ನಂಮ್ಮ ಅಸ್ತಕಿನಲ್ಲೀ
ಬಂದೂಬಸ್ತು ಮಾಡಿ ಯಿಟ್ಟರು ಶೀಮೆ ಯಾರ ಅಸ್ತಿಕ್ಕು ಮಾಡಿ ಕೊಡ
ಬೇಕೆಂತ್ತ ನಾಉ ಜನರಾಲ್ ಸಾಬರ ಕೇಳಿದಲ್ಲಿ ಮಂಗಲೂರ ತಾಲ್ಲುಗೆ
ಕರ್ನಲ್ ವೈಜಮಂನ್ ಸಾಬರು ಬರುತ್ತಾರೆ ಆ ತಾಲ್ಕು ಶೀಮೆ ನಿಂಮ್ಮ
ಅಸ್ತಕಿನಲ್ಲಿರುವರತ್ತಾದಂನ್ನು ಯೀ ವೈಜಮಂನ್ ಸಾಬರ ಹವಾಲೆ
ಮಾಡ್ಸಿಕೊಡಬೇಕೆಂತ ಹೇಳಿದರು ಯೀ ವಿವರವಾಗಿ ಕರ್ನಲ್ ವೈಜಮಂ
ನ್ನ ಸಾಬರು ಬಂದಲಿ ಅವರು ಹೇಳಿದ ಮೇರೆ ಕೇಳಿ ನಡಕೊಳುವಂ
ತ್ತೆ ಕರಣಿಕ ಸುಬ್ಬೈಯಗೂ ನಾಉ ಬರಶಿ ಕಳುಹಿಸ್ತೆಉ ಜನರಾಲ್
ಯಿಷ್ಟೋಲ್ ಸಾಹೆಬರು ನಾವಾದರೆ ವಿಲಾಯಿತ್ತಿಗೆ ಹೋಗು ಉಧಿಶ್ಯ
ಹೋಗುತ್ತೇವೆ ತಾಉ ಕಂಪನಿ ಕೆಲಸಕ್ಕೆ ಬಹಳ ಮಿಹನತ್ತು ಒಟ್ಟು ಪ್ರಾ
ಣ ಪ್ರಯತ್ನ ಮಾಡಿ ಬಹಳ ಸಕಾಯಸಂಪತ್ತು ಮಾಡಿ ನಂಮ್ಮ ಸಂಗ
ಡ ಕಣ್ಣೂರು ಪರಿಯಂತ್ರ ಒಂದು ನಂಮ್ಮ ದಂಡಿನ ಅಜಾರಿ ಜನಾನೆ
ಲ್ಲ ಯಿಲ್ಲಿ ತನಕರ ಹೊತ್ತು ಸಾಗಿಶಿಕೊಟ್ಟು ಬಹಳ ಸಹಾಯ ಮಾಡಿದಿರಿ
ಯಂಬದಾಗಿ ಬಲು ತಾರೀಫು ಮಾಡಿ ಗಲ್ಲ ಹಿಡಿದು ಮುದ್ದಿಶಿ ಬಲು ಶ್ಯಾ
ಬಾಸು ಕೊಟ್ಟು ನಂಮ್ಮಂನ್ನು ನಂಮ್ಮ ಶೀಮೆಗೆ ಹೋಗುವಂತ್ತೆ ಹುಕುಂ ಕೊ
ಟ್ಟು ಜನರಾಲ್ ಯಿಷ್ಟೋಲ್ ಸಾಹೆಬರು ಜಾಜು ಹತ್ತಿ ಕಂಣೂರಿಂದ ಹೊ
ದರು ನಾಉ ನಂಮ್ಮ ಶೀಮೆಗೆ ಬಂದೆಉ ಆ ಬಳಿಕ ಜನರಾಲ್ ಸಾಬರ ಹು

ಕುಂ ಮೇರ ಮಂಗಲೂರ ತಾಲ್ಲುಕಿಗೆ ಬಂದ ಕರ್ನಲ್ ವೈಜಮಂನ್ ಸಾಬರ
ತಾಬೆಗೆ ನಾಉ ಬಂದೂಬಸ್ತು ಮಾಡಿದ್ದ ಮಂಗಳೂರು ತಾಲ್ಲುಕ ಶೀಮೆಯಂ
ನ್ನು ಆ ಯಿಂಗ್ರೇಜ ಸರದಾರ್ರು ತಂಮ್ಮ ಟಾಂಣ್ಯ ಹಾಕಿಕೊಂಡ ಮೇರೆ ನಂಮ್ಮ
ಟಾಂಣ್ಯವನ್ನು ತೆಗೆದುಕೊಂಡು ಕರಣಿಕ ಸುಬ್ಬೈಯನು ಬಂದನು ಯಿತ್ತ
ಲಾಗಿ ಯೀಶ್ವರ್ರೈಯನು ಕಉಲು ಕರಾರು ಮಾಡಿದಂತ್ತ ಗಡಿ ಸರಹ
ಧಿನ ಶೀಮೆಗೆ ಟೀಪು ದಿವಸಕ್ಕೆ ಅಧಿಕಾರಿಕೆ ಮಾಡಿದ ಬಾಂಮ್ಮಣರು
ಯಿಂಗ್ರೇಜ ಸರಕಾರದಿಂದ ವಂದೊಂದು ನಿಶಾನಿ ತಂದು ನಾಉ ಸರಕಾರ
ದ ನಿಶಾನಿ ತಂದು ಯಿದೆವೆ ನೀಉ ಊರ ಮೇಲಿ ಯಿರುವುದಕ್ಕೆ ಕೆಲಸವೆ
ನು ಯಿದೆಲ್ಲ ನಂಮ್ಮ ತಾಲ್ಲುಕ ಆಗಿದೆಯಂತ್ತ ಚಿಕ್ಕಪುಟ್ಟ ಮಾತನಾಡಿ ನಿ
ಶಾನಿ ಹಾಕುತ್ತ ಬಂದದರಿಂದ ಯೀ ಮೇರೆ ಬಾಂಮಣರು ಬಂದು ಯೀ ಪ್ರ
ಕರ ಬೇರೊಬರು ಮಾಡುತ್ತಾರೆಂತ್ತ ಯೀಶ್ವೈರ್ರೈಯನು ನಮಗೆ ಬರ
ಕೊಂಡಲ್ಲಿ । ಯಿಂಗ್ರೇಜ ಸರಕಾರದ ನಿಶಾನಿ ತಂದು ಬಾಂಮಣರು ಯೀ
ಮೇರೆ ಅಬರು ನೀಗ ಬೇರೊಬರು ಮಾಡುವದಾದ ಮೇಲೆ ಸರಕಾರ
ದ ನಿಶಾನಿಗೆ ನಾಉ ಸುಂಮ್ಮನೆ ಯಿರಬೇಕಾಯಿತ್ತು ಅದಕ್ಕೆ ಚಿಂತ್ತೇನದೆ
ನೀನು ಆ ಕಡೆ ಕಉಲು ಮಾಡಿರು ಶೀಮೆ ತಂಟೆ ಬಿಟ್ಟು ಪ್ರಾಕಾರಬ್ಯದಿಂದ
ಯಿಂದಿನವರಿಗೆ ನಂಮ್ಮ ಸಂಸ್ಥಾನಕ್ಕೆ ಸೇರಿ ಬಂದ ಶೀಮೆಗಡಿ ಬಂದ
ಹಾಗೆ ಪ್ರಾಕು ಯಿಂಗ್ರೇಜ ಸರಕಾರದಿಂದ ಯಿಂಜನೇರು ಮೀಟ ಸಾ
ಹೆಬರು ಬಂದು ಗಡಿಕಲ್ಲು ಹಾಕ್ಕಿ ತಮಿಶಿಲಲ್ಲು ಬರದಗಡಿ ಬಂದ
ಹಾಗೆ ಬಂದೂಬಸ್ತು ಮಾಡಿಕೊಂಡಿರುವದು ಯಂತ್ತ ತಾಕಿತ್ತಿ ಮಾಡಿಸ್ತೆಉ
ಅದೇ ಮೇರೆ ಯೀಶ್ವರ್ರೈಯನ ಪರ ತಾಲ್ಲುಕ ಶೀಮೆ ಬಿಟ್ಟು ನಂಮ್ಮ ಅರಮ
ನೆ ಶೀಮೆಗಡಿ ಬಂದ ಹಾಗೆ ಬಂದೂಬಸ್ತು ಮಾಡಿಕ್ಕೊಂಡು ವಿಚಾರಿಶಿ ಕೊಂ
ಡು ಯಿದಾನೆ ಯೀ ಮೇರೆ ಟೀಪು ಸುಲುತಾನರು ಶಿದ್ದೇಶ್ವರನ ಗಧಿ
ಗ್ಯೆ ಬಂದು ಲಡಾಯಿ ಮಾಡಿದ ಎಲ್ಲ ಬಿಗಡಾಯಿಶಿತ್ತು ಯಿಂನು ಮುಂ
ದೆ ಟೀಪು ಜನ ಯಲ್ಲಿದೆಯೊ ನೀಉ ಅವರಿಗೆ ದುಕ್ಕ ಕೊಡಿಯಂತ್ತ ಜನ
ರಾಲ್ ಯಿಷ್ಟೋಲ್ ಸಾಹೇಬರು ಹಾಟ್ಲಿ ಸಾಹೇಬರು ಕಪಿತ್ತಾಂನ್ ಮಾವಿನಿ ಸಾ
ಬರು ಸಹ ಪಾಲ್ಗುಣ ಶು ೧ ದಿವಸ ನಮಗೆ ಮೊಕರೂರು ಮಾಡಿ ಹೇಳಿದ್ರು
ಪಟಣ ಹೋದ ಹತ್ತನೆ ವೈಶಾಕ ಶು ೧೦ ಚಂದ್ರವಾರ ದಿವಸ ಲಡಾಯ ಮೊ
ಕುಪು ಮಾಡಿಸಬೇಕೆಂತ್ತ ಕಪಿತ್ತಾಂನ್ ಮಾವಿನಿ ಸಾಬ್ರು ನಂಮ್ಮ ಸಂಗ
ಡ ಹೇಳಿದರು ಅದರ ವಳಗೆ ಲಡಾಯದಲ್ಲಿ ಯೇನು ಆದ್ದು ಆಯಿತ್ತು ಅ
ದ್ರ ಯೀಚೆಗೆ ಯೇನಾದ್ರು ನಂಮ್ಮ ಜನ ಲೂಟಿ ಲಬಾಡು ಮಾಡಿ ಜುಲುಮೆ
ಜಾಸ್ತಿ ಮಾಡಿದ್ದು ಉಂಟುಮಾಡಿಕೊಟರೆ ನಂಮ್ಮದು ತಕ್ಸೀರು ಸರಿ
ಆದರೆ ನಾಉ ಕಬೂಲು ಯಿದೇವೆ ಯಿದಲ್ಲದೆ ಪ್ರಾಕು ಟೀಪು ಸುಲುತಾ

ನರಿಗೂ ಯಿಂಗ್ರೇಜ ಸರಕಾರಕ್ಕೂ ಲಡಾಯ ಪ್ರಾರಂಭಿಸುವಾಗ್ಯೆ ಬೊಂ
ಬಾಯಿ ಲಶ್ಕರಿಗೆ ಕಾವಂದರಾಗಿದಂತ್ತಾ ಜನರಾಲ್ ರಾಬರಟ ಆಬ್ರಕ
ರಂಬಿ ಸಾಹೆಬಹದರವರು ನಂಮ್ಮಂನ್ನು ತಲಚೆರಿಗೆ ಕರಶಿಕ್ಕೊಂಡು ಯಿಂ
ಗ್ರೆಜ ಸರಕಾರ ದಂಡಿಗೆ ತಂಮ್ಮ ಶೀಮೆಲಿ ಮಾರ್ಗ ಕೊಡಬೆಕ್ಕು ತಾಉ ಸ
ಕಾಯ ಸಂಪತ್ತು ಮಾಡಬೇಕೆಂಬದಾಗಿ ಹೇಳಿದರು ಅದಕ್ಕೆ ನಾಉ ಕಬೂಲು
ಆಗಿ ಯರಡುಕಡೆಯಿಂದಲು ಬರದು ಯಿಟರು ಆ ಆರಭ್ಯದಿಂದಾ
ಯಿಂದೆನವರೆ ಪರಿಯಂತ್ರಕ್ಕೆ ಕಂಪನಿ ಸರಕಾರಕ್ಕೂ ನಮಗೂ ಬರದು ಯಿ
ಟ್ಟ ತಹನಾಮಿಗೆ ನಾಉ ಹೆಚ್ಚು ಕಡಮೆ ಮಾಡಿದ್ದಾಗ್ಯೂ ನಾಉ ಆಡಿದಂತ್ತ
ಮಾತ್ತಿಗೆ ತಪಾವತ್ತು ಬಂದಿದ್ರು ಕಂಪನಿ ಸರಕಾರದಲ್ಲಿ ಹುಕುಂ ಆ
ದಕ್ಕೆ ನಾಉ ಮೀರಿ ನಡದು ಯಿದರೂ ಆವಾಗ್ಯೆ ಸಾರಾ ಬೊಂಬಾಯಿ ಲ
ಶ್ಕರಿಗೆ ಕಾವಂದರಾಗಿ ಬಂದಿದ್ ಸರ ಜನರಾಲ್ ರಾಬರಟ ಆಬ್ರಕರಂ
ಬಿ ಸಾಹೆಬಹದರು ಶಾಯಿದಿ ಯಿದ್ದಾರೆ ಆದಂಡಂದಲ್ಲಿದಂತ್ತ ಕರ್ನಲ್
ಮೇಜರ್ ಕಪಿತ್ತಾಂನ್ ಆಪಿಸರು ಮುಂತಾದ ಸರದಾರು ಶಾಯಿದಿ ಯಿ
ದಾರೆ ಆ ಬೊಂಬಾಯಿ ಲಶ್ಕರು ಯಾವತ್ತು ಶಾಯಿದಿ ಹಾಜರು ಯಿದೆ ಟೀ
ಪು ಸುಲುತಾನರಿಗೆ ಸಲ್ಲಾ ಮಾಡಿದ ಮೇಲೆ ಯೀಗ ಟೀಪು ಸುಲುತಾನರ
ಸಂಗಡ ಲಡಾಯ ಶುರು ಆಗು ಪರಿಯಂತ್ರ ನಾವೇನಾದ್ರು ಕಂಪನಿ
ಹುಕುಂ ಮೀರಿ ನಡೆದಿದರೆ ಮಲೆವಾರು ಕಮೀಶನ ಸಾಹೇಬರು ಶಾಯಿದಿ
ಯಿದಾರೆ ಯೀಚೆಗೆ ಸಲ್ಲಾ ಬಿಗಡಾಯಿಶಿ ಯಿಂಗ್ರೇಜ ಸರಕಾರಕ್ಕೂ ಟೀಪು
ಸುಲುತಾನರಿಗೂ ಲಡಾಯ ಶುರು ಆಗುವಾಗ್ಯೆ ಯೀಪ್ರಕರ ಬೊಂಬಾಯಿ ದಂ
ಡು ತೆಗೆದುಕ್ಕೊಂಡು ಜನರಾಲ್ ಯಿಷ್ಟೋಲ್ ಸಾಹೇಬರು ಬರುತ್ತಾರೆ ತಮ್ಮ ಬಳಿ
ಯಿಂಗ್ರೆಜ ಸರಕಾರದ ವಕೀಲರಾಗಿ ಕಪಿತ್ತಾಂನ್ ಮಾವಿನ ಸಾಬರು ಯಿರು
ತ್ತಾರೆ ಯಿವರು ಹೇಳಿದಂತ್ತೆ ತಾಉ ಮಾಡಿಶಿಕೊಟ್ಟು ನಡಕೊಳಬೆಕ್ಕುಯಂತ್ತ
ಬಂಗಾಳದ ಗವರನರ ಜನರಾಲ್ ಲಾರ್ಡ್ ಮಾರನಿಂಗ ಟಂನ್ ಸಾಹೆಬಹ
ದರು ನಮಗೆ ಬರಶಿ ಕಳುಹಿದ ಕಾಗದಉ ಹಾಜರು ಯಿದೆ ಆ ಕಾಗದ
ತಂದು ನಮಗೆ ಕೊಟಂತ್ತ ಜನರಾಲ್ ಯಿಷ್ಟೋಲ್ ಕಪಿತ್ತಾಂನ್ ಮಾವಿ
ನಿ ಸಾಬ್ರು ಸಹ ಹೇಳಿದ ಮೇರೆ ನಾಉ ಕಂಪನಿ ಕಾರ್ಯ ಮಾಡಿ ನಡಕೊಂ
ಡೆಉ ಯಿಲ್ಲ ಯಂಬದಕ್ಕೆ ಜನರಾಲ್ ಯಿಷ್ಟೋಲ್ ಸಾಬರು ಹಾಜರು
ಯಿದಾರೆ ನಂಮ್ಮ ಬಳಿ ಕಂಪನಿ ವಕೀಲರಾಗಿದ್ದ ಕಪಿತ್ತಾಂನ್ ಮಾವಿನಿ
ಸಾಹೆಬರು ಯಿದಕ್ಕೆಲ್ಲಾ ಶಾಯಿದಿ ಹಾಜರು ಯಿದಾರೆ ಯೀಗ ಬಂದ ಬೊಂಬಾ
ಯಿ ದಂಡಿನಲ್ಲಿದಂತ್ತಾ ಕರ್ನಲ್ ಮೇಜರ ಕಪಿತ್ತಾಂನ್ ಆಫಿಸರು ಮುಂತ್ತಾದ
ಸಾರಾ ಲಶ್ಕರು ಯಾವತ್ತೂ ಶಾಯಿದಿ ಹಾಜರು ಯಿದಾರೆ ಯಿವರ ಸಗ
ತಾಉ ವಿಚಾರಿಸ್ತಲ್ಲಿ ನಾವೇನಾದ್ರು ಬರದು ಯಿಟ್ಟದಕ್ಕೆ ಆಡಿದ ಮಾತಿಗೆ

ಕಂಪಸಿ ಹುಕ್ಕುಂ ಆದ್ದು ಮೀರಿ ನಡದ್ದು । ನಾಉ ತಕ್ಸೀರು ಮಾಡಿದ್ದು ಉಂ
ಟಾಗಿದರೆ ಅವರು ಹೇಳ್ಯಾರಲ್ಲ । ಅದಕ್ಕೆ ನಾಉ ಕಬೂಲು ಯಿದೇವೆ ಯಿ
ದಲ್ಲದೆ ನಂಮ್ಮ ಶೀಮೆ ಆಚೆ ಸರಹಧಿನ ಗಡಿವಾಡದವರು ಮೊದಲು ಟೀ
ಪು ಸುಲುತ್ತಾನರ ದಿವಸಕ್ಕು ನಾನಾ ಪ್ರಕರ ಚುದ್ರೋಪದ್ರ ಹೇಳಿ ಪೂರ್ನ್ಯೆ
ನ ಕಡೆಯಿಂದ ಟೀಪು ಸುಲತಾನರಿಗೆ ತಿಳಿಶಿ ಯಾವಾಗಲೂ ಯಿಲ್ಲದ ವ್ಯಾಜ್ಯ
ನಮಗೂ ಆತಗೂ ಕಷ್ಟವೆ ಯಿತ್ತು ಟೀಪು ಸುಲುತಾನರಿಗೆ ಯೀ ಗಡಿ ವಾ
ಡದವರು ನಂಮೇಲೆ ಯಿಲ್ಲಸಲ್ಲದ್ದು ತಿಳುಸ್ತಾರೆ ತಾನು ಯಿಂಗ್ರೇಜ ಸರಕಾರಕೆ
ಅವರ ಮಾತ್ತಿನ ಮೇರೆ ಹೇಳಿದರೆ ತಂನ ಮೇಲೆ ಯೇನು ಮಾತ್ತು ಬಂದೀತೋ ಯಂ
ತ್ತ ಸ್ವಲ್ಪ ವಿಚಾರಿಶಿ ಯಿಂಗ್ರೇಜ ಸರಕಾರಕ್ಕೆ ಜಾಹೀರು ಮಾಡುತ್ತಿದ್ದ ಯೀಗ
ಪೂರ್ನ್ಯೆಯ್ಯಗೆ ಸರ್ವಾಧಿಕಾರಿಕೆ ಆಗಿಯಿದೆ ಆ ಪೂರ್ನ್ಯೆಯನು ಬಾಂಮ್ಮ
ಣ ಯಿದ್ದಾನೆ ಅವನ ಜಾತ್ತಿಗೂ ಅವನ ಜಾತ್ತಿಗೂ ಆಗುವುದಿಲ್ಲ ಮೊದಲು ನವಾ
ಬ ಹೈದರನ ದಿವಸ್ತಲ್ಲು ಟೀಪು ಸುಲುತಾನನ ದಿವಸ್ತಲ್ಲು ಯೀ ಪೂರ್ನ್ಯೆಯ್ಯ
ನು ಯಿಲ್ಲಸಲ್ಲದ ಚುದ್ರೋಪದ್ರ ಹೇಳಿ ಬಹಳ ದೊರೆತನ ಹಾಳುಮಾಡಿದಂ
ತ್ತವ ನಮಗೆ ನಂಮ್ಮ ರಾಜ್ಯಕ್ಕೆ ಸಹ ಯಿವನ ಕಡೆಯಿಂದ ಬಹಳ ದುಕ್ಕ
ತಟ್ಟಿ ಯಿದೆ ನಾಉ ಟೀಪು ಸುಲುತಾನರಿಗೆ ಅನುಕೂಲವಾಗದೆ ಯೆಂ
ಗ್ರೇಜ ಸರಕಾರ ವಂದಂನ್ನೆ ನಂಬಿ ವಬ್ಬರಂನ್ನು ಗುಮಾನಕ್ಕೆ ಹಾಕದೆ ಯಿ
ದ್ದದ್ದರಿಂದ ಯೀತನ ಮನಶಿನಲ್ಲಿ ನಂಮೇಲೆ ಬಹಳ ವೈರವಿದೆ ಯೀ
ಗ ನಂಮ್ಮ ಶೀಮೆ ಆಚೆ ಸರಹದಿನಲ್ಲು ಯಿರುವಂತ್ತ ಗಡಿಗಳ ಅಮಲು
ತಂನ್ನ ಬಂಧುಬಳಗ ನಂಟರಿಷ್ಟರು ತಂನ್ನ ಜಾತ್ತಿ ಬಾಂಮಣರಿಗೆ ಕೊ
ಟಿದ್ದಾನೆ ನಮಗೆ ಮಹಾದೇವನ ಕಟಾಕ್ಷ ವಂದು ಆ ತದನಾಂತರ
ಯಿಂಗ್ರೇಜ ಸರದ ಮೆಹರ್ಬಾನಗಿ ವಂದು ಹೊರ್ತು ಮತ್ತೊಬರ
ಸ್ನೇಹ ವಿಶ್ವಾಸ ಮಡಗಿದವರು ಅಲ್ಲ ವಬ್ಬರಿಂದ ನಮಗೊಂದು ಆ
ಗಲು ಬೇಡ ನಮಗೆ ಯಿಂಗ್ರೇಜಿ ಸರಕಾರ ವಂದು ಹೊರ್ತು ಮತ್ತೊಬರು
ಆಪ್ತರು ಯಿಲ್ಲ ಯಂಬದಾಗಿ ನಾಉ ಯಾರಂನ್ನು ಗುಮಾನಕ್ಕೆ ತಾರದೆ
ನಂಮ್ಮ ಸರ್ವಸ್ವವಂನ್ನು ನಂಮ್ಮ ರಾಜರ ಜಾವಂದಿಯಿಂದ ಯಿಂಗ್ರೇಜ ಸ
ರಕಾರಕ್ಕೆ ವಪ್ಪಿಶಿ ಯಿಂಗ್ರೇಜ ಸರಕಾರದಿಂದ ನಮಗೆ ಮಕ್ಕಳು ಯಂ
ದ್ರು ಸರಿ ಚಾಕರರು ಯಂದ್ರು ಸರಿ ಸರಕಾರ ಚೆಲಾಯಂದ್ರೂ ಸರಿ ಸ
ರ್ವ ಬಗೆಯಲ್ಲು ನಾಉ ಯಿಂಗ್ರೇಜ ಸರಕಾರ ವಂದಂನ್ನೆ ನಂಬಿರುದ
ರಿಂದಾ ಟೀಪು ಸುಲುತಾನರ ತಾಲ್ಲುಕಿನ ಜನ ಯಾವತ್ತು ನಮಗೆ ಹ
ಗೆಯಾಗಿದ್ದಾರೆ ತಾಉ ನಂಮ್ಮ ಕಂಡವರಲ್ಲ ನಮ್ಮ ನಡತ್ತೆ ನುಡಿತ್ತಿ ತಿಳಿ
ದವರಲ್ಲ ನಂಮ್ಮ ಹಾಲು ಹಕಿಕತ್ತು ತಮಗೆ ಮಾಲುಂ ಯಿಲ್ಲ ಯೀಗ ಆ
ತನ ತಾಲ್ಲುಕಿನಲ್ಲಿರುವಂತ್ತ ರೈತರಿಂದಲೂ ಆತನ ಕಡೆ ಅಮಲು ಮಾಡು

ವ ಸ್ವಜಾತಿ ಜನದಿಂದಲೂ ತಂಮ್ಮ ಬಳಿಲಿ ಫಿರಾದಿ ಹೇಳಿಗೆ ಪಟ್ಟಿಯ
ಲ್ಲಿ ಬರಶಿರುವದು ಹೆಂಣು ಜನ ೬೭ ಗಂಡು ಜನ ೩೪ ಮೂವತ್ತನಾ
ಲ್ಕು ಸಂಣ ಸಂಣ ಗಂಡು ಮಕ್ಕಳು ೧೧ ದನಗಳು ೧೩೮೩ ಯೆತ್ತು ೮೩೪
ಯಂಮೆ ೫೭೪ ಜವಳಿನಗ ೧೨೧ ನಗದು ವರಹಾ ಕಂಟಿರಾಯಿ ೭೨೯೯
ವಡವೆ ವಸ್ತುಗಳು ಚಿಂನ ಬೆಳಿದು ೮೨ ಕೈಗೆ ಹಾಕುವ ಬೆಳ್ಳಿ ಕಡಗ
ಗಳು ೩೬ ಬಂಣ ಸರ ೨೩ ಬೆಳ್ಳಿ ಸಂಕಲೆಗಳು ೬೩ ಚಿಂನ್ನದ ವಾಲೆ ಜೋ
ಡು ೫೪ ಅಂನ್ನ ತಿಂಬುವ ಕಂಚಿನ ತಳಿಗೆ ೨೧೫ ತಂಬಿಗೆ ತ್ವಾಲಿಗಳು ೯೩
ಬಂದೂಕುಗಳು ೬೭ ಕಿವಿಗೆ ಹಾಕುವ ಮುರು ೬ ಕುದ್ರೆ ೬ ಆಡೂಗ
ಳು ೧೫೫ ಕತ್ತಿಗಳು ೧೫೫ ಕೊಡಗ ಕತ್ತಿ ೧೧೬ ಕುರಾಡಿಕೊಡ್ಲಿ ೧೧೦
ಕಂಚಿನ ತಾಂಬಾಣ ೫ ಕಬ್ಬಿನ ಸರಗಣಿ ೭ ಜವಳಿ ಗಂಟ್ಟು ೭೨ ಯಿಂ
ತಿಷ್ಟು ನಗವಂನ್ನು ನಾಉ ಲೂಟಿ ಮಾಡಿಶಿ ತರಿಶಿಕೊಂಡಿದ್ದಾರೆಂತ್ತ ತ
ಮಗೆ ಕೊಟಲ್ಲಿ। ಯೀ ಪಟ್ಟಿ ಮೇರೆ ಸಾಮಾನು ತಾಮಸ ಮಾಡದೆ
ಕಳುಹಿಶಿ ಕೊಡುವದು ಯಂತ್ತ ತಾಉ ಬರಶಿ ಪಟ್ಟಿನು ಕಳುಹಿದೀರಿ ಯೀ
ಬಗೆ ಸಾಮಾನು ವಂದಂನ್ನು ನಂಮ್ಮ ಕಡೆ ಜನ ನಮಗೆ ತಂದುಕೊಡಲಿಲ್ಲ
ನಾಉ ಕಾಣಲೂ ಯಿಲ್ಲ ಯೀಗ ನಂಮ್ಮ ಕಡೆ ಜನಾನ ನಾಉ ಕೇಳಿದಲ್ಲಿ ನಾ
ಉ ಹತ್ತಾರು ಬಂದೂಕು ಹಿಡಿದು ಜಗಳಾ ಮಾಡುವಂತ್ತ ಜನ ಸಾವಿ
ರವಿದ್ದರೆ ಲೂಟಿಲಬಾಡು ಮಾಡುವಂತ್ತಾ ಯೀಸ್ತಳ ಪರಸ್ತಳದ ಕೊ
ಳ್ಳೆ ಜನ ಯರಡು ಸಾವಿರ ಯಿತ್ತು ಹತ್ತಾರು ಬಂದೂಕು ಹಿಡಿದಂತ್ತಾ
ಜನಕ್ಕೆ ಲಡಾಯಿ ಹೆಚ್ಚು ಬಿದ್ದದೆ ಹೊರ್ತು ಲೂಟಿ ಲಬಾಡು ಬಹಳ ಶಿ
ಕ್ಕಲಿಲ್ಲ ಯೀ ಕೊಳ್ಳೆ ಜನಕ್ಕೆ ಕೆಲುಉ ಅರುವೆ ಅಂಚಡಿ ಕಂಚು ತಾಂಬ್ರ ಕ
ಬ್ಬಿಣ ಕೆಲುಉ ಶಿಕ್ಕಿತ್ತು ಚಿಂನ್ನ ಬೆಳಿ ಅಲ್ಪ ಸ್ವಲ್ಪ ಯೀ ಕೊಳ್ಳೆ ಜನಕ್ಕೆ ಯೇನಾ
ದರೂ ಶಿಕ್ಕಿತೋ ಯೇನೋ ನಾಉ ತಿಳಿದ್ದಲ್ಲ ಯೀ ಯೇಳುನೂರು ವರ
ಹದ ಗಂಟು ನಾಉ ಕಂಡವರು ಅಲ್ಲಿ ನಮಗೆ ವಬರೂ ಕೊಡಲೂ ಯಿಲ್ಲ
ಯಂಬದಾಗಿ ನಂಮ್ಮ ಸಂಗಡ ಹೇಳಿದರು ಯೀ ಜನ ನಮಗೆ ಕೆಲಉ
ಯೆತ್ತು ಆಡು ಕುರಿ ತಂದು ಕೊಟರು ಅದಂನ್ನು ನಾಉ ತಂಮ್ಮ ಯಿಂಗ್ರೆ
ಜ ಸರಕಾರಕ್ಕೆ ಕೊಟ್ಟುಬಿಟ್ಟೆಉ ನಮಗೆ ಯಿದರಿಂದ ಯೇನು ಕಿಫಾಯಿತ್ತಿ
ಯಿಲ್ಲ। ಯಿದಲ್ಲದೆ ಕೆಲುಉ ಹೆಂಣುಗಳು ತೆಗೆದುಕ್ಕೊಂಡು ಬಂದಿ
ಧೀರಲ್ಲಾ ಅದ ಬಿಟ್ಟುಕೊಡಿ ಯಂಬದಾಗಿ ಯೀ ಶೀಮೆ ಜನರ ಕೇಳಿದ
ಲ್ಲಿ ಆ ಮಾತ್ತಿಗೆ ಅವರು ಹೇಳುವದು ಹಿಂದೆ ಟೀಪು ಸುಲುತಾನನ್ನು
ನಂಮ್ಮ ನೀಗಲೆ ನಂಬಿಶಿ ಕುಟುಂಬ ಮಕ್ಕಳು ಸಮೇತ ಅರುವತ್ತು ನಾ
ಲ್ಕು ಸಾವಿರ ಜನ ಕೊಡಗರು ಯಿದಲ್ಲದೆ ಯಿಂನ್ನು ಕೆಲುಉ ಜಾತಿ ಜನರ
ಸಹಾ ಹಿಡುಕೊಂಡು ಹೋಗಿ ಪಟ್ಟಣದಲ್ಲಿ ಸೆರೆ ಹಾಕಿಕ್ಕೊಂಡು ಯಿದ್ದ ತಾ

ಉ ನಂಮ್ಮ ದೂರಗಳು ಯಂಬದ್ದರಿಂದಲೂ । ನಂಮ್ಮ ಸ್ತಳ ಯಂಬದ್ದ ರಿಂದಲೂ ನಂಮ್ಮ ಹೆಂಗಸರು ಮಕ್ಕಳನೆಲ್ಲ । ಬಿಟ್ಟು ವಂದು ವಂದು ಗಂ ಡು ಜನ ಯಿಲ್ಲದೆ ವೋಡಿ ಬಂದೆಉ ನಂಮ್ಮ ಹೆಂಗಸರು ಮಕ್ಕಳಂನ್ನು ಟೀಪು ಸುಲುತಾನನ್ನು ತಂನ್ನ ಕಡೆ ಜನಕ್ಕೆ ಕೊಟ್ಟುಬಿಟ್ಟು ಬಹಳ ಜನ ಕೊಂ ದು ಬಿಟ್ಟು ಉಳಿದ ಸಂಣ ಮಕ್ಕಳನೆಲ್ಲ ಕೊಜಾ ಮಾಡಿಬಿಟ್ಟ ಯೀಗಲೂ ಅರಕಲಗೂಡು ಸೂರ ಯಂಬ ಬಾಂಮ್ಮಣನು ಅರಕಲಗೂಡು ಬಸವಾ ಪಟಣ ಕೊಣನೂರು ಯೀ ಗಡಿವಾಡದ ಜನ ತ್ತೆಗದುಕ್ಕೊಂಡು ಅ ರಮನೆ ಶೀಮೆ ವಳಗೆ ಬಂದು ತೊರೆನೂರು ಹೆಬ್ಬಾಲೆ ಶಿರಂಗಾಲ ಮುಂತ್ತಾದ ರೈತರ ಸರ್ವಸ್ವ ಲೂಟಿಶಿ ಕುಟುಂಬ ಮಕ್ಕಳು ಹಿಡುಕ್ಕೊಂ ಡು ದುಕ್ಕ ಕೊಟ್ಟು ಹೋದರು ಯೀ ಮೇರೆ ಮಾಡಿದರಲ್ಲ ಯಂಬದಾಗೂ ಮುಂ ದೆ ನಮಗೆ ಯೇನು ಗತಿ ಯಂಬದಾಗಿ ನಾಉ ಕೇಳಿಕೊಂಡಲ್ಲಿ ನಿಂಮ್ಮದು ಹೋದಕ್ಕೆ ಯಿದೆ ಮೇರೆ ಜಬಾಬು ನೀಉ ಕೊಟ್ಟು ಯೇನಾದ್ರೂ ಶಿಕ್ಕಿದರೆ ತೆಗೆದುಕೊಳ್ಳಿ ಯಂತ್ತ ತಾಉ ಅಪಣೆ ಕೊಟ್ಟರಿ ನಾಉ ಬಸವಾಪಟ ಣದ ಕೋಟೆಗೆ ಹೋದಲ್ಲಿ । ಅಲ್ಲಿಂದತ್ತವರಿಗೂ ನಮಗೂ ಜಗಳವಾ ಗಿ ನಂಮ್ಮ ಕಡೆ ಜನರು ಸತ್ತು ನಾಉ ಮಿಹನತ್ತು ಮಾಡಿ ಅೈವತ್ತು ಅರು ವತ್ತು ಹೆಂಣುಗಳ ನಾಉ ತಂದುದು ಸರಿ ಅದ್ರ ಯೀವರೆ ಪರಿಯಂತ್ರ ಕ್ಕೆ ರಾಜರಜಾವಂದಿಯಲ್ಲದೆ ಪರಾರಿ ಆಗಿ ವೋಡಿ ಹೋಗುವಂತ್ತದು ಹೋ ಗಿ ಯಿದೆ ವಂದುವರೆ ರಾಜರಜಾವಂದಿಯಿಂದ ವಬವಬ್ಬರು ಮದು ವೆ ಮಾಡಿಕೊಂಡಿದಾರೆ ಯಿದರಲ್ಲು ರೋಗರುಜನದಿಂದ ಸತ್ತು ಹೋ ದು ಹೋಗಿದೆವಂದರೆ ಯೀಗ ಯಿರುವಂತಾದ್ದು ತಾಉ ಬಿಡಬೇಕೆಂದ ರೆ ಮೊದಲು ವಬ್ಬವಬ್ಬರಿಗೆ ಅೈವತ್ತುನೂರು ಕುಟುಂಬ ಮಕ್ಕಳು ಯಿ ದಂತ್ತದನೆಲ್ಲ ಟೀಪು ಸುಲುತಾನರು ತೆಗದುಕ್ಕೊಂಡು ಹೋದ್ರು ಯೀಗ ನಾಉ ಪ್ರಾಣಪ್ರಯತ್ನ ಮಾಡಿ ವಂದೊಂದು ತಂದು ನಾಉ ಮದುವೆ ಮಾಡಿ ಯಿಟ್ಟುಕೊಂಡಿರುವಂತ್ತದಂನ್ನು ತಾಉ ಬಿಡಹೇಳಿದರೆ ನಮಗೆ ಮುಂ ದೆ ಗತಿಯೆನ್ನು ನಾಉ ಬದುಕಿ ಪಲವೇನು ಯಂಬದಾಗಿ ಕೊಡಗರು ನಂಮ್ಮ ಸಂಗಡ ಹೇಳಿದರಿಂದ ಅದಕ್ಕೆ ನಾಉ ಬದಲು ಜವಾಬು ಹೇಳು ವದಕ್ಕೆ ನಮಗೆ ಬುಧಿ ತೋರುವುದಿಲ್ಲ ಯೀ ಹೆಂಣ್ಣು ಬಿಡಿಸುವುದಕ್ಕೇ ನಂಮಿಂದ ತಿರಿದಲ್ಲ । ಯಾವತ್ತು ತಂಮ್ಮ ಕೈವಳಗೆ ಯಿದೆ ತಂಮ್ಮ ಕುಶಿಯಿದಂತ್ತೆ ಮಾಡಿಕೊಳುವದು ಯಿದಲ್ಲದೆ ಉಳಿಕ್ಕೆ ಹಣಕಾಸು ಮುಂತ್ತಾದ ಸಾಮಾನು ನಂಮೇಲೆ ಯೇನು ಹೊತ್ತಾಗೂ ಅದಂನ್ನು ಕೊ ಟ್ಟು ನಂಮೇಲೆ ಬಂದಂತ್ತಾ ಯೀ ಹರಪು ವಂದು ತೀರಿಶಿಕ್ಕೊಂಡು ಕಂ ಪನಿ ಚಾಕ್ರಿ ಮಾಡಿದಕ್ಕೆ ನಾಉ ಮಾನದಿಂದ ಉಳುಕೊಂಡರೆ

ಸಾಕು ಯಂಬದು ನಮಗೆ ಬಹಳ ಯಿದೆ ಯಿದಕ್ಕೆ ತಾಉ ನಂ
ಮೇಲೆ ಮೆಹರ್ಬಾನಗಿ ಯಿಟ್ಟು ಆ ಸರಹದಿನಲ್ಲಿರು ಜನ ತಾಉ
ವಿಚಾರಿಶಿ ನಂಮ್ಮ ಕಡೆಯಿಂದ ವಾಜಬಿಯಾಗಿ ಸಲತ್ಕದು ಯೇನಾ
ಗುತ್ತದೆ ಯಂಬ ವಿವರ ಯಾವತಂನ್ನು ವಂದುಳೀದಂತ್ತೆ ನಿಗದಿ ಮಾಡಿ
ಪಟ್ಟಿಮಾಡಿ ಕಳುಹಿದಲ್ಲಿ ಆ ಪಟ್ಟಿ ಪ್ರಕರ ನಂಮಿಂದ ಸಲತ್ಕ
ದಂನ್ನು ಕೊಟ್ಟು ಕಂಪನಿ ಚಾಕ್ರಿ ಮಾಡಿದಕ್ಕೆ ಮಾನ ಉಳಿಶಿಕೊಳ್ಳಬೇಕೆಂ
ಬುದು ನಂಮ್ಮನಶಿಗೆ ಬಹಳ ಜರೂರು ಯಿದೆ ತಾಉ ಪಟ್ಟಿ ಬರಶಿ
ಕಳುಹಿಸ್ತ ಮೇರೆ ಯೀಗಲೆ ನಾಉ ಕೊಟೆಉ ಯಂದರೆ ಮೊದಲು ನಂಮ್ಮ
ಹಿರಿಯರು ನಾಉ ಸಹ ಸಂಪಾದಿಶಿದಂತ್ತದಂನ್ನು ಮೊದಲು ಸರ
ಜನರಾಲ್ ರಾಬರಟ ಅಬ್ರಕರಂಬಿ ಸಾಹೆಬರವರು ಬೊಂಬಾ
ಯಿ ದಂಡು ತ್ತೆಗದುಕ್ಕೊಂಡು ಬಂದಿದ್ದಾಗ್ಯೆ ಕಂಪನಿ ಕೆಲಸಕ್ಕೆ ವಂಚ
ನೆ ಯಿಲ್ಲದೆ ವಪ್ಪಿಶಿ ಚಾಕ್ರಿ ಮಾಡಿದೇವೆ ಮತ್ತೆ ಟೀಪು ಸುಲುತಾನರಿಗೆ
ಸಲ್ಲಾದಾದ ಮೇಲೆ ನಂಮ್ಮ ಶೀಮೆಯಿಂದ್ದ ಹುಟ್ಟಿದಂತ್ತ ಹಣವಂನ್ನು ಕಾ
ಲಕಾಲಕ್ಕೆ ಯಿಂಗ್ರೆಜ ಸರಕಾರಕ್ಕೆ ಕೊಟ್ಟುಕೊಂಡು ಬಂದೆಉ ಅದ್ರಲ್ಲಿ
ನಾಉ ಪ್ರಾಣಪ್ರಯತ್ನದಿಂದ ಸ್ವಲ್ಪ ಸಂಪಾದಿಶಿದಂತ್ತದು ನಂಮ್ಮ
ಹಿರಿಯವರು ಸಂಪಾದಿಶಿದೂರಲ್ಲಿ ಉಳುದಂತ್ತದ ಸಹಾ ಯೀಗ ಬೊಂ
ಬಾಯಿ ಲಶ್ಕರು ತೆಗೆದುಕ್ಕೊಂಡು ಬಂದ ಜನರಾಲ್ ಯಿಷ್ಟೋಲ್ ಸಾಹೆ
ಬರ ದಿವಸ್ತಲ್ಲಿ ಕಂಪನಿ ಕೆಲಸಕ್ಕೆ ವಪ್ಪಿಶಿ ಚಾಕ್ರಿ ಮಾಡಿದೇವೆ ಯಿದ
ರಿಂದ ಯಿಂನ್ನು ನೀಉ ಬರಶಿ ಕಳುಹಿಸುವ ಪಟ್ಟಿ ಮೇರೆ ಯೀಗಲೆ ಕೊ
ಡುವದಕ್ಕೆ ನಮಗೆ ಯೇನು ಆದಾರ ಯಿಲ್ಲ । ನಂಮೇಲೆ ಹೊತ್ತ ಪ
ಟ್ಟಿಗೆ ನಮಗೆ ನಾಲ್ಕು ಅಯಿದು ತಿಂಗಳು ವಾಯಿದೆ ಕೊಟ್ಟು ಗಡುಬಾ
ಮಾಡಿದರೆ ಬೊಂಬಾಯಿ ಸರಕಾರದಲ್ಲಿ ನಾಉ ಲಕ್ಷ ರೂಪಾಯಿ ಮಡ
ಗಿದೇವೆ ಅದಕ್ಕೆ ಆ ಸರಕಾರದ ಬೊಂಡು ನಂಮ್ಮಲಿದೆ ಯೀ ಬೊಂಡಂ
ನ್ನು ಕಳುಹಿಶಿಕೊಟ್ಟು ಲಕ್ಷ ರೂಪಾಯಂನ್ನು ತರಿಶಿ ಕೊಡುತ್ತೇವೆ ಯಿದು
ಸಾಲದಕ್ಕೆ ಬೊಂಬಾಯಿ ದಂಡಲ್ಲಿರುವಂತ್ತೆ ಜನರಾಲ್ ಕರ್ನಲ್ ಮೆ
ಜರ ಕಪಿತ್ತಾಂನ್ ಅಪಿಸರು ಮುಂತ್ತಾದ ಸರದಾರು ನಮಗೆ ಅಳೂತ್ತಂಮ್ಮಂ
ದಿರಾಗಿದ್ದಾರೆ ಅವರು ಯಲ್ಲಿಯಲ್ಲಿದ್ದಾರೊ ಅಲ್ಲಿಗೆ ನಾಉ ಹೋಗಿ ನಂ
ಮ್ಮ ಹಾಲು ಹಕಿಕತ್ತು ಸುಕದುಕ್ಕ ಹೇಳಿಕೊಂಡು ನಂಮೇಲೆ ಯೀ ಪ್ರಕರ ಪ
ಟ್ಟಿ ಬಿದ್ದು ಯಿದೆ ನಂಮಿಂದ ಯಿಷ್ಟು ಸಂದಾಯವಾಗಿ ಯಿಷ್ಟು ಯಿಂ
ನೂ ಬಾಕಿಯಿದೆ ಯಿದ ಕೊಟ್ಟು ನಂಮ್ಮ ಆಬರು ಉಳಿಶಿ ಕೊಡಿಯಂತ್ತ
ಗಲ್ಲ ಹಿಡಿದು ಬೇಡಿಕೊಂಡರೆ ಯಿೂ ಆಬರು ತಂಮ್ಮದು ಯಂತ್ತ ನಂಮೇ
ಲೆ ಮೆಹರ್ಬಾನಗಿ ಯಿಟ್ಟು । ಕೊಟ್ಟು ಆಬರು ಉಳಿಶಿಕೊಂಡಾರು ಅದಂ

ನ್ನು ನಾಉ ತಂದು ತಮಗ ಸಂದಾಯಮಾಡಿ ಕೊಟೇಉ ನಂಮ್ಮ ದೊಸ್ತಿ
ಗೆ ಕೊಟಂತ್ತ ಸರದಾರರ ವಡವೆಯಂನ್ನು ನಾಉ ಹ್ಯಾಗಾದರೂ ಮಾ
ಡಿ ಅವರಿಗೆ ಸಂದಾಯ ಮಾಡೇಉ ಯಿಲ್ಲದಿದರೆ ಅವರ ಚಾಕ್ರೀ
ನಾದ್ರು ಮಾಡಿ ತೀರಿಶೇಉ ಯಂಬ ಭರವಸ ನಮಗೆ ಯಿರುವದರಿಂ
ದ ತಮಗೆ ಬರದು ಮಾಲುಂ ಮಾಡಿಯಿದೇವೆ ನಂಮೇಲೆ ಯೇನೂ ಹೊರು
ತ್ತದೋ ಅದಕ್ಕೆ ಪಟ್ಟಿನು ತರಶಿ ಅಯಿದು ತಿಂಗಳು ವಾಯಿದಾನ್ನು
ಮಾಡಿ ದಯುವಿಟ್ಟು ಕಳುಹಿಸುವಂತ್ತೆ ಮಾಡಿಸಬೆಕ್ಕು । ಯಿದಲ್ಲದೆ ನಾ
ಉ ಆರು ಕುದುರೆ ತರಿಶಿಕೊಂಡಿದೇವೆ ಯಂಬದಾಗಿ ತಾಉ ಬರಶಿ ಕಳು
ಹಿದ ಬಗ್ಯೆ ಯೀ ಕುದುರೆಯಂನ್ನು ನಾಉ ತರಿಶಿಕೊಂಡವರು ಅಲ್ಲ ನಮ
ಗೆ ವಬ್ಬರು ತಂದುಕೊಡಲು ಯಿಲ್ಲಾ ನಾಉ ಕಾಣಲು ಯಿಲ್ಲ । ಯಿದಕ್ಕೆ ನಂ
ಮೇಲೆ ಪಟ್ಟಿ ಬಿದ್ದ ಮೇಲೆ ನಾಉ ಕೊಡುವಂತ್ತದಕ್ಕೆ ಕಬೂಲು ಯಿದೆವೆ
ಯೀ ಬಗ್ಯೆ ತಾಉ ಪಟ್ಟಿಲಿ ಬರಶಿ ಕಳುಹಿದ ಕುದ್ರೇಂತ್ತು ನಂಮ್ಮ ಬಳಿ ಯಿ
ಲ್ಲಾ ಲಾರಾ । ಉತ್ತೆನಕ್ತ ಜನರಾಲ್ ಹಾರಿಸ್ ಸಾಹೆಭಹದರು ನಮಗೆ
ಕೊಟ್ಟಂತ್ತದು ವಂದು ಕುದುರೆ ಜನರಾಲ್ ಯಿಷ್ಟೊಲ್ ಸಾಹೆಬಹದ
ರು ನಮಗೆ ಕೊಟದ್ದು ೧ ವಂದು ಕುದುರೆ ಜನರಾಲ್ ಹಾಟ್ಲಿ ಸಾಹೆಬಹದ್ರು ನ
ಮಗೆ ಕೊಟದು ವಂದು ಕುದುರೆ ಪ್ರಾಕು ಸರ ಜನರಾಲ್ ರಾಬರ
ಟ ಅಬರಕರಂಬಿ ಸಾಹೆಭಹದರು ಕೊಟದು ವಂದು ಕುದ್ರೆ ಯೀ ಮೇರೆ
ಯೀ ನಾಲ್ಕು ಕುದ್ರೆಯೂ ಯೀಗ ನಂಮ್ಮ ಬಳಿಲಿ ಹಾಜರುಯಿದೆ ಯಿದಂ
ನ್ನು ಕಳುಹಬೇಕೆಂದರೆ ತಾಉ ಬರಶಿ ಕಳುಹಿದಲ್ಲಿ ಅವಶ್ಯ ಯೀ ನಾಲ್ಕು
ಕುದುರೆ ತಂಮ್ಮ ಬಳಿಗೆ ಕಳುಹಿಸುತ್ತೇವೆ ಮತ್ತೆ ಯರಡು ಕುದ್ರೆ ಯಿದೆ
ಯಲ್ಲ । ಯಿದಂನ್ನು ನಾಉ ಯಲ್ಲ್ಯಾದ್ರೂ ತಲಾಸುಮಾಡಿ ಸಂಪಾದಿಶಿ ನಂ
ಮೇಲೆ ಹೊತ್ತದಕ್ಕೆ ಯೀಗ ತಾಉ ಕಳುಹಿಸುವ ಪಟಿಗೆ ೫ ತಿಂಗಳು ವಾಯಿ
ದ ಮಾಡುತ್ತೀರಷ್ಟೆ ಆ ಗಡುಬದ ವಳಗೆ ಆ ಯರಡು ಕುದ್ರೆನ್ನು ತಮ
ಗೆ ನಾಉ ಸಂದಾಯ ಮಾಡಿ ಕೊಟೇಉ ಯಿದಕ್ಕುಂ ನಂಮೇಲಣ ಮೆಹರ್ಬಾ
ನಗಿಯಿಂದ ಬರಶಿ ಕಳುಹಿಸುವಂತ್ತೆ ಮಾಡಿಸಬೆಕ್ಕು । ಮೇಲಾಗಿ ಶ್ರೀರಂಗ
ಪಟಣವಂನ್ನು ನೋಡಬೇಕೆಂಬ ಅಪೇಕ್ಷೆಯಿದಿತ್ತೆಂದು ಕೇಳ್ಪಟ್ಟುಯಿದಿತ್ತು ದಂ
ಡು ಸ್ವಲ್ಪ ದಿನದಲ್ಲಿ ಶ್ರೀರಂಗಪಟಣಕ್ಕೆ ದಾಕಲಾಗುವದರಿಂದ ಅಲ್ಲಿಗೆ
ದಾಕಲಾದ ವರ್ತಮಾನ ಕೇಳಿ ತಾಉ ಬರುವುದಕ್ಕೆ ಕುಶಿಯಿದ್ದರೆ ಬರಶಿ
ಕಳುಹಿದಲ್ಲಿ ನೀಉ ಸಾಗಿಬರುವ ಬಗ್ಯೆ ಬರಶಿ ಕಳುಹಿಶಿಉ ಯಂಬ
ದಾಗಿ ಬರದ ಬಗ್ಯೆ ನಾಉ ಪಟಣ ನೋಡಬೇಕೆಂಬ ಜರೂರು ನಮಗೆನು
ಯಿರಲಿಲ್ಲಾ ತಂಮ್ಮ ಮದುರಾಜನ ದಂಡಲ್ಲಿರುವಂತ್ತ ಸರದಾರ
ರ ನೋಡಬೇಕೆಂಬ ಅಪೇಕ್ಷೆ ನಮಗೆ ಯಿತ್ತು ಅಷ್ಟರಲ್ಲಿ ನಾಉ ಕಂಪ

ನಿ ಸರಕಾರದ ಹುಕುಂ ಮೀರಿ ತಕ್ಸೀರು ಮಾಡಿದರು ಯಂಬದಾಗಿ
ಮೈಸೂರು ತಾಲ್ಲುಕಿನ ಜನ ತಮಗೆ ಹೇಳಿದರಿಂದ ನಂಮೇಲೆ ತಮಗೂ
ಬಹಳ ಯಡರಾಜು ಆಗಿಯಿದೆ ಯೀ ಸಮೆದಲ್ಲಿ ನಾಉ ಬಂದ
ರೆ ತಾಉ ಕೇಳಿದಕ್ಕೆ ಬದಲು ನಾಉ ಹೇಳಿದ ಜವಾಬು ತಮಗೆ ನಿಶ್ಚ
ಯ ಕಾಣದಷ್ಟೆ ಯೀ ಬಗ್ಯೆ ಕಪಿತ್ತಾಂನ್ ಮಾವಿನಿ ಸಾಬರು ಯಿಂಗ್ರೇಜ ಸ
ರಕಾರದ ವಕೀಲರಾಗಿ ಯಿಷ್ಟುದಿನ ನಂಮ್ಮ ಬಳಿಯಿದ್ದರು ಅವರಿಗೆ
ಜನರಾಲ್ ಯಿಷ್ಟೋಲ್ ಸಾಹೆಬರು ಯೇನು ಹುಕುಂ ಕೊಟರು ಅದ
ನಮಗೆ ಹೇಳಿದಕ್ಕೆ ನಾಉ ಯೇನು ಮೀರಿದೇವೆ ಯೇನು ತಕ್ಸೀರು ಮಾ
ಡಿದೇವೆ । ಯಂಬದಂನ್ನು ತಂಮ್ಮ ಮೊಕತ್ತ ನಾಉ ಅವರಿಗೆ ಕೇಳೀಉ
ತಾಉ ಕೇಳಬೆಕ್ಕು । ಯಿದಕ್ಕೆಲ್ಲಾ ಅವರು ಸಾಕ್ಷಿಯಾಗಿದಾರೆ ಅವರು ತಾ
ಉ ಕೂಡಿ ಯೇನು ತಕ್ಸೀರು ನಂಮೇಲೆ ಹೊರಿಸ್ತರೂ ನಾಉ ಕಬೂಲು ಯಿ
ದೇವೆ ಯೀಬಗ್ಯೆ ಕಪಿತ್ತಾಂನ್ ಮಾವಿನಿ ಸಾಬರು ನಂಮ್ಮಂನ್ನು ಕರಶಿಕೊಂಡು
ಬರುವಂತ್ತೆ ತಾಉ ಅವರಿಗೆ ಬರದು ಕಳುಹಿಸಿದರೆ ಅವರು ಬಂ
ದು ನಂಮ್ಮ ಕರದಲ್ಲಿ ಅವರ ಸಂಗಡ ನಾಉ ತಂಮ್ಮ ಮಿಲಾಕತ್ತಿಗೆ ಬ
ರುತ್ತ ಯಿದೇವೆ । ಮೇಲಾಗಿ ನಮಗೆ ಬಂಗಾಳದ ಗವರನರ ಬಾಟ ಕರ್ನಾ
ವಾಲಿಸ ಸಾಹೆಬಹದರವರು ಬರದ ಕಾಗದಉ ಹಾಜರು ಯಿದೆ
ಸರ ಜನರಾಲ್ ರಾಬರಟ ಅಬರಕರಂಬಿ ಸಾಹೆಬಹರು ನಮ
ಗೆ ಬರದ ಕಾಗದಉ ಹಾಜರು ಯಿದೆ ಸರ ಜನರಾಲ್ ಜಾಂನ್ ಶೋ
ರು ಸಾಹೆಭಹದರು ಬರದ ಕಾಗದಉ ಹಾಜರು ಯಿದೆ ಗವರನ
ರ ಜನರಾಲ್ ಲಾರ್ಡ ಮಾರನಿಂಗ ಟಂನ್ ಸಾಹೆಭಹದರು ಬರಶಿ ಕಳು
ಹಿದ ಕಾಗದಉ ಹಾಜರು ಯಿದೆ ಬೊಂಬಾಯಿ ಗವರನರ ಯಿಸ್ಕೊ
ಯರ ಜನಾಂ ಟಂನ್ ಡಾಂಕಿಂನ್ ಸಾಹೆಭಹದರು ಬರದ ಕಾಗದ
ಉ ಹಾಜರು ಯಿದೆ ಜನರಾಲ್ ಹಾರಿಸಭಹದರು ಬರದ ಕಾಗ
ದಉ ಹಾಜರು ಯಿದೆ ಜನರಾಲ್ ಯಿಷ್ಟೋಲ್ ಸಾಹೆಬರು ಜನರಾಲ್
ಹಾಟ್ಲಿ ಸಾಹೆಬರು ಸಹಾ ಬರದ ಕಾಗದಉ ಹಾಜರು ಯಿದೆ ಮಲೆ
ವಾರಿ ಕಮೀಶನ ಸಾಹೆಬರು ಬರದ ಕಾಗದಉ ಯಿದೆ ಯಿಂನ್ನು ದೊ
ಡ ದೊಡ ಸರದಾರು ಬರದ ಕಾಗದಉ ಯಿದೆ ಯಿಾ ಕಾಗದ ಯಾ
ವತ್ತು ನಮಗೆ ಬಹಳ ಮಾನದಿಂದ ಆಬ್ರುಯಿಂದ ಬರದಿದಾರೆ ಯಿ
ದ ನೋಡಿದರೆ ನಮಗೆ ಬಹಳ ಮಾನ ಅಬ್ರು ಕುಶಿ ಹಾಸಲಾಗತ್ತ
ದೆ ಯೀಗ ತಾಉ ನಂಮ್ಮ ಹೆಸರಿಗೆ ಬರಶಿದಂತ್ತ ಕಾಗದ ನೋಡಿದ
ರೆ ಮೇಲೆ ಬಂದಂತ್ತ ಅಲಕಾಪು ವಂದು ಪ್ರಾಕಾರವಿದೆ ನಮಗೆ
ಸ್ವಲ್ಪ ಮಾನ ಕಡಮೆಮಾಡಿ ಬರದು ಯಿದೆ ಯೀ ಕಾಗದಲ್ಲಿ ತಂ

ಮ್ಮ ಸ್ವಹಸ್ತದ ದಸಕತ್ತು ಯಿಲ್ಲ । ಅದರಿಂದ ಯಿದು ತಂಮ್ಮ ಹು
ಕುಂ ಮೇಲೆ ಬರದ್ದೋ । ಬರಯುವಂತ್ತ ಮುನುಶಿಯ ತಾರಿಕೆ ಮೇಲೆ
ಬರದ್ದೋ ಯಂಬದು ಯರಡು ತಿಳಿಯದರಿಂದ ತಮಗೆ ಮಾಲುಂ
ಆಗು ಬಗ್ಯೆ ಬರಶಿದೇವೆ । ನಾಉ ಕಂಪನಿ ಚಾಕ್ರಿಗೆ ಯಿಷ್ಟು ಮಿಹ
ನತ್ತು ಮಾಡಿದ್ದು ಯಾವ ಬಗ್ಯೆ ಯಂದರೆ ಯಿಂಗ್ರೇಜ ಸರಕಾರದ್ದು
ಸಮಾನ ದೂರವಾಗಬೆಕ್ಕು ಸರಕಾರಕ್ಕೆ ದಿನೇ ದಿನೇ ದೇಶಕೋಶ ಅೈ
ಶ್ವರ್ಯ ಹೆಚ್ಚಿ ಬರಬೇಕು ಹಿಂದುಸ್ಥಾನದಲ್ಲಿ ನಾಕಾ ಕಡೆಲು ಸರ
ಕಾರದ ನಿಶಾನಿ ಹಾರಬೇಕು ನಮಗೆ ಕುಶಿ ಬಂದಲ್ಲಿ ಯಿಂಗ್ರೆಜ
ಸರದಾರರ ಸಂಗಡ ಬಾಯಿಬಂದಾಗಿ ಯಿದ್ದುಕ್ಕೊಂಡು ಸ್ವಾರಿ ಶಿಕಾ
ರಿ ಮಾಡಿಕೊಂಡು ಸರ್ಕಾರದ ಗರ್ಭವಾಸದ ವಳಗೆ ಯಿರಬೇ
ಕೆಂತ್ತಲೂ ನಮಗೆ ಯಿಂನ್ನು ಹೆಚ್ಚಾಗಿ ಯಿಂಗ್ರೇಜ ಸರಕಾರದಿಂದ ಮಾನ
ಆಬರು ಕೊಟ್ಟು ನಡಶಿಕೊಂಡಾರು ನಾಉ ಕುಶಿಲಿ ಬೂಮಿ ಮೇಲೆ
ಯಿರಬೇಕೆಂತ್ತ ನಂಮ್ಮ ನಶಿನಲ್ಲಿ ಹಾರೈಶಿಕ್ಕೊಂಡು । ಯಿದೆ ಅಪೇಕ್ಷೆಯಿಂ
ದ ಲಡಾಯ ಪ್ರಾರಂಬಿಶಿ ಆಕೈರು ಆಗುವ ಪರಿಯಂತ್ರ ನಾಉ ಪ್ರಾ
ಣ ಪ್ರಯತ್ನ ಮಾಡಿ ಯಿಂಗ್ರೇಜ ಸರಕಾರ ಚಾಕ್ರಿ ಮಾಡಿದೆಉ ನಂಮ್ಮ
ಅಪೇಕ್ಷೆ ಪ್ರಕರಾ ದುಸಮಾನನು ನಿಗ್ರಹವಾಗಿ ಬಹು ಸುಲುಭದಲ್ಲಿ
ಅನಂತ ಅೈಶ್ವರ್ಯ ದೇಶಕೋಶ ಯಿಂಗ್ರೇಜ ಸರಕಾರ ತಾಬೆ ಆಯಿತ್ತು
ನಾಉ ಕಂಣಿಂದ ನೋಡಿ ನಮಗೆ ಬಹಳ ಸಂತೋಷವಾಯಿತ್ತು ನಮ
ಗೆ ಬಹಳ ಮಾನ ಕೊಟ್ಟು ನಡಸ್ಯಾರು ಯಂಬದು ನಂಮ್ಮ ನಶಿಗೆ ಯಿ
ತ್ತು ಯೀ ಮೇರೆ ನಾಉ ಅಬರು ಉದ್ದಿಶ್ಯ ಯಿಂಗ್ರೇಜ ಸರಕಾರ ಚಾ
ಕ್ರಿ ಮಾಡಿದರು ಯಂಬದು ಹಿಂದೂಸ್ಥಾನದಲ್ಲಿ ಯಿರು ಯಿಂಗ್ರೆ
ಜ ಸರದಾರಿಗೆ ಯಾವತ್ತಕ್ಕು ರೋಶಂನ್ ಯಿದೆ ತಮಗೂ ಮಾಲುಂ
ಯಿದೆ ಯೀಗ ಮೈಸೂರು ತಾಲ್ಲುಕಿನ ಜನರ ಕಿರುಕುಳದಿಂದ ನಾ
ಉ ಯೀ ದುನಿಯಾ ಮೇಲೆ ಯಿರಬೇಕೆಂಬದೇ ನಮಗೆ ಕುಶಿ ತೋರುವ
ದಿಲ್ಲಾ ಯೀಗ ನಂಮ್ಮ ಕಡೆ ಕರಣಿಕ ಸುಬ್ಬೈಯ್ಯನ ತಂಮ್ಮ ಬಳಿ
ಗೆ ಕಳುಹಿಸಿದೇವೆ ಯೀತನ ಮುಕವಾಚದಿಂದಲೂ ಯಿದರಲ್ಲಿ
ಬರದ ವಿವರದಿಂದೆಲ್ಲ ನಿಂಮ್ಮ ನಶಿಗೆ ಸರಿ ತಂದುಕ್ಕೊಂಡು ನಂ
ಮಿಂದ ಆಗತ್ಯಕಾರ್ಯಕ್ಕೆ ನಂಮೆಲ್ಲ ಮೆಹರ್ಬಾನಗಿಯಿಂದಾ ।
ದರ ಹಮೇಶ ಬರಶಿ ಕಳುಹಿಸುವಂತ್ತೆ ಮಾಡಿಸಬೇಕು.

-Veer Rajendra Warriar

ಚಾರಿತ್ರಿಕ ದಾಖಲೆಗಳು

" ಈ ಮೂರು ದಾಖಲೆಗಳು ಕರ್ನಾಟಕ ಇತಿಹಾಸದ ಮೂರು ದುರಂತೋಪಾಖ್ಯಾನಗಳಿಗೆ ಸಂಬಂಧಪಟ್ಟುವು."

"ಇಲ್ಲಿನ ಭಾಷೆ ಸಾಮಾನ್ಯವಾಗಿ ಆಗಿನ ಕಾಲದಲ್ಲಿ ಆಡುವ ಭಾಷೆಯನ್ನು ಪ್ರತಿಕೃತಿಸುತ್ತದೆ.,"

"ಸಾಮಾನ್ಯ ಜನ ಸರ್ಕಾರದ ನಡವಳಿಕೆಯನ್ನಾಗಲಿ, ರಾಜಾಧಿರಾಜರ ಕಾರ್ಯಗಳ ವಿವರದ ವರದಿಯನ್ನಾಗಲಿ ಹೇಗೆ ಬರಹಕ್ಕೆ ಇಳಿಸುತ್ತಿದ್ದರು ಮತ್ತು ಆ ಕನ್ನಡದ ಬರಹದ ಶೈಲಿಯ ಸ್ವರೂಪ ಹೇಗೆ ಇರುತ್ತಿತ್ತು ಎಂಬುದನ್ನು ಇದು ಪ್ರತಿಬಿಂಬಿಸುತ್ತದೆ."



ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು - ೫೬೦ ೦೧೮

ರಕ್ಷಾಪುಟ ವಿನ್ಯಾಸ : ಕೆ.ವಿ. ಪುಂಡಲೀಕ